ಕವಿಗಳು ಕಂಡ ತುಳುನಾಡು

ಕರ್ನಾಟಕ
ತುಳು ಸಾಹಿತ್ಯ ಅಕಾಡೆಮಿ

ಸಂಪಾದಕ
ಡಾ. ವಸಂತಕುಮಾರ ಪೆರ್ಲ

ಕವಿಗಳು ಕಂಡ ತುಳುನಾಡು

(ಕವನ ಸಂಕಲನ)

ಸಂಪಾದಕ

ಡಾ. ವಸಂತಕುಮಾರ ಪೆರ್ಲ

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ

ಮಹಾನಗರಪಾಲಿಕೆ ಕಟ್ಟಡ, ಲಾಲ್‌ಬಾಗ್, ಮಂಗಳೂರು - 575 003

KAVIGALU KANDA TULUNĀDU
An anthology of Kannada and Tulu poems on Tulunādu - compiled and edited by Dr. VasanthKumar Perla, M.A., Ph.D., "Bhoomigeetha", Kunjathabail, Mangalore - 575 015, Mobile : 9448773747.

Compiled and Edited by
Dr. VasanthKumar Perla

Chief Editor
Dr. Palthady Ramakrishna Achar
President
Karnataka Tulu Sahitya Academy

Publisher
Chandrahasa Rai B.
Registrar
Karnataka Tulu Sahitya Academy

First Edition : 2011

© : Karnataka Tulu Sahitya Academy

Pages : xxxiv + 198

Price : ₹ 100

Cover Design : **Kalloor Nagesh**

Designed & Printed at :
Aakrithi Prints
Maximus Complex
Light House Hill Road,
Mangalore - 575 001
Tel. : 0824 2443002

ಅಧ್ಯಕ್ಷರ ಮೊದಲ ಮಾತು

ಸಹ್ಯಾದ್ರಿ ಪರ್ವತ ಸಾಲುಗಳ ತಪ್ಪಲಿನಿಂದ ಅರಬ್ಬೀ ಕಡಲ ತಡಿಯವರೆಗೆ, ದಕ್ಷಿಣದ ಚಂದ್ರಗಿರಿ ನದಿ ದಂಡೆಯಿಂದ ಉತ್ತರದ ಶರಾವತಿ ತೀರದವರೆಗೆ ಒಂದು ಕಾಲದಲ್ಲಿ ತುಳುನಾಡು ಹಬ್ಬಿತ್ತು ಎಂಬುದು ಪ್ರತೀತಿ. ಕಾಸರಗೋಡಿನಿಂದ ಶರಾವತಿ ದಂಡೆಯ ಹೊನ್ನಾವರದಿಂದೀಚೆಗಿನ ಕಾಸರಕೋಡುವರೆಗಿನ ಪ್ರದೇಶವನ್ನು ತುಳುನಾಡು ಎನ್ನುತ್ತಿದ್ದರು ಮತ್ತು ಈ ಪ್ರದೇಶದಲ್ಲಿ ವಾಸಿಸುತ್ತಿದ್ದ ಕೋಸರ್ ಎಂಬ ಜನಾಂಗದವರಿಂದಾಗಿಯೇ ಈ ಎರಡು ಹೆಸರುಗಳು (ಕಾಸರಗೋಡು-ಕಾಸರಕೋಡು-ಕೋಸರ್) ಹುಟ್ಟಿರಬಹುದೆಂದು ಕೆಲವು ಸಾಹಿತಿಗಳು ಉಲ್ಲೇಖಿಸುತ್ತಾ ಊಹಿಸುತ್ತಾರೆ. ತುಳುನಾಡಿನ ಅಸ್ತಿತ್ವ, ಕೋಸರ್ ಜನಾಂಗದ ವಿಚಾರವೆಲ್ಲ ತಮಿಳು ಸಂಗಂ ಸಾಹಿತ್ಯ (ಕ್ರಿ.ಪೂ. ೨೦೦-ಕ್ರಿ.ಶ. ೩೦೦)ದಲ್ಲಿ ಕಂಡುಬರುತ್ತದೆ.

ತುಳುನಾಡು ಎಂಬ ಹೆಸರು ಈ ಪ್ರದೇಶಕ್ಕೆ ಸೂಚಿತವಾಗುವುದಕ್ಕಿಂತ ಪೂರ್ವದಲ್ಲಿ ಇಲ್ಲಿಗೆ 'ಸತಿಯ ಪುತೊ' ಎಂಬ ಪ್ರಾಕೃತ ಭಾಷೆಯ ಹೆಸರಿದ್ದಿರಬೇಕು. ಕ್ರಿ.ಪೂ. ೨೭೩ರಿಂದ ೨೩೨ರ ವರೆಗೆ ಆಳಿದ ಮೌರ್ಯ ಚಕ್ರವರ್ತಿ ಅಶೋಕನ ೨ನೆಯ ಶಿಲಾ ಲೇಖನದಲ್ಲಿ ಆತನ ರಾಜ್ಯದ ಸುತ್ತುಮುತ್ತಲಿನ ರಾಜ್ಯಗಳನ್ನು ಹೆಸರಿಸಲಾಗಿದೆ. ಅವುಗಳಲ್ಲಿ ಸತಿಯ ಪುತೋ ಕೂಡ ಒಂದು. 'ಸಹ್ಯಾದ್ರಿಯ ತಪ್ಪಲು' ಎಂಬ ಅರ್ಥವನ್ನು ಇದಕ್ಕೆ ಇತಿಹಾಸಕಾರರು ಕಲ್ಪಿಸಿದ್ದಾರೆ. ಇದೇ ಸತಿಯ ಪುತೋ ಮುಂದೆ ಸಂಸ್ಕೃತದಲ್ಲಿ ಸತಿಯ ಪುತ್ರವಾಯಿತು. ಕಾಲಾನಂತರ ತುಳುವರಲ್ಲಿದು 'ಸತ್ಯನಾಪುರ'ವೆಂದಾಯಿತು. ಸಿರಿ ಪಾಡ್ದನದಲ್ಲಿ ಹೇಳಲ್ಪಡುವ ಸತ್ಯನಾಪುರ ಕೇವಲ ಬಿರುಮಾಳ್ವರ ಅರಮನೆಯ ಹೆಸರಷ್ಟೇ ಅಲ್ಲ, ಅದು ಇಡೀ ತುಳುನಾಡನ್ನು ಸಂಕೇತಿಸುವ ಸತ್ಯನಾಪುರವಾಗಿದೆ ಎಂಬುದು ಒಪ್ಪತಕ್ಕಂತಹ ಮಾತಾಗಿದೆ.

'ತುಳು' ಎಂಬ ಪದಕ್ಕೆ ಮೆತ್ತಗೆ. ಆರ್ದ್ರ, ತುಳುಕುವ ಎಂಬರ್ಥಗಳಿವೆ. ಅರ್ಥಾನ್ವಯವಾಗಿ ಈ ಪ್ರದೇಶವನ್ನು ತುಳುನಾಡು

ಎಂದು ಕರೆದರು. ತುಳುರಾಜ್ಯದ ಗಡಿಗಳು ಯಾವ ಕಾಲದಲ್ಲಿ ಹೇಗಿತ್ತೆಂದು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಒಂದು ಕಾಲದಲ್ಲಿ ಕಾಸರಗೋಡನ್ನೊಳಗೊಂಡಂತೆ ದಕ್ಷಿಣಕನ್ನಡ, ಉಡುಪಿ, ಉತ್ತರಕನ್ನಡ, ಚಿಕ್ಕಮಗಳೂರು ಮತ್ತು ಶಿವಮೊಗ್ಗದ ಒಂದು ಭಾಗವೂ ಕೂಡ ತುಳುನಾಡಿಗೆ ಸೇರಿತ್ತು ಎಂಬ ವಿಚಾರ ಶಾಸನ ಹಾಗೂ ಇತಿಹಾಸದಿಂದ ತಿಳಿದುಬರುತ್ತದೆ. ಪ್ರಸ್ತುತ ರಾಜಕೀಯವಾಗಿ ತುಳುನಾಡಿನ ಅಸ್ತಿತ್ವ ಇಲ್ಲದೆ ಹೋದರೂ ಭಾವನಾತ್ಮಕವಾಗಿ ಕಾಸರಗೋಡು, ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ತುಳುನಾಡು ಎನ್ನಲಡ್ಡಿಯಿಲ್ಲ. ತುಳುಭಾಷೆಯನ್ನಾಡುವ ಜನರು ಉಡುಪಿಯ ಬ್ರಹ್ಮಾವರದಿಂದಾಚೆಗೆ ವಿರಳವಾದರೂ ತುಳುಸಂಸ್ಕೃತಿ ಈ ಮೂರು ಜಿಲ್ಲೆಗಳ ಜನರದ್ದು ಒಂದೇ ರೀತಿಯದ್ದಾಗಿದೆ. ಒಂದು ಕಾಲದಲ್ಲಿ ತುಳುನಾಡಿನ ರಾಜಧಾನಿಯಾಗಿದ್ದ ಬಾರ್ಕೂರು, ವ್ಯಾಪಾರ ಕೇಂದ್ರವಾಗಿದ್ದ ಬಸ್ರೂರು ಪಟ್ಟಣಗಳಲ್ಲಿ ಇಂದು ತುಳು ಬಲ್ಲವರ ಸಂಖ್ಯೆ ತೀರಾ ಇಳಿಮುಖವಾಗಿದೆ.

ತುಳುನಾಡಿನ ಮೂಲ ನಿವಾಸಿಗಳ ಭಾಷೆಯನ್ನು ತುಳುಭಾಷೆ ಎಂದು ಕರೆದರು. ನಂತರದ ಕಾಲದಲ್ಲಿ ಇಲ್ಲಿಗೆ ಕನ್ನಡ, ಕೊಂಕಣಿ, ಮರಾಠಿ, ಮಲೆಯಾಳಿ ಮಾತನಾಡುವ ಜನರು ವಲಸಿಗರಾಗಿ ಬಂದು ನೆಲೆಸಿದರು. ಅವರಲ್ಲಿ ಕೆಲವು ಜನಾಂಗದವರು ಅವರ ಮೂಲಭಾಷೆಯನ್ನು ಬಿಟ್ಟು ತುಳುವನ್ನೇ ತಮ್ಮ ಭಾಷೆಯಾಗಿ ಸ್ವೀಕರಿಸಿದರು. ಯಾವ ಭಾಷೆಯವರು ಬಂದರೂ ಕೂಡ ಇಲ್ಲಿನ ಭಾಷೆಯನ್ನು ಕಲಿಯದೆ ಬಿಡಲಿಲ್ಲ. ಸ್ವಾತಂತ್ರ್ಯ ಹೋರಾಟಗಾರ, ತುಳು ಚಳವಳಿಯ ನೇತಾರ ಎಸ್.ಯು. ಪಣಿಯಾಡಿ (1897-1959) ಯವರು ತಮ್ಮ ತುಳುವ ಸಾಹಿತ್ಯ ಮಾಲೆ ಸಂಘಟನೆಯ ವರದಿಯಲ್ಲಿ "ತುಳುನಾಡಿನಲ್ಲಿ ಹುಟ್ಟಿದವರು, ತುಳುನಾಡಿನ ನಿವಾಸಿಗಳು ಮತ್ತು ತುಳು ಮಾತನಾಡಬಲ್ಲವರೆಲ್ಲರೂ ತುಳುವರು" ಎಂಬುದಾಗಿ ಘೋಷಿಸಿದ್ದಾರೆ. ಜಗತ್ತಿನಲ್ಲಿ ಒಟ್ಟು ಒಂದು ಕೋಟಿಯಷ್ಟು ಜನ ತುಳು ಮಾತನಾಡಬಲ್ಲವರಿದ್ದಾರೆ ಎಂಬುದಾಗಿ ಅಂದಾಜು ಮಾಡಲಾಗಿದೆ.

ಜಗತ್ತಿನ ಪ್ರತಿಯೊಂದು ಭಾಷೆಗೂ ಅದರದ್ದೇ ಆದ ಲಿಪಿ ಎಂದಿರುವುದಿಲ್ಲ. ಒಂದೊಂದು ಭಾಷೆ ಒಂದೊಂದು ಲಿಪಿಯನ್ನು ಅವಲಂಬಿಸುತ್ತದೆ. ಒಂದಕ್ಕಿಂತ ಹೆಚ್ಚು ಲಿಪಿಗಳನ್ನು ಬಳಸಿಕೊಳ್ಳುವುದೂ ಇದೆ. ತಿಗಳಾರಿ ಲಿಪಿಯನ್ನು ಪ್ರಾಚೀನ ಕಾಲದಲ್ಲಿ ತುಳು ಬರೆಹಕ್ಕೆ ಬಳಸಿಕೊಳ್ಳಲಾಯಿತು. ಕೊನೆಗೆ ಅದನ್ನೇ ತುಳು ಲಿಪಿ ಎಂದು ಹೆಸರಿಸಲಾಯಿತು. ತುಳು ಲಿಪಿಯಲ್ಲಿ ಬರೆದ ಕೆಲವು ತುಳು ತಾಳೆಗರಿ ಗ್ರಂಥಗಳನ್ನು ಡಾ. ವೆಂಕಟರಾಜ ಪುಣಿಂಚತ್ತಾಯರು ಲಿಪ್ಯಂತರಗೊಳಿಸಿದ್ದಾರೆ. ಹಿಂದಿನ ಕಾಲದಲ್ಲಿ ತುಳುನಾಡಿನ ಮೇಲ್ವರ್ಗದ ಜನರು ಮಾತ್ರ ಓದು ಬರೆಹ ಬಲ್ಲವರಾಗಿದ್ದರು. ಕೆಳವರ್ಗದವರಿಗೆ ಕಲಿಯುವ ಅವಕಾಶವಿರಲಿಲ್ಲ. ಮೇಲ್ವರ್ಗದ ವಿದ್ವಾಂಸರು ತುಳುಲಿಪಿ ಬಲ್ಲವರಾಗಿದ್ದರು. ಅವರು ಸಂಸ್ಕೃತಪ್ರಿಯರಾಗಿದ್ದುದರಿಂದ ತುಳುವಿಗಿಂತ ಹೆಚ್ಚು ಸಂಸ್ಕೃತಕ್ಕೆ ಪ್ರಾಧಾನ್ಯತೆ ನೀಡಿದರು. ಹೀಗಾಗಿ ತುಳು ಭಾಷೆ ಸಾಮಾನ್ಯ ಜನರ ಆಡುಭಾಷೆಯಾಗಿಯೇ ಉಳಿಯಿತು. ತುಳುನಾಡನ್ನು ಅಳುಪ ವಂಶದ ಅರಸರು ಸುಮಾರು ಒಂದು ಸಾವಿರ ವರ್ಷಗಳವರೆಗೆ ಆಳಿದರು. ಅವರು ಕೂಡಾ ತುಳುಭಾಷೆಗೆ ಪ್ರಾಧಾನ್ಯತೆ ನೀಡಲಿಲ್ಲ. ಈ ನಾಡು ಕನ್ನಡದರಸರ ವಶವಾದ ಮೇಲಂತೂ ತುಳು ಕೀಳುಮಟ್ಟಕ್ಕಿಳಿಯಿತು. ಇಂಗ್ಲಿಷರ ಆಡಳಿತ ಕಾಲದಲ್ಲಿ

ಮೂರನೇ ಸ್ಥಾನ ಪಡೆಯಿತು. ಜನರಲ್ಲಿ ತುಳು ಭಾಷೆಯ ಬಗ್ಗೆ ಕೀಳರಿಮೆ ಹುಟ್ಟಿತು. ಅದು ಒಂದು ಕಲಿಕೆಯ ಭಾಷೆಯಾಗಿ ಮುಂದೆ ಶಾಲೆಗಳಲ್ಲಿ ಸ್ಥಾನ ಪಡೆಯಲಿಲ್ಲ. ಬದಲಾಗಿ ಮೇಲ್ವರ್ಗದವರು, ವಿದ್ವಾಂಸರು, ಶಿಕ್ಷಕರೆಲ್ಲರಿಂದಲೂ ಅವಗಣನೆಗೆ ಒಳಗಾಯಿತು.

''ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ''

''ತಾಯಿ ಮತ್ತು ತಾಯ್ನಾಡು ಸ್ವರ್ಗಕ್ಕಿಂತಲೂ ಮಿಗಿಲಾದುದು'' ಎಂಬುದು ರಾಮಾಯಣದಲ್ಲಿ ಉಲ್ಲೇಖಿತವಾದ ಮಾತು. ಬಹಳ ಪ್ರಾಚೀನ ಕಾಲದಿಂದಲೂ ಸುಸಂಸ್ಕೃತ ಜನರು ತಮ್ಮ ಮಾತೆ ಮತ್ತು ಮಾತೃಭೂಮಿಗೆ ಗೌರವ ಸಲ್ಲಿಸುತ್ತಾ ಬಂದಿದ್ದಾರೆ. ತುಳುನಾಡಿನ ಜನರಿಗೂ ತಮ್ಮ ಹುಟ್ಟುನಾಡಿನ ಬಗೆಗೆ ಪ್ರೀತಿ ಇಲ್ಲದೆ ಇರಲಿಲ್ಲ. ಆದರೆ ಅವರಿಗೆ ಅದನ್ನು ವ್ಯಕ್ತಪಡಿಸಲು ಅವಕಾಶಗಳು ಇರಲಿಲ್ಲ. ತುಳು ಭಾಷೆ ಇಲ್ಲಿನ ವ್ಯಾವಹಾರಿಕ ಭಾಷೆಯಾದುದರಿಂದ ಮಾತೃಭಾಷೆಯಲ್ಲದವರು ಕೂಡ ತುಳುವನ್ನು ಪ್ರೀತಿಸುತ್ತಿದ್ದರು. ಆದರೆ ಅದನ್ನು ಬರೆಹದ ಮೂಲಕ ತೋರಿಸಲು ಅವರಿಗೆ ಲಿಪಿ ತಿಳಿದಿರಲಿಲ್ಲ. ಮತ್ತು ತುಳುವಿನಲ್ಲಿ ಮಾತನಾಡುವುದು ಕೂಡ ಸುಸಂಸ್ಕೃತರ ಲಕ್ಷಣವಲ್ಲವೆಂದು ವಿದ್ವಾಂಸರೆನಿಸಿಕೊಂಡವರು ಪರಿಗಣಿಸಿಕೊಂಡಿದ್ದುದರಿಂದ ಭಾಷೆಯ ಬಗೆಗಿರುವ ಅಭಿಮಾನವನ್ನು ಬಹಿರಂಗವಾಗಿ ತೋರಿಸಲು ಬಹುಜನರಿಗೆ ಅಂಜಿಕೆ ಇತ್ತು. ಹಾಗಾಗಿ ಇಲ್ಲಿನವರೆಲ್ಲರೂ ಮುಂದೆ ''ನಮ್ಮ ತಾಯಿ ಕನ್ನಡ, ನಮ್ಮ ಭಾಷೆ ಕನ್ನಡ, ನಮ್ಮ ನಾಡು ಕನ್ನಡ'ವೆಂದು ಕನ್ನಡವನ್ನೇ ಹಾಡಿಕೊಂಡಾಡಲು ತೊಡಗಿದರು.

ಕ್ರಿ.ಶ. 1843ರಲ್ಲಿ ಬಾಸೆಲ್ ಮಿಶನ್‌ರವರು ಮತಪ್ರಚಾರಕ್ಕಾಗಿ ತುಳುನಾಡಿಗೆ ಬಂದರು. ಅವರು ತುಳುವನ್ನು ಕಲಿತು ಬರೆವಣಿಗೆಗೆ ಕನ್ನಡ ಲಿಪಿಯನ್ನು ರೂಢಿಗತಗೊಳಿಸಿದರು. ಹಲವಾರು ಕನ್ನಡ ಲಿಪಿಯ ತುಳು ಗ್ರಂಥಗಳು ಪ್ರಕಟಗೊಂಡವು. ತುಳುವರ ಅಕ್ಷರಶಿಲ್ಪಿ ಅತ್ತಾವರ ಅನಂತಾಚಾರ್ಯ(1861-1944) ಹದಿನಾರು ವಿಧದಲ್ಲಿ ಕನ್ನಡದ ಅಚ್ಚಿನ ಮೊಳೆಗಳನ್ನು ಕೆತ್ತಿ ಮುದ್ರಣಕ್ಕೆ ಅನುಕೂಲ ಮಾಡಿಕೊಟ್ಟರು. ಮುಂದೆ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗಾಂಧೀಜಿಯ ಅನುಯಾಯಿಗಳು 'ಸ್ವದೇಶಿ ಚಳವಳಿ' ಪ್ರಾರಂಭಿಸಿದರು. ತಮ್ಮ ನಾಡು, ನುಡಿಗೆ ಗೌರವ ನೀಡಬೇಕು. ಅದನ್ನು ಪ್ರೀತಿಸಬೇಕು. ಬೆಳೆಸಬೇಕೆಂಬ ಅಭಿಲಾಷೆ ಅವರಲ್ಲಿ ಮೂಡಿತು. ಎಸ್.ಯು. ಪಣಿಯಾಡಿ, ಎನ್.ಎಸ್. ಕಿಲ್ಲೆ, ಪೊಳಲಿ ಶೀನಪ್ಪ ಹೆಗ್ಡೆ, ನರ್ಕಳ ಮಾರಪ್ಪ ಶೆಟ್ಟಿ, ಸತ್ಯಮಿತ್ರ ಬಂಗೇರ, ಮೋಹನಪ್ಪ ತಿಂಗಳಾಯ ಮುಂತಾದವರು 'ತುಳುವ ಸಾಹಿತ್ಯ ಮಾಲೆ' ಎಂಬ ಸಾಹಿತ್ಯ ಸಂಘಟನೆ ರಚಿಸಿ ಹಲವಾರು ತುಳು ಪುಸ್ತಕಗಳನ್ನು ಪ್ರಕಟಿಸಿದರು.

ಜಾಗತಿಕ ಮಟ್ಟದಲ್ಲಿ ಪುನರುಜ್ಜೀವನ ಕಾಲ ಪ್ರಾರಂಭವಾಯಿತು. ಜಗತ್ತಿನ ಎಲ್ಲಾ ಕಡೆಯ ಜನರಲ್ಲಿ ರಾಷ್ಟ್ರೀಯ ಮನೋಭಾವ ಬೆಳೆಯಿತು. ಕವಿಗಳು ತಮ್ಮ ನಾಡು, ನುಡಿ, ಸಂಸ್ಕೃತಿಯ ಬಗ್ಗೆ ಕವನಗಳನ್ನು ಬರೆದರು. ಸಾಹಿತಿಗಳು ಲೇಖನಗಳನ್ನು ಬರೆಯಲು ಪ್ರಾರಂಭಿಸಿದರು. ಸೈನಿಕರು ತಮ್ಮ ನಾಡ ರಕ್ಷಣೆಗೆ ಪ್ರಾಣ ಕೊಡಲು ಮುಂದಾದರು. ಇನ್ನಿತರರು ತಮ್ಮ ತಮ್ಮ ಸಂಸ್ಕೃತಿಯನ್ನು ಕಾಯಕದಲ್ಲಿ ಮೆರೆದರು. ಆ ಕಾಲದಲ್ಲಿ ತುಳು ಭಾಷೆಯ ಬರೆಹಗಳಿಗೆ ಇನ್ನೂ ಚಾಲನೆ ದೊರೆತಿರಲಿಲ್ಲ. ಹಾಗಾಗಿ ತುಳುನಾಡಿನ ಕವಿಗಳು

ತಮ್ಮ ನಾಡು, ನುಡಿಯ ಬಗೆಗೆ ಭಕ್ತಿ, ಪ್ರೀತಿಯನ್ನು ಪ್ರಚಲಿತವಿದ್ದ ಕನ್ನಡದಲ್ಲೇ ಅನಿವಾರ್ಯವಾಗಿ ಬರೆಯಬೇಕಾಯಿತು. ಈ ಬಗೆಗೆ ಸಂಕೋಚಪಡದೆ ಧೈರ್ಯವಾಗಿ ಮುಂದೆ ಬಂದರು. ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಅವರ ಸಮಕಾಲಿನರಾದ ಎಂ.ಎನ್. ಕಾಮತ್, ಪಂಜೆ ಮಂಗೇಶರಾಯರು, ಉಗ್ರಾಣ ಮಂಗೇಶರಾವ್, ಜಿ.ಎನ್. ಲಕ್ಷ್ಮಣ ಪೈ, ಕಡೆಂಗೋಡ್ಲು ಶಂಕರಭಟ್, ಅಮ್ಮೆಂಬಳ ಶಂಕರನಾರಾಯಣ ನಾವಡ, ಸೇಡಿಯಾಪು ಕೃಷ್ಣಭಟ್ ಮುಂತಾದವರೆಲ್ಲ ಆ ಕಾಲದ ಪ್ರಮುಖ ಕವಿಗಳು. ತಮ್ಮ ಮಾತೃಭಾಷೆ ಕೊಂಕಣಿ, ಕನ್ನಡವಾದರೂ ತುಳುನಾಡನ್ನು ಇವರೆಲ್ಲ ತಮ್ಮ ತಾಯ್ನಾಡೆಂದೇ ಪರಿಗಣಿಸಿದವರು; ಸಂಕೋಚವಿಲ್ಲದೆ ಅಭಿವ್ಯಕ್ತಗೊಳಿಸಿದವರು.

ಕನ್ನಡ ಭಾಷೆಗೆ ತುಳುವರ ಕೊಡುಗೆ ಅಪಾರ, ಭರತೇಶ ವೈಭವ ಬರೆದ ರತ್ನಾಕರ ವರ್ಣಿ "ಅಯ್ಯಯ್ಯ ಎಂಚ ಪೊರ್ಲಾ್ಂಡ್ಂದ್ ತುಳುವರು ಮೈಯುಬ್ಬಿ ಕೇಳಬೇಕಣ್ಣಾ" ಎಂದು ತನ್ನ ಕಾವ್ಯಾರಂಭದಲ್ಲೇ ಬರೆದು ತಾನು ತುಳುವನೆಂದು ತೋರಿಸಿಕೊಟ್ಟಿದ್ದಾನೆ. ಮುಂದೆ ನಂದಳಿಕೆ ಮುದ್ದಣ, ಯಕ್ಷಗಾನ ಕವಿ ಪಾರ್ತಿಸುಬ್ಬ ಇನ್ನೂ ಅನೇಕ ತುಳುವರು ಕನ್ನಡದಲ್ಲಿ ಕಾವ್ಯ ರಚನೆ ಮಾಡಿದ್ದಾರೆ. ಕಯ್ಯಾರ ಕಿಞ್ಞಣ್ಣ ರೈ, ವೆಂಕಟರಾಜ ಪುಣಿಂಚತ್ತಾಯ, ಅಮೃತ ಸೋಮೇಶ್ವರ ಮೊದಲಾದವರು ಈಗಲೂ ಬರೆಯುತ್ತಿದ್ದಾರೆ. ಇವರೆಲ್ಲರ ತುಳುನಾಡು ನುಡಿಯ ಪ್ರೀತಿಯನ್ನು ಮರೆಯುವಂತಿಲ್ಲ.

ತುಳುವರಿಗೆ ತಮ್ಮ ನಾಡು, ನುಡಿಗಳ ಬಗ್ಗೆ ಪ್ರೀತಿಯ ಭಾವನೆಯೇ ಇಲ್ಲವೆಂಬುದು ಸರಿಯಲ್ಲ. "ಕರ್ನಾಟಕಾಂತರ್ಗತಂ ಎನ್ನದಿದು ತುಳುನಾಡು" ಎಂದಿದ್ದಾರೆ ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈ. "ಮರುಜನ್ಮದಲಿ ನಾನು ನಿನ್ನಲೇ ಹುಟ್ಟಿ ಬರುವೆ" ಎಂದಿದ್ದಾರೆ ರಾಷ್ಟ್ರಕವಿ ಗೋವಿಂದ ಪೈ. ತುಳು, ಕನ್ನಡವೆರಡು ನಮಗೆ ಎರಡು ಕಣ್ಣುಗಳಿದ್ದಂತೆ. ಕಣ್ಣುಗಳೆರಡಿದ್ದರೂ ದೃಷ್ಟಿ ಒಂದೇ. ಭಾಷೆ ಎರಡಾದರೂ ಭಾವನೆಗಳು ಒಂದೆ. ಕರ್ನಾಟಕ ಏಕೀಕರಣಕ್ಕಾಗಿ ಹೋರಾಟ ನಡೆಸಿದವರಲ್ಲಿ ತುಳುನಾಡಿನವರೂ ಬಹಳಷ್ಟು ಮಂದಿ ಇದ್ದಾರೆ. ಆ ಸಂದರ್ಭದಲ್ಲಿ ಕನ್ನಡದೊಂದಿಗೆ ತುಳುವು ಕೂಡ ರಾಜ್ಯದ ಅಧಿಕೃತ ಭಾಷೆ ಎಂದು ಘೋಷಣೆ ಮಾಡಿ ಬಿಡುತ್ತಿದ್ದರೆ, ಈ ಜಿಲ್ಲೆಗಳಿಗೆ ತುಳು ಜಿಲ್ಲೆಗಳೆಂದು ನಾಮಕರಣ ಮಾಡಿಬಿಡುತ್ತಿದ್ದರೆ ತುಳುಬರಹಗಾರರ ಹುಮ್ಮಸ್ಸು ಇನ್ನಷ್ಟು ಹೆಚ್ಚಾಗುತ್ತಿತ್ತು. ಆದರೆ ಅವರ್‍ಯಾರೂ ತುಳುನಾಡಿನ ರಚನೆಗಾಗಿ 1956ರಲ್ಲಿ ಹೋರಾಟ ನಡೆಸಲಿಲ್ಲ. ಹೀಗೆ ಕಾಸರಗೋಡು ಕಳೆದುಹೋಯಿತು. ತುಳುನಾಡು ಮೂರು ಪಾಲಾಯಿತು. ಆದರೂ ಕನ್ನಡದ ಕವಿಗಳೆಂದೇ ಕೀರ್ತಿ ಪಡೆದ ಇಲ್ಲಿನ ಅನೇಕ ಕವಿಗಳು ತುಳುನಾಡಿನ ಬಗ್ಗೆ ಬರೆದಿದ್ದಾರೆ. ಬಿಚ್ಚು ಮನಸ್ಸಿನಿಂದ ಬರೆದ ಹಿರಿಯರ ನಾಡಗೀತೆಗಳು ಎಸಳೆಸಳಾಗಿ ಉದುರಿ ಹೋಗಬಾರದು. ಅವನ್ನೆಲ್ಲ ಸಂಗ್ರಹಿಸಿ ಒಂದು ಮಾಲೆ ನೇಯಬೇಕೆಂಬ ಬಯಕೆ ನನ್ನಲ್ಲಿತ್ತು. ಇದೇ ರೀತಿ ತುಳುನಾಡು, ನುಡಿ, ಸಂಸ್ಕೃತಿಯ ಉಳಿವಿಗಾಗಿ ಹೋರಾಟ ನಡೆಸಿದ ಮಹನೀಯರ ಬಗೆಗೆ ಮರೆಯಬಾರದ ತುಳುವರು ಎಂಬ ಗ್ರಂಥಮಾಲೆಯನ್ನು 1997ರಿಂದಲೇ ಪ್ರಾರಂಭಿಸಿದ್ದೇವೆ. ಆ ಗ್ರಂಥಗಳ ಸಂಖ್ಯೆ ಈಗ 40ನ್ನು ದಾಟಿದೆ. ಮುಂದಿನ ಪೀಳಿಗೆಯವರು ನಮ್ಮ ನಾಡಿನ ಕವಿಗಳು ಮತ್ತವರ ನಾಡಭಕ್ತಿಯ ಗೀತೆಗಳನ್ನು

ನೆನಪಿಸಿಕೊಳ್ಳಲು ಇದೊಂದು ಪ್ರಯತ್ನ ಮಾಡಿದ್ದೇವೆ.

ಈ ನಮ್ಮ ಪ್ರಯತ್ನಕ್ಕೆ ಸಹಕರಿಸುವಂತೆ ಕೆಲವರನ್ನು ಕೇಳಿಕೊಂಡೆ. ಸಂಗ್ರಹಕಾರ್ಯ ಕಷ್ಟವೆಂದು ಈ ಕೆಲಸಕ್ಕೆ ಯಾರೂ ಮುಂದೆ ಬರಲಿಲ್ಲ. ನನ್ನ ಆಕಾಂಕ್ಷೆಯನ್ನರಿತು ಶ್ರಮದಾಯಕವಾದ ಈ ಕೆಲಸಕ್ಕೆ ಮುಂದೆ ಬಂದವರು ನನ್ನ ಕ್ರಿಯಾಶೀಲ ಮಿತ್ರರಾದ ಯುವ ವಿದ್ವಾಂಸ ಡಾ. ವಸಂತಕುಮಾರ್ ಪೆರ್ಲ ಅವರು. ಈ ಪುಸ್ತಕವನ್ನು ಬಹಳ ಪ್ರೀತಿ ಮತ್ತು ಆಸಕ್ತಿಯಿಂದ ಸಂಪಾದಿಸಿ ಕೊಟ್ಟಿದ್ದಾರೆ. ಬಹಳಷ್ಟು ಕವನಗಳನ್ನು ಕನ್ನಡದಿಂದ ತುಳುವಿಗೆ ಅಥವಾ ತುಳುವಿನಿಂದ ಕನ್ನಡಕ್ಕೆ ಅನುವಾದವನ್ನೂ ಕೂಡ ಮಾಡಿಕೊಟ್ಟಿದ್ದಾರೆ. ಮಾತ್ರವಲ್ಲ ಕವಿಗಳ ಪರಿಚಯ ಸಂಗ್ರಹವನ್ನು ಮಾಡಿದ್ದಾರೆ. ಪೆರ್ಲದವರು ಆಕಾಶವಾಣಿಯ ಹಿರಿಯ ಅಧಿಕಾರಿಯಾಗಿ ಮಂಗಳೂರು ಆಕಾಶವಾಣಿಯಲ್ಲಿ ತುಳುವಿಗೆ ಸ್ಥಾನಮಾನವನ್ನು ಕಲ್ಪಿಸಿ ಕೊಟ್ಟವರು. ತುಳು–ಕನ್ನಡ ಕವಿ ಸಾಹಿತಿಯಾದ ಇವರು ಅಜನೆ, ದುತ್ತೈತ, ಸೊರಗೆ, ಪ್ರಾತಿನಿಧಿಕ ತುಳು ಕಬಿತೆಲು, ಇಂಚಿಪೊದ ತುಳು ಕಬಿತೆಲು ಮುಂತಾದ ತುಳು ಕವಿತಾ ಸಂಕಲನಗಳನ್ನು ಹೊರತಂದವರು. ಮೊದಲ ಬಾರಿಗೆ, ತುಳು ಕಾವ್ಯದ ಬಗೆಗಿನ ವಿಮರ್ಶಾತ್ಮಕ ಕೃತಿ 'ತುಳುಕಾವ್ಯೊ'ವನ್ನು ಬರೆದವರು. ಡಾ. ಪಲ್ಲತ್ತಡ್ಕ ಕೇಶವ ಭಟ್, ಡಾ.ಪಿ. ಗುರುರಾಜ ಭಟ್, ಆಕಾಶವಾಣಿ ತುಳು ಕತೆಕುಲು ಮುಂತಾದ ತುಳು ಗ್ರಂಥಗಳನ್ನು ಬರೆದವರು. ತುಳುವಿನ ಬೇರೆ ಬೇರೆ ಸಾಹಿತಿಗಳನ್ನು ಆಕಾಶವಾಣಿಯ ಮೂಲಕ ಹೊರಪ್ರಂಪಚಕ್ಕೆ ಪರಿಚಯಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಡಾ. ವಸಂತಕುಮಾರ ಪೆರ್ಲ ಅವರ ಶ್ರಮ ಸಾರ್ಥಕವಾಗಲೆಂದು ಬಯಸುತ್ತಾ ಅವರಿಗೆ ಅಭಿವಂದನೆ ಸಲ್ಲಿಸುತ್ತಿದ್ದೇನೆ.

ಈ ಸಂಕಲನದಲ್ಲಿ ಅನೇಕ ಕವಿಗಳ ಕವಿತೆಗಳಿವೆ. ಮೂಲ ಕವಿತೆಗಳನ್ನು ತುಳು ಅಥವಾ ಕನ್ನಡಕ್ಕೆ ಅನುವಾದಿಸಿ ಕೊಡಲಾಗಿದೆ. ಪುಸ್ತಕವನ್ನು ಕನ್ನಡದಲ್ಲಿ ರಚಿಸಲಾಗಿದೆ. ಕನ್ನಡ ಬಲ್ಲವರೆಲ್ಲರಿಗೂ ಇದು ತಲುಪಬೇಕೆಂಬುದು ನಮ್ಮ ಬಯಕೆ. ಲಭ್ಯವಾದಷ್ಟು ಕವಿತೆಗಳನ್ನು ಸಂಗ್ರಹಿಸಿದ್ದೇವೆ. ಇನ್ನೂ ಬಹಳಷ್ಟು ಹಿರಿಯ ಕವಿಗಳ ಕವಿತೆಗಳು ಉಳಿದಿರಬಹುದು. ಅಂಥ ಕವಿತೆಗಳನ್ನು ನಮ್ಮ ಗಮನಕ್ಕೆ ತಂದರೆ ಮುಂದಿನ ಭಾಗದಲ್ಲಿ ಅಕಾಡೆಮಿ ಪ್ರಕಟಿಸಬಹುದು. ಗೋವಿಂದ ಪೈಗಳವರಿಂದ ಪ್ರಾರಂಭಿಸಿ ಈಗಿನ ಹಿರಿಯ ಕವಿಗಳವರೆಗೆ ಕವಿಗಳು ಕನ್ನಡ ತುಳುವಿನಲ್ಲಿ ತುಳುನಾಡು, ಭಾಷೆ, ತುಳು ಸಂಸ್ಕೃತಿಯ ಬಗೆಗೆ ಬರೆದಿರುವ ಕವಿತೆಗಳ ಪ್ರಕಟಣೆಯೇ ನಮ್ಮ ಉದ್ದೇಶ. ಗ್ರಂಥದ ಗಾತ್ರದ ಮಿತಿಯನ್ನು ಅನುಲಕ್ಷಿಸಿ ಒಂದು ಹಂತಕ್ಕೆ ನಿಲ್ಲಿಸಿದ್ದೇವೆ. ಬರಿಯ ತುಳುನಾಡಿನ ವಿಷಯದ ಕವಿತೆಗಳನ್ನಷ್ಟೇ ಪ್ರಕಟಿಸಿದರೆ ಸಹೃದಯರಿಗೆ ನೀರಸವಾಗಬಹುದೆಂದು ನಾಡು, ನುಡಿಗೆ ಸಂಬಂಧಿಸಿದಂತೆ ಬೇರೆ ಬೇರೆ ವಿಧದ ಕವಿತೆಗಳನ್ನು ಆಯ್ಕೆ ಮಾಡಿಕೊಂಡಿದ್ದೇವೆ.

ಈ ಪುಸ್ತಕವನ್ನು ಪ್ರಕಟಿಸಲು ಅನುವು ಮಾಡಿಕೊಟ್ಟ ರಿಜಿಸ್ಟ್ರಾರ್ ಬಿ. ಚಂದ್ರಹಾಸ ರೈ, ಅಂದವಾಗಿ ಮುದ್ರಿಸಿಕೊಟ್ಟ ಆಕೃತಿ ಪ್ರಿಂಟ್ಸ್‌ನ ಕಲ್ಲೂರು ನಾಗೇಶ್ ಮತ್ತು ಬಳಗದವರಿಗೆ ತುಂಬು ಹೃದಯದ ಕೃತಜ್ಞತೆಗಳು.

ಮಂಗಳೂರು
೧೦.೧೧.೨೦೧೧

ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್

ಕವಿಗಳು ಕಂಡ ತುಳುನಾಡು

ಪೂರ್ವದಲ್ಲಿ ನಿಡಿದಾಗಿ ಹಬ್ಬಿಕೊಂಡಿರುವ ಘಟ್ಟ ಪ್ರದೇಶ, ಪಶ್ಚಿಮದಲ್ಲಿ ಮೇರೆವರಿಯದ ಮಹಾಶರಧಿ ಅರಬ್ಬಿ ಸಮುದ್ರ ಮತ್ತು ದಕ್ಷಿಣದಲ್ಲಿ ಚಂದ್ರಗಿರಿ ನದಿಯಿಂದ ಉತ್ತರದಲ್ಲಿ ಬೈಂದೂರು ವರೆಗಿನ ಭೂಪ್ರದೇಶವನ್ನು ತುಳುನಾಡು ಎಂದು ಕರೆಯಲಾಗಿದೆ. ಇಲ್ಲಿನ ಪ್ರಕೃತಿ ರುದ್ರರಮಣೀಯವಾದುದು. ಮಳೆಗಾಲದ ಮೂರು ತಿಂಗಳು ಹನಿಕಡಿಯದೆ ಸುರಿಯುವ ಜಡಿಮಳೆ, ತುಂಬಿ ಹರಿಯುವ ನದಿಗಳು. ಒಂದೆಡೆ ಭೋರ್ಗರೆಯುವ ಸಮುದ್ರ ಇನ್ನೊಂದೆಡೆ ಗೋಡೆಯಂತೆ ಅಚಲವಾಗಿ ನಿಂತಿರುವ ಘಟ್ಟ ಪ್ರದೇಶ. ಎಲ್ಲೆಂದರಲ್ಲಿ ಗುಡ್ಡ ಪರ್ವತಗಳು, ಕಣಿವೆಗಳು-ದುರ್ಭೇದ್ಯವಾದ ಅರಣ್ಯ, ಕಾಡುಮೃಗಗಳು, ಉರಗಗಳು, ಏರುತಗ್ಗಿನ ಅಸಮತಲ ಭೂಮಿ, ಹಚ್ಚಹಸಿರು ತುಂಬಿರುವ ಗದ್ದೆ ಬಯಲುಗಳು, ಪದವುಗಳು. ಒಟ್ಟಿನಲ್ಲಿ ತುಳುನಾಡು ಪ್ರಕೃತಿ ವೈಭವದ ತಾಣ.

ಇಂತಹ ವಿಶಿಷ್ಟ ಭೂ ಪ್ರದೇಶದಲ್ಲಿ ಬದುಕು ನೀಡಿದ ತಾಯಿಯನ್ನು 'ತುಳುವಪ್ಪೆ' ಎಂಬ ಹೆಸರಿನಿಂದ ಈ ಭಾಗದ ತುಳು -ಕನ್ನಡ ಕವಿಗಳು ಮನದುಂಬಿ ವರ್ಣಿಸಿದ್ದಾರೆ. ಪ್ರಕೃತಿಯೊಂದಿಗೆ ತಾದಾತ್ಮ್ಯ ಹೊಂದಿರುವ ಇಲ್ಲಿನ ಜನಜೀವನ – ಸಂಸ್ಕೃತಿಗಳನ್ನು ತಮ್ಮ ಕವನಗಳಲ್ಲಿ ಕಂಡರಿಸಿದ್ದಾರೆ. ಭಾವಪರವಶರಾಗಿ, ಕೆಲವೊಮ್ಮೆ ಭಕ್ತಿ ಪಾರಮ್ಯದಿಂದ ಹೊಗಳಿದ್ದು ಉಂಟು. ತುಳುನಾಡನ್ನು ಮತ್ತದರ ಚೆಲುವನ್ನು ವರ್ಣಿಸುವ ಅಂತಹ ಕೆಲವು ಪ್ರಾತಿನಿಧಿಕ ಕವಿತೆಗಳನ್ನು ಅನುವಾದದೊಂದಿಗೆ ನೀಡುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ತುಳುವನ್ನು ಹೆತ್ತತಾಯಿ, ಕನ್ನಡವನ್ನು ಸಾಕುತಾಯಿ ಎಂದು ಕರೆಯುತ್ತ-ಇಬ್ಬರು ತಾಯಂದಿರಿಗೂ ಸಮಾನ ಸ್ಥಾನವನ್ನು ಇಲ್ಲಿನ ತುಳುಜನ, ವಿಶೇಷತಃ ತುಳು ಕವಿಗಳು ನೀಡುತ್ತ ಬಂದಿದ್ದಾರೆ. ಹೆತ್ತತಾಯಿ ಮತ್ತು ಸಾಕುತಾಯಿಯರೊಳಗಿನ ಸಂಬಂಧ ಎಂಥದು, ಪ್ರೀತಿಯ ಬಂಧದ ಸ್ವರೂಪವೇನು ಎಂಬುದನ್ನು ತಿಳಿಯುವ ಪ್ರಯತ್ನವನ್ನು ಇಲ್ಲಿ ಮಾಡಿದ್ದೇವೆ. ನಮ್ಮ ಭಾಷಿಕ ಹಾಗೂ ಸಾಂಸ್ಕೃತಿಕ ಬೇರುಗಳು ಹೇಗೆ ಒಂದಕ್ಕೊಂದು ಥಳಕು ಹಾಕಿಕೊಂಡು ಅಭಿನ್ನವಾಗಿ ಸಮನ್ವಯತೆಯನ್ನು ಮೆರೆಯುತ್ತಿವೆ ಎಂಬುದನ್ನು ತಿಳಿಯುವುದು ಈ ಪ್ರಯತ್ನದ ಹಿಂದಿನ ಉದ್ದೇಶ.

ತುಳುನಾಡು ಸಂಪದ್ಭರಿತವಾದ ನಾಡು. ಶತಶತಮಾನಗಳಿಂದ ಬೇರೆ ಬೇರೆ ಜನವರ್ಗಗಳು ಹೊರಗಿನಿಂದ ಇಲ್ಲಿಗೆ ಬಂದು ಇಲ್ಲಿ ಬದುಕನ್ನು ಕಂಡುಕೊಂಡು ನೆಲೆಯಾದರು. ಬಂದ ಎಲ್ಲರಿಗೂ ತುಂಬುತೋಳಿನ ಆಶ್ರಯ ನೀಡಿದ ನಾಡು ಇದು. ಕನ್ನಡಿಗರು, ಕೊಂಕಣಿಗರು, ಮಲಯಾಳಿಗರು, ಮರಾಠಿಗರು, ಬ್ಯಾರಿಗಳು – ಹೀಗೆ ಹತ್ತು ತಾಯಿ ಮಕ್ಕಳನ್ನು ಒಬ್ಬ ತಾಯ ಮಕ್ಕಳಂತೆ 'ತುಳುವಪ್ಪೆ' (ತುಳು ತಾಯಿ) ಅಭಯ ನೀಡಿ ಪೊರೆದಳು.

ತುಳುನಾಡು ಎಂತಹ ಸಂಪದ್ಭರಿತ ನಾಡು ಎಂಬುದನ್ನು ತಿಳಿಸುವ ಹವ್ಯಕ ಭಾಷೆಯ ಒಂದು ಜನಪದ ಗೀತೆ ಹೀಗಿದೆ :

ತುಪ್ಪಶನ ಉಂಬಲೆ ತುಳುನಾಡಿಂಗೋಯೆಕ್ಕು
ಅಕ್ಕಿಯ ಮೇಲೆ ಬರೆಯಿಲ್ಲೆ
ತುಳುನಾಡ ಮಕ್ಕಳ ಮೇಲೆ ಕಲೆಯಿಲ್ಲೆ

ಹೈಗನಾಡಿನಿಂದ (ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಆಸುಪಾಸು) ತುಳುನಾಡಿಗೆ ವಲಸೆ ಬಂದು ಹೈಗನಾಡಿಗೂ ತುಳುನಾಡಿಗೂ ಆದಾನ ಪ್ರದಾನ ಏರ್ಪಟ್ಟ ಬಳಿಕ – ಸುಮಾರು ಹದಿನೈದನೆಯ ಶತಮಾನ –ಅಲ್ಲಿನ ಹವ್ಯಕರು ರಚಿಸಿದ ಗೀತೆ ಇದು. ತುಳುನಾಡಿನಲ್ಲಿ ಕೃಷಿ ಮತ್ತು ಜಾನುವಾರು ಸಂಪತ್ತು (ತುಪ್ಪ +ಅಶನ) ಸಮೃದ್ಧವಾಗಿತ್ತು; ಯಾವುದಕ್ಕೂ ಕೊರತೆ ಇರಲಿಲ್ಲ ಎಂಬುದನ್ನು ಈ ಹಾಡು ಮನೋಜ್ಞವಾಗಿ ನಿರೂಪಿಸುತ್ತದೆ.

ಹಿಂದಿನಿಂದಲೂ ತುಳುನಾಡು ಬತ್ತದ ಕೃಷಿಗೆ ಪ್ರಸಿದ್ಧವಾಗಿತ್ತು. ಕಯಮ್ಮೆ, ರಾಜಕಯಮ್ಮೆ, ತೊನ್ನೂರು, ತಮುಗೆ, ದೊಡ್ರೆ, ಮಾರಡೆ, ಮುಂಡಲೆ, ಚಾವಲಕಣ್ಣ್, ಮಸ್ಕತಿ, ದಿರಿಸಲೆ, ಅತಿಕಾರಯ, ಗಂಧಸಾಲೆ, ಅಲ್ಯಂಡೆ, ಪಲ್ಲಿಂಗ, ಗುಲ್ವಾಡಿಸಣ್ಣ, ಕರಿದಡ್ಡಿ, ಫೀಟ್‌ಸಾಲ್, ಚೋಮನ್, ಕಜೆಜಯ, ಕುರುವ, ನವರ, ಅಜಿಪಸಲೆ, ಕರಿಯಜೇಬಿ, ರತ್ನಚೂಡಿ, ಬಿಳಿನೆಲ್ಲು ಮುಂತಾದ ನೂರಾರು ಬತ್ತದ ತಳಿಗಳು ಇಲ್ಲಿವೆ. ಹಲವಾರು ತಳಿಗಳು ಕಣ್ಮರೆಯಾಗಿವೆ. ಮೂರು ಬೆಳೆ ತರುವ ಕೊಳಕ್ಕೆ ಗದ್ದೆಗಳಿದ್ದವು. ಮಳೆ ನೀರನ್ನಾಶ್ರಯಿಸಿ ಪದವು, ಬೆಟ್ಟಗುಡ್ಡಗಳಲ್ಲಿಯೂ ಬತ್ತ ಬೆಳೆಯುತ್ತಿದ್ದರು. (ಇದನ್ನು ಕುಮೇರಿ ಕೃಷಿ ಎನ್ನುತ್ತಾರೆ; ಬಾಳೆಕುಮೇರಿ, ಸೂರಿಕುಮೇರಿ, ಒಳಕುಮೇರಿ ಮುಂತಾದ ಊರುಗಳೇ ಇವೆ). ಉಬಾರ್–

ಉಪ್ಪಿನಂಗಡಿ, ಬೊಳ್ತೇರ್-ಬೆಳ್ತಂಗಡಿ ಎನ್ನುವ ಸ್ಥಳನಾಮಗಳು ಬತ್ತದ ವ್ಯಾಪಾರ ಇಲ್ಲಿ ಜೋರಾಗಿ ನಡೆಯುತ್ತಿದ್ದುದಕ್ಕೆ ಸಾಕ್ಷಿಯಾಗಿವೆ. ಬತ್ತದ ಕೃಷಿ ಮಾಡಿದರೆ ಮಾತ್ರ ಹೊಟ್ಟೆ ತುಂಬೀತು; ಜಾನುವಾರುಗಳಿಗೆ ಬೈಹುಲ್ಲು ಸಿಕ್ಕೀತು (ಕೃಷಿತೋ ನಾಸ್ತಿ ದುರ್ಭಿಕ್ಷಂ ಎಂಬ ಮಾತು ಇದನ್ನೇ ಹೇಳುತ್ತದೆ). ಅಕ್ಕಿ ಮತ್ತು ಹಾಲು-ಹಯನು ಸಮೃದ್ಧಿಯ, ಶ್ರೀಮಂತಿಕೆಯ, ಆಹಾರ ಮತ್ತು ಆರೋಗ್ಯದ ಸಂಕೇತವಾಗಿತ್ತು. ಅವು ಒಂದಕ್ಕೊಂದು ಪೂರಕ. ಬೆಳೆ ಬಂದಾಗ ಮನೆತುಂಬಿಸುವ ಶಾಸ್ತ್ರವೂ ಹಬ್ಬದ ಸಂದರ್ಭದಲ್ಲಿ ಜಾನುವಾರುಗಳಿಗೆ ಪೂಜೆ ಮಾಡಿ ಕಡುಬು ತಿನ್ನಿಸುವ ಸಂಪ್ರದಾಯವೂ ಈ ಹಿನ್ನೆಲೆಯಲ್ಲಿ ಬಂದಿತು.

ತೀರ ಇತ್ತೀಚೆಗಿನ ವರೆಗೂ ಪ್ರತಿಷ್ಠಿತ ಬಂಟ ಮನೆತನಗಳಾದ 'ಗುತ್ತು'ಗಳಲ್ಲಿ ಬತ್ತದ ಕೃಷಿ, ಕಣಜ ಕಟ್ಟುವುದು, ಕಂಬಳ ಇತ್ಯಾದಿ ಶ್ರೀಮಂತಿಕೆಯ-ಪ್ರತಿಷ್ಠೆಯ ಸಂಕೇತವಾಗಿತ್ತು. ಒಂದು ಮನೆತನಕ್ಕೆ ಎಷ್ಟು ಮುಡಿ ಗದ್ದೆ ಇದೆ ಎನ್ನುವುದರ ಆಧಾರದಲ್ಲಿ ಸಮಾಜದಲ್ಲಿ ಆತನ ಶ್ರೀಮಂತಿಕೆ, ನೆಲೆಬೆಲೆಗಳ ನಿರ್ಧಾರವಾಗುತ್ತಿತ್ತು. 'ಗುತ್ತಿನ ಮನೆ' ಎಂದರೆ ಹತ್ತಾರು ಜೊತೆ ಎತ್ತುಗಳನ್ನು ಕಟ್ಟಿರುವ, ಕಂಬಳದ ಕೋಣಗಳಿರುವ, ಸಾಕಷ್ಟು ಗದ್ದೆ ಸಾಗುವಳಿ ಇರುವ ಮನೆ ಎಂದು ಭಾವಿಸಲಾಗುತ್ತಿತ್ತು.

ಬತ್ತದ ಕೃಷಿ ಮತ್ತು ತುಳುನಾಡಿನ ದೈವಗಳಿಗೆ ಒಂದಕ್ಕೊಂದು ನೇರ ಸಂಬಂಧವಿದೆ. ದೈವಗಳು ಬತ್ತದ ಕೃಷಿಯನ್ನು ಕಾಯುವ ಮತ್ತು ವೈಭವೀಕರಿಸುವ ಶಕ್ತಿಗಳಾಗಿವೆ. ಕೃಷಿಗೆ ಮತ್ತು ಜಾನುವಾರುಗಳಿಗೆ ಪ್ರಮುಖವಾದ ಎರಡು ಉಪದ್ರವಕಾರಕ ಕಾಡುಮೃಗಗಳೆಂದರೆ ಹಂದಿ ಮತ್ತು ಹುಲಿ. ಬೇಟೆಯಾಡಿದರೂ ಅವು ನಿಯಂತ್ರಣಕ್ಕೆ ಸಿಗುತ್ತಿರಲಿಲ್ಲ. ಕೃಷಿಯನ್ನು ಹಂದಿಯಿಂದ ಮತ್ತು ಜಾನುವಾರುಗಳನ್ನು ಹುಲಿಯಿಂದ ರಕ್ಷಿಸಲೋಸುಗ ಹಿಂದಿನವರು ಅವುಗಳ ಪೂಜೆ - ಆರಾಧನೆ ಮಾಡುವುದರ ಮೂಲಕ ಅವುಗಳನ್ನು ಒಲಿಸಿಕೊಳ್ಳಲು ತೊಡಗಿದರು. ಉಳುಮೆಯ ಕೊನೆಯಲ್ಲಿ ಮನರಂಜನೆಗಾಗಿ ಮತ್ತು ದಣಿವಾರಿಸಿಕೊಳ್ಳಲು 'ಕಂಬಳ' ಎಂಬ ಸಾಮೂಹಿಕ ಮನರಂಜನಾ ಕ್ರೀಡೆಗೆ ಶುರುವಿಟ್ಟುಕೊಂಡರು. ಬೇಟೆ ಮತ್ತು ಕೃಷಿ ಬದುಕಿನ ಸಮನ್ವಯವನ್ನು ಹೂಟೆಯಲ್ಲಿ (ಉಳುಮೆ) ಕಾಣಬಹುದಾಗಿದೆ. ಪ್ರಾಣಿಗಳನ್ನು ಕೃಷಿ ಬದುಕಿಗೆ ಒಗ್ಗಿಸಿಕೊಂಡಲ್ಲಿಂದ ಆತನ ನಾಗರಿಕತೆ ಆರಂಭವಾಗುತ್ತದೆ. ತುಳುನಾಡಿನ ಆಚರಣೆ-ಆರಾಧನೆಗಳು ಕೃಷಿ ಸಾಗುವಳಿ ಆಧರಿಸಿ ಹುಟ್ಟಿಕೊಂಡದ್ದಲ್ಲದೆ, ತೋಟಗಾರಿಕಾ ಬೆಳೆಗಳನ್ನು ಆಧರಿಸಿ ಬಂದುದಲ್ಲ. ತುಳುಭಾಷೆಯ ಶಬ್ದ ಸಂಪತ್ತು ಕೂಡ ಬೇಟೆಯ ಬದುಕು ಮತ್ತು ಕೃಷಿ ಕಸುಬುಗಳ ಹಿನ್ನೆಲೆಯಲ್ಲಿ ತುಂಬ ಶ್ರೀಮಂತವಾಗಿರುವುದನ್ನು ಗಮನಿಸಬಹುದು.

ತುಳುನಾಡು ಶಕ್ತ್ಯಾರಾಧನೆಯ ಕೇಂದ್ರ. ಶಕ್ತ್ಯಾರಾಧನೆ ಇಲ್ಲಿ ಪ್ರಾಚುರ್ಯಕ್ಕೆ ಬಂದುದು ಕೂಡ ಸಾಂಕೇತಿಕವಾಗಿದೆ. ಪ್ರಕೃತಿಶಕ್ತಿ ವೈಭವದಿಂದ ಮೆರೆಯುವ ಈ ಪ್ರದೇಶದಲ್ಲಿ ಮಾತೃಶಕ್ತಿಯ ಸಂಕೇತವಾದ ಶಕ್ತ್ಯಾರಾಧನೆ ಮತ್ತು ಲಯಕಾರಕ (ಲಯ ಎಂದರೆ ಹೊಸ ಹುಟ್ಟಿನ ಮೂಲ) ಶಿವನ ಆರಾಧನಾ ಕೇಂದ್ರಗಳು ಹೆಚ್ಚಾಗಿವೆ. ಇದು ಇಲ್ಲಿನ

ರುದ್ರರಮಣೀಯವಾದ ನಿಸರ್ಗದ ಸೃಷ್ಟಿ ಮತ್ತು ಲಯಶಕ್ತಿಯ ಸಂಕೇತವಾಗಿದೆ.

ತುಳುನಾಡಿನ ಸುಂದರ ಪರಿಸರ ಮತ್ತು ಅದ್ಭುತರಮ್ಯತೆಯನ್ನು ನೋಡಿ ಘಟ್ಟ ಇಳಿದು ಬರುತ್ತಲಿದ್ದ ಪಂಜುರ್ಲಿ ದೈವಕ್ಕೆ ಈ ಭೂಭಾಗದ ಬಗ್ಗೆ ಮೋಹ ಹುಟ್ಟಿತು. ಪಂಜುರ್ಲಿ ಭೂತದ ಒಂದು ನುಡಿಗಟ್ಟು ಹೀಗಿದೆ : 'ಸಿಂಹಾಸನದ ಹಿಂದಿರುವ ಕೊಡೆಯಷ್ಟು ದೊಡ್ಡದು; ಹರಿವಾಣದಷ್ಟು ಉರುಟು; ನಾಣ್ಯದಷ್ಟು ಚಂದ; ಕೆಳಗೆ ತುಳುರಾಜ್ಯ ತುಂಬಾ ಮನೋಹರವಾಗಿ ಕಾಣಿಸುತ್ತಿದೆ' (ಸತ್ತಿಗೆದಾತ್ ಮಲ್ಲೆ ಅರಿಯಣದಾತ್ ಉರುಂಟು ಪಣವುದಾತ್ ಪೊರ್ಲುಡು ತಿರ್ತ್ ತುಳುವ ರಾಜ್ಯ ಬಾರೀ ಪೊರ್ಲುಡು ತೋಜುಂಡು...) ಅಂತಹ ಆಕರ್ಷಣೆಯಿಂದಾಗಿ ಪಂಜುರ್ಲಿ ದೈವ ಇಲ್ಲಿ ನೆಲೆಯಾಗಲು ಕಾರಣವಾಯಿತು.

ಅಷ್ಟೇಕೆ, ಸಮುದ್ರದ ತೆಕ್ಕೆಯಲ್ಲಿದ್ದ ಘಟ್ಟದ ಕೆಳಗಿನ ಭೂಭಾಗವನ್ನು ಕಂಡು ಪರಶುರಾಮನು ಮೋಹಗೊಂಡ. ತಾನು ಕೊಡಲಿ ಎಸೆಯುತ್ತೇನೆ; ಅದು ಎಷ್ಟು ದೂರ ಬೀಳುತ್ತದೋ ಅಷ್ಟು ದೂರದ ಭೂಭಾಗವನ್ನು ತನಗೆ ಬಿಟ್ಟುಕೊಡೆಂದು ಪರಶುರಾಮ ಸಮುದ್ರರಾಜನನ್ನು ಬಿನ್ನವಿಸಿಕೊಂಡ. ಸಮುದ್ರರಾಜ ಅದಕ್ಕೆ ಒಪ್ಪಿದ. ಅದರಂತೆ, ಕೊಡಲಿ ಎಸೆದು ಪಶ್ಚಿಮ ಘಟ್ಟದಿಂದ ಗೋಕರ್ಣದ ವರೆಗಿನ ಭೂಪ್ರದೇಶವನ್ನು ಪರಶುರಾಮ ಕಡಲರಾಜನಿಂದ ಪಡೆದುಕೊಂಡ. ಹಾಗಾಗಿ ಈ ಪ್ರದೇಶ ಪರಶುರಾಮ ಕ್ಷೇತ್ರವೆಂದು ಪ್ರಸಿದ್ಧವಾಗಿದೆ. ಇಂದೊಂದು ಐತಿಹ್ಯ. ಆದಿಮ ಜನರು ಕೊಡಲಿಯಿಂದ ಕಾಡುಕಡಿದು ನಾಡು ಮಾಡಿಕೊಂಡರು; ಇಲ್ಲಿ ಕೊಡಲಿಯಿಲ್ಲದೆ ಬದುಕು ಸಾಗಿಸಲು ಸಾಧ್ಯವಿರಲಿಲ್ಲ ಎಂಬ ವಾಸ್ತವ ಸಂಗತಿ ಸಾಮತಿಯ ರೂಪದಲ್ಲಿ ಬಳಕೆಗೆ ಬಂದಂತಿದೆ. 'ಭಗೀರಥ ಪ್ರಯತ್ನ' ಎಂಬ ನಾಣ್ಣುಡಿಯ ಹಾಗೆ 'ಪರಶುರಾಮ ಕ್ಷೇತ್ರ' ಎಂಬ ಮಾತು ಜನರ ಬಾಯಲ್ಲಿ ರೂಪಕವಾಗಿ ಪೌರಾಣಿಕ ಪರಿವೇಶ ಪಡೆದುಕೊಂಡಿರಬೇಕು.

ಸೂರ್ಯದೇವ ದೊಡ್ಡವನು. ಅವನು ಜಗತ್ತಿಗೆ ಬೆಳಕು ಕೊಡುವವನು. ಅವನಿಲ್ಲದೆ ಬದುಕಲು ಸಾಧ್ಯವಿಲ್ಲ. ಆದರೆ ಕವಿಗಳು ಸೂರ್ಯನಿಗಿಂತಲು ದೊಡ್ಡವರು. ಯಾಕೆಂದರೆ ರವಿ ಕಾಣದುದನ್ನು ಕವಿ ಕಾಣುತ್ತಾನೆ! ಕವಿಗಳಿಗೆ ಕಾಣಿಸದೆ ಇರುವುದು ಯಾವುದೂ ಇಲ್ಲ! ಉಳಿದವರೆಲ್ಲರೂ ಕೇವಲ ಕಣ್ಣುಗಳಿಂದ ಕಂಡರೆ ಕವಿಗಳು ಮೂರನೇ ಕಣ್ಣಿನಿಂದ – ಒಳಗಣ್ಣಿನಿಂದ – ಕಾಣುತ್ತಾರೆ. ಇದನ್ನು ಕಲ್ಪನಾವಿಲಾಸ ಎಂದು ಕರೆಯಬಹುದು. 'ಅಘೋಷಿತ ಶಾಸನ ಕರ್ತೃ'ಗಳಾದ ಕವಿಗಳು ಕಂಡ ತುಳುನಾಡನ್ನು ಓದುಗರಿಗೆ ದರ್ಶಿಸುವ ಸಣ್ಣ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ತುಳುವರು ಸಂತೋಷಗೊಂಡರೆ ಹೃದಯದಲ್ಲಿ, ಕೋಪಗೊಂಡರೆ ಖಡ್ಗದಲ್ಲಿ ಹಾದಿ ತೋರಿಸುವವರು. ಸಹೃದಯತೆಯ ಸಾಧು ಸ್ವಭಾವವನ್ನು ಮತ್ತು ವೀರತೆಯ ಕಾಠಿಣ್ಯವನ್ನು ಜೊತೆ ಜೊತೆಯಾಗಿ ತೋರಿಸುವ ಮಾತು ಇದು. ಶ್ರವಣಬೆಳಗೊಳದ ಕಪ್ಪೆ ಅರಭಟ್ಟನ ಶಾಸನ ಪದ್ಯ ಅದನ್ನು ಹೀಗೆ ಹೇಳುತ್ತದೆ : 'ಸಾಧುಗೆ ಸಾಧು ಮಾಧುರ್ಯ೦ಗೆ ಮಾಧುರ್ಯನ್,

ಬಾಧಿಪ್ಪ ಕಲಿಗೆ ಕಲಿ, ಯುಗ ವಿಪರೀತನ್, ಮಾಧವನೀತನ್ ಪೆರನಲ್ಲ.' ಈ ಮಾತು ತುಳುವರಿಗೂ ಸಾರ್ಥಕವಾಗಿ ಅನ್ವಯಿಸುತ್ತದೆ.

ತುಳುವರ ರಸಾರ್ದ್ರ ದೃಷ್ಟಿಯನ್ನು 'ಅಯ್ಯಯ್ಯ ಎಂಚ ಪೊರ್ಲಾಂಡೆಂದು ತುಳುವರು ಮೈಯ್ಯುಬ್ಬಿ ಕೇಳಬೇಕಣ್ಣಾ!' ಎಂದು 'ಭರತೇಶವೈಭವ'ದ ಕವಿ ರತ್ನಾಕರವರ್ಣಿ ಚೆನ್ನಾಗಿ ವಿವರಿಸಿದ್ದಾನೆ. ಸಾಂಪ್ರದಾಯಿಕ ಶಿಕ್ಷಣ ಹೆಚ್ಚಾಗಿ ಇರದಿದ್ದರೂ ಯಕ್ಷಗಾನ ನೋಡಿ ಸುಸಂಸ್ಕೃತವಾದ ಜನವರ್ಗ ಅದು; ಪಾಂಡಿತ್ಯವನ್ನೂ ಸಂಪಾದಿಸಿಕೊಂಡವರು. 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಎಂಬ ಮಾತು ಬಹುಶಃ ತುಳುವರನ್ನು ನೋಡಿ ಬರೆದುದಿರಬೇಕು!

'ತುಳು' ಎಂದರೆ ತುಳುಂಕುವುದು, ಉಕ್ಕೇರುವುದು ಎಂದು ಅರ್ಥ. ಸಮುದ್ರ ತುಳುಕುತ್ತದೆ; ನದಿ-ಹಳ್ಳಗಳು ತುಳುಕುತ್ತವೆ. ಕಾಡು ತುಳುಕುತ್ತದೆ. ನಾಡು ತುಳುಕುತ್ತದೆ. ಸೃಷ್ಟಿ ಸಮಸ್ತವೂ ತುಂಬಿ ತುಳುಂಕುವ ಪ್ರದೇಶ ತುಳುನಾಡು[1]. ತುಳುಂಕುವ (ಸಮೃದ್ಧಿಯ) ನಾಡಿನಲ್ಲಿ ಸೃಷ್ಟಿಕ್ರಿಯೆಯೂ ಹೆಚ್ಚು. ಇಲ್ಲಿ ಬಿಸಿಲು ಮತ್ತು ಮಳೆ ಸಮಪ್ರಮಾಣದಲ್ಲಿ ಇರುವುದರಿಂದ ಸೃಷ್ಟಿಕ್ರಿಯೆಯ ಜೀವಚಕ್ರ ಕ್ರಿಯಾಶೀಲವಾಗಿದೆ. ಜಲಚರ, ನೆಲಚರ ಎರಡರ ಸಂಖ್ಯೆಯೂ ಉಷ್ಣ ಪ್ರದೇಶದಲ್ಲಿ ಹೆಚ್ಚಾಗಿರುತ್ತದೆ. ಮರಗಿಡಾದಿ ಸಸ್ಯಸಂಕುಲ, ಕ್ರಿಮಿಕೀಟಗಳು, ಉರಗಗಳು, ಮೃಗಪಕ್ಷಿಗಳು ಅಷ್ಟೇಕೆ, ಜನಸಂಖ್ಯೆಯೂ ಇಲ್ಲಿ ಹೆಚ್ಚು. ಹೀಗೆ ಜೀವಶಕ್ತಿ ತುಂಬಿತುಳುಕಾಡುವ ಪ್ರದೇಶವನ್ನು ಕವಿಗಳು ಭಾವಪರವಶರಾಗಿ ಹಾಡಿಹೊಗಳಿದ್ದರಲ್ಲಿ ಆಚ್ಚರಿಯೇನಿದೆ?

ಜನಪದ ಭಾವಾಭಿವ್ಯಕ್ತಿಯೆಂದರೆ ನೆಲದಿಂದ ನೇರವಾಗಿ ಜೀವಸೆಲೆಯನ್ನು ಪಡೆದುಕೊಂಡು ಸಹಜವಾಗಿ ಅರಳಿದ ಹೂವಿನ ಹಾಗೆ. ಅಷ್ಟು ಸಹಜ ಮತ್ತು ಸುಂದರ. ನದಿಯ ಹಾಗೆ, ಸಮೃದ್ಧ ಕಾಡು ಮತ್ತು ಪ್ರಕೃತಿಯ ಹಾಗೆ. ಸಂಪನ್ನವಾದ ಆಶಯ ಮತ್ತು ಸಕಾರಾತ್ಮಕ ನಿಲುವಿನ ಜನಪದ ಕವಿತೆಯೊಂದು ಹೀಗಿದೆ. ಕೊಯ್ಲಿನ ಬಳಿಕ ಮನೆ ತುಂಬುವ ಸಂದರ್ಭದಲ್ಲಿನ ಒಂದು ಉರಾಲ್ ಹೀಗಿದೆ :

"ಪೊಲಿ ಪೊಲಿ ಪೊಲಿ ಪೊಲಿ ಪೊಲಿ ಎಚ್ಚಾಲ
ಪಂಚ ಪಾಂಡವೆರೆ ಪೊಲಿ ನಿಚ್ಚ ದೇವರ್ಕುಳೆ ಪೊಲಿ
ತುಪ್ಪೆ ಪಾಡೊಡು ಸಿರಿ ತೂವೊಡು

---

[1] ಸಹೋದರ ಭಾಷೆಯಾದ ಮಲಯಾಳಂನಲ್ಲಿ 'ತುಳ್ಳು' ಎಂದರೆ ಹಾರುವುದು, ನೆಗೆಯುವುದು (ತುಳುಕುವುದು), ನರ್ತನ ಎಂಬ ಅರ್ಥವಿದೆ. 'ಓಟ್ಟಂತುಳ್ಳಲ್' ಎಂಬ ಜಾನಪದ ಕಲಾಪ್ರಕಾರವೊಂದು ಕೇರಳದಲ್ಲಿದೆ. ಓಡಿ ಹಾರುವುದು ಎಂಬುದು ಇದರ ಪದಶಃ ಅರ್ಥ. ಮೇರರು ಮದುವೆಯನ್ನು ಹಿಂದೆ 'ತುಳ್ಳಲ್' ಎನ್ನುತ್ತಿದ್ದರು. ಅವರ ಮದುವೆಯಲ್ಲಿ ಕುಣಿತವೇ ಪ್ರಧಾನವಾಗಿರುವುದರಿಂದ ಈ ಹೆಸರು ಬಂದಿರಬಹುದು. 'ತುಳ್ಳರುನೆ' ಎಂದರೆ ಲಯವಿಲ್ಲದೆ ಕುಣಿಯುವುದು ಎಂಬರ್ಥವಿದೆ.

ಆ ಜಾಲ ಪೊಲಿ ಈ ಜಾಲ ಪೊಲಿ ಅಜಿಪ್ಪತ್ತಾಜಿ ಜಾಲ್‌ದಾತ್ ಪೊಲಿ
ಎಳ್ಪತ್ತೇಳ್ ಕೋಟಿ ಪೊಲಿ, ಎನ್ನ ಉಳ್ಳಾಯ ಜಾಲ್‌ಗೇ ಬಲ ಪೊಲಿ
ಅಪ್ಪೆ ಬೆರಿಟೆ ಬಾಲೆಲು ಬನ್ನಂಗೆ ಬರೊಡು
ಪೆತ್ತದ ಬೆರಿಯೆ ಕಂಜಿ ಬನ್ನಂಗೆ ಬರೊಡು
ಪೆರಡೆದ ಬೆರಿಟ್ ಕಿನ್ನಿಲು ಬನ್ನಂಗೆ ಬರೊಡು
ಪಿಲಿತ ಬೆರಿಯೆ ಪಿಲಿತ್ತ ಕುರ್ಲೆಲು ಬನ್ನಂಗೆ ಬರೊಡು
ಮದಿಮಾಳ್ ಪೊನ್ನಗ್ ತರೆ ಬನ್ನಂಗೆ ಬರೊಡು
ಜವಂದಿ ಪೊಣ್ಣಗ್ ಮಿರೆ ಬನ್ನಂಗೆ ಬರೊಡು
ಪಿಜಿನ್‌ದ ದಾರೆ ಬನ್ನಂಗೆ ಬರೊಡು
ದೂಜಿದ ಪಿರಾವೆ ನೂಲು ಬನ್ನಂಗೆ ಬರೊಡು
ಬಲಿಪ ನಾಲಾಯಿಡೆ ಬರೊಡು
ಕುದುಕ ಬೀಲೊಡು ಬರೊಡು
ಪೇರ್ ಉರ್ಕಾರುಲಕ ಉರ್ಕಾರೊಡು
ಕಡಲಸೆರೆ ಮಗ್ರುಲೆಕ ಮಗ್ರೊಡು
ನೀರ್ ಪೆರ್ಚುಲೆಕ ಪೆರ್ಚೊಡು
ಪೊಲಿ ಪೊಲಿಯೇ ಪೊಲಿ
ಆ ಜಾಲ ಪೊಲಿ ಈ ಜಾಲ ಪೊಲಿ''
(ಅನುವಾದ : ''ಅದೃಷ್ಟ ಅದೃಷ್ಟ ಅದೃಷ್ಟ ಅದೃಷ್ಟ ಅದೃಷ್ಟ ಹೆಚ್ಚಿಸು
ಪಂಚಪಾಂಡವರ ಅದೃಷ್ಟ ನಿತ್ಯ ದೇವರುಗಳ ಅದೃಷ್ಟ
ರಾಶಿ ಬೀಳಲಿ, ಶ್ರೀಮಂತಿಕೆ ಸಮೃದ್ಧಿ ನೋಡಬೇಕು
ಆಚೆ ಅಂಗಳದ ಅದೃಷ್ಟ ಈಚೆ ಅಂಗಳದ ಅದೃಷ್ಟ
ಅರವತ್ತಾರು ಅಂಗಳದಷ್ಟು ಅದೃಷ್ಟ ಎಪ್ಪತ್ತೇಳು ಕೋಟಿ ಅದೃಷ್ಟ
ಎನ್ನ ಒಡೆಯನ ಅಂಗಳಕ್ಕೇ ಬಾ ಅದೃಷ್ಟವೇ
ಅಮ್ಮನ ಹಿಂದೆ ಮಕ್ಕಳು ಬರುವ ಹಾಗೆ ಬರಲಿ
ಹಸುವಿನ ಹಿಂದೆ ಕರು ಬರುವ ಹಾಗೆ ಬರಲಿ
ಹೇಂಟೆಯ ಹಿಂದೆ ಮರಿಗಳು ಬರುವ ಹಾಗೆ ಬರಲಿ
ಹುಲಿಯ ಹಿಂದೆ ಹುಲಿಮರಿಗಳು ಬರುವ ಹಾಗೆ ಬರಲಿ
ಮದುಮಗಳ ಶಿರದ ಶೃಂಗಾರದ ಹಾಗೆ ಬರಲಿ
ಹರೆಯದ ಹೆಣ್ಣಿಗೆ ಮೊಲೆ ಬರುವ ಹಾಗೆ ಬರಲಿ
ಇರುವೆ ಸಾಲು ಬರುವ ಹಾಗೆ ಬರಲಿ
ಸೂಜಿ ಹಿಂದೆ ದಾರ ಬರುವ ಹಾಗೆ ಬರಲಿ

ಪಟ್ಟೆಹುಲಿಯ ನಾಲಗೆಯಿಂದ ಬರಲಿ
ನರಿಯ ಬಾಲದಿಂದ ಬರಲಿ
ಹಾಲು ಉಕ್ಕಿದಂತೆ ಉಕ್ಕಲಿ
ಕಡಲ ತೆರೆ ಹೊರಳುವಂತೆ ಹೊರಳಿ ಹೊರಳಿ ಬರಲಿ
ನೀರು ಹೆಚ್ಚುವಂತೆ ಹೆಚ್ಚಲಿ
ಅದೃಷ್ಟ ಅದೃಷ್ಟವೇ ಅದೃಷ್ಟ
ಆ ಅಂಗಳದ ಅದೃಷ್ಟ ಈ ಅಂಗಳದ ಅದೃಷ್ಟ'')

ಈ ಜನಪದ ಕವಿತೆ ಹೇಳುವುದು ತುಳುನಾಡಿನ ಸೌಖ್ಯ ಮತ್ತು ಸಂಪತ್ಸಮೃದ್ಧಿಯ ಜೀವನವನ್ನು ಅಥವಾ ಅಂತಹ ಆಶಯವನ್ನು. ಇಲ್ಲಿನ ಬೇಟೆ ಮತ್ತು ಕೃಷಿಬದುಕಿನ ಹಿನ್ನೆಲೆಯಲ್ಲಿ ಈ ಕವಿತೆ ಹಲವು ಅರ್ಥವಿನ್ಯಾಸಗಳನ್ನು ನಮ್ಮ ಮುಂದೆ ತೆರೆದಿಡುತ್ತದೆ.

ಇಲ್ಲಿನ ಪ್ರಕೃತಿ ರುದ್ರಭಯಂಕರವಾದುದು. ಭಯ ಹುಟ್ಟಿಸುವಂಥದು. ಇಲ್ಲಿರುವುದು ಭಯದ ಜೊತೆಗಿನ ಭಕ್ತಿ. ಭಕ್ತಿ ಇರುವಲ್ಲಿ ವಿಮರ್ಶೆಗೆ–ವೈಚಾರಿಕತೆಗೆ ಎಡೆ ಇಲ್ಲ. ಶರಣಾಗತಿಭಾವದಿಂದ ಹೊಗಳುವುದು ಅಥವಾ ಪ್ರಾರ್ಥಿಸುವುದು ಭಕ್ತಿಯ ಲಕ್ಷಣ. ಪ್ರಕೃತಿಯು ಮನುಷ್ಯನಲ್ಲಿ ಅನುಕರಣಾತ್ಮಕವಾದ ಪ್ರತಿಕ್ರಿಯೆಗಳನ್ನು ಪ್ರಚೋದಿಸುತ್ತದೆ. ರುದ್ರ ರಮಣೀಯತೆ ನೆಲಸಿರುವಲ್ಲಿ ಅದಕ್ಕೆ ಮನುಷ್ಯನ ಭಾವನಾತ್ಮಕ ಪ್ರತಿಕ್ರಿಯೆಯು ತೀವ್ರವಾಗಿರುತ್ತದೆ. ಕಾವ್ಯದ ಮೂಲಕ ಅಭಿವ್ಯಕ್ತಿಗೊಂಡ ಅಂತಹ ಪ್ರತಿಕ್ರಿಯೆಗಳನ್ನು ಗ್ರಹಿಸುವುದು ರೋಚಕವೂ ಸಂತೋಷಾನುಭವವನ್ನು ಕೊಡುವಂಥದೂ ಆಗಿದೆ. ತುಳುನಾಡಿನ ಬಹುತೇಕ ಎಲ್ಲ ಕವಿಗಳೂ 'ತುಳುವಪ್ಪೆ'ಯನ್ನು ಧ್ಯಾನಿಸಿ ಕವಿತೆಗಳನ್ನು ಬರೆದಿದ್ದಾರೆ.

ಇದೊಂದು ವಿಶಿಷ್ಟವಾದ ಸಂಕಲನ. ಬೇರೆ ಬೇರೆ ಕಾಲಘಟ್ಟಕ್ಕೆ ಸೇರಿದ ಕವಿಗಳು ತುಳುನಾಡಿನ ಬಗ್ಗೆ ಬರೆದ ಕವಿತೆಗಳನ್ನು ಒಂದೆಡೆ ಕಲೆ ಹಾಕಿ – ಕನ್ನಡ ಕವಿತೆಗೆ ತುಳು ಅನುವಾದವನ್ನು, ತುಳು ಕವಿತೆಗೆ ಕನ್ನಡ ಅನುವಾದವನ್ನು ಅಲ್ಲಲ್ಲೆ ನೀಡಲಾಗಿದೆ. ತುಳುನಾಡಿನ ವರ್ಣನೆಯುಳ್ಳ ಪ್ರಾತಿನಿಧಿಕ ಕವಿತೆಗಳು ಒಂದೆಡೆ ಓದಲು ಸಿಗಬೇಕೆಂಬ ಉದ್ದೇಶ ಒಂದೆಡೆಗಾದರೆ ತುಳು ಕವಿತೆಗಳ ಸತ್ತ್ವ ಹಾಗೂ ರುಚಿಯನ್ನು ಕನ್ನಡ ಓದುಗರು ತಿಳಿದುಕೊಳ್ಳಬೇಕೆಂಬುದು ಇನ್ನೊಂದು ಉದ್ದೇಶ.

ಇಂತಹ ಪ್ರಯತ್ನ ಇತರ ಭಾಷೆಗಳಲ್ಲಿ ಆಗಿದೆ. ಉದಾಹರಣೆಗೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರವು ನಾಡುನುಡಿಯ ಬಗೆಗೆ ಬೇರೆ ಬೇರೆ ಕವಿಗಳು ಬರೆದ ಒಳ್ಳೆಯ ಕವನಗಳನ್ನು ಒಂದೆಡೆ ಕಲೆಹಾಕಿ 'ನನ್ನದು ಈ ಕನ್ನಡ ನಾಡು', 'ಕನ್ನಡ ಕನ್ನಡ ಹಾ! ಸವಿಗನ್ನಡ' ಎಂಬ ಹೆಸರುಗಳಲ್ಲಿ ಸಂಕಲನಗಳನ್ನು ಪ್ರಕಟಿಸಿದೆ. ನಾಡುನುಡಿಯ ಬಗೆಗೆ ಅಭಿಮಾನ ಹುಟ್ಟಿಸುವ ನಿಟ್ಟಿನಲ್ಲಿ ಇಂತಹ ಸಂಕಲನಗಳಿಗೆ ಮಹತ್ವ ಇದೆ. ಒಂದು ನಿರ್ದಿಷ್ಟ ವಿಷಯದ ಬಗ್ಗೆ ಇರುವ ಇಂತಹ ಸಂಕಲನಗಳು ಅಭ್ಯಾಸಯೋಗ್ಯವೂ ಹೌದು.

ಇಲ್ಲಿ ಸಂಕಲಿತವಾದ ಕವನಗಳಲ್ಲಿ ಕೆಲವನ್ನು ಆಯಾ ಕವಿಗಳು ಅನುವಾದ

ಮಾಡಿಕೊಟ್ಟಿದ್ದಾರೆ. ಉಳಿದ ಕವನಗಳನ್ನು ಸಂಪಾದಕರು ಅನುವಾದ ಮಾಡಿದ್ದು ಮೂಲಕ್ಕೆ ನಿಷ್ಠವಾಗಿರುವ ಪ್ರಯತ್ನ ಮಾಡಲಾಗಿದೆ.

ಒಂದು ಭಾಷೆಯ ಸಾಹಿತ್ಯ ಶ್ರೀಮಂತವಾಗಬೇಕಾದರೆ ಇತರ ಭಾಷೆಗಳಿಗೆ ಅದು ಅನುವಾದಗೊಳ್ಳಬೇಕಾಗಿರುವುದು ತೀರ ಅವಶ್ಯ. ಹಾಗೆಯೇ ಬೇರೆ ಭಾಷೆಗಳಿಂದ ನಮ್ಮ ಭಾಷೆಗೂ ಅನುವಾದ ಆಗುತ್ತಿರಬೇಕು. ಇತರ ಭಾಷೆಗಳ ಸಾಹಿತ್ಯದ ಸತ್ತ್ವ ಏನು, ಅವುಗಳ ಆಶಯ ಏನು, ಆ ಭಾಷೆಯ ಸಾಹಿತ್ಯ ಯಾವ ದಿಕ್ಕಿಗೆ ಸಾಗುತ್ತಿದೆ ಎಂಬಿತ್ಯಾದಿಗಳನ್ನು ತಿಳಿಯಬೇಕಾದರೆ ಆದಾನ-ಪ್ರದಾನ ಆಗಬೇಕು. ತುಳುವಿನಲ್ಲಿ ತಕ್ಕಮಟ್ಟಿಗೆ ಈ ಕಾರ್ಯ ಆಗಿದೆಯಾದರೂ ಅದು ಸಾಲದು.

ಕನ್ನಡ ಮತ್ತು ಇತರ ಭಾಷೆಗಳಿಂದ ತುಳುವಿಗೆ ಆಗಿರುವ ಕೆಲವು ಕಾವ್ಯಾನುವಾದಗಳನ್ನು ಗಮನಿಸುವುದಾದರೆ ಕೆಲಿಂಜ ಸೀತಾರಾಮ ಆಳ್ವರು ಭಗವದ್ಗೀತೆಯನ್ನು 'ಗೀತೆದ ತಿರ್ಲ್' (1981) ಎಂದು ಅನುವಾದಿಸಿದ್ದಾರೆ. ಕೆದಂಬಾಡಿ ಜತ್ತಪ್ಪ ರೈಯವರು ಎಸ್.ವಿ. ಪರಮೇಶ್ವರ ಭಟ್ಟರ 'ಇಂದ್ರಚಾಪ ಮತ್ತು ಇತರ ಕೆಲವು ಕವನಗಳ'ನ್ನು 'ಅಜ್ಜಬಿರು' (1982) ಎಂದೂ, ಕುವೆಂಪು ಅವರ 'ಬೊಮ್ಮನ ಹಳ್ಳಿಯ ಕಿಂದರಿಜೋಗಿ' ಎಂಬ ಕಥನ ಕವನವನ್ನು 'ಅಸೆನಿಯಾಗೊ ಕಾಂತಗೊಜೋಗಿ' (1994) ಎಂದೂ ಅನುವಾದ ಮಾಡಿದರು. ಅಮೃತ ಸೋಮೇಶ್ವರ ಅವರು ಫಿನ್ಲೆಂಡಿನ ಜನಪದ ಮಹಾಕಾವ್ಯ ಕಾಲೇವಾಲದ ಒಂದು ಭಾಗವನ್ನು (ಇಂಗ್ಲಿಷ್ ಮೂಲಕವಾಗಿ) 'ಮೋಕೆದ ಬೀರೆ ಲೆಮಿನ್ಕಾಯೆ' (1985) ಎಂದೂ, ಪೊಳಲಿ ಬಾಲಕೃಷ್ಣ ಶೆಟ್ಟಿಯವರು ಡಿ.ವಿ.ಜಿ.ಯವರ 'ಮಂಕುತಿಮ್ಮನ ಕಗ್ಗ'ವನ್ನು 'ಪೊಡುಂಬ ತಿಂಮನ ಕಗ್ಗ (1988) ಎಂದೂ, ಕೆ.ಟಿ. ಗಟ್ಟಿಯವರು ಇಂಗ್ಲಿಷ್‌ನ ಕೆಲವು ಕವಿತೆಗಳನ್ನು 'ಎನ್ನ ಮೋಕೆದ ಪೊಣ್ಣು' (1996) ಎಂದೂ ಅನುವಾದ ಮಾಡಿದರು. ಶ್ರೀಮತಿ ಕ್ಯಾಥರಿನ್ ರಾಡ್ರಿಗಸ್ ಅವರು ಜೆ.ಬಿ. ಸಿಕ್ವೇರರ ಕೆಲವು ಕೊಂಕಣಿ ಕವಿತೆಗಳನ್ನು 'ಸತ್ಯೊ ಮಿತ್ಯೊ' (2000) ಎಂದು ಮತ್ತು 'ಬಂಜಿ ಸಂಕಡ ಬೆಂದ್ ಸಂಕಡ' (2001) ಎಂದು ಅನುವಾದ ಮಾಡಿದರು. ಡಾ. ಕಬ್ಬಿನಾಲೆ ವಸಂತ ಭಾರದ್ವಾಜರು 'ಪುರಂದರ ದಾಸೆರ್ನ ಪದೊಕುಲು' (2002) ಮತ್ತು 'ಸೋಮೇಶ್ವರ ಶತಕೊ' (2004), ಶಿಮುಂಜೆ ಪರಾರಿಯವರು ಬಿ.ಎ. ಸನದಿಯವರ ಕೆಲವು ಕವಿತೆಗಳನ್ನು 'ಅಡ್ಡ ಬೂರೊಂಡೆ' (2005) ಎಂದೂ, ಭಾಸ್ಕರ ಭಂಡಾರಿ ಮಜಿಬೈಲು ಅವರು 'ಸರ್ವಜ್ಞನ ವಚನೊಲು' (2006) ಕೃತಿಯನ್ನೂ ಅನುವಾದ ಮಾಡಿದರು. ಎಸ್.ಡಿ. ಪೆಜತ್ತಾಯರು ಕನ್ನಡದಿಂದ 'ಶ್ರೀಲಕ್ಷ್ಮೀ ಶೋಭಾನೆ'ಯನ್ನು (2006) ಅನುವಾದಿಸಿದರು. ಕಬ್ಬಿನಾಲೆಯವರ 'ಕಂಬುಳದ ಪೇರ್' (2007) ಕೃತಿಯಲ್ಲಿ ಕೆಲವು ಅನುವಾದ ಕವಿತೆಗಳಿವೆ. ಡಾ. ಶಿವಕುಮಾರ ಭರಣ್ಯ ತೆಲುಗಿನಿಂದ 'ವೇಮನ ಶತಕ'ವನ್ನು (2007), ಡಾ. ಶ್ರೀಕೃಷ್ಣ ಭಟ್ ಅರ್ತಿಕಜೆ ತಮಿಳಿನ ಅನ್ನ ಕಣ್ಣನ್‌ನ ಕವಿತೆಗಳನ್ನು (2007) ಅನುವಾದ ಮಾಡಿ ತುಳುವಿನಲ್ಲಿ ಅನುವಾದ ಸಾಹಿತ್ಯದ ಕೊರತೆಯನ್ನು ತಕ್ಕಮಟ್ಟಿಗೆ ನೀಗಿದ್ದಾರೆ. ಬೇರೆ ಬೇರೆ ಭಾಷೆಗಳಿಂದ ಕೆಲವು

ಬಿಡಿಕವನಗಳನ್ನು ಡಾ. ಪದ್ಮನಾಭ ಕೇಕುಣ್ಣಾಯ, ಡಾ. ಬಿ.ಎ. ವಿವೇಕ ರೈ, ಡಾ. ವಸಂತಕುಮಾರ ಪೆರ್ಲ, ಕಿರಣ ಸುಳ್ಯ, ಜಿತು ನಿಡ್ಲೆ, ಶಿಮುಂಜೆ ಪರಾರಿ ಮೊದಲಾದವರು ಅನುವಾದ ಮಾಡಿ ತುಳುವಿನಲ್ಲಿ ಅನುವಾದ ಕವಿತೆಗಳ ಭಂಡಾರವನ್ನು ಹೆಚ್ಚಿಸಿದ್ದಾರೆ. ಆದರೆ ಈ ಕೆಲಸ ಸಾಲದು; ಇನ್ನೂ ತುಂಬಾ ಆಗಬೇಕಾಗಿದೆ.

ಅನುವಾದ ಕಾರ್ಯದಿಂದಾಗಿ ಕನ್ನಡದಲ್ಲಿ ನವೋದಯ ಸಾಹಿತ್ಯ ಚಳುವಳಿ ಆರಂಭವಾಯಿತು ಎಂಬುದು ನಮಗೆಲ್ಲ ತಿಳಿದ ಸಂಗತಿ. ನವೋದಯದ ಶುಭಾರಂಭವು ತುಳುನಾಡಿನಿಂದ ಆಯಿತು ಎಂಬುದು ಒಂದು ಚೋದ್ಯವೇ ಹೌದು. ನ್ಯಾಯವಾದಿ ಹಾಗೂ ಪತ್ರಕರ್ತರಾಗಿದ್ದ ಹಟ್ಟಿಯಂಗಡಿ ನಾರಾಯಣರಾಯರು 1915ರ ಸುಮಾರಿಗೆ ಇಂಗ್ಲಿಷಿನಿಂದ ಕವನಗಳನ್ನು ಕನ್ನಡಕ್ಕೆ ಅನುವಾದಿಸಿ ಪ್ರಕಟಿಸತೊಡಗಿದರು. 1919ರಲ್ಲಿ ಅವನ್ನೆಲ್ಲ ಸಂಕಲಿಸಿ 'ಆಂಗ್ಲ ಕವಿತಾವಳಿ' ಎಂಬ ಹೆಸರಿನಿಂದ ಪ್ರಕಟಿಸಿದರು. ಅದೇ ಸುಮಾರಿಗೆ ಮೈಸೂರಿನಲ್ಲಿ ಬಿ.ಎಂ.ಶ್ರೀ.ಯವರು ಅನುವಾದಗಳನ್ನು ಮಾಡುತ್ತಿದ್ದರು. ಅವರ ಕೃತಿ 'ಇಂಗ್ಲಿಷ್ ಗೀತಗಳು' ಎಂಬ ಹೆಸರಿನಿಂದ 1921ರಲ್ಲಿ ಪ್ರಕಟವಾಯಿತು. ಆ ನಂತರ ನವೋದಯ ಸಾಹಿತ್ಯ ಎಂಬ ಹೆಸರಿನಿಂದ ಆಧುನಿಕ ಕನ್ನಡ ಸಾಹಿತ್ಯ ಇತೋಪ್ಯತಿಶಯವಾಗಿ ಬೆಳೆದು ಬಂದಿತು ಎಂಬುದನ್ನು ಕನ್ನಡ ಸಾಹಿತ್ಯ ಚರಿತ್ರೆ ಓದಿದವರೆಲ್ಲರೂ ಬಲ್ಲರು. ನಮ್ಮ ಭಾಷೆಯಿಂದ ಇತರ ಭಾಷೆಗಳಿಗೆ ಹಾಗೂ ಇತರ ಭಾಷೆಗಳಿಂದ ನಮ್ಮ ಭಾಷೆಗೆ ಸಾಹಿತ್ಯವು ಅನುವಾದಗೊಳ್ಳಬೇಕಾದ ಅಗತ್ಯವನ್ನು ಈ ಘಟನೆ ತೋರಿಸಿಕೊಡುತ್ತದೆ.

ಕನ್ನಡದಲ್ಲಿ ಬರೆದ ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತಿಗಳು ತುಳುನಾಡಿನ ಸಂಸ್ಕೃತಿಯನ್ನು, ಇಲ್ಲಿನ ನೆಲದ ಸೊಗಡನ್ನು ನಾಡಿನುದ್ದಗಲ ಪಸರಿಸಿದರು ಎಂಬುದು ಅಭಿಮಾನದ ಸಂಗತಿ. ರತ್ನಾಕರ ವರ್ಣಿಯಿಂದ ತೊಡಗಿ ಮುದ್ದಣ, ಪಂಜೆ ಮಂಗೇಶರಾವ್, ಎಂ.ಎನ್. ಕಾಮತ್, ಜಿ.ಎನ್. ಲಕ್ಷ್ಮಣ ಪೈ, ಉಗ್ರಾಣ ಮಂಗೇಶರಾವ್, ಉಳ್ಳಾಲ ಮಂಗೇಶರಾವ್, ಮಚ್ಚಿಮಲೆ ಶಂಕರನಾರಾಯಣ ರಾವ್, ಕಡೆಂಗೋಡ್ಲು ಶಂಕರ ಭಟ್, ಕೊಳಂಬೆ ಪುಟ್ಟಣ್ಣ ಗೌಡ, ಕಯ್ಯಾರ ಕಿಂಞಣ್ಣ ರೈ, ಗೋಪಾಲಕೃಷ್ಣ ಅಡಿಗ ಮುಂತಾದ ಕವಿಗಳು ತಮ್ಮ ಕಾವ್ಯಗಳ ಮೂಲಕ; ಗಣಪತಿ ರಾವ್ ಐಗಳ್, ಮಂಜೇಶ್ವರ ಗೋವಿಂದ ಪೈ (ಇವರಂತು ಸ್ವತಂತ್ರ ಭಾರತದಲ್ಲಿ ಮೊಟ್ಟ ಮೊದಲ ರಾಷ್ಟ್ರಕವಿಗಳೆಂದು ಬಿರುದಾಂಕಿತರಾದವರು), ಕಡವ ಶಂಭು ಶರ್ಮ, ಬಿ.ಎ. ಸಾಲೆತ್ತೂರು, ಡಾ.ಪಿ. ಗುರುರಾಜ ಭಟ್, ಡಾ. ಅ. ಸುಂದರ, ಡಾ. ಸೂರ್ಯನಾಥ ಕಾಮತ್ ಮುಂತಾದ ಸಂಶೋಧಕರು ತಮ್ಮ ಸಂಶೋಧನೆಗಳ ಮೂಲಕ; ಮುಳಿಯ ತಿಮ್ಮಪ್ಪಯ್ಯ, ಕುಕ್ಕಿಲ ಕೃಷ್ಣಭಟ್ಟ, ಸೇಡಿಯಾಪು ಕೃಷ್ಣಭಟ್ಟ, ಪಾಲೆಪ್ಪಾಡಿ ಗೋಪಾಲಕೃಷ್ಣ, ತೆಕ್ಕುಂಜ ಗೋಪಾಲಕೃಷ್ಣ ಭಟ್ಟ, ಕೆ.ಪಿ. ವೆಂಕಪ್ಪ ಶೆಟ್ಟಿ ಪ್ರೊ. ಸುಬ್ರಾಯ ಭಟ್ಟ, ತಾಳ್ತಜೆಯ ಕೃಷ್ಣಭಟ್ಟ ಮತ್ತು ಕೇಶವಭಟ್ಟ ಸಹೋದರರು ಮುಂತಾದ ವಿದ್ವಾಂಸರು ತಮ್ಮ ವಿದ್ವತ್ತಿನ ಮೂಲಕ ಕನ್ನಡದಲ್ಲೇ ಆದರೂ ಅರಳಿಸಿದ್ದು ತೌಳವ ಸಂಸ್ಕೃತಿಯ ಸಾರಭೂತವಾದ ಅಂಶವನ್ನಲ್ಲದೆ ಬೇರೇನೂ ಅಲ್ಲ. ಕೆ.ಕೆ. ಹೆಬ್ಬಾರರಂತಹ

ಅಂತಾರಾಷ್ಟ್ರೀಯ ಖ್ಯಾತಿಯ ಕಲಾವಿದರಿರಲಿ, ರೆಂಜಾಳ ಗೋಪಾಲಕೃಷ್ಣ ಶೆಣೈ, ಶ್ಯಾಮರಾಯ ಆಚಾರ್ಯರಂತಹ ಶಿಲ್ಪಿಗಳಿರಲಿ, ಇಲ್ಲಿ ಆಗಿಹೋದ ಅಸಂಖ್ಯ ಯಕ್ಷಗಾನ ಕಲಾವಿದರಿರಲಿ ಅವರೆಲ್ಲ ಅಭಿವ್ಯಕ್ತಿಸಿದ್ದು ತೌಳವ ಸಂಸ್ಕೃತಿಯ ತಿರುಳನ್ನೇ ಆಗಿದೆ. ಅಷ್ಟೇಕೆ, ಚಲನಚಿತ್ರ ಮಾಧ್ಯಮಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡ ಬಿ.ವಿ. ಕಾರಂತ ಮತ್ತು ಸದಾನಂದ ಸುವರ್ಣರಂತಹ ಚಿತ್ರನಿರ್ದೇಶಕರೂ ಇನ್ನೊಂದೇ ನೆಲೆಯಲ್ಲಿ ಆ ಕೆಲಸ ಮಾಡಿದರು. ಕೋಟಿಚೆನ್ನಯ, ಅಗೋಳಿ ಮಂಜಣ ಮುಂತಾದ ಜಾನಪದ ಕಥೆಗಳನ್ನು ಮೊಟ್ಟಮೊದಲ ಬಾರಿಗೆ ಬರೆದು ಅಕ್ಷರಲೋಕಕ್ಕೆ ಪರಿಚಯಿಸಿದವರು ಪಂಜೆಯವರು. ಅಲ್ಲದೆ ತುಳುನಾಡಿನ ಹಲವು ಜಾನಪದ ಕಥೆಗಳನ್ನು ಅವರು ಕನ್ನಡದಲ್ಲಿ ಬರೆದರು. ಅವರ 'ತೆಂಕಣ ಗಾಳಿಯಾಟ' ಎಂಬ ಕವನ ತುಳುನಾಡನ್ನು ಶಾಶ್ವತವಾಗಿ ಪ್ರತಿನಿಧಿಸುವಂತಹುದು. 'ಚೆನ್ನೆಮಣೆ' ಬರೆದವರು ಸೇಡಿಯಾಪು ಅವರು. ಇಲ್ಲಿನ ಸಂಶೋಧಕರು ನಡೆಸಿದ ಸಂಶೋಧನೆಗಳೆಲ್ಲವೂ ತುಳುನಾಡಿನ ಚರಿತ್ರೆ ಮತ್ತು ಸಾಂಸ್ಕೃತಿಕ ಇತಿಹಾಸಕ್ಕೆ ಸಂಬಂಧಿಸಿದವೇ ಆಗಿವೆ.[2]

ತುಳುನಾಡು ಹಿಂದಿನಿಂದಲೂ ವೈಶಿಷ್ಟ್ಯಪೂರ್ಣ ಪ್ರಾದೇಶಿಕ ಘಟಕವಾಗಿದ್ದುದರಿಂದ ಜಾನಪದ ಮತ್ತು ಸಾಂಸ್ಕೃತಿಕ ಅನನ್ಯತೆಯನ್ನು ಕಾಪಾಡಿಕೊಂಡು ಬಂದಿರುವುದನ್ನು ಕಾಣುತ್ತೇವೆ. ಈ ಅನನ್ಯತೆಯನ್ನು ನೃತ್ಯ-ಆರಾಧನೆ, ಕುಟುಂಬ-ಗೋತ್ರ (ಬರಿ) ವ್ಯವಸ್ಥೆಗಳು, ಕೃಷಿ ಹಾಗೂ ಮೃಗಪಕ್ಷಿಗಳ ಲೋಕ, ಆಟ ಪಾಟಗಳು ಹಬ್ಬ ಹರಿದಿನಗಳು, ಬಾಯ್ದೆರೆಯ ಪರಂಪರೆ (oral traditon), ಜನಸಮುದಾಯಗಳ ಪ್ರಾದೇಶಿಕ-ಸಾಂಸ್ಕೃತಿಕ ವಿಶಿಷ್ಟತೆ ಮುಂತಾದವುಗಳಲ್ಲಿ ಕಾಣಬಹುದು. ಈ ಅಂಶಗಳನ್ನೆಲ್ಲ ಒಟ್ಟಾರೆ ನೋಡಿದರೆ ಇಲ್ಲಿನದೇ ಆದ ಒಂದು ಸಾಂಸ್ಕೃತಿಕ ವಿನ್ಯಾಸವನ್ನು ಗುರುತಿಸಬಹುದು. ತುಳು ಮತ್ತು ಕನ್ನಡ ಭಾಷೆಗಳು ಪ್ರಧಾನವಾಗಿ ಇದ್ದರೂ ಕೊಂಕಣಿ, ಬ್ಯಾರಿ, ಮರಾಠಿ, ಮಲಯಾಳ ಮೊದಲಾದ ಭೌಗೋಳಿಕ ಉಪಭಾಷೆಗಳ ಮೌಖಿಕ ಪರಂಪರೆಯು 'ತುಳುನಾಡು' ಎಂಬ ಸಮಗ್ರ ಘಟಕದ

---

[2] ಭೂಭೌತಿಕ ವಿಶೇಷತೆಗಳಿಂದ ಹಾಗೂ ಜನವಸತಿಯಿಂದಾಗಿ ಸಾಮಾನ್ಯವಾಗಿ ಸ್ಥಳನಾಮಗಳು ಹುಟ್ಟಿಕೊಳ್ಳುತ್ತವೆ. ಮಂಗಳೂರು ಎನ್ನುವ ಹೆಸರು ಮಂಗಳಾದೇವಿಯಿಂದಾಗಿ ಬಂದುದಲ್ಲ, ಬದಲಾಗಿ ಮೇರರಿಂದಾಗಿ (ಮೇರರು ತುಳುನಾಡಿನ ಮೂಲ ನಿವಾಸಿಗಳಲ್ಲಿ ಪ್ರಮುಖವಾದ ಒಂದು ವರ್ಗ) ನಿಷ್ಪನ್ನಗೊಂಡಿರಬೇಕೆಂದು ನನಗನಿಸುತ್ತದೆ.

ಮಂಗಳೂರಿನಲ್ಲಿ ಹಿಂದೆ ಮೇರರು ಅಧಿಕವಾಗಿದ್ದು ಮಂಗಳೂರು ಅವರ ವಸತಿ ಪ್ರದೇಶವಾಗಿದ್ದಿರಬೇಕು. ಮೇರರ+ಕಳ=ಮೇರ್ಕಳ >ಮೈಕ್ಕಾಲ >ಮಂಗಲ (ಳ). ಕನ್ನಡದ ಪ್ರಾದುರ್ಭಾವದ ಕಾಲಕ್ಕೆ ಮೇರ್ಕಳ ಅಥವಾ ಮೈಕ್ಕಲ ಸಂಸ್ಕೃತೀಕರಣಗೊಂಡು 'ಮಂಗಲ' ಆಗಿದೆ. ಮಂಗಳಕ್ಕೆ ಊರು ಸೇರಿ ಮಂಗಳೂರು ಆಗಿರಬೇಕು. ಬ್ಯಾರಿ ಭಾಷೆಯಲ್ಲಿ ಮಂಗಳೂರನ್ನು ಮೈಕ್ಕಾಲ ಎಂದು ಕರೆಯಲಾಗುತ್ತದೆ. ಜಿಲ್ಲೆಯ ಬೇರೆ ಕಡೆ ಮೇರ್ಕಳ ಮತ್ತು ಕುಡಾಲಮೇರ್ಕಳ ಎಂಬ ಹೆಸರಿನ ಊರುಗಳಿರುವುದನ್ನು ಅನುಲಕ್ಷಿಸಬಹುದು.

ಅಂಗಭಾಗಗಳೇ ಆಗಿವೆ. ಈ ಜಾನಪದಗಳೆಲ್ಲ ಒಟ್ಟಾಗಿ ಪ್ರಧಾನ ಭಾಷೆಯ ಮೂಲಕ ಅಭಿವ್ಯಕ್ತಿ ಪಡೆಯುತ್ತವೆ (ಮನೆಯಲ್ಲಿ ಬ್ಯಾರಿ ಭಾಷೆಯನ್ನಾಡುವ ಬಿ.ಎಂ. ಇದಿನಬ್ಬ, ಬೊಳುವಾರು ಮಹಮದ್ ಕುಂಞಿ, ಫಕೀರ್ ಮಹಮ್ಮದ್ ಕಟಪಾಡಿ, ಮನೆಯಲ್ಲಿ ಮರಾಠಿ ಮಾತಾಡುವ ಮಂದಾರ ಕೇಶವ ಭಟ್ಟರು, ಪೆರ್ಲ ಕೃಷ್ಣ ಭಟ್ಟರು, ಮಲಯಾಳಂ ಮಾತಾಡುವ ಅಮೃತ ಸೋಮೇಶ್ವರರು, ಸಾರಾ ಅಬೂಬಕ್ಕರ್, ಕೊಂಕಣಿ ಮಾತನಾಡುವ ಪಂಜೆ ಗೋವಿಂದ ಪೈ, ಕ್ಯಾಥರಿನ್ ರಾಡ್ರಿಗಸ್ ರಿಚಾರ್ಡ್ ಕ್ಯಾಸ್ಟಲಿನೋ ಅಭಿವ್ಯಕ್ತಿಗೆ ಕನ್ನಡ-ತುಳುವನ್ನು ಆಯ್ದುಕೊಂಡುದಕ್ಕೆ ಈ ಹಿನ್ನೆಲೆಯಲ್ಲಿ ಉತ್ತರ ದೊರೆಯುತ್ತದೆ). ಹೀಗೆ ಸಣ್ಣ ಸಣ್ಣ ಅಂಶಗಳ ಮೂಲಕ ದೊಡ್ಡ ಘಟಕವನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವೇ 'ಕವಿಗಳು ಕಂಡ ತುಳುನಾಡು' ಎಂಬ ಈ ಪ್ರಾತಿನಿಧಿಕ ಸಂಕಲನ.

'ಜನವಾಣಿ ಬೇರು ಕವಿವಾಣಿ ಹೂವು' ಎಂಬ ಮಾತಿದೆ. ಕವಿ-ಸಾಹಿತಿಗಳು ಆಯಾ ನೆಲದ ಜಾನಪದವನ್ನು - ಸಂಸ್ಕೃತಿಯನ್ನು ತಮ್ಮ ಕೃತಿಗಳಲ್ಲಿ ಚಿತ್ರಿಸದೆ ಇರಲು ಸಾಧ್ಯವೇ ಇಲ್ಲ. ತಾವು ಬದುಕುವ ನೆಲದ ಪ್ರಭಾವ ಅವರ ಕೃತಿಗಳಿಗೆ ಇದ್ದೇ ಇರುತ್ತದೆ. ಇದನ್ನು 'ಮಣ್ಣಿನ ವಾಸನೆ' ಎಂಬ ನುಡಿಗಟ್ಟಿನ ಮೂಲಕ ಹೇಳಲಾಗುತ್ತದೆ. ಕವಿ-ಸಾಹಿತಿಗಳು ತಮ್ಮ ಕೃತಿಗಳ ಮೂಲಕ ನೀಡಿರುವ ಚಿತ್ರಣವು ಜನಜೀವನ-ಸಂಸ್ಕೃತಿಯ ಅಭಿವ್ಯಕ್ತಿಯ ರೂಪದಲ್ಲಿರಬಹುದು, ಭಾಷೆ-ಶೈಲಿಯ ರೂಪದಲ್ಲಿರಬಹುದು (ಶೀಲವೆಂತೊ ಅಂತೆ ಶೈಲಿ ಎಂಬ ಮಾತಿದೆ) ಅಥವಾ ಆಶಯದ (motif) ರೂಪದಲ್ಲಿರಬಹುದು, ಅದು ನೆಲಮೂಲ ಸಂಸ್ಕೃತಿಯ ಪ್ರತಿಬಿಂಬ ಎಂಬುದನ್ನು ಮರೆಯಲಾಗದು. ದಕ್ಷಿಣ ಕನ್ನಡದ ಜನರ ಕನ್ನಡ ಭಾಷೆಯು ಕರ್ನಾಟಕದ ಇತರ ಭಾಗದ ಕನ್ನಡಕ್ಕಿಂತ ಭಿನ್ನವಾಗಿ ಕಾಣಲು ಇಲ್ಲಿನ ಜನರಲ್ಲಿ ತುಳುವಿನ ಸಾರಸತ್ತ್ವ ತುಂಬಿಕೊಂಡಿರುವುದು ಕಾರಣವಾಗಿದೆ. ಇಲ್ಲಿನ ಒಟ್ಟು ಜನವರ್ಗದ ಯೋಚನಾ ಕ್ರಮದಲ್ಲಿ, ಮಾತಾಡುವ ಶೈಲಿಯಲ್ಲಿ (accent), ಭಾಷಾ ಪ್ರಯೋಗದಲ್ಲಿ (use of language and idioms), ದೇಹಭಾಷೆ-ಆಂಗಿಕ ಚಲನವಲನಗಳಲ್ಲಿ (body language) ನೆಲಮೂಲ ಸಂಸ್ಕೃತಿಯ ಅಂತಃಸತ್ತ್ವವನ್ನು ಗುರುತಿಸಬಹುದು. ತುಳುನಾಡಿನ ಜಾನಪದ, ನಡೆನುಡಿ, ಹವಾಮಾನ, ಕೃಷಿ, ಆಹಾರವಿಹಾರ, ಆಚರಣೆ-ಆರಾಧನೆ, ವೇಷಭೂಷಣ, ಯಕ್ಷಗಾನಾದಿ ಕಲಾಪ್ರಕಾರಗಳು ಇಲ್ಲಿನ ಎಲ್ಲ ಜಾತಿವರ್ಗದ ಜನರನ್ನು ಪ್ರಭಾವಿಸಿವೆ ಮತ್ತು ಒಂದಾಗಿ ಪೋಣಿಸಿವೆ.

ಪ್ರತಿಯೊಂದು ಪ್ರಾದೇಶಿಕ ಘಟಕಕ್ಕೂ ಅದರದ್ದೇ ಆದ ಜಾನಪದ ನೆಲೆಯೊಂದು ಇರುತ್ತದೆ ಎಂಬುದಕ್ಕೆ ಕರ್ನಾಟಕವನ್ನೇ ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಜಾನಪದದ ಹಿನ್ನೆಲೆಯಿಂದ ಕರ್ನಾಟಕದಲ್ಲಿ ಅಂತಹ ಐದು ಪ್ರಾದೇಶಿಕ ಘಟಕಗಳನ್ನು ಗುರುತಿಸಬಹುದು. ದಕ್ಷಿಣ ಕನ್ನಡ ಜಿಲ್ಲೆ (ಕಾಸರಗೋಡನ್ನು ಒಳಗೊಂಡ ಅವಿಭಜಿತ ದ.ಕ. ಜಿಲ್ಲೆ), ಹಳೇ ಮೈಸೂರು ಸಂಸ್ಥಾನ, ಹುಬ್ಬಳ್ಳಿ-ಧಾರವಾಡ ಪ್ರದೇಶ, ಮುಂಬೈ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಇವೇ ಆ ಐದು ಪ್ರಾದೇಶಿಕ ಘಟಕಗಳು. ದಕ್ಷಿಣ ಕನ್ನಡ

ಜಿಲ್ಲೆಯ ಜಾನಪದಕ್ಕೂ (ಯಕ್ಷಗಾನ, ಪಾಡ್ದನ, ದೈವಾರಾಧನೆ, ನಾಗಾರಾಧನೆ, ನೃತ್ಯಗಳು, ಕೃಷಿ ಪದ್ಧತಿ, ವೇಷಭೂಷಣ, ಆಹಾರ ಇತ್ಯಾದಿ) ಮೈಸೂರು ಗುಲ್ಬರ್ಗ ಭಾಗದ ಜಾನಪದಕ್ಕೂ ತುಂಬ ವ್ಯತ್ಯಾಸವಿದೆ. ದೇಸೀ ಸಂಸ್ಕೃತಿ ಅಥವಾ ಜಾನಪದ ಸತ್ತ್ವ ಆಯಾಪ್ರದೇಶದ ಜನರ ಜೀವನವನ್ನು ರೂಪಿಸುತ್ತದೆ. ಈ ಹಿನ್ನೆಲೆಯಲ್ಲಿ ತುಳುನಾಡಿನಲ್ಲಿ ವಾಸಿಸುವವರನ್ನೆಲ್ಲ ತುಳುವರು ಎಂದೇ ಪರಿಭಾವಿಸಬೇಕಾಗಿದೆ. ಕನ್ನಡ, ಬ್ಯಾರಿ, ಮಲಯಾಳ, ಮರಾಠಿ ಯಾವುದೇ ಆಗಿರಲಿ ಅವೆಲ್ಲ ತುಳು ಸಂಸ್ಕೃತಿಯ ವಿಭಿನ್ನ ಮುಖಗಳೇ ಆಗಿವೆ. ಸಾಹಿತ್ಯದ ಅಭಿವ್ಯಕ್ತಿ ಕನ್ನಡ ಭಾಷೆಯಲ್ಲಿ ಆಗಿದ್ದರೂ ಅದರಲ್ಲಿರುವುದು ತುಳುವಿನ ಸತ್ತ್ವ. ಕೆಲವು ಕಡೆ ಅದು ಪ್ರತ್ಯಕ್ಷವಾಗಿ ಕೆಲವು ಕಡೆ ಪರೋಕ್ಷವಾಗಿ ಅಭಿವ್ಯಕ್ತಿಯಾಗಿರಬಹುದು.

ಈ ಹಿನ್ನೆಲೆಯಲ್ಲಿ ತುಳುನಾಡನ್ನು ಮತ್ತು ತುಳು ತಾಯಿಯನ್ನು ವರ್ಣಿಸುವ ಕೆಲವು ಪ್ರಾತಿನಿಧಿಕ ಕವಿತೆಗಳನ್ನು ಈ ಸಂಕಲನದಲ್ಲಿ ಸಂಗ್ರಹಿಸಲಾಗಿದೆ. ಪ್ರಾಕೃತಿಕವಾಗಿ ಒಂದು ಪ್ರಾದೇಶಿಕ ಘಟಕವಾದ ತುಳುನಾಡು ಕವಿಗಳಿಗೆ ಹೇಗೆ ಕಾಣಿಸಿದೆ ಮತ್ತು ಇಲ್ಲಿನ ಸಂಸ್ಕೃತಿ ಅವರ ಮೇಲೆ ಉಂಟುಮಾಡಿದ ಪ್ರಭಾವವೇನು ಎಂಬುದನ್ನು ತೆರೆದಿಡುವುದು ನಮ್ಮ ಉದ್ದೇಶ.

ಪಂಜೆಮಂಗೇಶರಾಯರಿಂದ ತೊಡಗಿ ಇವತ್ತಿನ ಕವಿಗಳವರೆಗೆ, ಅಂದರೆ ಸುಮಾರು ಒಂದು ಶತಮಾನ ಕಾಲದ ಕವಿಗಳನ್ನು ಆಯ್ಕೆಯ ಸಂದರ್ಭದಲ್ಲಿ ಪರಿಶೀಲಿಸಲಾಗಿದೆ. ನಾಡು ನುಡಿಯ ಬಗ್ಗೆ ಬಹುತೇಕ ಎಲ್ಲ ಕವಿಗಳೂ ಕವಿತೆಗಳನ್ನು ಬರೆದಿದ್ದಾರೆ. ಹಾಗೆಂದು ಎಲ್ಲ ಕವಿತೆಗಳನ್ನೂ ಇಲ್ಲಿ ತೆಗೆದುಕೊಂಡಿಲ್ಲ. ಈ ಸಂಕಲನದ ಚೌಕಟ್ಟಿಗೆ ಒಗ್ಗುವ, ಪ್ರಾತಿನಿಧಿಕ ಸ್ವರೂಪದ ಕೆಲವು ಕವಿತೆಗಳನ್ನಷ್ಟೆ ಆರಿಸಿಕೊಳ್ಳಲಾಗಿದೆ. ತುಳುನಾಡಿನ ಬಗ್ಗೆ ಕವಿತೆಗಳನ್ನು ಬರೆದ, ಆದರೆ ಸಂಕಲನದಲ್ಲಿ ಸೇರಿರದ ಕವಿಗಳು ದಯವಿಟ್ಟು ತಪ್ಪು ತಿಳಿಯಬಾರದು. ಪುಸ್ತಕದ ಗಾತ್ರಕ್ಕೆ ಮಿತಿ ಇರುವುದರಿಂದ ನಮಗೆ ನಾವೇ ಕಡಿವಾಣ ಹಾಕಿಕೊಳ್ಳಬೇಕಾಯಿತು. ಮತ್ತು ಕವಿತೆಗಳ ಆಶಯದಲ್ಲಿ ಪುನರುಕ್ತಿ (repetition) ಇರುವಂತಹ ಕವಿತೆಗಳನ್ನು ಕೈಬಿಡಲಾಗಿದೆ. ಕೆಲವು ಕಡೆ ಕವಿತೆಯ ಸಾಹಿತ್ಯಿಕ ಮೌಲ್ಯವನ್ನು ಗಣನೆಗೆ ತೆಗೆದುಕೊಂಡಿದ್ದೇವೆ ಎಂಬುದೂ ನಿಜವೇ. ಭಕ್ತಿಯ ತೋರ್ಪಡಿಕೆ, ಅತಿಭಾವುಕತೆ, ಭಜನೆ ಬೇರೆ; ಸಾಹಿತ್ಯಿಕ ಮೌಲ್ಯ ಬೇರೆ. ಆದರೆ ಓದಿದ ಎಲ್ಲ ಕವಿತೆಗಳ ಬಗ್ಗೆ ನಮಗೆ ಅತೀವ ಗೌರವ ಭಾವನೆ ಇದೆ ಎಂಬುದನ್ನು ಹೇಳಬೇಕು.

ಪಂಜೆ ಮಂಗೇಶರಾಯರ 'ತೆಂಕಣ ಗಾಳಿಯಾಟ' ಎಂಬ ಕವಿತೆ ಯಾವುದೇ ಭಾಷೆಗೂ ಮರ್ಯಾದೆ ತಂದುಕೊಡುವಂತಹ ಒಂದು ರಚನೆ. ಅದರ ಲಯ, ನಡೆ, ಚಿತ್ರಕ ಶಕ್ತಿ, ಭಾಷೆಯ ಕಸುವು, ರಭಸ, ವರ್ಣನೆ ಇತ್ಯಾದಿಗಳು ನಮ್ಮನ್ನು ಒಂದು ಕ್ಷಣ ಸ್ತಬ್ಧಗೊಳಿಸಿ ಬಿಡುತ್ತವೆ. ಮಳೆಗಾಲದಲ್ಲಿ ಬೀಸುವ ಬಿರುಗಾಳಿ ಉಂಟುಮಾಡಿದ ಅನಾಹುತವನ್ನು ಬಹುಶಃ ಇದಕ್ಕಿಂತ ಚೆನ್ನಾಗಿ ವರ್ಣಿಸಲು ಶಕ್ಯವಿಲ್ಲ. ಸೂಚ್ಯವಾಗಿ ಇದು ತುಳುನಾಡಿನ ಮೇಲೆ ನಡೆದ ವಿದೇಶಿಯರ ಆಕ್ರಮಣವನ್ನು ಸಂಕೇತಿಸುತ್ತದೆ ಎಂಬುದಾಗಿ ಕೆಲವು ವಿಮರ್ಶಕರು

ಅಭಿಪ್ರಾಯಪಟ್ಟಿದ್ದೂ ಇದೆ. ವಸ್ತು, ಭಾಷೆ, ವರ್ಣನೆ ಮತ್ತು ಅದರ ಶಕ್ತಿ ಅದನ್ನು ಶ್ರೇಷ್ಠ ಕವಿತೆಗಳ ಸಾಲಿಗೆ ಸೇರಿಸಿಬಿಡುತ್ತದೆ.

ಇಂತಹುದೇ ಇನ್ನೊಂದು ಕವಿತೆ ಕಡೆಂಗೋಡ್ಲು ಶಂಕರಭಟ್ಟರ 'ಕಾರ್ಗಾಲದ ವೈಭವ'. ತುಳುನಾಡಿನ ಮಳೆಗಾಲದ ಚಿತ್ರಣಕ್ಕೆ ಹೇಳಿ ಮಾಡಿಸಿದಂತಹ ರಚನೆ ಇದು. ಈ ಕವಿತೆಯನ್ನು ಓದಿದ ಯಾರಿಗೇ ಆದರೂ, ಮಳೆಗಾಲದಲ್ಲಿ ಇದರ ನೆನಪು ಬಾರದೆ ಇರದು. ತುಳುನಾಡಿನ ಮಳೆಗಾಲದ ವೈಭವವನ್ನು, ಅದ್ಭುತರಮ್ಯತೆಯನ್ನು, ನಿಗೂಢ ವಿಸ್ಮಯಗಳನ್ನು ಈ ಕವಿತೆ ಪರಿಣಾಮಕಾರಿಯಾಗಿ ನಿರೂಪಿಸುತ್ತದೆ.

ಸೇಡಿಯಾಪು ಕೃಷ್ಣಭಟ್ಟರು ತಮ್ಮ 'ತುಳುನಾಡ ಹಾಡು' ಎಂಬ ದೀರ್ಘ ಕವನದಲ್ಲಿ ಇಲ್ಲಿನ ಪ್ರಕೃತಿಯನ್ನು, ಜನಪದವನ್ನು ವರ್ಣಿಸುತ್ತ 'ನೀನು ತುಳು ತಾಳಿ ಕಟ್ಟಿ, ಕನ್ನಡದೋಲೆಯಿಟ್ಟು ಕೊಂಕಣಿ ಕಂಕಣವ ತೊಟ್ಟ ಮಾಂಗಲ್ಯಮೂರ್ತಿ' ಎಂದು ಕರೆದರು. ಸಾಮೂಹಿಕ ಪ್ರಜ್ಞೆಯನ್ನು, ಸಮನ್ವಯತೆಯನ್ನು ಅವರು ತಿಳಿದವರಾಗಿದ್ದರು ಎಂಬುದಕ್ಕೆ ಕವನದ ಕೊನೆಯಲ್ಲಿ ಬರುವ ಈ ಮಾತು ಸಾಕ್ಷಿ : 'ನಮಿಪೆ ಓ ಕನ್ನಡಿತಿ, ನಮಿಪೆ ಓ ಕೊಂಕಣಿತಿ, ನಮಿಪೆ ಓ ತುಳುವಿತಿ, ಶ್ರೀ ಭಾರತಿ', (ನಮಿಪೆ ಓ! ತುಳು, ಇತಿ ಎಂಬ ಇನ್ನೊಂದು ಅರ್ಥವೂ ಇಲ್ಲಿ ನಿಷ್ಪನ್ನಗೊಳ್ಳುತ್ತದೆ).

ಕಯ್ಯಾರ ಕಿಞ್ಞಣ್ಣ ರೈಗಳ 'ಸಾವಿರ ಎಸಳಿನ ತಾವರೆ' ಕವಿತೆ ಭೂಮಕಲ್ಪನೆಯೊಂದಿಗೆ ನಾನಾ ಅರ್ಥಪರಂಪರೆಗಳನ್ನು ಹೊಂದಿದೆ. ತಾವರೆಗೆ ಭಾರತೀಯ ಅಧ್ಯಾತ್ಮ ಮತ್ತು ತಾತ್ತ್ವಿಕ ಜಗತ್ತಿನಲ್ಲಿರುವ ಅರ್ಥಸಂಕೇತಗಳನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ತುಳುವನ್ನು ಸಾವಿರ ಎಸಳಿನ ತಾವರೆ ಎಂದು ಕರೆಯುವ ಕವಿ 'ಹೇಳ್ವ ಬಾಯಲಿ ಕೇಳ್ವ ಕಿವಿಯಲಿ ಉಕ್ಕುವುದಮೃತದ ನೊರೆನೊರೆ' ಎನ್ನುತ್ತಾರೆ. ತುಳುಂಕುವ ತುಳುವಿಗೂ ಅಮೃತ ನೊರೆನೊರೆಯಾಗಿ ಉಕ್ಕುವುದಕ್ಕೂ ಎಂಥ ಸಾಮ್ಯ! ಅಲ್ಲೇ ಕವಿ ಹೇಳುತ್ತಾರೆ : 'ಗುಡ್ಡೆ ಹತ್ತಿ ಕಡಲು ದಾಟಿ ದೂರದೂರಿಗೆ ಹೋದರು. ಎಲ್ಲೇ ಇರಲಿ ಭಾಷೆ ಒಂದೇ, ಅಕ್ಕ ಅಣ್ಣಾ ಎಂದರು.' ಉದ್ಯೋಗಾರ್ಥವಾಗಿ ಪರಊರಿಗೆ ವಲಸೆ ಹೋಗುವ ತುಳುವರ ಸಾಹಸೋದ್ಯಮಶೀಲತೆಗೆ ಇದಕ್ಕಿಂತ ಒಳ್ಳೆಯ ಬೇರೆ ಭಾಷ್ಯ ಬರೆಯಲು ಸಾಧ್ಯವೇ?

ಮಂಜೇಶ್ವರ ಗೋವಿಂದ ಪೈಗಳ 'ತೌಳವಮಾತೆ' ಒಂದು ಪ್ರೌಢ ರಚನೆ. ಕಠಿಣ ಶಬ್ದಗಳನ್ನು ಪ್ರಯೋಗಿಸಿ ಅಪ್ರಚಲಿತ ಪದಬಂಧಗಳ ಮೂಲಕ ಕವನವನ್ನು ಪೆಡಸು ಮಾಡುವುದು ಅವರ ಸ್ವಭಾವ. 'ತೌಳವಮಾತೆ' ಎನ್ನುವ ಈ ಕವಿತೆಯಲ್ಲಿ 'ಭುವನದಿ ತ್ರಿದಿವಚ್ಛಾಯೇ' ಎಂದು ತುಳು ತಾಯಿಯನ್ನು ವಂದಿಸಿದರು. 'ಧನ್ಯನೆನಿತೊ ನಾ ನಿನ್ನಯ ಬಸುರಿಂದುಸುರಿಸಲೀ ಹೂವನ್ನ, ಕೆಸರೊಳು ಉದುರಲೀಯದೆ ನಿನ್ನಡಿಗರ್ಪಿಸಿಕೊಳೌ ಸೌಸವವನ್ನ' ಎಂದು ತುಳುನಾಡಿನಲ್ಲಿ ಹುಟ್ಟಿದ್ದು ತನಗೊಂದು ಹೆಮ್ಮೆಯ ವಿಷಯ ಎಂದರು.

ಮೋನಪ್ಪ ತಿಂಗಳಾಯರು 'ತುಳುನಾಡ ಗೀತೆ' ಎಂಬ ಕವಿತೆಯಲ್ಲಿ ಸಮನ್ವಯತೆಯ ಮಹತ್ವವನ್ನು ಸಾರುತ್ತಾರೆ. 'ಕನ್ನಡ ಕೊಂಕಣಿ ಮರಾಠಿ ಮಲಯಾಳಿ ಮಕ್ಕಳೆಲ್ಲರು, ಅನ್ನ ನೀರು

ಉಂಡು ಉಡುವ ಪುಣ್ಯ ಸಾಧ್ವಿಗೆ, ಜಲಸಮೃದ್ಧಿ ಫಲಸಮೃದ್ಧಿ ಪಚ್ಚೆಪೈರಿಗೆ, ತುಳುವ ದೇಸಿ ಅಶನ ವಸನ ಕೊಟ್ಟು ಮೆರೆವಳು' ಎನ್ನುತ್ತಾರೆ.

ಕೆಲಿಂಜ ಸೀತಾರಾಮ ಆಳ್ವರು 'ಪ್ರಾರ್ಥನೆ' ಎಂಬ ಕವಿತೆಯಲ್ಲಿ ಇಲ್ಲಿನ ನಾಗಾರಾಧನೆ, ದೈವಾರಾಧನೆಗಳನ್ನು ವಿವರಿಸಿ ದ್ವೈತ ಮತದ ಹುಟ್ಟು, ಜೈನರ ಕಾಣಿಕೆ ಮಂದಿರ ಮಸೀದಿ ಇಗರ್ಜಿಗಳ ಸ್ಥಾನವನ್ನು ಹೇಳುತ್ತಾರೆ : 'ಪಾಡ್ದನ ಸಂಧಿಯ ಕತೆ ಉಂಟು, ಮಹಿಮೆ ಸತ್ಯಗಳ ನೆಲೆಯುಂಟು' ಎನ್ನುತ್ತಾರೆ.

ಎನ್.ಪಿ. ಶೆಟ್ಟಿಯವರು 'ತುಳುನಾಡಿನ ಹೆಮ್ಮೆ' ಎಂಬ ದೀರ್ಘಕವನದಲ್ಲಿ ತುಳುನಾಡಿನಲ್ಲಿ ಶ್ರೀಕೃಷ್ಣನ ಮಹಿಮೆಯನ್ನು ನೆನೆಯುತ್ತಾರೆ. 'ಅಷ್ಟಮಿಯ ಸಿರಿಹಬ್ಬ ಯುವಕರು ಶ್ರೀಕೃಷ್ಣ ರಾಮರು ಬಂದರು, ಕಷ್ಟ ಕಳೆಯಲು ಮೊಸರು ಕುಡಿಕೆಯ ಇಷ್ಟದಾಟವ ನಲಿದರು' ಎನ್ನುತ್ತಾರೆ.

ತುಳುನಾಡಿನ ಕೂಡುಕಟ್ಟಿನ ಸಾಮುದಾಯಿಕ ಬದುಕನ್ನು ಡಾ. ವಾಮನ ನಂದಾವರ ಗುರುತಿಸುವುದು ಹೀಗೆ : 'ಪೈಗಳು ಮುಳಿಯ ಪಂಜೆಯವರು, ಮುದ್ದಣ ಕಡೆಂಗೋಡ್ಲು ಕಾಮತರು, ಪಣಿಯಾಡಿ ಕಿಲ್ಲೆ ಹೆಗ್ಗಡೇರು, ನಾಡಿನ ಮಹಿಮೆಯ ಹೊಗಳಿದರು.'

ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ಯರು 'ಧ್ವಜ ಏರಲಿ' ಎಂದರು. 'ತುಳುವ ನಿಧಿ ಹುಗಿದು ಹೋಗಿದೆ, ಅದನು ಮೇಗಡೆ ತೆಗೆಯುವ.... ನೆಲೆಯೆ ಇರದಿಹ ನಮ್ಮ ತಾಯಿಗೆ ಗುಡಿಯನೊಂದನು ಕಟ್ಟುವ... ಹಡಿಲು ಬಿದ್ದಿಹ ಗದ್ದೆ ಬಯಲಲಿ ಪಚ್ಚೆಪೈರನು ಬೆಳೆಯುವ' ಎಂದರು.

ತುಳುನಾಡಿನ ಚಿನ್ನಾಭರಣಗಳು ಸೂಕ್ಷ್ಮ ಕುಸುರಿ ಕಲೆಗಾಗಿ ಪ್ರಸಿದ್ಧವಾಗಿವೆ. ಈ ಸೂಕ್ಷ್ಮತೆಯನ್ನು ಅಷ್ಟೇ ಸೂಕ್ಷ್ಮವಾಗಿ ತನ್ನ ಕಾವ್ಯದಲ್ಲಿ ಹಿಡಿದಿರಿಸಿದವರು 'ಮಂದಾರ ರಾಮಾಯಣ' ಬರೆದ ಮಂದಾರ ಕೇಶವ ಭಟ್ಟರು. ಅದರಲ್ಲಿ ಬರುವ ತುಳುನಾಡಿನ ವರ್ಣನೆ ಹೃದಯಂಗಮವಾಗಿದೆ. ಸಣ್ಣ ಸಣ್ಣ ಅಂಶಗಳನ್ನು ಗಮನಿಸಿ ಅದನ್ನು ಕಾವ್ಯದಲ್ಲಿ ಎರಕ ಹೊಯ್ದ ಅವರ ಕುಸುರಿ ಕಲೆಗಾರಿಕೆ ಸಂತೋಷ ಕೊಡುತ್ತದೆ.

ಅಮ್ಮೆಂಬಳರು ತುಳುನಾಡನ್ನು 'ತೆಂಗಿನ ತೋಟದ ತೊಟ್ಟಿಲು' ಎಂದು ಕರೆದು ಇಲ್ಲಿನ ನಿಸರ್ಗದ ಫಲವಂತಿಕೆಯನ್ನು ವಿವರಿಸುತ್ತ ಅದರ ಜೊತೆಯಲ್ಲೇ ಇಲ್ಲಿರುವ ಬಡತನದ ಬವಣೆಯನ್ನು ಚಿತ್ರಿಸಿದರು. 'ಮುಗಿಲು ಮುಟ್ಟುವ ಸೌಧಗಳ ನೆರೆಯಲ್ಲಿ ಬಡವರ ಗುಡಿಸಲು' ಎಂದರು. ಶ್ರೀಮಂತಿಕೆ ಮೆರೆದಾಡುವ ಬದುಕಿನ ಜೊತೆಜೊತೆಯಲ್ಲೇ ಬಡತನವೂ ಹೇಗೆ ಜೀವ ಹಿಡಿದುಕೊಂಡಿದೆ ಎಂಬುದನ್ನು ಹೇಳಿದರು.

ಎಂ.ಎನ್. ಕಾಮತರು ತುಳುತಾಯಿಯನ್ನು 'ಬೆಡಗಿಂದ ಧರೆಗಾದೆ ಕೊರಳ ಕಟ್ಟಾಣಿ!' ಎಂದು ಭಕ್ತಿ ಗೌರವದಿಂದ, ಕೃತಜ್ಞತಾಭಾವದಿಂದ ಉದ್ಗರಿಸಿದರು.

ಅಮೃತ ಸೋಮೇಶ್ವರರು ತುಳುನಾಡನ್ನು 'ಬಂಗಾರದ ಬಟ್ಟಲು' ಎಂದು ಕರೆದರು. ಪರ್ವತದ ಮೇಲಿನಿಂದ ತುಳುನಾಡನ್ನು ನೋಡಿ ಪಂಜುರ್ಲಿ ದೈವ ಉದ್ಗರಿಸಿದ

'ಹರಿವಾಣದಷ್ಟು ಉರುಟು, ನಾಣ್ಯದಷ್ಟು ಚಂದ ಕಾಣುತ್ತಿದೆ ಕೆಳಗೆ ತುಳುನಾಡು' ಎಂಬ ಮಾತು ನೆನಪಾಗುತ್ತದೆ. ಸೃಜನಶೀಲ ಮನಸ್ಸಿಗೆ ಭೂದೇವಿಯ ಒಳಸತ್ತ್ವ ಗೋಚರವಾಗುವ ಬಗೆ ಒಂದೇ ಎಂಬುದು ಇದರಿಂದ ಮನವರಿಕೆಯಾಗುತ್ತದೆ.

ಒಂದು ಭೌಗೋಳಿಕ ಚೌಕಟ್ಟಿಗೆ ಒಳಪಟ್ಟು ತಮ್ಮ ಚಟುವಟಿಕೆಯನ್ನು ಸೀಮಿತ ಮಾಡಿಕೊಂಡವರಲ್ಲ ತುಳುವರು. ಅವರು ಸಾಹಸೋದ್ಯಮಶೀಲರು. ದುಬ್ಬಾ, ಬೆಂಗಳೂರು, ಮುಂಬೈ, ಬರೋಡಾ ಅವರಿಗೆ ದೂರಪ್ರಾಂತವಲ್ಲ. ಹೊಸ ಹೊಸ ಅವಕಾಶಗಳನ್ನು ಅರಸುತ್ತ ಹೊರಗೆ ಹೋಗುವುದರಲ್ಲಿ ಅವರು ನಿಸ್ಸೀಮರು. ಇದಕ್ಕಿಂತ ದೊಡ್ಡ ಸೃಜನಶೀಲತೆ ಬೇರೆ ಯಾವುದಿದೆ? ತುಳುವರು ಏಕಕಾಲಕ್ಕೆ ಕರ್ನಾಟಕದವರು, ಕೇರಳದವರು, ಭಾರತದವರು, ವಿಶ್ವಪ್ರಜ್ಞೆ ಇರುವ ಅನಂತಚೇತನದ ವಿಶ್ವಾತ್ಮ ಪ್ರಜೆಗಳು! ಕಯ್ಯಾರರು ಹೇಳಿದ ಹಾಗೆ 'ದೇಶದೇಳ್ಗೆಗೆ ಭಾಷೆಯೇಳ್ಗೆಗೆ ದುಡಿವ ಸರಿ ಸಮ ಮಣ್ಣಿಗೆ'. ಎಲ್ಲಿಗೆ ಹೋದರೂ ಅದೇ ಅವರ ಊರು. ಹಾಗೆ ಹೋದವರು ತುಳುವನ್ನು – ತುಳುನಾಡನ್ನು ಮರೆಯಲಿಲ್ಲ. ಪ್ರಯೋಗಶೀಲ ಕವಿ ಕೆ.ವಿ. ತಿರುಮಲೇಶ್ ಹೇಳುತ್ತಾರೆ : 'ಪಂಪನಿಗೆ ಬನವಾಸಿ, ನಾನೊ ಅನಿವಾಸಿ / ಪಂಪನಂತೆಯೆ ನಾನು ವ್ಯಸನಿ / ಆರಂಕುಶಮಿಟ್ಟೊಡಂ / ನೆನೆವುದೆನ್ನ ಮನಂ ನನ್ನ ಹುಟ್ಟೂರ /.... ನನಗೆ ಭಯವಿಲ್ಲ / ಬೇಸರವಿಲ್ಲ / ಸ್ವರ್ಗವೊ ನರಕವೊ / ಆವೂರೊ ಈವೂರೊ / ಅದು ಮಿಡಿವ ತನಕ / ನಾನತೀತ ಎಂದೆಂದಿಗೂ.'

ಈ 'ಅತೀತ' ಆಗುವ ಪ್ರಜ್ಞೆ ತುಳುವರನ್ನು ಸರ್ವಾಂಗೀಣವಾಗಿ ಬೆಳೆಸಿದೆ. ಉದ್ಯಮಶೀಲರನ್ನಾಗಿ, ನಾಡಿಗೆ ಮಾದರಿಯವರನ್ನಾಗಿ ಮಾಡಿದೆ. ಸರ್ವಧರ್ಮವನ್ನು ಸಮನ್ವಯದಿಂದ ಮೆರೆದು ತೋರಿಸುವ ಧರ್ಮಸ್ಥಳ, ಉದ್ಯಾವರದ ಮಾಡ ದೈವಸ್ಥಾನ, ಉಳ್ಳಾಲದ ದರ್ಗಾ, ಅತ್ತೂರಿನ ಚರ್ಚ್ ಅದನ್ನು ಎತ್ತಿ ತೋರಿಸುತ್ತಿದೆ. ಅದ್ವೈತದ ಜೊತೆಗೆ ದ್ವೈತ, ಬ್ರಾಹ್ಮಣ್ಯದ ಜೊತೆಗೆ ದಲಿತ ಕನಕನನ್ನು ಎತ್ತಿ ಆದರಿಸಿದ ನಾಡು ಇದು.

ಕವಿಗಳು ನಾಡಿನ ಸೂಕ್ಷ್ಮಗಳನ್ನು ಹಿಡಿಯುತ್ತಾರೆ ಎಂಬ ಮಾತಿದೆ. ಇತ್ತೀಚಿನ ದಶಕಗಳಲ್ಲಿ ನಾನಾ ಕಾರಣಗಳಿಂದ ಇಲ್ಲಿನ ಸಮಾಜದಲ್ಲಿ ಶಾಂತಿ ಕದಡುವ ಪ್ರಯತ್ನಗಳಾಗುತ್ತಿವೆ. ಅದನ್ನು ಕೆ.ಟಿ. ಗಟ್ಟಿಯವರು 'ಹುಲಿ–ಹಸು ನೀರು ಕುಡಿಯುವ ಕೆರೆ' ಎಂಬ ಕವನದ ಮೂಲಕ ಪ್ರತಿಮಿಸುತ್ತಾರೆ. ಆ ಕೆರೆ ಈಗ ಹೇಗಿದೆ? 'ಹಸುವಿನ ಮಾಂಸ ತಿನ್ನುವ ಹುಲಿಗು ಹಸುವಿನ ಹಾಲು ಕುಡಿವ ನಾಗಗಳಿಗು ಈಗ ಸ್ನೇಹ' ಎನ್ನುತ್ತಾರೆ ಅವರು. ಆದರೆ ನಮ್ಮ ನಾಡು ಹುಲಿ–ಹಸು ನೀರು ಕುಡಿಯುವ ಕೆರೆಯಾಗಿಯೇ ಉಳಿಯಲಿ ಎಂಬ ಪ್ರಾರ್ಥನೆ ಪ್ರಜ್ಞಾವಂತರದು.

ತುಳು ಸಾಹಿತ್ಯದ ನವೋದಯ ಕಾಲದ ಕವಿಯಾಗಿ 'ಕವಿಶಿಷ್ಯ'ದ ಶಿಷ್ಯ ಶಿಕ್ಷಕರಾಗಿ ದುಡಿದವರು ನರ್ಕಳ ಮಾರಪ್ಪ ಶೆಟ್ಟಿಯವರು. ಪೊರ್ಲಕಂಟ್, ಅಮಲ್‌ದೆಪ್ಪಡೆ ಕವನ ಸಂಕಲನದಿಂದ ಖ್ಯಾತಿ ಪಡೆದರು : 'ವಪ್ಪಾರೆ ಕಮ್ಮೆನ ಮಾಮಿ ಇಲ್ಲದ ತಮ್ಮನ' ಎಂಬ ಮಾತು ಒಂದು ಕಾಲದಲ್ಲಿ ಯುವ ತುಳುವರ ನಾಲಿಗೆಯಲ್ಲಿ ನಲಿದಾಡುತ್ತಿದ್ದ ಕಾಲ. ಮುಂಬೈಯಲ್ಲಿ

ಬಹುಕಾಲ ಕಳೆದು ತುಳುನಾಟಕಗಳಿಂದ ಮುಂಬೈ ತುಳುವರನ್ನು ರಂಜಿಸಿದವರು.

'ಮೂಡಿ ಬರಲೆಮ್ಮಯ ಚೆಲುವ ತುಳುವರ ನಾಡು' ಎಂದು ಹಾಡಿದ ಕೆಮ್ತೂರು ದೊಡ್ಡಣ್ಣ ಶೆಟ್ಟಿಯವರು ಅದರ ಜೊತೆಗೆ ಸ್ವಾತಂತ್ರ್ಯದೇವಿಯನ್ನೂ ತುಳುನಾಡಿಗೆ ಸ್ವಾಗತಿಸಿದರು, ಆಗಿನ್ನೂ ಕೃಷಿ ಪಾರಮ್ಯದಲ್ಲಿದ್ದ ಕಾಲ. ಸ್ವಾತಂತ್ರ್ಯದೇವಿ ಹೇಗೆ ಬರಬೇಕು? 'ಪಚ್ಚೆಯ ಕೃಷಿಯ ಸೀರೆಯುಟ್ಟು, ನಿತ್ಯವೂ ಹೂಫಲ ಕಾಣಿಕೆ ಪಡೆದು, ಅರ್ತಿಯಿಂದಲೇ ಮಲೆಯ ಗಾಳಿಯ ಬೀಸುತ, ಸತ್ಯಸಂಧಕನು ಸಂಗಡ ಕರಕೊಂಡು' ಬಾ ಎಂದು ಆಹ್ವಾನಿಸುತ್ತಾರೆ. ತುಳುನಾಡು ಅವರಿಗೆ ಕೇವಲ ತುಳುನಾಡಲ್ಲ. ಕಯ್ಯಾರರು ಹೇಳಿದ ಹಾಗೆ 'ಕರ್ನಾಟಕಾಂತರ್ಗತಂ ಎನ್ನದಿದು ತುಳುನಾಡು, ಭಾರತಮ್ಮನ ಕಿರಿಯ ಮಗಳು' ಕೆಮ್ತೂರರು ಹೇಳುತ್ತಾರೆ. 'ಭಾರತ ಭೂಮಿಯ ತೇರಲಿ ಕುಳಿತು, ಭಾರದ ಧ್ವಜವನು ನೀವೆತ್ತಿ ಹಿಡಿದು, ಶಾಂತಿಯ ಮೂರ್ತಿ ಬಾಪೂಜಿ, ಜೊತೆಗೂಡಿ, ಸಂತಸದಿಂದ ಬಾರಮ್ಮ, ತುಳುನಾಡಿಗೆ ನೀನೊಮ್ಮೆ ಬಾರಮ್ಮ' ಎಂದು ಕೆಮ್ತೂರರು ಹಾರೈಸುತ್ತಾರೆ.

ಸುಬ್ರಾಯ ಚೊಕ್ಕಾಡಿಯವರಿಗೆ ತನ್ನೂರು ಚೊಕ್ಕಾಡಿ ಮತ್ತು ಅಲ್ಲೇ ಪಕ್ಕದಲ್ಲಿರುವ ಬಂಟಮಲೆ ಕಂಡ ಪರಿ ಹೀಗೆ : 'ಮಳೆಗಾಲದಲ್ಲಿ ಭೀತಿ ಹುಟ್ಟಿಸುವ ಕಪ್ಪಾಗಿ/ ಬೇಸಿಗೆಯಲ್ಲಿ ಉರಿದು ಬೋಳಾಗಿ ಹಲ್ಕಿರಿವ ಬಂಟಮಲೆ /... ಗುಡ್ಡಗಳ ಬಾಗುಬೆನ್ನೇರಿ ತಿರುವಲ್ಲಿ ಮರೆಯಾಗುತ್ತ / ಬದಿಯ ಗೇರುಮರಗಳಿಗೆ ಧೂಳುಡಿಸಿ ಹಾದಿಹೋಕರಿಗೆ / ಕೈಗೆ ಕಾಸೀಯುವ ಕೆಂಪು ರಸ್ತೆಗಳು'.

ಘಟ್ಟದ ತಳದಲ್ಲಿರುವ ತುಳುನಾಡನ್ನು (ಭೂತಳವನ್ನು) ಸ್ವಾಭಾವಿಕವಾಗಿಯೇ ಪಾತಾಳಭೂಮಿ, ಭೂತಾಳಪಾಂಡ್ಯ ಆಳಿದ ನೆಲ, ನಾಗಗಳು ಹೆಚ್ಚಾಗಿರುವುದರಿಂದ ನಾಗಲೋಕ ಎಂದೆಲ್ಲ ವರ್ಣಿಸಲಾಯಿತು.[3] ಎನ್.ಎಸ್. ಕಿಲ್ಲೆಯವರು 'ತುಳುನಾಡ ರಾಣಿ' ಎಂಬ ತಮ್ಮ ಕವನದಲ್ಲಿ ಹೇಳುವುದು ಹೀಗೆ : 'ನೆಲ ಸಿಗದ ತಳ ನೀನೆ ಪಾತಾಳಭೂಮಿ /... ರಾಮಭೋಜನು ಮತ್ತೆ ಭೂತಾಳಪಾಂಡ್ಯ / ಆ ಮಹಾರಾಜರುಗಳಾಳಿದ ನೆಲವು ಲೋಕದೊಳ್ ಮಾನ್ಯ' ಎಂದರು.

ಮಂಗಳೂರು ಮಲ್ಲಿಗೆ ಹೂ ಮತ್ತು ಬಂಗುಡೆ ಮೀನಿಗೆ ಖ್ಯಾತಿ ಪಡೆದಿದೆ. ಎರಡರ

---

[3] ಭೂತಾಳಪಾಂಡ್ಯ ರಾಜನಿಂದ ಅಳಿಯಕಟ್ಟು ಸಂತಾನ ಪದ್ಧತಿ (ಮಾತೃಪ್ರಧಾನ ಕುಟುಂಬ ವ್ಯವಸ್ಥೆ) ತುಳುನಾಡಿನಲ್ಲಿ ಆಚರಣೆಗೆ ಬಂತೆಂದು ಹೇಳಲಾಗಿದೆ. ಆದರೆ ಚರಿತ್ರೆಯಲ್ಲಿ ಭೂತಾಳಪಾಂಡ್ಯ ಎಂಬೊಬ್ಬ ರಾಜನ ಯಾವ ಉಲ್ಲೇಖವೂ ಇಲ್ಲ. ಭೂತಳ (ತಗ್ಗಿನಲ್ಲಿರುವ ನಾಡು) ಎಂಬ ಶಬ್ದ ಬಹುಶಃ ಭೂತಾಳ ಆಗಿ ಪಾಂಡ್ಯನೆಂಬ ರಾಜನಿಗೆ ಸಂಬಂಧ ಕಲ್ಪಿಸಿರಬೇಕು. ಹನ್ನೆರಡನೇ ಶತಮಾನದಲ್ಲಿ ಭೂತಪಾಂಡ್ಯನೆಂಬ ರಾಜನೊಬ್ಬನ ಉಲ್ಲೇಖ ಸಿಗುತ್ತದೆ. ಈತನಿಗೂ ಅಳಿಯಕಟ್ಟು ಪದ್ಧತಿಗೂ ಯಾವ ಸಂಬಂಧವೂ ಇಲ್ಲ. ಮಾತೃಪ್ರಧಾನ ಕುಟುಂಬ ಪದ್ಧತಿ ತುಳುನಾಡಿಲ್ಲಿ ಈತನಿಗಿಂತ ಹಿಂದೆಯೇ ಇತ್ತು.

ಕಂಪು ಒಂದಕ್ಕೊಂದು ವಿರುದ್ಧ. ಆದರೆ ಇಲ್ಲಿನವರು ಎರಡನ್ನು ಸಮಾನವಾಗಿ ಆಸ್ವಾದಿಸುತ್ತಾರೆ. ದಲಿತ ಕವಿ ಎಸ್.ಪಿ. ಮಂಚಿಯವರು ಮಲ್ಲಿಗೆಯನ್ನು ಸಾಂಕೇತಿಕವಾಗಿ ಇಟ್ಟುಕೊಂಡು ತುಳುವರ ವ್ಯಕ್ತಿತ್ವವನ್ನು ವರ್ಣಿಸುತ್ತಾರೆ. ಇನ್ನೊಬ್ಬ ಕವಿ ಪೇರೂರು ಜಾರು ಇತ್ತೀಚೆಗೆ ತುಳುನಾಡಿನಲ್ಲಿ ಆಗುತ್ತಿರುವ ಸಂಸ್ಕೃತಿಯ ಸಂಕೀರ್ಣತೆಗೆ ವಿಷಾದಿಸುತ್ತಾರೆ. ಮುಂಬೈಯ ಚಂದ್ರಹಾಸ ಸುವರ್ಣರು ತನ್ನ 'ಕಲೆಂಬಿ' ಕವನದ ಮೂಲಕ ತುಳುವರ ಸಂಸ್ಕೃತಿ, ಸಾಂಸ್ಕೃತಿಕ ಇತಿಹಾಸವನ್ನೆಲ್ಲ ಬಯಲುಗೊಳಿಸುತ್ತಾರೆ.

ತುಳುಭಾಷೆಯಲ್ಲಿ ಇತರ ಭಾಷೆಗಳಲ್ಲಿರುವಂತೆ ಪ್ರಾದೇಶಿಕ ಮತ್ತು ಸಾಮಾಜಿಕ ವ್ಯತ್ಯಾಸಗಳಿವೆ. ಪುತ್ತಿಗೆ ಈಶ್ವರ ಭಟ್ಟರು ತುಳುವಿನ ಓರ್ವ ಹೆಸರಾಂತ ಆಶು ಕವಿಗಳಾಗಿದ್ದರು. ಹಿಂದಿನ ಬ್ರಾಹ್ಮಣ ಕವಿಗಳೆಲ್ಲ ಕಾವ್ಯವನ್ನು ತಮ್ಮ ಆಡುಭಾಷೆಯಾದ ಬ್ರಾಹ್ಮಣ ತುಳುವಿನಲ್ಲೇ ಬರೆಯುತ್ತಿದ್ದರು. ಅದರಂತೆ ಈಶ್ವರ ಭಟ್ಟರು ಕೂಡಾ ತಮ್ಮ ಕಾವ್ಯ 'ಮಾಣಿಗೆರಡ್ ಪಾತೆರ'ವನ್ನು ಬ್ರಾಹ್ಮಣ ತುಳುವಿನಲ್ಲೇ ರಚಿಸಿದ್ದಾರೆ. ಭಾಷೆಯ ಬಗೆಗೆ ಬರೆದ ಅವರ ಒಂದು ತುಳು ಪದ ಹೀಗಿದೆ.

ಚಪ್ಪೆ ಬಾಸೆ ತುಳೂಂತು ಎಣ್ಣ್‌ತ್ ।
ಪರ್ಬಿ ಪೇರ್‌ನ್ ದಂಡ ಆಂಪಡ ।
ಉರ್ಪೆಲುಂಪುದೊ ತೆಳಿತೊ ಸಾರ ತುಳು ಬಾಸೇ ॥
ಬೆಪ್ಪೆ ಪಣ್ಪೆರ್ ಪಂಡ್‌ತೆಣ್ಣಡ ।
ಸುರ್ಪ ಪೋವಾ ಪಂಣ್ತ್ ನೆನೆಪಡ ।
ಅಪ್ಪೆ ತುಳು ದೇವತೆನೊ ನಡೆನುಡಿ ಮದಪೆರಾವನ್‌ಣಿ ॥

(ಅನುವಾದ :
ಸಪ್ಪೆ ಭಾಷೆಯು ತುಳುವು ಎನುತಲಿ ।
ತಿಪ್ಪೆಗೆಸೆಯುತ ಕುಡಿವ ಹಾಲನು ।
ಉಪ್ಪು ತಿಂದರಮನೆಗೆರಡು ಬಗೆಯದಿರು ಕೊನೆತನಕ ॥
ದಪ್ಪ ಕುಚ್ಚಲು ಗಂಜಿ ತಿಳಿಯದು ।
ಕೊಪ್ಪರಿಗೆಯೊಳಿರುವ ಕಸವರವು ।
ಚಿಪ್ಪಿನಲಿ ಹುದುಗಿರುವ ಮುತ್ತದು ಬೆಪ್ಪ ತಿಳಿಯೆಲವೋ ॥)

ತುಳುಭಾಷೆಯೆಂದರೆ ಕುಟ್ಟಣದಕ್ಕಿಯ ಗಂಜಿ; ದೇವತೆಗಳು ಮಾತಾಡುವ ಭಾಷೆ; ಅದನ್ನು ಕಡೆಗಣಿಸಬೇಡ ಎಂದು ಕವಿ ಮಾರ್ಮಿಕವಾಗಿ ಹೇಳುತ್ತಾರೆ.

'ಇವಳೆದೆಗೆ ಬೇರಿಳಿದ ಕಾಲು ನನ್ನದು' (ಅಡಿಗ) ಎಂದಂತೆ ತುಳುನಾಡನ್ನು ನೋಡಿದ ಒಬ್ಬೊಬ್ಬ ಕವಿಯ ದೃಷ್ಟಿ ಬೇರೆ ಬೇರೆ. ಒಬ್ಬೊಬ್ಬ ಕವಿಯ ದರ್ಶನ ಒಂದೊಂದು ಬಗೆ. ಅಲ್ಲಿ ಪ್ರಾರ್ಥನೆ ಇದೆ. ಮನವಿ ಇದೆ. ಹೊಗಳಿಕೆ ಇದೆ. ತೆಗಳಿಕೆ ಇದೆ. ಟೀಕೆ ಇದೆ.

ಭಜನೆ ಬೈಗುಳವೂ ಇದೆ. ಸಮುದ್ರದ ಆಳ ಶಾಂತವಾಗಿ ಮೇಲೆ ಮಾತ್ರ ತೆರೆಗಳಿರುವ ಹಾಗೆ ಈ ಸಂಚಾರಿ ಭಾವಗಳ ಒಳಾಂತರ್ಯದಲ್ಲಿ ಇರುವುದು ಮಾತ್ರ ಕೇವಲ ಪ್ರೀತಿ. ಎಲ್ಲ ನದಿಗಳೂ ಹೋಗಿ ಸೇರುವುದು ಸಮುದ್ರವನ್ನೇ ಅಲ್ಲವೇ? ಹೇಗೆ ನಾಮಸ್ಮರಣೆ ಮಾಡಿದರೂ ಹೋಗಿ ಸೇರುವುದು ಹರಿಪಾದವನ್ನೇ ತಾನೆ! 'ಸರ್ವದೇವ ನಮಸ್ಕಾರಾಯ ಕೇಶವಂ ಪ್ರತಿಗಚ್ಛತಿ' ಎಂದಂತೆ – ಚಿಂತನೆ ಹೇಗೋ ಹಾಗೆ ಅಭಿವ್ಯಕ್ತಿ. ಅಂತಹ ವಿಭಿನ್ನ ಚಿಂತನೆಗಳ ವಿಭಿನ್ನ ಅಭಿವ್ಯಕ್ತಿಗಳನ್ನು ಓದುಗರ ಮುಂದೆ ತೆರೆದಿರಿಸಿದ್ದೇವೆ.

ತುಳುನಾಡಿನ ಬಗ್ಗೆ, ಇಲ್ಲಿನ ಸ್ಥಳವಿಶೇಷಗಳ ಬಗ್ಗೆ ಕಿಲ್ಲೆ, ತಿಂಗಳಾಯ, ಜಿ.ಎನ್. ಲಕ್ಷ್ಮಣ ಪೈ, ಪೇಜಾವರ ಸದಾಶಿವ ರಾವ್, ಗೋಪಾಲಕೃಷ್ಣ ಅಡಿಗ, ವೆಂಕಟರಾಜ ಪುಣಿಂಚತ್ತಾಯ, ಬಿ.ಎಂ. ಇದಿನಬ್ಬ, ಡಾ. ಕನರಾಡಿ ವಾದಿರಾಜ ಭಟ್ಟ, ಸುನೀತಾ ಎಂ. ಶೆಟ್ಟಿ, ಕುರಾಡಿ ಸೀತಾರಾಮ ಅಡಿಗ, ಕೆದಂಬಾಡಿ ಜತ್ತಪ್ಪ ರೈ, ಏರ್ಯ ಲಕ್ಷ್ಮೀನಾರಾಯಣ ಆಳ್ವ, ಬೆಳ್ಳಿಪ್ಪಾಡಿ ಸತೀಶ ರೈ, ಪ್ರಮೋದಾ ಕೆ. ಸುವರ್ಣ, ಕುತ್ಯಾಳ ನಾಗಪ್ಪ ಗೌಡ, ಕುದ್ಕಾಡಿ ವಿಶ್ವನಾಥ ರೈ, ಡಾ. ವಸಂತಕುಮಾರ ಪೆರ್ಲ, ಡಾ. ನಾ. ಮೊಗಸಾಲೆ, ಜಿ.ಎಸ್. ಉಬರಡ್ಕ, ಮನು ಇಡ್ಯ, ಚಿದಂಬರ ಬೈಕಂಪಾಡಿ, ಜೆ. ತಿಮ್ಮಪ್ಪ ಪೂಜಾರಿ, ಆತ್ರಾಡಿ ಅಮೃತಾ ಶೆಟ್ಟಿ, ಟಿ.ಜಿ. ಮುಡೂರು, ಪೇರೂರು ಜಾರು, ಮುದ್ದುಮೂಡುಬೆಳ್ಳೆ ಮೊದಲಾದವರು ಬರೆದ ಅರ್ಥಪೂರ್ಣ ಕವನಗಳು ಈ ಸಂಕಲನದಲ್ಲಿವೆ.

ವಸಂತಿ ಶೆಟ್ಟಿ ಬ್ರಹ್ಮಾವರ ಅವರ ಕವಿತೆ 'ಕೊಂಕಣ ರೈಲು' ಈ ಜಿಲ್ಲೆಯಲ್ಲಾಗುತ್ತಿರುವ ವ್ಯಾಪಕ ಬದಲಾವಣೆಗಳನ್ನು ಸಂಕೇತಿಸುವಂತಿದೆ. ಕೈಗಾರಿಕೀಕರಣಕ್ಕೆ ಪಕ್ಕಾಗಿರುವ ಜಿಲ್ಲೆ ಮಾನವೀಯ ಮೌಲ್ಯಗಳನ್ನು ಗೌಣಸ್ಥಾನಕ್ಕೆ ತಳ್ಳುತ್ತಿರುವ ದುರಂತವನ್ನು ಅವರು ಹೀಗೆ ಚಿತ್ರಿಸುತ್ತಾರೆ : 'ಹತ್ತಿರದಲ್ಲೇ ಆಟವಾಡುತ್ತಿದ್ದ ಸಣ್ಣ ದೋಣಿ ಹಿಡಿದ ಮಗು / ನೀರಿಗೆ ಇಳಿಬಿಟ್ಟ ಕಾಗದದ ದೋಣಿ / ಹೆದರಬೇಡ ಅಜ್ಜ ಹೆದರಬೇಡ / ನೀರಿಗೆ ಇಳಿಬಿಟ್ಟೆ ನಾನೀಗ ಪರಿಹಾರಕ್ಕೆ ಬರೆದ ಅರ್ಜಿ.'

ಇಲ್ಲಿನ ಕವಿತೆಗಳನ್ನು ಒಟ್ಟಾಗಿ ಓದಿದಾಗ ಸ್ಥೂಲವಾಗಿ ಒಂದು ಶತಮಾನ ಕಾಲದ ತುಳುನಾಡಿನ ಚಿತ್ರಣ ಕಾಣದೊರೆಯುತ್ತದೆ. ಇದು ಕವಿಗಳು ಕಂಡ ತುಳುನಾಡು.[4]

---

[4] ತುಳುವರು ಕುಡ್ಲ, ಕೊಂಕಣಿಯವರು ಕೊಡಿಯಾಲ, ಹವ್ಯಕರು ಕೊಡಿಯಾಲ ಎಂದೆಲ್ಲ ಮಂಗಳೂರನ್ನು ಹೆಸರಿಸುವ ಭಾಗ 'ಕೊಡಿಯಾಲಬೈಲು' ಎಂಬ ಹೆಸರಿನಿಂದ ಇಂದು ಅಸ್ತಿತ್ವದಲ್ಲಿದೆ. ಕೊಡಿ+ಬೈಲ್ (ಒಂದು ತುದಿಯಲ್ಲಿರುವ ಬಯಲು) ಕೊಡಿಯಾಲ ಆಗಿರಬೇಕು. ಅದು ಭೂಮಿಯ ತುತ್ತ ತುದಿಯಲ್ಲಿರುವ ಬಯಲು. ಅನಂತರ ಸಮುದ್ರದ ಹಿನ್ನೀರು ಚಾಚಿಕೊಂಡಿರುವುದರಿಂದ ಕೊಡಿಯಲ್ಲಿರುವ ಬಯಲು ಕೊಡಿಯಾಲ > ಕುಡ್ಲ ಆಗಿರಬೇಕೆಂದು ತೋರುತ್ತದೆ.

ಸಾಂಸ್ಕೃತಿಕ ಕಣ್ಣಿನಿಂದ ನೋಡಿದ-ಸೃಜನಶೀಲವಾದ ನಿತ್ಯಜೀವಂತಿಕೆಯ ಒಂದು ಶ್ರೀಮಂತ ನಾಡಿನ ಚಿತ್ರಣ ಇಲ್ಲಿ ವೈವಿಧ್ಯಮಯವಾಗಿ ಅನಾವರಣಗೊಂಡಿದೆ. ಕೃಷಿ ಪ್ರಧಾನವಾಗಿದ್ದ ಜಿಲ್ಲೆ ಹಣಕಾಸಿನ ಹಿಂದೆ ಬಿದ್ದು ಅಡಿಕೆ, ತೆಂಗು, ಗೇರು, ರಬ್ಬರ್, ಕೊಕ್ಕೋ ಮುಂತಾದ ತೋಟಗಾರಿಕಾ ಬೆಳೆಗಳನ್ನು ಆಶ್ರಯಿಸಿತು. ಈಗ ಕೈಗಾರಿಕಾ ಪ್ರಧಾನ ಜಿಲ್ಲೆಯಾಗಿ ರೂಪುಗೊಳ್ಳುತ್ತಿದೆ. ಯುವ ತಲೆಮಾರು ಹಳ್ಳಿಗಳಿಂದ ನಗರ ಪ್ರದೇಶಗಳ ಕಡೆಗೆ ವಲಸೆ ಹೋಗುತ್ತಿದೆ. ಹಳ್ಳಿಗಳಲ್ಲಿ ಕೆಲಸ ಮಾಡಲು ಜನರಿಲ್ಲದ ಸ್ಥಿತಿ ನಿರ್ಮಾಣವಾಗುತ್ತಿದೆ. ಕೃಷಿ ಮಾಡದೆ ಗದ್ದೆಗಳು ಪಾಳು ಬೀಳುತ್ತಿವೆ. ಹಳ್ಳಿಗಳು ವೃದ್ಧಾಶ್ರಮಗಳಾಗುತ್ತಿವೆ. ಮದುವೆಯ ವಯಸ್ಸಿಗೆ ಬಂದ ತರುಣರಿಗೆ ವಧುಗಳು ಸಿಗುತ್ತಿಲ್ಲ. ಅಂದರೆ ಹೆಣ್ಣುಮಕ್ಕಳಿಗೆ ಅಧಿಕ ಹಕ್ಕು ಅಧಿಕಾರಗಳಿದ್ದ ಕುಟುಂಬದಲ್ಲಿ-ಸಮಾಜದಲ್ಲಿ ಸ್ತ್ರೀ ಪ್ರಾಧಾನ್ಯ ಇದ್ದ ನೆಲದಲ್ಲಿ ಇವತ್ತು ಹೆಣ್ಣುಮಕ್ಕಳ ಸಂಖ್ಯೆಯೇ ಕಡಿಮೆಯಾಗಿದೆ. ಇದೊಂದು ಸಾಮಾಜಿಕ ಅಸಮತೋಲನವೇ ಸರಿ. ಕೌಟುಂಬಿಕ ವ್ಯವಸ್ಥೆ, ಸಾಮಾಜಿಕ-ಶೈಕ್ಷಣಿಕ ವ್ಯವಸ್ಥೆ, ಔದ್ಯೋಗಿಕರಂಗ ಪೂರ್ತಿ ಬದಲಾಗಿರುವ ಇಂತಹ ಸನ್ನಿವೇಶದಲ್ಲಿ ನಮ್ಮ ಕವಿಗಳು ಪೂರ್ವಸೌಖ್ಯದ ಭಾವುಕತೆಯಿಂದ 'ತಾಯಿ'ಯನ್ನು ವರ್ಣಿಸುತ್ತ - ಹೊಗಳುತ್ತ ಕೂರುತ್ತಾರೋ ಅಥವಾ ಕಾಲದ ಅಗತ್ಯಕ್ಕೆ ತಕ್ಕಂತೆ ಭಾವ-ಭಾಷೆಗಳನ್ನು ಹದಗೊಳಿಸಿಕೊಂಡು 'ನೆಲಕ್ಕೆ ತಳಕ್ಕೆ ಗುದ್ದಲಿಯೊತ್ತಿ ಕುಕ್ಕಿ ಗರಿಮಿರಿವ ಚಿನ್ನದದಿರ'ನ್ನು ಅಗೆದು ತೆಗೆಯುತ್ತಾರೋ ಎಂಬುದನ್ನು ಇನ್ನು ಮುಂದಿನ ಕಾವ್ಯ ನಮಗೆ ತೋರಿಸಬೇಕಾಗಿದೆ.

ಹತ್ತು ವರ್ಷ ಹಿಂದೆ ಭಾಷೆಯನ್ನು ಬಳಸುತ್ತಿದ್ದ ಕ್ರಮಕ್ಕು ಇವತ್ತಿನದಕ್ಕು ತುಂಬ ವ್ಯತ್ಯಾಸ ಇದೆ. ಕೈಗಾರಿಕೀಕರಣ, ಜಾಗತೀಕರಣ, ಆರ್ಥಿಕ ಉದಾರೀಕರಣದ ಸನ್ನಿವೇಶದಲ್ಲಿ ಇವತ್ತು ನಮ್ಮ ಮುಂದೆ ದೊಡ್ಡ ಸವಾಲು ಬಂದು ನಿಂತಿದೆ. ಜಾಗತೀಕರಣದ ಮುಖವಾಣಿಯಾದ ಇಂಗ್ಲಿಷ್‌ನ ಮುಂದೆ ನಾಡಿನ ಭಾಷೆಗಳು ದುರ್ಬಲಗೊಳ್ಳುವ ಸನ್ನಿವೇಶ ನಿರ್ಮಾಣವಾಗಿದೆ. ಮಾಧ್ಯಮಸ್ಫೋಟ ಮತ್ತು ಕಂಪ್ಯೂಟರ್‌ನ ಈ ಯುಗದಲ್ಲಿ ಕಾಲದ ಅಗತ್ಯಕ್ಕೆ ತಕ್ಕಂತೆ ಭಾಷೆಯನ್ನು ಮರುಹೊಂದಿಸಿಕೊಳ್ಳುವ ಅಗತ್ಯ ಅತ್ಯಂತ ತುರ್ತಾಗಿ ಆಗಬೇಕಾಗಿದೆ. ಕೃಷಿ ಹಿನ್ನೆಲೆಯ ಬದುಕಿನ ಅನುಭವಗಳನ್ನು ದಕ್ಕಿಸಿಕೊಂಡ ನಮ್ಮ ಭಾಷೆ ತುಂಬ ಶ್ರೀಮಂತವಾಗಿದೆಯೇನೋ ಸರಿ. ಆದರೆ ತಾಂತ್ರಿಕ ಯುಗದ ಬದುಕಿನ ಅನುಭವಗಳನ್ನು ಅಭಿವ್ಯಕ್ತಿಸಲು ನಮ್ಮ ಭಾಷೆ ಇನ್ನಷ್ಟು ಶ್ರೀಮಂತವಾಗಬೇಕಾಗಿದೆ. ಈ ತಾಂತ್ರಿಕ ಯುಗವನ್ನು ನಾವು ಹೇಗೆ ಅರಗಿಸಿಕೊಳ್ಳುತ್ತೇವೆ ಎಂಬುದರ ಮೇಲೆ ನಮ್ಮ ಯಶಸ್ಸು ಅಡಗಿದೆ.

ಇದು ನಮಗೆಲ್ಲರಿಗೂ ಒದಗಿ ಬಂದಿರುವ ಒಂದು ಸಂಧಿಘಟ್ಟ. ಜಾತ್ರೆಯ ಸಮಯದಲ್ಲಿ ದೇವಸ್ಥಾನದ ಪ್ರಾಂಗಣದಲ್ಲಿ ಉತ್ಸವಮೂರ್ತಿಯನ್ನು ಹೊತ್ತ ಅಡಿಗಳು ಬಲಿ ಪ್ರದಕ್ಷಿಣೆ ಬರುತ್ತ ಎರಡು ಹೆಜ್ಜೆ ಹಿಂದಿಟ್ಟು ಮೂರು ಹೆಜ್ಜೆ ಮುಂದಿಡುತ್ತಾರೆ. ಎಂಟು ಹೆಜ್ಜೆ ಹಿಂದಕ್ಕೆ ಹೋಗಿ ಅನಂತರ ಹತ್ತು ಹದಿನಾರು ಹೆಜ್ಜೆಗಳನ್ನು ಮುಂದಕ್ಕೆ ಓಡುತ್ತಾ ಕ್ರಮಿಸುತ್ತಾರೆ. ಇದು ಹಿಂದಕ್ಕೂ ಮುಂದಕ್ಕೂ ತೋಲ ಮಾಡುತ್ತ ದೇವರು ಸಾಗುವ ಪರಿ. ನಡಿಗೆಯಲ್ಲಿ ಹೀಗೆ

ಸಮಭಾರ ಮಾಡಿಕೊಂಡು ಹಿಂದೆ ಬರುವುದು (ಭೂತವನ್ನು–Past–ಗಮನಿಸುವುದು), ಮುಂದಕ್ಕೆ ಹೋಗುವುದು (ಭವಿಷ್ಯಕ್ಕೆ ಹೆಜ್ಜೆ ಹಾಕುವುದು – Future) ಒಂದು ನಿರಂತರ ಪ್ರಕ್ರಿಯೆ. ಹಿಂದೆ ಹೆಜ್ಜೆ ಇಡದಿದ್ದರೆ ಮುಂದೆ ಸಾಗುವ ಬಲ ಮತ್ತು ಜೀವಶಕ್ತಿ ಒದಗಿ ಬರದು. ಪರಂಪರೆಯಿಂದ ಜೀವಶಕ್ತಿಯನ್ನು ಪಡೆದುಕೊಂಡರೆ ಈ ಸಂಧಿಯನ್ನು ದಾಟಲು ನಮಗೆ ಕಷ್ಟವಾಗದು. ಆ ಶಕ್ತಿಯನ್ನು ನಮ್ಮ ನಾಡದೇವಿ ನಮಗೆ ಒದಗಿಸಿಕೊಡಲಿ.

ಅಂತಹ ಜೀವಶಕ್ತಿಯನ್ನು ನಮ್ಮ ಹಿಂದಿನವರಿಗೂ ನಾಡದೇವಿ ಮೊಗೆಮೊಗೆದು ನೀಡಿದ್ದಾಳೆ. ಅದನ್ನು ಕವಿಗಳು ಕೃತಜ್ಞತೆಯಿಂದ ಸ್ಮರಿಸಿಕೊಂಡಿದ್ದಾರೆ. ಅಂತಹ ಅವಿನಾಶಿಯಾದ, ನಿತ್ಯ ನವೋನವವಾದ ನಾಡದೇವಿಯನ್ನು ವರ್ಣಿಸುವ ಕೆಲವು ಅಪೂರ್ವ ಕವಿತೆಗಳನ್ನು ಸಂಕಲಿಸಿ ಸಂಪಾದಿಸುವ ಅವಕಾಶವೊಂದನ್ನು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ನನಗೆ ಒದಗಿಸಿಕೊಟ್ಟಿದೆ. ಅದಕ್ಕಾಗಿ ಅಕಾಡೆಮಿಯ ಅಧ್ಯಕ್ಷ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರಿಗೂ ಅಕಾಡೆಮಿಯ ಸರ್ವಸದಸ್ಯರಿಗೂ ನನ್ನ ಹೃದಯಪೂರ್ವಕ ವಂದನೆಗಳು.

ಈ ಸಂಕಲನ ಸೊಗಸಾಗಿ ಮೂಡಿಬರಲು ಕಾರಣರಾದವರು ಕವಿಮಿತ್ರರು. ತಮ್ಮ ಕವಿತೆಗಳನ್ನು ಈ ಸಂಕಲನಕ್ಕೆ ನೀಡಿದ ಕವಿಗಳಿಗೂ ಹಿಂದಿನ ಕವಿಗಳ ಸಂಬಂಧಿತರಿಗೂ ಕೃತಜ್ಞತೆಗಳು.

ಒದುಗರಾದ ನಿಮಗೂ ವಂದನೆಗಳು.

ಡಾ. ವಸಂತಕುಮಾರ ಪೆರ್ಲ
ಸಂಪಾದಕ

‘ಭೂಮಿಗೀತ’
ಕುಂಜತ್ತಬೈಲ್,
ಮಂಗಳೂರು – 575 015

ಅಧ್ಯಕ್ಷರ ನುಡಿ

ಯಾವುದೇ ಒಂದು ನಾಡಿನ ಸಂಸ್ಕೃತಿಯ ಹಿರಿಮೆ ಇರುವುದು ಅಲ್ಲಿರುವ ನಿಸರ್ಗ ಸಂಪತ್ತು ಮತ್ತು ಶಾರೀರಕ, ಮಾನಸಿಕ, ಬೌದ್ಧಿಕ ಆರೋಗ್ಯವನ್ನು ನೀಡಬಲ್ಲ ಅವ್ಯಕ್ತವಾದ ಆಧ್ಯಾತ್ಮಿಕ ಸ್ಪರ್ಶವುಳ್ಳ ಜೀವನ ಕ್ರಮದಲ್ಲಿ. ತುಳುನಾಡಿನ ಜೀವನ ಕ್ರಮದಲ್ಲಿ ಅಂತಹ ಶ್ರೀಮಂತಿಕೆಯಿದೆ. ಸಾವಿರಾರು ವರ್ಷಗಳ ಇತಿಹಾಸವನ್ನು ಗಮನಿಸಿದಾಗಲೂ ಇಲ್ಲಿನ ಭಾಷೆ ಸಂಸ್ಕೃತಿಗಳು ವಿದೇಶೀಯರನ್ನು ಆಕರ್ಷಿಸಿರುವುದು, ತಮ್ಮ ನಾಡಿನಲ್ಲಿ ಸಿಗದ ಯಾವುದೋ ಒಂದು ಸುಖ ತುಳು ಮಣ್ಣಿನಲ್ಲಿ ಇದೆಯೆಂದು ನಂಬಿ ಅವರ ಅಧ್ಯಯನಕ್ಕೆ ತುಳುವರ ಬದುಕು ಆಚಾರ-ವಿಚಾರಗಳು, ನಂಬಿಕೆ, ನಡವಳಿಕೆಗಳು ಒಳಗಾಗಿರುವುದು ಇದಕ್ಕೆ ಉತ್ತಮ ನಿದರ್ಶನ.

ತುಳುನಾಡಿನ ಸಂಸ್ಕೃತಿ, ಬದುಕು ಎನ್ನುವುದು ಅದು ಜಗತ್ತಿನಲ್ಲಿಯೇ ಅತೀ ಶ್ರೇಷ್ಠವಾದ, ಧರ್ಮನಿಷ್ಠವಾದ, ಸತ್ಯವನ್ನು ಒಳಗೊಂಡ ಆಕರ್ಷಣೀಯವಾದ ಸಂಸ್ಕೃತಿ ಎಂದು ನಂಬಿದವ ನಾನು. ಇದು ಉಳಿಯಬೇಕು, ಮುಂದಿನ ಜನಾಂಗಕ್ಕೆ ಮಾದರಿಯಾಗಿ ಬೆಳೆಯಬೇಕು ಎನ್ನುವುದು ನನ್ನ ಆಸೆ; ಎಲ್ಲ ತುಳುವರ ಆಸೆ. ತುಳುನಾಡಿನ ವ್ಯಾಪ್ತಿ, ತುಳುಭಾಷೆಯ ಪ್ರಾಚೀನತೆ, ತುಳು ಲಿಪಿಯ ಇತಿಹಾಸ, ತುಳುವರ ಆರಾಧನೆ, ಆಚರಣೆ, ಕಲೆ, ಬದುಕು ಇತ್ಯಾದಿ ವಿಚಾರಗಳ ಬಗ್ಗೆ ನಮ್ಮ ಹಿರಿಯರಿಂದ ತೊಡಗಿ ಇಂದಿನ ವಿದ್ವಾಂಸರ ವರೆಗೆ ಸಾಕಷ್ಟು ಸಂಶೋಧನೆಗಳು ನಡೆದಿವೆ, ಸಾಹಿತ್ಯಗಳು ಬಂದಿವೆ. ವಿಚಾರ ವಿಮರ್ಶೆಗಳು ಆಗುತ್ತಲೇ ಇವೆ. ವಿಶೇಷ ಆಳ ಜ್ಞಾನವೂ ನನಗಿಲ್ಲ.

ಆದರೆ ಅವೆಲ್ಲವನ್ನು ಮೌನವಾಗಿ ಗಮನಿಸಿಕೊಂಡು ತುಳುನಾಡಿನ ವಿಶಿಷ್ಟತೆಯನ್ನು ಅರಿತುಕೊಂಡು ನನ್ನ ಮಾತೃಭಾಷೆಗೆ, ಮಾತೃಸಂಸ್ಕೃತಿಗೆ ಏನಾದರೂ ದುಡಿಯಬೇಕು ಎಂಬ ಮೂಲ ಧ್ಯೇಯದಿಂದ ಅಕಾಡೆಮಿಯ ಅಧ್ಯಕ್ಷನಾದವ ನಾನು. ನನ್ನ ಯೋಚನೆ, ಯೋಜನೆಗಳಿಗೆ ನಿಮ್ಮ ಅಂದರೆ ಎಲ್ಲ ತುಳುವರ ಸಂಪೂರ್ಣ ಸಹಕಾರವನ್ನು ನಾನು ಬಯಸುತ್ತಿದ್ದೇನೆ. ನಿಮ್ಮ ಯೋಚನೆಗಳೇನಿದೆ ಅದೇ ಅಕಾಡೆಮಿಯ ಯೋಜನೆಗಳಾದಾಗ ತುಳು ಅಕಾಡೆಮಿ ತುಳುವರ ಅಕಾಡೆಮಿ ಆಗುತ್ತದೆ.

ತುಳು ಅಕಾಡೆಮಿ ಆರಂಭ ಆದಂದಿನಿಂದ ತೊಡಗಿ ಇಂದಿನವರೆಗೆ ಪ್ರತೀ ಅವಧಿಯಲ್ಲಿಯೂ ಅಧ್ಯಕ್ಷರಾದವರು ಸದಸ್ಯರಾದವರು ಅರ್ಥಪೂರ್ಣವಾದ ನೆಲೆಯಲ್ಲಿ ತುಳು ಭಾಷೆ ಮತ್ತು ಸಂಸ್ಕೃತಿಯ ವಿಶೇಷತೆ ಮತ್ತು ರಕ್ಷಣೆಗೆ ಸಂಬಂಧಪಟ್ಟಂತೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಸಾಹಿತ್ಯ ಕೃತಿಗಳನ್ನು ಪ್ರಕಟಿಸುತ್ತಾ ಬಂದಿರುವುದು ಗಮನಾರ್ಹ. ಈ ದೃಷ್ಟಿಯಲ್ಲಿ ಈಗ ಅಕಾಡೆಮಿಯ ಮೂಲಕ ಹೊರಬರುತ್ತಿರುವ ಈ ಪ್ರಾತಿನಿಧಿಕ ಕವನ ಸಂಕಲನ 'ಕವಿಗಳು ಕಂಡ ತುಳುನಾಡು' ಒಂದು ಮಹತ್ವದ ಕೃತಿಯಾಗುತ್ತದೆ. ಡಾ. ವಸಂತಕುಮಾರ ಪೆರ್ಲ ಇವರ ಸಂಪಾದಕತ್ವದಲ್ಲಿ ಹೊರಬರುತ್ತಿರುವ ಈ ಕೃತಿಯ ಕನಸು ಕಂಡವರು ನಮ್ಮೆಲ್ಲರಿಗೆ ಆದರ್ಶಪ್ರಾಯರಾಗಿರುವ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷರಾದ ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ ಅವರು. ಅವರ ಮಾತಿನಲ್ಲೇ ಹೇಳುವುದಾದರೆ "ತುಳು ಸತ್ವವನ್ನು ತಮ್ಮಲ್ಲಿ ಮೈಗೂಡಿಸಿಕೊಂಡ, ತುಳುವರಾದರೂ ಕನ್ನಡ ಕವಿಗಳೆಂದೇ ಹೆಸರು ಪಡೆದ, ಕೀರ್ತಿ ಪಡೆದ ಇಲ್ಲಿನ ಅನೇಕ ಕವಿಗಳು ತುಳುನಾಡಿನ ಬಗ್ಗೆ ಬರೆದಿದ್ದಾರೆ. ಬಿಚ್ಚು ಮನಸ್ಸಿನಿಂದ ಬರೆದ ಹಿರಿಯರ ನಾಡಗೀತೆಗಳು ಎಸಳೆಸಳಾಗಿ ಉದುರಿ ಹೋಗಬಾರದು, ಅವನ್ನೆಲ್ಲ ಸಂಗ್ರಹಿಸಿ ಒಂದು ಮಾಲೆ ನೇಯಬೇಕೆಂಬ ಬಯಕೆ ನನ್ನಲ್ಲಿತ್ತು. ಇದೇ ರೀತಿ ತುಳುನಾಡು, ನುಡಿ ಸಂಸ್ಕೃತಿಯ ಉಳಿವಿಗಾಗಿ ಹೋರಾಟ ನಡೆಸಿದ ಮಹನೀಯರ ಬಗೆಗೆ 'ಮರೆಯಬಾರದ ತುಳುವರು' ಎಂಬ ಗ್ರಂಥಮಾಲೆಯನ್ನು 1997ರಿಂದಲೇ ಪ್ರಾರಂಭ ಮಾಡಿದ್ದೇವೆ. ಈಗ ಮುಂದಿನ ಪೀಳಿಗೆಯವರು ನಮ್ಮ ನಾಡಿನ ಕವಿಗಳು ಮತ್ತು ಅವರ ನಾಡಭಕ್ತಿಯ ಗೀತೆಗಳನ್ನು ನೆನಪಿಸಿಕೊಳ್ಳಲು 'ಕವಿಗಳು ಕಂಡ ತುಳುನಾಡು' ಕೃತಿಯನ್ನು ಪ್ರಕಟಿಸುವ ಪ್ರಯತ್ನ ಮಾಡುತ್ತಿದ್ದೇವೆ."

ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್‌ರವರ ಕನಸನ್ನು ನನಸಾಗಿಸುವ ಸದವಕಾಶ ನನ್ನ ಪಾಲಿಗೆ ಬಂದಿರುವುದು ಸಂತೋಷ ತಂದಿದೆ. ಈ ಮಹತ್ವದ ಜವಾಬ್ದಾರಿಯನ್ನು ನನಗೆ ಒದಗಿಸಿದ ಡಾ. ಪಾಲ್ತಾಡಿಯವರಿಗೆ ನನ್ನ ಹೃದಯಾಂತರಾಳದ ವಂದನೆಗಳು. ಹಿರಿಯ ಅಧಿಕಾರಿಯಾಗಿ ಮಂಗಳೂರು ಆಕಾಶವಾಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಡಾ. ವಸಂತ ಕುಮಾರ ಪೆರ್ಲರವರು ಸ್ವತಃ ಕವಿ, ಸಾಹಿತಿ ಮತ್ತು ವಿದ್ವಾಂಸರು. ಮಂಗಳೂರು ಆಕಾಶವಾಣಿಯ ಮೂಲಕ ತುಳುವಿಗೆ ವಿಶಿಷ್ಟ ಸ್ಥಾನಮಾನವನ್ನು ತಂದುಕೊಟ್ಟವರು. ತುಳು ಕನ್ನಡ ಕವಿ-ಸಾಹಿತಿಯಾದ ಇವರು ಅಜನೆ, ದುತ್ತೈತ, ಸೊರಗೆ, ಪ್ರಾತಿನಿಧಿಕ ತುಳು ಕಬಿತೆಲು,

ಇಂಚಿಪೊದ ತುಳು ಕಬಿತೆಲು ಮುಂತಾದ ತುಳು ಕವಿತಾ ಸಂಕಲನಗಳನ್ನು ಹೊರತಂದವರು. ಮೊದಲ ಬಾರಿಗೆ ಇಡೀ ತುಳು ಕಾವ್ಯದ ಬಗೆಗಿನ ವಿಮರ್ಶಾತ್ಮಕ ಕೃತಿ 'ತುಳುಕಾವ್ಯ'ವನ್ನು ಬರೆದವರು. ತುಳುವಿನ ಬೇರೆ ಬೇರೆ ಕವಿ-ಸಾಹಿತಿಗಳನ್ನು ಹೊರಪ್ರಪಂಚಕ್ಕೆ ಪರಿಚಯಿಸಿದ ಕೀರ್ತಿ ಡಾ. ವಸಂತಕುಮಾರ ಪೆರ್ಲರಿಗೆ ಸಲ್ಲುತ್ತದೆ. 'ಕವಿಗಳು ಕಂಡ ತುಳುನಾಡು' ಸಂಕಲನದಲ್ಲಿ ಪಂಜೆ ಮಂಗೇಶರಾಯರ 'ತೆಂಕಣ ಗಾಳಿಯಾಟ'ದಿಂದ ತೊಡಗಿ ಇತ್ತೀಚಿನ ಕನ್ನಡ ತುಳು ಕವಿಗಳ ವರೆಗೆ ಕನ್ನಡದಿಂದ ತುಳುವಿಗೆ, ತುಳುವಿನಿಂದ ಕನ್ನಡಕ್ಕೆ ಅನುವಾದಿಸಿ ಕೊಟ್ಟಿದ್ದಾರೆ. ಕವಿಗಳ ಪರಿಚಯವನ್ನು ಮಾಡಿಕೊಟ್ಟಿದ್ದಾರೆ. ತುಳು ಮಣ್ಣಿನ ಸತ್ವವನ್ನು ಲೋಕಾರ್ಪಣೆ ಮಾಡುವ ದೃಷ್ಟಿಯಿಂದ ಪೆರ್ಲರು ಮಾಡಿದ ಈ ಮೊದಲ ಸೇವೆಗೆ ಎಲ್ಲ ತುಳುವರ ಪರವಾಗಿ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ತುಳುವರು ಕೇವಲ ತುಳುನಾಡಿನಲ್ಲಿ ಮಾತ್ರವಲ್ಲ, ತಮ್ಮ ಹೊಟ್ಟೆಯ ಪೋಷಣೆಗಾಗಿ ರಾಷ್ಟ್ರ, ಅಂತಾರಾಷ್ಟ್ರ ಮಟ್ಟದಲ್ಲಿ ಹೋಗಿ ನೆಲೆಸಿದವರಿದ್ದಾರೆ. ಅವರೆಲ್ಲರೂ ತುಳುನಾಡಿನ ಆಸ್ತಿ. ಅವರೆಲ್ಲರಿಗೂ ಅಕಾಡೆಮಿ ಕೆಲಸಗಳು ಮುಟ್ಟಬೇಕು. ಅವರೆಲ್ಲರ ಮನಸ್ಸು, ಕನಸು ನಮ್ಮೊಂದಿಗಿರಬೇಕು. ಈ ಸಂಕಲನದಲ್ಲಿ ಅನೇಕ ಕವಿತೆಗಳಿವೆ. ತುಳು-ಕನ್ನಡ ಎರಡು ಭಾಷೆಗಳಲ್ಲಿ ಅನುವಾದಿಸಿ ಕೊಡಲಾಗಿದೆ. ಕನ್ನಡ ಬಲ್ಲ ಎಲ್ಲರಿಗೂ ತಲುಪಬೇಕೆಂದು ಪುಸ್ತಕವನ್ನು ಕನ್ನಡದಲ್ಲಿ ರಚಿಸಲಾಗಿದೆ. ಗ್ರಂಥದ ಗಾತ್ರದ ಮಿತಿಯನ್ನು ಒಳಗೊಂಡು ಕವನಗಳನ್ನು ಆಯ್ಕೆ ಮಾಡಲಾಗಿದೆ. ಇನ್ನೂ ಬಹಳಷ್ಟು ಹಿರಿಯ ಕವಿಗಳ ಕವಿತೆಗಳು ಉಳಿದಿರಬಹುದು. ಅಂತಹ ಕವಿತೆಗಳನ್ನು ಮುಂದಿನ ಭಾಗದಲ್ಲಿ ಅಕಾಡೆಮಿ ಪ್ರಕಟಿಸುವ ಅವಕಾಶವಿದೆ.

ಈ ಸಂದರ್ಭದಲ್ಲಿ ನನ್ನೊಂದಿಗೆ ಸಹಕರಿಸಿದ ನನ್ನ ಬಳಗದ ಎಲ್ಲ ಸದಸ್ಯರಿಗೆ, ಪುಸ್ತಕವನ್ನು ಪ್ರಕಟಿಸಲು ಅನುವು ಮಾಡಿಕೊಟ್ಟ ರಿಜಿಸ್ಟ್ರಾರ್ ಬಿ. ಚಂದ್ರಹಾಸ ರೈಯವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಆಕೃತಿ ಪ್ರಿಂಟ್ಸ್‌ನ ಕಲ್ಲೂರು ನಾಗೇಶ್ ಮತ್ತು ಬಳಗದವರಿಗೆ ಆತ್ಮೀಯ ಕೃತಜ್ಞತೆಗಳನ್ನು ಸಮರ್ಪಿಸುತ್ತಿದ್ದೇನೆ.

ಮಂಗಳೂರು
17.03.2012

ಉಮಾನಾಥ ಎ. ಕೋಟ್ಯಾನ್
ಅಧ್ಯಕ್ಷರು

ಪರಿವಿಡಿ

1.	ತೆಂಕಣ ಗಾಳಿಯಾಟ (ತೆನ್ಕಾಯಿ ಗಾಳಿದಬ್ಬರೊ)	ಪಂಜೆ ಮಂಗೇಶ ರಾವ್	3
2.	ತುಳುನಾಡ ರಾಣಿ (ತುಳುನಾಡ ರಾಣಿ)	ಎಮ್.ಎನ್. ಕಾಮತ್	7
3.	ತೌಳವ ಮಾತೆ (ತುಳು ಅಪ್ಪೆ)	ಮಂಜೇಶ್ವರ ಗೋವಿಂದ ಪೈ	9
4.	ತುಳುನಾಡ್ ಗೀತೆ (ತುಳುನಾಡ ಗೀತೆ)	ಮೋಹನಪ್ಪ ತಿಂಗಳಾಯ	11
5.	ಕಾರ್ಗಾಲದ ವೈಭವ (ಮರೆಯೊಲದ ಮಿನದನ)	ಕಡೆಂಗೋಡ್ಲು ಶಂಕರಭಟ್ಟ	13
6.	ಆಟಿ ಕಳೆಂಜ (ಆಟಿ ಕಳೆಂಜೆ)	ಜಿ.ಎನ್. ಲಕ್ಷ್ಮಣ ಪೈ	17
7.	ಆಟಿಯ ಹುಣ್ಣಿಮೆ (ಆಟಿದ ಪುಣ್ಣಮೆ)	ಪೇಜಾವರ ಸದಾಶಿವ ರಾವ್	21
8.	ತುಳುನಾಡ ಹಾಡು (ತುಳುನಾಡ ಪದ)	ಸೇಡಿಯಾಪು ಕೃಷ್ಣಭಟ್ಟ	27
9.	ತೆಂಗುತೋಟದ ತೊಟ್ಟಿಲು (ತಾರೆತೋಟೊದ ಉಜ್ಜಾಲ್)	ಅಮ್ಮೆಂಬಳ ಶಂಕರನಾರಾಯಣ ನಾವಡ	35
10.	ಸುಗಿಪು (ಸ್ತುತಿ)	ಕೆಲಿಂಜ ಸೀತಾರಾಮ ಆಳ್ವ	39
11.	ಬಾಳ್ವೆಗಾಸರೆ ಆಗಲಿ (ಬದ್ಕ್‌ಗ್ ಆಸರೆ ಆವಡ್)	ಡಾ. ಪುಂಡೂರು ವೆಂಕಟರಾಜ ಪುಣಿಂಚತ್ತಾಯ	42
12.	ಹುತ್ತದ ಹಸುಳೆ (ಪುಂಚೊದ ಬಾಲೆ)	ಮಂದಾರ ಕೇಶವ ಭಟ್ಟ	44

13.	ತುಳುನಾಡ್‌ದ ನಿನೆಪು (ತುಳುನಾಡಿನ ನೆನಪು)	ಪಾ.ವೆಂ. ಆಚಾರ್ಯ	46
14.	ಚಿನ್ನದ ಬಟ್ಟಲು (ಬಂಗಾರ್‌ದ ಕಜಣ)	ಡಾ. ಅಮೃತ ಸೋಮೇಶ್ವರ	50
15.	ಸಾರೊ ಎಸಳ್‌ದ ತಾಮರೆ (ಸಾವಿರ ಎಸಳಿನ ತಾವರೆ)	ಡಾ. ಕಯ್ಯಾರ ಕಿಞ್ಞಣ್ಣ ರೈ	52
16.	ಮೀನುಗಾರರ ಹಾಡು (ಮೀನ್ಲಕ್ಲೆನ ಪದೊ)	ಬಿ.ಎಂ. ಇದಿನಬ್ಬ	56
17.	ಪೊರ್ಲ ಕಂಟ್ ನಾಡ್ (ಚಂದದ ನಾಡು)	ಡಾ. ಕನರಾಡಿ ವಾದಿರಾಜ ಭಟ್ಟ	60
18.	ಏತ್ ಪೊರ್ಲು (ಎಷ್ಟೊಂದು ಸುಂದರ)	ಡಾ. ಸುನೀತಾ ಎಂ. ಶೆಟ್ಟಿ	62
19.	ಪಡುವಣ ನಾಡು (ಪಡ್ಡೈದೂರು)	ಕುರಾಡಿ ಸೀತಾರಾಮ ಅಡಿಗ	65
20.	ಪಯಸ್ವಿನಿ ತೀರದ ಮಳೆ (ಪಯಸ್ವಿನಿ ಬರಿತ ಬರ್ಸೊ)	ಕುತ್ಯಾಳ ನಾಗಪ್ಪ ಗೌಡ	69
21.	ತುಳುಅಪ್ಪೆ ಮದಿಪು (ತುಳು ಅಬ್ಬೆಯ ಹಾರೈಕೆ)	ಕುದ್ಕಾಡಿ ವಿಶ್ವನಾಥ ರೈ	73
22.	ಕಾಸರಗೋಡು (ಕಾಸರಗೋಡು)	ಡಾ. ಕೆ.ವಿ. ತಿರುಮಲೇಶ್	77
23.	ತುಳುವೆರೆಂಕುಲು (ನಾವು ತುಳುವರು)	ಮಲಾರ್ ಜಯರಾಮ ರೈ	84
24.	ಸೊಲ್ಮೆ ಸಂದಾವೆ (ನಮನ ಸಲ್ಲಿಸುವೆ)	ಪಡಾರು ಮಹಾಬಲೇಶ್ವರ ಭಟ್	88
25.	ಕೊಡಿ ಏರಡ್ (ಧ್ವಜ ಏರಲಿ)	ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್	90
26.	ತುಳುನಾಡ ಕಬಿತೆ (ತುಳುನಾಡ ಕವಿತೆ)	ಡಾ. ವಾಮನ ನಂದಾವರ	92

27. ಮಂಗಳೂರು
(ಕುಡಲ) ಡಾ. ವಸಂತಕುಮಾರ ಪೆರ್ಲ 96

28. ತುಳುನಾಡ್‌ದ ಪೆರ್ಮೆ
(ತುಳುನಾಡಿನ ಹೆಮ್ಮೆ) ಎನ್.ಪಿ. ಶೆಟ್ಟಿ 98

29. ಮತ್ತೆ ಕನ್ಯಾನಕ್ಕೆ
(ಕುಡ ಕನ್ಯಾನೊಗ್) ಡಾ. ನಾ. ಮೊಗಸಾಲೆ 105

30. ಕೋಟೆಮಲೆ
(ಕೋಟೆಮಲೆ) ಜಿ.ಎಸ್. ಉಬರಡ್ಕ 109

31. ಪಿಲಿ-ಪೆತ್ತ ನೀರ್ ಪರ್ಪಿನ ಕೆದು
(ಹುಲಿ-ಹಸು ನೀರು ಕುಡಿವ ಕೆರೆ) ಕೆ.ಟಿ.ಗಟ್ಟಿ 113

32. ತುಳುವ ನಾಡ್‌ಗ್ ಎದ್ಕೊನುವೆ
(ತುಳುನಾಡಿಗೆ ಸ್ವಾಗತ) ಚಿದಂಬರ ಬೈಕಂಪಾಡಿ 115

33. ಅಪ್ಪೆ ಇಲ್ಲ್
(ತವರು ಮನೆ) ಆತ್ರಾಡಿ ಅಮೃತಾ ಶೆಟ್ಟಿ 117

34. ಕೊಂಕಣ ರೈಲು
(ಕೊಂಕಣ ರೈಲ್) ವಸಂತಿ ಶೆಟ್ಟಿ ಬ್ರಹ್ಮಾವರ 121

35. ತುಳುನಾಡ ರಾಣಿ
(ತುಳುನಾಡು ರಾಣಿ) ಎನ್.ಎಸ್. ಕಿಲ್ಲೆ 125

36. ತುಳುನಾಡ್
(ತುಳುನಾಡು) ಡಾ. ಬೆಳ್ಳಿಪ್ಪಾಡಿ ಸತೀಶ್ ರೈ 129

37. ಪೊಸ ಅಂಗಿ ಬತ್ತ್‌ಂಡೇ
(ಹೊಸ ಅಂಗಿ ಬಂದಿದೆಯೇ) ಕೆದಂಬಾಡಿ ಜತ್ತಪ್ಪ ರೈ 133

38. ಬಾರ ಯಾತ್ರಿಯೇ ತುಳುವ ನಾಡಿಗೆ
(ಬಲ ಬಲ ಯಾತ್ರಿ ತುಳುವನಾಡ್‌ಗ್) ಏರ್ಯ ಲಕ್ಷ್ಮೀನಾರಾಯಣ ಆಳ್ವ 135

39. ಚೊಕ್ಕಾಡಿ
(ಚೊಕ್ಕಾಡಿ) ಸುಬ್ರಾಯ ಚೊಕ್ಕಾಡಿ 141

40. ತುಳುವೆರೆ ಕಳೆಂಬಿ
(ತುಳುವರ ಕಳೆಂಬಿ) ಚಂದ್ರಹಾಸ ಸುವರ್ಣ 149

41.	ಭೂಮಿಗೀತ (ಭೂಮಿಗೀತೆ)	ಪ್ರೊ. ಎಂ. ಗೋಪಾಲಕೃಷ್ಣ ಅಡಿಗ	153
42.	ನನ್ನ ಮನೆ (ತನ್ನ ಇಲ್ಲ್)	ಉಗ್ರಾಣ ಮಂಗೇಶ ರಾವ್	158
43.	ಪೂ ಮಾಲೆ (ಹೂ ಮಾಲೆ)	ಪ್ರಮೋದಾ ಕೆ. ಸುವರ್ಣ	160
44.	ಕುಲ್ಕುಂದ ಜಾನುವಾರು ಜಾತ್ರೆ (ಕುಲ್ಕುಂದ ಎರ್ಲ್ ಜಾತ್ರೆ)	ನರ್ಕಳ ಮಾರಪ್ಪ ಶೆಟ್ಟಿ	162
45.	ತುಳುನಾಡ ಪದ (ತುಳುನಾಡ ಪದ)	ಕೆಮ್ತೂರು ದೊಡ್ಡಣ್ಣ ಶೆಟ್ಟಿ	167
46.	ಮೂಡ್ದ್ ಬರಡ್ ತುಳುನಾಡ್ (ಮೂಡಿ ಬರಲಿ ತುಳುನಾಡು)	ಟಿ.ಜಿ. ಮುಡೂರು	169
47.	ದೆಯ್ಯೊಗು ಬೆರೆಕೆ ದೇವೆರೆ (ದೈವದೊಂದಿಗೆ ಬೆರೆತ ದೇವರು)	ಪೇರೂರು ಜಾರು	171
48.	ಕುಡ್ಲ ಮಲ್ಲಿಗೆ (ಮಂಗಳೂರು ಮಲ್ಲಿಗೆ)	ಎಸ್.ಪಿ. ಮಂಚಿ	173
49.	ತುಳುವ ತಮೆರಿ (ತುಳುವ ತಾಯ್ನೆಲ)	ಮುದ್ದು ಮೂಡುಬೆಳ್ಳೆ	177
50.	ಜಯಹೇ ತುಳುವಪ್ಪೆ (ಜಯಹೇ ತುಳುವಮ್ಮ)	ಅiii. ಬಾಲಕೃಷ್ಣ ಶೆಟ್ಟಿ ಪೊಳಲಿ	179
51.	ಕವಿಗಳ ಪರಿಚಯ		181

ಪ್ರಾಚೀನ ತುಳುನಾಡು

ಪಾಡ್ದನ :

ಸತ್ತಿಗೆದಾತ್ ಮಲ್ಲೆ। ಹರಿವಾಣೊದಾತ್ ಉರುಟು।
ಪಣವುದಾತ್ ಪೊರ್ಲು। ತಿರ್ತ್ ತುಳು ರಾಜ್ಯ
ಬಾರಿ ಪೊರ್ಲು ತೋಜುಂಡು. – ಪಂಜುರ್ಲಿ ಪಾಡ್ದನ

"ಶ್ವೇತಬತ್ತದಷ್ಟು ಗೌರವ ಪ್ರಾಯವಾದ, ಹರಿವಾಣದಂತೆ ವೃತ್ತಾಕಾರವಾಗಿ ಹಬ್ಬಿಕೊಂಡಿರುವ, ನಗನಾಣ್ಯದಷ್ಟು ಆಕರ್ಷಣೀಯವಾದ, ಸೌಂದರ್ಯದ ನೆಲೆ ಎಂದೆನಿಸಲ್ಪಡುವ ತುಳುರಾಜ್ಯ ಕೆಳಗೆ ಕಾಣುತ್ತದೆ."

ಶಾಸನ :

ಸಾರತರದ್ರುಮ ಪ್ರತತಿಯಿಂ ಪರಿಶೋಭಿಪ ಗೋ ಪ್ರತಾನದಿಂ
ಕೀರ ಮರಾಳ ಸಾರಸದಿನೊಪ್ಪುವ ನಂದನ ವೃಂದದಿಂ ಪಯಃ
ಪೂರಸರಃ ಸರೋಜವನದಿಂ ಬಿನದಕ್ಕೆಡೆಯಾದ ತಾಣದಿಂದಾರ
ಮನಕ್ಕೆ ಮಾಡದೊಲವಂ ತುಳು ದೇಶಮನೇಕ ದೇಶದೊಳೂ ॥
– ಮೂಡಬಿದಿರೆ ಶಾಸನ

"ಸಾರೊ ಸಾರೊ ತರತರದ ಮರಗಿಡ, ದಯಿ ಬೂರುಲೆಡ್ದ್
ದಿಂಜಿನ ಬನೊಕುಲು, ಉದ್ದಗೆಲೊಗು ದೂರ ದೂರ
ಮುಟ್ಟ ಪಸರೊಂದಿಪ್ಪುನ ಪಂತಿ ಪಜಿರ್‌ದ ಅಡ್ಕಲು
ಗಿಳಿ, ಹಂಸ. ನೀರ್ಪಕ್ಕಿಲೆಡ್ದ್ ದಿಂಜಿನ ಕೆದು, ನಂದನ
ವನೊಕುಲು, ಅಮುರ್ತೊದಾತ್
ಸುದ್ದೊದ ನೀರ್ ದಿಂಜಿದ್ ತಮೆಲುನ ಸರೋವರಲೆಡ್ದ್
ಕೂಡ್ದ್ ಮಾತೆರ್ನ ಕಣ್ಣ್‌ಗ್ಲಾ ಪೊರ್ಲು ತೋಜುನ ತುಳು ದೇಶ
ಎಡ್ಡೆ ಪುದರ್‌ದ ದಿಂಜ ದೇಶದೊಲೆಡೊಂಜಾದ್
ತೂಯಿನಕ್ಲೆನ ಉಡಲ್‌ಗ್ ತಂಪು ಕೊರ್ಪುಂಡು"

"ಸಾವಿರಾರು ವಿವಿಧ ಮರಗಿಡಗಳ ಸಮೂಹದಿಂದ ತುಂಬಿದ ವನಗಳಿಂದಲೂ, ವಿಶಾಲವಾಗಿ ಹಬ್ಬಿಕೊಂಡಿರುವ ಹಸಿರು ಹುಲ್ಲುಗಾವಲುಗಳಿಂದಲೂ, ಗಿಳಿ, ಹಂಸ, ನೀರ್ವಕ್ಕಿಗಳಿಂದ ತುಂಬಿದ ನಂದನವನಗಳಿಂದಲೂ, ಅಮೃತದಂತೆ ಪರಿಶುದ್ಧವಾದ ನೀರಿನಿಂದ ತುಳುಕುವ ಸರೋವರಗಳಿಂದಲೂ ಕೂಡಿ ಆಕರ್ಷಣೀಯವಾದ ತಾಣವೆನಿಸಿದ, ಅನೇಕ ದೇಶಗಳಲ್ಲಿ ಅತ್ಯಂತ ಶ್ರೇಷ್ಠವೆನಿಸಿದ ತುಳುದೇಶ ಕಂಡವರ ಮನಸ್ಸಿಗೆ ಹಿತವನ್ನುಂಟು ಮಾಡುತ್ತದೆ."

ತೆಂಕಣ ಗಾಳಿಯಾಟ

ಪಂಜೆ ಮಂಗೇಶ ರಾವ್

ಬರಲಿದೆ! ಅಹಹಾ! ದೂರದಿ ಬರಲಿದೆ –

ಬುಸುಗುಟ್ಟುವ ಪಾತಾಳದ ಹಾವೊ?
ಹಸಿವಿನ ಭೂತವು ಕೂಯುವ ಕೂವೊ?
ಹೊಸತಿದು, ಕಾಲನ ಕೋಣನ – ಓವೊ!
ಉಸಿರಿನ ಸುಯ್ಯೋ? – ಸೂಸೂಕರಿಸುತ,

ಬರುವುದು! ಬರಬರ ಭರದಲಿ ಬರುವುದು –

ಬೊಬ್ಬೆಯ ಹಬ್ಬಿಸಿ, ಒಂದೇ ಬಾರಿಗೆ
ಉಬ್ಬರ ಎಬ್ಬಿಸಿ ಕಡಲಿನ ನೀರಿಗೆ,
ಬೊಬ್ಬುಳಿ ತೆರೆಯನು ದಡಕ್ಕೆ ಹೊಮ್ಮಿಸಿ,
ಅಬ್ಬರದಲಿ ಭೋರ್ ಭೋರೆನೆ ಗುಮ್ಮಿಸಿ,

ಬರುತದೆ! ಮೈತೋರದೆ ಬರುತದೆ! ಅದೆ –

ನಡುಮುರಿಯುತ ನಗನಾವೆಗೆ, ಕೂವೆಗೆ
ಉಡಿಸಿದ ಹಾಯಿಯ ಹರಿಯುತ ಬಿರಿಯುತ,
ಹಡಗನು ಕೀಲಿಸಿ, ತುಮುರನು ತೇಲಿಸಿ,
ದಡದಲಿ ಝಾಡಿಸಿ, ದೋಣಿಯನಾಡಿಸಿ,

ಇದೆ! ಇದೆ! ಬರುತಿದೆ! ಇದೆ! ಇದೆ! ಬರುತಿದೆ –

ಹಕ್ಕಿಯ ಕಣ್ಣಿಗೆ ಧೂಳಿನ ಕಾಡಿಗೆ
ಇಕ್ಕುತ, ಹೊಲದೆತ್ತಿಗೆ ದನಕಾಡಿಗೆ
ಫಕ್ಕನೆ ಹಟ್ಟಿಗೆ ಅಟ್ಟಿಸಿ, ಕಾಡಿಗೆ
ಸಿಕ್ಕಿದ ಕಿಚ್ಚನು ಊದಲು ಹಾರುತ,

ಬರುತಿದೆ! ಇದೆ! ಇದೆ! ಇದೆ! ಇದೆ! ಬರುತಿದೆ –

ಸಡಲಿಸಿ ಮಡದಿಯರುಡಿಯನು ಮುಡಿಯನು,
ಬಡಮುದುಕರ ಕೊಡೆಗರಿ ಹರಿದಾಡಿಸಿ,
ಹುಡುಗರ ತಲೆ ತಲೆ ಟೊಪ್ಪಿಯ ಆಟವ
ದಡಬಡನಾಡಿಸಿ, ಮನೆಮನೆ ತೋಟವ
ಅಡಿಮೇಲಾಗಿಸಿ, ತೆಂಗನು ಲಾಗಿಸಿ,
ಅಡಕೆಯ ಬಾಗಿಸಿ, ಪನೆ ಇಬ್ಭಾಗಿಸಿ,
ಬುಡದೂಟಾಡಿಸಿ, ತಲೆ ತಾಟಾಡಿಸಿ,
ಗುಡಿಸಲ ಮಾಡನು ಹುಲುಹುಲು ಮಾಡಿಸಿ,

ಬಂತೈ! ಬಂತೈ! ಇದೆ! ಇದೆ! ಬಂತೈ! –

ಗಿಡಗಿಡದಿಂ – ಚೆಲು ಗೊಂಚಲು ಮಿಂಚಲು –
ಮಿಡಿಯನು ಹಣ್ಣನು, ಉದುರಿಸಿ ಕೆದರಿಸಿ
ಎಡದಲಿ ಬಲದಲಿ ಕೆಲದಲಿ ನೆಲದಲಿ,
ಪಡುವಣ ಮೋಡವ ಬೆಟ್ಟಕೆ ಗಟ್ಟಕೆ
ಹೊಡೆದಟ್ಟುತ್ತ, ಕೋಲ್ ಮಿಂಚನು ಮಿರುಗಿಸಿ,
ಗುಡುಗನು ಗುಡುಗಿಸಿ, ನೆಲವನು ನಡುಗಿಸಿ,
ಸಿಡಿಲನು ತಾಳೆಗೆ ಬಾಳೆಗೆ ಎರಗಿಸಿ
ಜಡಿಮಳೆ ಸುರಿವೋಲ್, ಬಿರುಮಳೆ ಬರುವೋಲ್,
ಕುಡಿನೀರನು ಒಣಗಿದ ನೆಲಕೆರೆವೋಲ್.

ಬಂತೈ ಬೀಸುತ! ಬೀಸುತ ಬಂತೈ!
ತೆಂಕಣ ಗಾಳಿಯು ಕೊಂಕಣ ಸೀಮೆಗೆ
ಬಂತೈ! ಬಂತೈ! ಬಂತೈ! ಬಂತೈ!

ತೆನ್ಕಾಯಿ ಗಾಳಿದಬ್ಬರೊ

ಬರ್ಪುಂಡು! ಒಹೊಹೋ! ದೂರೊಡು ಬರ್ಪುಂಡು -

ಸುಂಯ್ಯುನ ಪಾತಾಳೊದ ಮರಿಯೊ
ಬಡವುದ ಬೂತೊದ ಬಂಜಿದ ಬುಲಿಪ್ಪೊ
ಪೊಸತ್ತುಂದು, ಕಾಲನ ಗೋಣೆನ - ಓವೊ
ಉಸುಲುದ ಸುಯಿಂಪೊ - ಸೂಸೂ ಪನೊಂದು

ಬರ್ಪುಂಡು! ಬರಬರ ಬೀಸೊಡು ಬರ್ಪುಂಡು -

ಬೊಬ್ಬೆನೆ ಪಾಡೊಂದು, ಒಂಜೇ ಸರ್ತಿಗ್
ಏರ್ತನ್ ಲಕ್ಕದ್ ಕಡಲ್‌ದ ನೀರ್‌ಗ್,
ನುರೆ ನುರೆ ಸೆರೆನ್ ಕರೆಕ್ಕ್ ಹಾಕದ್
ಅಬ್ಬರೊಡು ಭೋರ್ ಭೋರ್ ಕೊರೆತ್ತ್‌ದ್

ಬರ್ಪುಂಡು! ಮೈತೋಜುಜಿ ಬರ್ಪುಂಡು! ಅಲ -

ನಡು ಪೊಲಿತೊಂದು ಪಾಂಡಿಗ್, ಕೂವೆಗ್
ಪಾಡಿನ ಕುಂಟುನು ಪರಿತೊಂದು ತಿಗ್‌ತೊರ್ಂದು,
ಮಂಜಿನ್ ಮುರ್ಕಾದ್ ಪಾಯಿನ್ ಪಾಂಬದ್
ಕರೆಕ್ಕ್ ದಕ್ಕ್‌ದ್, ಓಡೊನು ಆಡದ್

ಅಲ! ಅಲ! ಬತ್ತ್‌ಂಡ್! ಅಲ! ಅಲ! ಬತ್ತ್‌ಂಡ್ -

ಪಕ್ಕಿದ ಕಣ್ಣ್‌ಗ್ ದೂಳುದ ಕೋಲ್ಮಯಿ
ಪಾಡ್‌ದ್, ಮೇಪುನ ಎರ್ಲೆನ್ ಗುಡ್ಡೆದ ಪೆತ್ತನ್
ಬೇಗನೆ ಕಿದೆಕ್ಕ್ ಗಿಡತ್ತ್‌ದ್, ಕಾಡ್‌ಗ್
ಬೂರಿನ ಸೂ ನುರಿತ್‌ದ್ ಪರಡದ್

ಬತ್ತ್‌ಂಡ್ ಅಲ! ಅಲ! ಅಲ! ಅಲ! ಬತ್ತ್‌ಂಡ್ -

ಪೊಂಜೊವೆ ಸೀರೆನ್ ಸಡಿಲದ್ ಗಿಚ್ಚದ್
ಪೀಂಟದ್ ಪರಬ್ಬೆರೆ ತತ್ತ್ರೊದ ಕಡ್ಡಿನ್
ಜೋಕುಲೆ ಟೊಪ್ಪಿನ್ ರಟ್ಟ್‌ದ್ ರಾಪದ್
ದಡಬಡ ಮಲ್ತ್‌ದ್, ಊರುದ ತೋಟೊನು
ಲಗಾಡಿಗೆತ್ತ್‌ದ್, ತಾರೆನ್ ಬೂರಾದ್
ಕಂಗ್‌ನ್ ಬಗ್ಗದ್ ಪನೆಮರ ಸಿಗಿತ್ತ್‌ದ್
ಬುಡ ಮಗ್‌ರದ್, ಕೊಡಿ ಜೆಪ್ಪದ್
ಗುಡಿಚಿಲ್ ಮಾಡ್‌ನ್ ಬುರುಬುರು ಪಾರಾದ್

ಬತ್ತ್‌ಂಡ್! ಬತ್ತ್‌ಂಡ್! ಅಲ! ಅಲ! ಬತ್ತ್‌ಂಡ್!

ದೈ ಮುದೆಲ್‌ದ ಸಬಿಸೇಬಿಡ್ ಮೆಂಚಿಲು
ಮುಡಿಪಂರ್ದ್‌ಲೆನುದುರದ್ ಕೆದರ್‌ದ್
ಎಡತ್ತ್‌ಲ ಬಲತ್ತ್‌ಲ ಅಂಚಿಲ ಇಂಚಿಲ
ಪಡ್ಡೈ ಮುಗಲ್‌ನ್ ಬೆಟ್ಟೊಗು ಗಟ್ಟೊಗು
ಗಿಡೆತ್ತ್‌ದ್, ಕೋಲ್‌ಮೆಂಚ್‌ನ್ ಮೆನ್ಕದ್
ತೆಡಿಲ್‌ನ್ ಗುಡುಗದ್ ನಿಲವುರ ನಡುಗದ್
ತಾರೆಗ್ ತಾರಿಗ್ ಬಾರೆಗ್ ಹಾಕದ್
ದಿರಿಕುಟ ಬರ್ಸೊನು ಬಿರ್ಸ್‌ಡ್ ಬೀಜದ್
ನುಂಗಿನ ನಿಲನ್ ನೀರ್‌ಡ್ ಎರ್ಕದ್

ಬತ್ತ್‌ಂಡ್ ಬೀಜೊಂದು! ಬೀಜೊಂದು ಬತ್ತ್‌ಂಡ್!
ತೆನ್ಕಾಯಿ ಗಾಳಿ ಕೊಂಕಣ ಸೀಮೆಗ್[1]
ಬತ್ತ್‌ಂಡ್! ಬತ್ತ್‌ಂಡ್! ಬತ್ತ್‌ಂಡ್! ಬತ್ತ್‌ಂಡ್!

ಮೂಲ : **ಪಂಜೆ ಮಂಗೇಶ ರಾವ್**
(ತರ್ಜುಮೆ : **ಸಂಪಾದಕ**)

[1] ಕೊಂಕಣ ಸೀಮೆ-ಭಾರತದ ಪಶ್ಚಿಮ ಕರಾವಳಿಯು ತೀರಾ ಅಂಕುಡೊಂಕಾಗಿರುವುದರಿಂದ (ಕೊಂಕು, ವಕ್ರ) ಹಿಂದೆ ಇದನ್ನು ಕೊಂಕಣ ಸೀಮೆ ಎನ್ನುತ್ತಿದ್ದರು. ಈ ಕೊಂಕಣ ಸೀಮೆಯನ್ನು ಏಳು ರಾಜ್ಯಗಳಾಗಿ ವಿಂಗಡಿಸಿ ಅವುಗಳನ್ನು ಒಟ್ಟಾಗಿ ಪುರಾಣದಲ್ಲಿ ಸಪ್ತ ಕೊಂಕಣವೆಂದು ಹೆಸರಿಸಲಾಗಿದೆ. ಅವುಗಳಲ್ಲೊಂದು ತುಳುರಾಜ್ಯ. ಕೊಂಕು(ಕನ್ನಡ), ಕೋಂಕ (ತುಳು) = ಅಂಕುಡೊಂಕು. (ಮಂ. ಗೋವಿಂದ ಪೈ)

ತುಳುನಾಡ ರಾಣಿ

ಎಂ.ಎನ್. ಕಾಮತ್

ಕೊಡಲಿ ರಾಮನ ಸಿಡಿಲಿಗಳುಕಿ ಹಿಂದೋಡಿ
ಕಡಲಾರೆ,-ನೀನಲೆಗಳನ್ನೊಡೆದು ಮೂಡಿ,
ಪಡೆದ ಶಾಸನವಾದೆ ತುಳುನಾಡ ರಾಣಿ!
ಬೆಡಗಿಂದ ಧರೆಗಾದೆ ಕೊರಳ ಕಟ್ಟಾಣಿ!
ಗಟ್ಟಗಳ ಮೆಟ್ಟಲಿನ ಅಟ್ಟಳಿಗೆ ಏರಿ,
ಸಾಟಿ ಇರದೊಡ್ಡೋಲಗದ ಸೊಬಗು ಮೀರಿ,
ಅಟ್ಟಹಾಸದ ಕಡಲು ಕಾಲ್ ತೊಳೆಯುತಿರಲು,
ಒಟ್ಟಿರಿಸಿದಾ ಪುಣ್ಯರಜ ಎನಿಸೆ ಮಳಲು-
ಮಳೆ ಮುಗಿಲ ವೇಣಿಯಲಿ, ಮಳೆಬಿಲ್ಲ ಹಾರಂ,
ತಿಳಿಯ ಬೆಳದಿಂಗಳಿನ ಕವಚ ಸಂಗಾರಂ,
ಹೊಲದ ಹಸುರುಡಿಗೆ, ನೇತ್ರಾವತಿಯ ಮಾಲೆ-
ಮಲೆಗಾಳಿ ಸಾರುತಿಹುದಿಂತು ತವಲೀಲೆ,
ದುಡುಕಿದಾ ಸೂರೆಗರ ಹಾವಳಿಗೆ ನೊಂದೆ!
ಕಡಲಣುಗೆ! ಬಡವಾವೆ ಕಾವರಿಲ್ಲ
ಪಡುಗಡಲ ದಾಟಿ ಸೋದರಿಯೊದಗೆ ಮುನ್ನಾ
ಕೆಡುಗಾಲ ಅಡಗಿ ಬೀಸಿತು ಶಾಂತಿ ಪವನ.
ತಲೆದೂಗೆ ತೆಂಗು, ನೇಗಿಲು ನಗಲು ಹೊಳೆಯು
ಸುಳಿದೋಡೆ, ತಲೆ ಎತ್ತಿ ಕಂಗೊಳಿಸೆ ಬೆಳೆಯು,
ಮಳಿಗೆ ತಕ್ಕಡಿ ಕುಣಿಯೆ, ಶಂಖ ದೇಗುಲದಿ
ಮೊಳಗೆ, ಮನೆ ಮಕ್ಕಳಿಂದುಲಿಯೆ ಗದ್ದಲದಿ-
ಮೆರೆಯಲಿಂತಾಂಗ್ಲೇಯರೊಡೆತನದಿ ನಾಡು!
ಪರಮೇಶನೊಲುಮೆಯಿಂ; ಶಾಂತಿಗಿದು ಬೀಡು!
ಬರಲೆಮಗೆ ಜನ್ಮ ನಿನ್ನುದರದಲಿ, ತಾಯೆ!
ದೊರೆಯಲೆಮಗನುದಿನವು ನಿನ್ನಡಿಯ ಸೇವೆ !

ತುಳುನಾಡ ರಾಣಿ

ಕುಡರಿರಾಮನ ತೆಡಿಲ್‌ಗ್ ಪೋಡ್ತ್‌ದ್ ಪಿರಪಾರ್ದ್
ಕಡಲಾಜ್‌ದ್, - ಈ ಸೆರೆ ಪುಡತ್ತ್‌ದ್ ಮೂಡಿಯ
ಕಲ್ಬರವು[1]ಲೆಡ್ ನೆಗತ ತುಳುನಾಡ ರಾಣಿ
ಮೆರೆಪುನಾ ಬೂಮಿಗ್ ಈಯೆ ಕೆಕ್ಕಿಲ್‌ದ ಕರಿಮಣಿ
ಗಟ್ಟೊಲೆನ ಮೊಟ್ಟುಲೆನ ಅಟ್ಟಳಿಗೆ ಏರ್ದ್
ಸಾಟಿ ದಾಂತಿನ ಓಲೆಗೊದ ಸೇಬಿ ಮೀರ್ದ್
ಅಟ್ಟಹಾಸೊದ ಕಡಲ್ ಕಾರ್ ದೆಕ್ಕ್‌ನಗ
ಒಟ್ಟಾಯಿ ಪೊಯೆನೇ ಪುಣ್ಯಬಸ್ಮೊ
ಬರ್ಸೊ ಮುಗಲ್‌ದ ಜಡೆಟ್ಟ್ ಅಜ್ಜಬಿರು ಮಾಲೆ
ತಿಂಗೊಲು ಬೊಲ್ಪುದ ದಲಿಯ[2] ಪಾಡ್ದ್ ಲಡಾಯಿ
ಬೈಲ್‌ದ ಪಚ್ಚೆ ಪಜಿರ್ ದುತ್ತೈತೊ, ನೇತ್ರಾವತಿದ ಮಾಲೆ
ಮಲೆಗಾಳಿ ಪನ್ಪುಂಡಿತ್ತೆ ನಿನ್ನ ಲೀಲೆ;
ಕಳುವ ಕಂಡುಲೆನ ನುರ್ಕಾಟಿಕೆಗ್ ಸೋತಿ
ಕಡಲ್‌ಗೇ ಬೇಜಾರ್; ಬಡವೆರೆಗ್ ದಿಕ್ಕ್‌ಜ್ಜಿ
ಪಡ್ಡೈ ಕಡಲ್ ದಾಂಟ್‌ದ್ ತಂಗಡಿ ತಿಕ್ಕಿನಪಗ
ಬಂಜ ಮಾಜ್‌ದ್ ಬತ್ತ್‌ಂಡ್ ಶಾಂತಿಗಾಳಿ
ತೂಂಕ್‌ಂಡ್ ತಾರೆ, ತೆಲಿತ್ತ್‌ಂಡ್ ನಾಯೆರ್, ಸುದೆ
ಪರಿತ್ತ್‌ಂಡ್, ತರೆದರ್ತಿ ಪೊರ್ಲಕಂಟ್‌ದಾ ಬಿದೆ,
ಅಂಗಡಿಡ್ ತಕ್ಕಡಿ ನಲಿತ್ತ್‌ಂಡ್, ಶಂಖ ಆಲಯೊಡು
ದುನಿತ್‌ಂಡ್, ಇಲ್ಲ್ ಜೋಕ್ಲೆಡ್ದ್ ಗಲಗಲ ಗೌಜಿ
ಮೆರೆಯಿಂಡ್ ಇಂಚ ಇಂಗ್ಲಿಷೆರಾಡಳಿತೊಡು ನಾಡ್!
ಪರಮೇಶ್ವರನ ದಯೊಡ್ದು ಶಾಂತಿಗಿಂದುವೆ ಬೂಡು!
ಬರಡೆಂಕ್ಲೆಗ್ ಪುಟ್ಟು ನಿನ್ನ ಬಂಜಿಡೆ, ಅಪ್ಪೆ!
ತಿಕ್ಕಡೆಂಕ್ಲೆಗ್ ಏಪೊಗುಲ ನಿನ್ನ ಬೇಲೆ !

ಮೂಲ : ಎಂ.ಎನ್. ಕಾಮತ್
(ತರ್ಜುಮೆ : ಸಂಪಾದಕೆ)

[1] ಕಲ್ಬರವು - ಶಾಸನ, [2] ದಲಿಯ - ಮಡಿಬಟ್ಟೆ

ತೌಳವ ಮಾತೆ

ಮಂಜೇಶ್ವರ ಗೋವಿಂದ ಪೈ

ಜಯ ಜಯ ತೌಳವ ತಾಯೆ ॥ ಪ ॥

ಮಣಿವೆ ತಂದೆ ತಾಯಂದಿರ ತಾಯೇ,
ಭುವನದಿ ತ್ರಿದಿವಚ್ಛಾಯೇ ॥ ಅನು ॥

ಭಾರ್ಗವನಂದು ಬಿಸುಡೆ ಕೊಡಲಿಯ ನೀಕಡಲೊಡೆದೆಡೆಯಿಂ ಮೂಡಿ
ಭಾರತ ಮಾತೆ ತೊಡೆಯೊಳೊಡಗೂಡಿಸೆ, ಸಹ್ಯವೀಣೆಯಂತೀಡಿ
ದೆಸೆದೆಸೆ ರವಿ ಶಶಿಕಿರಣದ ಮಳೆ ಮಂಜಿನ ಮಿಸುಸೇಸೆಯ ಸೂಸೆ
ನವನವರಿತುಗಾನವತರಿಸುವೆ, ಗಗನ ವನಧಿಯೋಲೈಸೆ ॥೧॥

ಸಾತಿಯ ಪುತ್ರರ ತವರ್ಮನೆ, ಸಾತರ ತೆಂಕಣ ನೆಲೆ ಮನೆಯಲೂಪರಾ
ಕಳೆಮನೆ, ಪಾಂಡ್ಯರ ಮೇಲ್ಮನೆ, ನೆರೆಯರಮನೆ ಕನ್ನಡಿಗ ಭೂಪರಾ
ಬೈರವ ಬಂಗರ ಚೌಟರಜಿಲ ಸಾಮಂತರ ಮನೆಮನೆಯಿಂಬೇ
ತುಳುವರ ತಾಯ್ಮನೆಯುಳಿದರ ಕಾಯ್ಮನೆ-ನೀನೆಮ್ಮಯ ಮನೆಯಂಬೆ ॥೨॥

ದೇಗುಲಗಳೋ ಧರ್ಮದ ಬಾಗಿಲುಗಳೋ? ಪುಣ್ಯಘಟಂ ತಟನೀತಟಂ
ಬಸದಿಗಳೋ ಕನಸೇಕಲ್ಲಾದುವೋ? ನೆಲಬಿರಿದೆದ್ದರೆ ಗೊಮ್ಮಟಂ?
ನಿನ್ನ ಪುಲಕವೇ ಪಸುರಿದಂತೆ ಪಸರಿಸಿದೀ ಸಸ್ಯದ ಚೆಲುವೇಂ ।
ಜೀವನ ಸಾಮವ ನಾಡುವ ಪಾಡುವ ಖಗಮೃಗ ಪತಂಗ ದೊಲವೇಂ ॥೩॥

ಹಿಂದು ಜೈನ ಮುಸ್ಲಿಮ ಕ್ರೈಸ್ತರಾವೊಂದೇ ಬಾಂಧವರೆಮ್ಮಾ
ತಂದೆ ದೇವರೊಬ್ಬನೇ, ನೀನೊಬ್ಬಳೆ ನಮ್ಮೆಲ್ಲರ ತಾಯಮ್ಮಾ ।
ಎಂದಿನವಳೊ ನೀನಿಂದಿನವರೆ ನಾವಾದೊಡೆಮ್ಮನಕ್ಕರೆಯಿಂ
ನಿನ್ನೆದೆ ತೊಟ್ಟಿಲೊಳಿಟ್ಟು ಸಾಕುತಿಹೆ ಸರಸಿಯಂತೆ ತಾವರೆಯಂ ॥೪॥

ಧನ್ಯನೆನಿತೊ ನಾ ನಿನ್ನಯ ಬಸುರಿಂದು ಸುರಿಸಲೀ ಹೂವನ್ನ
ಕೆಸರೊಳುದುರಲೀಯದೆ, ನಿನ್ನಡಿಗರ್ಪಿಸಿ ಕೊಳು ಸೌಸವವನ್ನ
ಬೇಡುವೆನವ್ವಾ ಬೀಳ್ಕೊಡು ವಂದೆನ್ನವೆತ್ತಿದಂಕದಿ ನಿನ್ನ
'ಮರಳಿ ಬಾರ, ಕಂದಾ, ನನ್ನುದರದಿ' ಎಂದು ತಬ್ಬಿಹರಸೆನ್ನ ॥೫॥

ತುಳುವಪ್ಪೆ

ಜಯ ಜಯ ಸಿರಿ ತುಳುವಪ್ಪೆ ॥ಪ॥

ಸುಗಿಪುವೆ ಪೆರಿಯಾಕು[1]ಲೆನಪ್ಪೆ
ಲೋಕೊಗು ಮುವ್ವಲ[2] ಬೊಳ್ಪುನೆ ಕೊರೊಡಪ್ಪೆ॥ಅ.ಪ. ॥

ರಾಮೆನೆ ಕುಡರಿನ್ ದರ್‌ನಗ ಕಡಲುಡೆದೀ ಮಣ್ಣಂಚಿಗೆ ಬತ್ತ
ಭಾರತದಪ್ಪೆನ ತುಡೆರಡ್ದೊಂಜಾದೀ ಉದಿತ। [3]ಸಹ್ಯ ಬೀಣೆದ ತಂತಿಡ್ ದುನಿತ
ನೆಸರ್[4] ತಿಂಗೊಳ್ದ್[5] ಬೊಲ್ಪುನು ದೊರಿತ। ದಿಕ್ಕ್‌ದಿಕ್ಕ್‌ಗ್ ಪನಿನೀರ್ ಮೈಂದ್‌ನ್ ತಲಿತ॥
ಪೊಸರುತು ಗಾಯನ ಕಿಲೆತ। ಕಡಲ್‌ಬಾನೊನು ಸೂಕ್[6]ಡ್ ಪೊದಿತ ॥೧॥

ಸತಿಯ ಪುತ್ರೆರೆ ಅರಂತಡೆ ತೆನ್ಕಯಿ ಸಾತೆರೆ ನಿಲೆ ಇಡೆ ಆಲೂಪೆರಿಲ್ಲಡೆ
ಪಾಂಡ್ಯೆರೆ ಗೆಲುನಡೆ ಕನ್ನಡದರಸುಲೆ ನೆರೆಕರೆದಾಲಡೆ
ಬಂಗೆರ್ ಚೌಟೆರ್ ಭೈರವ ಅಜಿಲೆರ್ ಸಾಮಂತೆರೆಗಿಂಬೇ
ತುಳುವೆರ್ ಪರಜನ ಭೇದೊನೆದಾಂತೆನೆ ಮಾತೆರೆಗೀ ಅಂಬೇ ॥೨॥

ಗುಡಿಕುಲೋ ಧರ್ಮೊದ ಪಡಿಕುಲೋ ಪುಣ್ಯ ಸೀರ್ತೊದ ಗಿಂಡೆ ಸುದೆಕುಲೋ
ಬಸದಿಲೊ ಕನಕಲ್ಲಾದ್‌ಲ ನಿಲಪುಡ ದುಂತಿನ ಗುಮ್ಮಟೆರೊ
ನಿನ ಮೆಯ್‌ಕೊಕ್ಕೆರ್‌ದುಂತುದು ಪಸರಿನ ಪಜಿರ್‌ದ ಕುರೆಲೋ[7]
ಬದ್ಕ್‌ದ ರಾಗೊಡು ಪಾರ್ದನ ಪನ್ಪಿನ ಪಶು ಪಕ್ಕಿಲು ಪಾಂತೆಲೆ ಪೊರ್ಲೋ ॥೩॥

ಹಿಂದೂ ಮುಸ್ಲಿಂ ಜೈನಕ್ರೈಸ್ತೆರ್ ಒಂಜೇ ಬಂಧುಲು ನಮ್ಮಾ
ಕರ್ತೆ ಒರಿಯೆ ಮಾತೆರೆಗೊರ್ತಿಯೆ ಅಪ್ಪೆ ತುಳುನಾಡಮ್ಮಾ
ಬಾರಿ ಪಿರಾಕ್‌ದ ಭೂಮ್ಯಪ್ಪೆ ತೂವೊನು ಪುರು ಜೋಕ್ಲೆನ ಬಳಕೆ
ತಲ್ಮೆನ ಕೆದುಕಿತ್ತಿ ತಾಮರೆ ಮೋಕೆ ನಿನ್ನೆದೆ ತೊಟ್ಟಿಲ್ಡ್ ತೂಂಕುನ ಬಯಕೆ ॥೪॥

ಕುಸಿತ ಬದುಕೆಂಕೆನ್ನ ಅರಳುವೆ ತುಳು ತೆಲಿನೀರ್‌ದ ಕೆದುಟೆ
ಎಸಳುದರಡ್ ನಿನ ಪಾದೊಗು ಕಮ್ಮೆನ ಪದ್ರಡ್ ನಿಲಟೆ
ನಟ್ಟೊನುವೆ ಈ ಎನ್ನ ಕಡನಗ[8] ಜಕ್ಕೆಲ್ದೊಚ್ಚಿದ್ ಮಾನಾಲ
ನಿನ್ನುಡಲ್‌ಡೆ ಪಿರ ಪುಟ್ಟುದು ಬರ್ಯರೆ ಎಡ್ಡೆ ಮದಿಪುನೆ ಕೋರ್ಲ ॥೫॥

ಮೂಲ : **ಮಂಜೇಶ್ವರ ಗೋವಿಂದ ಪೈ**
(ತರ್ಜುಮೆ : **ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್**)

[1] ಪೆರಿಯಾಕುಲ-ಹಿರಿಯರು, [2] ಮುವ್ವಲ-ಮೂರುಪಾಲು, [3] ಸಹ್ಯ-ಸಹ್ಯಾದ್ರಿ, [4] ನೆಸರ್-ಸೂರ್ಯ, [5]ತಿಂಗೊಳು-ಚಂದ್ರ, [6]ಸೂಕೆ- ಬಂಧುತ್ವ, [7] ಕುರೆಲ್-ಕರುಳು, ಕೂದಲು, [8] ಕಡನಗ - ಕಡಪುಡ್ನಗ ಕಳುಹಿಸಿ ಕೊಡುವಾಗ

ತುಳುನಾಡ್ ಗೀತೆ

- ಮೋಹನಪ್ಪ ತಿಂಗಳಾಯೆ

ಜಯ ಜಯ ಜಯ ತುಳುವ ಸೀಮೆ ಅಪ್ಪೆ ನಾಡ್‌ಗೇ
ಜಯತು ನಂಕ್ ಜನ್ಮ ಕೊರ್ತೀ ಪುಣ್ಯಭೂಮಿಗ್
ನೇತ್ರಾವತಿ ಕುಮಾರಧಾರ ಪುಲಲಿ ಫಾಲ್ಗುಣೀ
ಸೀತ ಸ್ವರ್ಣ ಸುದೆಳು ಚಂದ್ರಗಿರಿ ಪಯಸ್ವಿನೀ
ಪುದರ್ ಪೋಯಿ ಈ ಸುದೇಳು ಘಟ್ಟದ ಮುದೆಲ್‌ಡೇ
ಜತ್‌ದ್ ಬರ್ಪಿ ಪೊರ್ಲು ದಾನೆ ಬೈಲ ಸೀಮೆಡೇ
ಮುಡಯಿ ಘಟ್ಟ ಸೀಮೆ ಗಡಿಟ್ ಪುಲ್ಯ ಆಪಿನಾ
ಪಡ್ಡಯಿ ಕಡಲ ಗಡಿತ ಶೋಭೆ ಪೊರ್ತು ಕಂತುನಾ
ಮಧ್ವಚಾರ್ಯ ವಾದಿರಾಜ ವಿಷ್ಣುತೀರ್ಥೆರ್
ತತ್ವಜ್ಞಾನ್ನಿಲಾಯಿ ಭಕ್ತ ಸೂರಿ ವಿಜಯೆರ್
ಮಯೂರ ವರ್ಮೆ ಭೂತ ಪಾಂಡ್ಯೆ ದೇವ ಪಾಂಡಿಲೂ
ಜಯಾಸಿಂಹ ಕೃಷ್ಣರಾಯೆ ವೀರ ಅರಸುಲೂ
ಪೆರೂಮಾಳೆ ಹುಬ್ಬಶೀಕೆ ಆದಿ ಮುಖ್ಯೆರ್
ತುಲುವ ದೇವಿ ಮಟ್ಟೆಲ್‌ಡ್ ಪುಟುದು ಬುಳೆಯೆರ್
ಕನಡೆ ಕೊಂಕಣಿ ಮರಠಿ ಮಲ್ಯಲಿ ಬಾಲೆಳೇಗ್‌ಲಾ
ಉನುಪು ನೀರ್ ಕೊರುದು ಸಾಂಕು ಪುಣ್ಯ ಸಾಧ್ವಿಗ್
ಜಲಸಮೃದ್ಧಿ ಫಲಸಮೃದ್ಧಿ ಪಚ್ಚೆ ಪೈರುಳೂ
ತುಳುವ ದೇವಿ ತುತ್ತು ಪೊದೆಪು ಆದ್ ಮೆರೆಪೊಳೂ.

ತುಳುನಾಡ ಗೀತೆ

ಜಯ ಜಯ ಜಯ ತುಳುವ ಸೀಮೆ ತಾಯಿ ನಾಡಿಗೆ
ಜಯತು ನಮಗೆ ಜನ್ಮಕೊಟ್ಟ ಪುಣ್ಯ ಭೂಮಿಗೆ
ನೇತ್ರಾವತಿ ಕುಮಾರಧಾರೆ ಪೊಳಲಿ ಫಾಲ್ಗುಣಿ
ಸೀತಾ ಸ್ವರ್ಣ ಹೊನಲು ಚಂದ್ರಗಿರಿ ಪಯಸ್ವಿನಿ
ಖ್ಯಾತಿವೆತ್ತ ನದಿಗಳಿವು ಗಟ್ಟ ಬುಡದಲಿ
ಇಳಿದು ಬರುವ ನೋಟವೇನು ಈ ಬಯಲಲಿ
ಪಡುವ ಕಡಲದೇನು ಚಂದ ಅಸ್ತಮಾನದಿ
ಮಧ್ವಾಚಾರ್ಯ ವಾದಿರಾಜ ವಿಷ್ಣುತೀರ್ಥರು
ತತ್ವಜ್ಞಾನಿಯಾದರವರು ಸೂರಿ ವಿಜಯರು
ಮಯೂರವರ್ಮ ಭೂತಪಾಂಡ್ಯ ದೇವಪಾಂಡ್ಯರು
ಜಯಸಿಂಹ ಕೃಷ್ಣರಾಯ ವೀರ ಅರಸರು
ಪೆರುಮಾಳ ಹುಬಶೀಕರಾದಿ ಮುಖ್ಯರು
ತುಳುವ ದೇವಿ ಮಡಿಲಿನಲ್ಲಿ ಹುಟ್ಟಿ ಬೆಳೆದರು
ಕನ್ನಡ ಕೊಂಕಣಿ ಮರಾಠಿ ಮಲಯಾಳ ಎಲ್ಲ ಮಕ್ಕಳ
ಅನ್ನ ನೀರು ಕೊಟ್ಟು ಪೊರೆವ ಪುಣ್ಯ ಸಾಧ್ವಿಗೆ
ಜಲಸಮೃದ್ಧಿ ಫಲಸಮೃದ್ಧಿ ಪಚ್ಚೆ ಪೈರಿನ
ತುಳುವ ದೇವಿ ಅಂದಚಂದದಿಂದ ಮೆರೆವಳು

ಮೂಲ : **ಮೋಹನಪ್ಪ ತಿಂಗಳಾಯ**

(ಅನುವಾದ : **ಸಂಪಾದಕ**)

ಕಾರ್ಗಾಲದ ವೈಭವ

ಕಡೆಂಗೋಡ್ಲು ಶಂಕರ ಭಟ್ಟ

ಪಡುವಣ ತೀರದ
ಕನ್ನಡ ನಾಡಿನ
ಕಾರ್ಗಾಲದ ವೈಭವವೇನು?
ಚೆಲ್ಲಿದರನಿತೂ
ತೀರದ ನೀರಿನ
ಜಡದೇಹದ ಕರ್ಮುಗಿಲೇನು?
ಕೆರೆಗಳನುಕ್ಕಿಸಿ
ತೊರೆಗಳ ಸೊಕ್ಕಿಸಿ
ಗುಡ್ಡವ ಬೆಟ್ಟವ ಕೊರೆ ಕೊರೆದು
ಕಡಲಿನ ತೆರೆಗಳ
ರಿಂಗಣ ಗುಣಿಯಿಸಿ
ಮೊರೆ ಮೊರೆವುದದೋ ಸರಿಸುರಿದು.
ಕುದುರೆ ಮೊಗದ ಕಡಿ
ವಾಣದ ತೆರದಲಿ
ಮಿಂಚುಗಳವು ಥಳಥಳಿಸುವುವು.
ಗೊರಸಿನ ಘಟ್ಟನೆ
ಯಂತಿರೆ ಥಟ್ಟನೆ
ಗುಡುಗುಗಳವು ಗುಡುಗಾಡಿಪುವು.
ಆವೇಶದ ವೇ
ಷದ ಬಿರುಸುಟ್ಟುರೆ
ಊರೂರಲಿ ಹಾರೋಡುವುದು
ಮರಗಳ ಕೀಳುತ
ಬಂಡೆಯ ಹೋಳುತ

ಜಗಜಟ್ಟಿಯ ತೆರನಾಡುವುದು.
ಹಗಲಿರುಳೆನ್ನದೆ
ಹೊಡೆಯುವ ಜಡಿಮಳೆ
ಬಡಿಕೋಲ್ಮಿಂಚಿನ ಲಾಗುಗಳು.
ಮನೆಗಳ ಮನಗಳ
ಒಳಗೂ ಹೊರಗೂ
ಜಿನುಗುತಿರುವ ಹನಿ ಸೋನೆಗಳು.
ಮುಗಿಲಿನ ಹುಬ್ಬಿನ
ಗಂಟಿಕ್ಕುತ ಬಿರು
ದನಿಯಲಿ ಬೆದರಿಸುತಿಹನಲ್ಲ,
ನಲ್ಲನೆನುತೆ ಆ
ಗಸವೆಣ್ಣೂಗುತೆ
ಸುರಿಸಿದ ಕಣ್ಣೀರ್ವೊನಲೆಲ್ಲ,
ಅತ್ತತ್ತೂ ಆ
ಯಸದಲಿ ಸತ್ತೂ
ಸಾಯದೆ ನೋವನು ಹಿಂಗಿಸುತ,
ಎಂತಾದರೂ ಬಾ
ಳಲೆ ಬೇಕೆನ್ನುತ
ದೆಸೆಯಿದಿರ್ದುದು ಬಗೆ ತಿಳಿಯಿಸುತ.
ಮಳೆ ಕುಂದಿತು, ನೆರೆ
ಯಿಳಿದುದು, ವಾಹಿನಿ
ಎದೆ ಕೆಸರೆತ್ತಲೊ ಹೋಗಿರಲು
ತಿಳಿವಿನ ತೆಳುವಿನ
ಅಲೆಗಳ ವಲಿಗಳ
ಬಲೆಯಲಿ ನೇಸರ ಹಿಡಿದಿರಲು.
ಹೊಸ ಹಸುರಿನ ತೊಡ
ವುಟ್ಟಳು ಮೇದಿನಿ,
ಚಿಗುರ ಮೊಗಕೆ ಮುಗುಳಿನ ನತ್ತ,
ಕರ್ಮೊಡದ ಕು
ಪ್ಪಸವನು ಬಿಟ್ಟಳು,
ಬೆಳ್ಮುಗಿಲಲಿ ಗೈದಳು ಹೊಸತ.

ಮರೆಯಲೊದ ಮಿನದನ

ಪಡ್ಡೈ ಕರೆತ್ತ
ಕನ್ನಡ ನಾಡ್‌ದ
ಮರೆಯಾಲದ ಮಿನದನ[1] ದಾದ !
ಗುತ್ತ್‌ಂಡ ಪನಿತ್‌ಲ
ಮುಗಿಯಂದಿ ನೀರ್‌ದ
ಜಡ ಸರ್ರೊದ ಕರ್ಮುಗಲೆಂಚ!
ಕೆದು ಉರ್ಕೆರ್‌ದ್
ತೋಡು ನುರ್ಕದ್
ಗುಡ್ಡೆನ್ ಅಮ್ಮೆನ್ ಕರಕರದ್
ಕಡಲ್‌ದ ಸೆರೆನ್
ತಿರ್‌ತಿರ್ಗಾದ್
ಕೊರೆಪ್ಪುಂಡಲಾ! ದಿರಿ ಬರ್ಸೊ
ಕುದುರೆದ ಮೋನೆದ
ಚಿರಿಪಟ್ಟಿದ ಲೆಕ್ಕ
ಮೆಂಚಿನೆ ಮೆಣ್ಕುಂಡು ಥಳಥಳನೆ
ಪಜ್ಜೆದ ಆವಡ್[2] ದುನ್ನೊದ ಪೆಟ್ಟ್‌ದ
ತೆಡಿಲ್‌ನೆ ಗುಡುಗುಡು ನಡ್‌ಗವುಂಡು
ವಸಯೊದ ಅಬ್ಬರೊ
ಬತ್ತ್‌ದ್ ಊರುಡು
ಪಾರ್‌ದ್ ಬಲಿಪುಂಡು
ಮರೊಕ್ಕುಲೆ ಪೊರಿತ್ತ್‌ದ್
ಕಲ್ಲ್‌ನ್ ದರಿತ್ತ್‌ದ್
ಜಗಜಟ್ಟಿನ ಲಕ ತೋಜುಂಡು
ಇರ್ಲ್ ಪಗೆಲ್ ಗೆಣೆಪ್ಪಂದೆ
ಬರ್ಪುನ ಬರ್ಸೊ
ಬಾಕುಡೆ ಮೆಂಚಿದ ನರ್ತನೊಲು
ಇಲ್ಲದ ಮನಸ್‌ದ

ಉಲಯಿಲ ಪಿದಯಿಲ
ಪನಿ ಕಡಿಯಂದಿನ ಸೋಣೆದ ಬರ್ಸೊ
ಮುಗಲ್‍ದ ಮೋನೆಡ್
ಲಕ್ಕ್ಂಡ್ ಪಿಸ್‍ರ್
ನೆರ್ಪುನ ಸೊರೊಟ್ಟು ಪೋಡಿಪಾಬೆ
ಮೋಕೆದ ಕಂಡನಿ ಈಯೇ
ಎಂದ್‍ದ್ ಬುಲಿಪುನ ಪೊಣ್ಣನ
ಕಣನೀರ್
ಬುಲಿತ್ ಬುಲಿತ್‍ದ್
ಸೋತ್‍ದ್ ಸಯ್ತ್‍ದ್
ಸಯ್ಯಂದೆ, ಬೇನೆನ್ ನಿಂಗೊಂದು
ಎಂಚಾಂಡಲ ಬದ್ಕೊಡು
ಪಂಡ್‍ದ್
ಉಪ್ಪುನ ಸಾದಿನ್ ತೋಜಿಪ್ಪಾದ್
ಬರ್ಸೊ ಕಡಿಯಿಂಡ್, ಬೊಲ್ಲ
ಜತ್ತ್ಂಡ್, ಸುದೆ ಕನತಿನ
ಕೆಸರಾಜಿದ್ ಪೋಂಡು
ಪುಲ್ಯದ ಬೊಲ್ಪುದ
ಸೆರೆ ಕುಂಟುನು
ಬಲೆ ಬೀಜ್‍ದ್, ನೇಸರ್ ಪತ್ತೊಂದೆ
ಪೊಸ ಪಜಿರ್‍ದ
ದುತ್ತೈತೊಡು ಮೇದಿನಿ
ತೆಗ್‍ಲ್‍ನ ಮೋನೆಗ್ ಮುಗುರುದ ನತ್ತ್
ಕರಿಮುಗಲ್‍ದ ರವಕೆನ್
ಗೆತ್ತ್‍ದ್ ಬೊಳ್ಳುಗಲ್‍ಡ್
ಕೊರಿಯಲ್ ಪೊಸತ್

ಮೂಲ : **ಕಡೆಂಗೋಡ್ಲು ಶಂಕರ ಭಟ್ಟ**

(ತರ್ಜುಮೆ : **ಸಂಪಾದಕೆ**)

[1] ಮಿನದನ – ಸಂಭ್ರಮ, ವೈಭವ, [2] ಆವಡ್ – ಗೊರಸು, [3] ಬಾಕುಡೆ ಮೆಂಚಿ – ಕೋಲ್ಮಿಂಚು

ಆಟಿಕಳೆಂಜ

ಜಿ.ಎಸ್. ಲಕ್ಷ್ಮಣ ಪೈ

ಕುಣಿಯುತ ಬರುವನು ಆಟಿಕಳೆಂಜ!
ಕೆಂಬಣ್ಣದ ಕುಪ್ಪಸವನು ತೊಟ್ಟು
ಎಳೆಮಡಲಿನ ಹೊಸ ಲಂಗವನುಟ್ಟು
ತಲೆಮಣಿ ಧರಿಸುತ, ಕೂದಲು ಬಿಟ್ಟು
ದರ್ಪದ ಭಾರದ ಹೆಜ್ಜೆಯನಿಟ್ಟು –
ಕುಣಿಯುತ ಬರುವನು ಆಟಿಕಳೆಂಜ!

ಓಲೆಯ ಸತ್ತಿಗೆಯೆಡಗೈಯಲ್ಲಿ
ಲೊಕ್ಕಿಯ ಸೊಪ್ಪದು ಬಲಗೈಯಲ್ಲಿ
ಘುರಘುರ ಗಗ್ಗರ ಕಾಲುಗಳಲ್ಲಿ
ಕೇಪುಳ ದಂಡೆಯು ಮೈಕೈಯಲ್ಲಿ –
ಕುಣಿಯುತ ಬರುವನು ಆಟಿಕಳೆಂಜ!

ಹರಿದಳದರಸಿನ ರಂಗನು ಮುಖಕೆ
ಪೂಸಿಹನವನದೊ – ಮೇಲ್ ಮತ್ತದಕೆ
ಕರಿಚುಕ್ಕೆಯನಿಟ್ಟಿರುವನು ತಾನು
ಸುಂದರರಾವಣನಿವನೇ ಏನು? –
ಕುಣಿಯುತ ಬರುವನು ಆಟಿಕಳೆಂಜ!

ಮನೆಮನೆಗೈದುತ ನಲಿದಾಡುವನು !
ಹಪ್ಪಳ, ಸಾಂತಣಿಗಳ ಬೇಡುವನು !
''ಭತ್ತವ ಕೊಡಿರೆ''ಂದುರೆ ಕಾಡುವನು !

ಹುಣಿಸೆಬೀಜಕೆ ಕೈ ನೀಡುವನು ! –
ಕುಣಿಯುತ ಬರುವನು ಆಟಿಕಳೆಂಜ !

ತೆಂಬರೆ ಬಡೆವವನವನೀ ಊರ
ರಕ್ತೇಶ್ವರಿಯಾ 'ಸಿರಿಮುಡಿಗಾರ!'
ಭೂತಕೆ ಕೋಲವ ಕಟ್ಟಲು ಶೂರ !
ಒಮ್ಮೆಯೆ ಕುಡಿವನು ನೂರೆಳನೀರ !
ಕುಣಿಯುತ ಬರುವನು ಆಟಿಕಳೆಂಜ !

ಆಟಿಕಳೆಂಜನ ವೇಷದ ಹುಡುಗ
ತೆಂಬರೆ ಬಡೆವವನಕ್ಕರೆಯಣುಗ,
ಕುಣಿತದೊಳೀತನು ಹೆಚ್ಚಿನ ಸೊಬಗ
ಬೀರುವನಿವನೇ ಮುಂದಿನ 'ಮುಡಿಗ'
ಕುಣಿಯುತ ಬರುವನು ಆಟಿಕಳೆಂಜ !

ಆಟಿಕಳೆಂಜೆ

ನಲಿತ್‌ದ್ ಬರ್ಪೆ ಆಟಿಕಳೆಂಜೆ [1]
        ಕೆಂಪು ಬಣ್ಣೊದ ಅಂಗಿನ್ ಪಾಡ್‌ದ್
        ತಿರಿತ್ತ ಪೊಸ ಕುಂಟು ತುತ್ತ್‌ದ್
        ತರೆಮಣಿ ಕಟ್ಟ್‌ದ್ ಕೂಜಲ್ ಬಿರ್ಕ್‌ದ್
        ಗಟ್ಟಿದ ದುನ್ನೊದ ಪಜ್ಜೆನ್ ಊರ್‌ದ್
ನಲಿತ್‌ದ್ ಬರ್ಪೆ ಆಟಿಕಳೆಂಜೆ !

        ಓಲೆದ ತತ್ರ ದತ್ತ್‌ಕೈಟ್ಟ್
        ನೆಕ್ಕಿದ ತಪ್ಪು ಬಲತ್ತ್‌ಕೈಟ್ಟ್
        ಘರಘರ ಗಗ್ಗರೊ ಕಾರ್‌ಲೆಡ್
        ಕೇಪುಳ ಜೊಂಕಿಲ್ ಕೈಮ್ಮೈಟ್ಟ್
ನಲಿತ್‌ದ್ ಬರ್ಪೆ ಆಟಿಕಳೆಂಜೆ !

        ಅರ್ದಲ್[2] ಮಂಜಲ್ ರಂಗ್‌ನ್ ಮೋನೆಗ್
        ಪೂಜಿದೆ ತೂಲೆ, ಮೇಲ್‌ಗ್ ಅೈಕ್ಕ್
        ಕರಿಬೊಟ್ಟುನು ಬೈತ್‌ದೆ
        ಸುಂದರ ರಾವಣೆ ಇಂಚ್ಯೆನ ದಾದ?
ನಲಿತ್‌ದ್ ಬರ್ಪೆ ಆಟಿಕಳೆಂಜೆ !

        ಇಲ್ಲ್ ಇಲ್ಲಗ್ ಪೋದು ನಲಿಪ್ಪೆ
        ಹಪ್ಪಳ ಸಾಂತಣಿ[3] ಕೇಂಡ್‌ದ್ ತಿನ್ಪೆ
        ಬಾರ್ ಕೊರ್ಲೆಂದ್ ನಟ್ಟ್‌ದ್ ಕೇನ್ಪೆ
        [4]ಪುಳಿಂಕೊಟೆ ಕೊರ್‌ಂಡ ಗೆತೊನ್ಪೆ ತೂಲೆ
ನಲಿತ್‌ದ್ ಬರ್ಪೆ ಆಟಿಕಳೆಂಜೆ !

ಊರುಡು ತೆಂಬರೆ ಬೊಟ್ಟುನಿ ಆಯೆ
ಲೆಕ್ಕೇಸಿರಿನ ಸಿರಿಮುಡಿಗಾರೆ
ಭೂತಕೋಲೊನು ಕಟ್ಟುನ ಬೀರೆ
ನೂದು ಬೊಂಡೊನು ಒರೊನೇ ಪರ್ಪೆ
ನಲಿತ್‌ದ್ ಬರ್ಪೆ ಆಟಿಕಳೆಂಜೆ !

ಆಟಿ ಕಳೆಂಜನ ವೇಸೊದ ಹುಡುಗೆ
ತೆಂಬರೆದಾಯನ ಮೋಕೆದ ಮಗೆಗೆ
ನಲಿಕೆಡ್ ಆಯನ ಬಿರ್ಸ್‌ನ್ ಕೇನಿ
ದುಂಬಗ್ ಇಂಬ್ಯೆನೆ ದೈವೊದ ಮಾನಿ[5]
ನಲಿತ್‌ದ್ ಬರ್ಪೆ ಆಟಿಕಳೆಂಜೆ !

ಮೂಲ : ಜಿ.ಎನ್. ಲಕ್ಷ್ಮಣ ಪೈ
(ತರ್ಜುಮೆ : ಸಂಪಾದಕ)

[1] ಆಟಿಕಳೆಂಜೆ – ಆಷಾಢ (ಆಟಿ) ತಿಂಗಳಲ್ಲಿ ತುಳುನಾಡಿನಲ್ಲಿ ನಡೆಯುವ ಒಂದು ಜನಪದ ಕುಣಿತ.

[2] ಅರ್ದಲ – ಭೂತನರ್ತಕರು ಮುಖವರ್ಣಿಕೆಗೆ ಹಚ್ಚಿಕೊಳ್ಳುವ ಹಳದಿಬಣ್ಣದ ಮುಲಾಮು

[3] ಸಾಂತಣಿ – ಹಲಸಿನ ಬೀಜ ಬೇಯಿಸಿ ಬಿಸಿಲಲ್ಲಿ ಒಣಗಿಸಿದ ಕುರುಕಲು ತಿಂಡಿ.

[4] ಪುಳಿಂಕೊಟೆ – ಹುರಿದ ಹುಣಸೆ ಹುಳಿಬೀಜ

[5] ದೈವೊದ ಮಾನಿ – ಭೂತ ಪಾತ್ರಧಾರಿ.

ಆಟಿಯ ಹುಣ್ಣಿಮೆ

ಪೇಜಾವರ ಸದಾಶಿವ ರಾವ್

ನಸುಕನು ಎತ್ತಿ ಬೆಳಕನು ಬಿತ್ತಿ
ಬಂದನು ರವಿ ಆರುಣಾಚಲ ಹತ್ತಿ.

ಉದಯದ ಗೀತ ಸುರಸಂಗೀತ
ಸೀಳುತ ಬರುವುದು ಸುರಭಿಯ ವಾತ
ಎಲರಿನ ಸೊಂಪು ಅಲರಿನ ಕೆಂಪು
ಹರಿಸುತಲಿರುವುದು ಕಂಗಳ ಜೊಂಪು
ಮುಗುಳುಗಳಧರವನು - ದಿನಪನು
ಚುಂಬಿಸಿ ಚದರುವನು.

ಎಳೆಬಿಸಿಲನ್ನು ನೆಲಜಲವನ್ನು -
ತಬ್ಬುತಲೋಕವ ಬೆಳಗುವುದಿನ್ನು
ಪಯಿರಿನ ತೆನೆಯು ಕಂಪಿನ ಮೊನೆಯು
ಮಂಗಳದುಷೆ ರಮಣಿಯ ಮನೆಯು
ದುಂಬಿಯದಂಡು ಹಕ್ಕಿಯ ಹಿಂಡು
ಹಾರುತಲಿರುವುದು ಗಿಳಿವಿಂಡು
ಎಳೆಬಿಸಿಲಾಡುತಿದೆ - ಈಗಲೆ
ಕತ್ತಲೆಯೋಡುತಿದೆ.

ಹಾಸನು ಬಿಟ್ಟು ಕುಂಕುಮವಿಟ್ಟು
ಬಾರೇ ಸೊಬಗಿನ ಸೀರೆಯನುಟ್ಟು

ಹೂಗಳನಾಯ್ದು ತಳಿರನು ಕೊಯ್ದು
ಮರಳುವ ಪೂಜೆಗೆ ಮಾಲೆಯ ನೆಯ್ದು;

ನೀನೆ ತಾರೇ ಮೋಹದ ನೀರೇ
ಆಟಿಯ ಹುಣ್ಣಿಮೆಯಾಟಕೆ ಬಾರೇ
ಬೆಳಕದು ಏರುತಿದೆ – ಮೂಡಲು
ಕೆಂಪನು ಕಾರುತಿದೆ.

ಏನೀ ಹಜ್ಜೆ? ಏತಕೆ ಲಜ್ಜೆ?
ಎಲ್ಲಿ ಕಲಿತ ವೈಯಾರದ ಬಿಜ್ಜೆ?
ಆಟಿಯ ಮುಗಿಲು ಮಳೆಯಲಿ ಮಿಗಿಲು
ನೋಡದೊ ನಭದಲಿ ಸಿಡಿಲಿನ ದಿಗಿಲು
ಬಿಲ್ಲಿನ ಬಣ್ಣ ಕಟ್ಟಿದೆ ಕಣ್ಣ
ಬಾರೇ ಬಿಲ್ಲದು ಮುರಿಯುವ ಮುನ್ನ
ಕತ್ತಲೆ ಕೂಡಲಿದೆ – ರೊಯ್ಯನೆ
ಗಾಳಿಯು ತೀಡಲಿದೆ.

ಏನನು ಮರೆತೆ? ಸಿಂಗರ ದೊರತೆ?
ನಿನಗಿರುವದೆ ನಗನಟ್ಟನ ಕೊರತೆ?
ಕೊರಳಿನ ಸುತ್ತ ಹನಿಗಳ ಮುತ್ತ
ಪೋಣಿಸಿ ಕಟ್ಟುವೆ ನೀ ಬಾರಿತ್ತ
ತಳಿರಿನ ಬಳೆಯ ಕಮಲದ ಕಳೆಯ
ತೊಡಿಸುತ ಕೊಯ್ಯುವೆ ಸೊಬಗಿನ ಬಳೆಯ
ಗಗನವು ಮಳೆ ಸೂಸೆ–ನಿನಗಿದೆ
ಪನಿ ಕುಳಿರಿನ ಸೇಸೆ.

ವಾಸೂ ಶರದೂ ನಮ್ಮನು ಕರೆದು
ಬರದಿರೆ ಸಾರಿಹರೆಲ್ಲರ ತೊರೆದು
ಸೀನೂ ಸರಸೀ ನಮ್ಮನು ಅರಸಿ
ಸಿಗದಿರೆ ಹೊರಟರು ದಾರಿಯ ಮರೆಸಿ
ಹೊಲವನು ಸಾರಿ ವನವನು ತೂರಿ

ತುಂಬಲು ಬುಟ್ಟಿಯ ಬೆಟ್ಟವನೇರಿ
ಹೂಗಳ ಹುಡುಕುವರು - ಗೆಳೆಯರು
ಹುಡುಕುತ ದುಡುಕುವರು?

ಆಟಿಯ ಹೂವು ಸೋಣದ ಹೂವು
ಕೆರೆಗಳ ದಡದಲಿ ಬೆಳೆದಿಹವು
ಆರಳಿನ ಹೂವು ಹುರುಳಿಯ ಹೂವು
ಅಂಗಳದೆಡೆಯಲಿ ಅರಳಿಹವು
ವಧುವಿನ ಹೂವು ಆದುರಿನ ಹೂವು
ವನದಲಿ ಸೊಬಗನು ತಳೆದಿಹವು
ವಿಧವಿಧ ತಳಿರಿಹವು - ಹೊಸ್ತಿಲ
ಹೊದಿಸಲು ಸೊಬಗಿನವು.

ಹುಣ್ಣಿಮೆ ಸೊಂಪು ಹೂಗಳ ಕಂಪು
ಆಟಿಕೊಡಂಜಿಯ ಪದಗಳ ಇಂಪು
ಮಳೆಗಳ ಒಲವು ಬೆಳೆಗಳ ಚೆಲುವು
ಹರಿದೋಡುವ ಕೆರೆ ತೊರೆಗಳ ನಲಿವು
ಮುಗಿಲಿನ ಕಪ್ಪು ಬಿಸಿಲಿನ ಬೆಪ್ಪು
ಚೆಲುವಿನ ತೌಳವ ತಿಂಗಳಿಗೊಪ್ಪು
ತುಳುವರ ಹಬ್ಬವಿದು - ಹುಣ್ಣಿಮೆ
ಹಬ್ಬದ ಕಬ್ಬವಿದು.

ಆಟಿದ ಪುಣ್ಣಮೆ

ಪುಲ್ಯನ್ ದೆರ್ತ್‌ದ್ ಬೊಲ್ಲುನು ಬಿರ್ಕ್‌ದ್
ಬತ್ತೆ ನೇಸರ್ ಅರುಣಾಚಲ ಬಡತ್ತ್‌ದ್

ಪುಲ್ಯದ ಗೀತೊ ಸುರಸಂಗೀತೊ
ಒಯ್ತ್‌ದ್ ಬರ್ಪುಂಡು ಕಮ್ಮೆನ ಸೀತೊ
ತಪ್ಪುದ ಸಂಪು ಪುರ್ಪೊದ ಕೆಂಪು
ತೂಂಕುನ ಕಣ್ಣ್ ಪರಿತೊಂದುಂಡು
ಮುಗ್ಗೆ ಬಿಮ್ಮೊಗು – ಅರಳುನ ಪೊರ್ತು[1]
ಮುತ್ತು ಕೊರುದು ಪೋವೊಂದುಲ್ಲೆ

ಕಾಂಡೆದ ದೊಂಬುನು ನೀರ್‌ನ್ ನೆಲನ್
ತರ್ಕ್‌ದ್ ಲೋಕೊನು ಬೆಳಗೊಂದುಲ್ಲೆ
ತೂಂಕುನ ಕುರಲ್ ಕಮ್ಮೆನೊ ಪಜಿರ್
ಮಂಗಲ ಬೂಮ್ಯಪ್ಪೆನ ಇಲ್ಲ್
ದುಂಬಿದ ದಂಡ್ ಪಕ್ಕಿಲೆ ಪುಂಡು
ರಾವೊಂದುಂಡು ಗಿಳಿಕೊರುಂಗು
ಕಾಂಡೆದ ದೊಂಬು ಗೊಬ್ಬೊಂದುಂಡು – ಇತ್ತೆಲ
ಕತ್ತಲೆ ಪಾರೊಂದುಂಡು

[2]ಬಕ್ತಲೆ ಗೆತ್ತ್‌ದ್ ಕುಂಕುಮ ದೀದ್
ಬಲ್ಲಿಯ, ಎಡ್ಡೆ ಸೀರೆನ್ ತುತ್ತುದ್
ಪುರ್ಪೊನು ಅಜತ್ತ್‌ದ್ ಕೊಡಿನೆ ಕಿನ್ಕ್‌ದ್
ಪೋಯಿ ಪೂಜೆಗ್ ಮಾಲೆನ್ ನೈದ್
ಈಯೇ ಮಿನ್ಕ್[3] ಮೋಕೆದ ನಿಲ್ಕ್
ಆಟಿದ ಪುಣ್ಣಮೆದಾಟೊಗು ಬಲಯ
ದೊಂಬು ಏರೊಂದುಂಡು – ಮೂಡಯಿ
ಕೆಂಪು ತೋಜುಂಡು

ಎಂಚಿನ ಪಜ್ಜೆ! ಎಂಚಿನ ಲಜ್ಜೆ
ಓಲು ಕಲ್ತ ಸೇಲೆದ[4] ಬಿಜ್ಜೆ
ಆಟಿದ ಮುಗಲ್ ಬರ್ಸೊಡು ಜೋರು
ತೂಲಯ ಅಕ್ಕಸೊ ತೆಡಿಲ್‍ದ ಮಾರ್
ಬಿರುತ್ತ ರಂಗ್ ಕಟ್ಟ್‌ಂಡ್ ಕಣ್ಣ್
ಬಲ್ಲ್‌ಯ ಬಿರು ಪೋಪುನ ದುಂಬು
ಕತ್ತಲೆ ಮಾಜೊಂದುಂಡು – ಸುಂಯ್ ಸುಂಯ್
ಗಾಳಿ ಬೀಜೊಂದುಂಡು

ಎಂಚಿನ ಮದತಿನಿ? ಸಿಂಗರದೊಸರ್?
ನಿಕ್ಕುಂಡಾ ನಗನಾಣ್ಯೊದ ಆಸರ್?
ಕೆಕ್ಕಿಲ್ ಸುತ್ತೊಲ ಪನಿಕ್ಕುಲೆ ಮುತ್ತು
ನೆಯ್ತ್‌ದ್ ಕಟ್ಟುವೆ ಈ ಬಲ ಇಂಚಿ
ತೆಗ್‍ಲ್‍ದ ಕಾಜಿ ತಾಮರೆ ತೆಲಿಕೆ
ನಿಕ್ಕೇ ಕೊರ್ಪೆ ಸೇಬಿದ ಮುಗ್ಗೆ
ಪನಿ ಪನಿ ಬೂರುನ ಬರ್ಸೊ – ನಿಕ್ಕುಂಡು
ಮೈಂದ್‍ದ ಸೀಮೊ[5] ಸೇಸೆ

ವಾಸೂ ಶರದೂ ಎಂಕ್ಲೆನ್ ಲೆತ್ತ್‌ದ್
ಅಕುಲೇ ಪೋಯೆರ್ ಮಾತಲ ಬುಡುದು
ಸೀನೂ ಸರಸಿ ಎಂಕ್ಲೆನ್ ನಾಡ್‍ದ್
ತೂವಂದೆ, ಪೋಯೆರ್ ಅಕುಲೆನ ಸಾದಿಡ್
ಕಂಡೊಡು ಪೋದು ಕಾಡ್‍ನ್ ತೂದು
ಕುರ್ವೆ ದಿಂಜದ್ ಗುಡ್ಡೆನ್ ಏರ್‍ದ್
ಪುಪ್ಪೊನು ನಾಡುವೆರ್ – ಇಷ್ಟೆರ್
ನಾಡ್‍ದ್ ಬಚ್ಚುವೆರ್?

ಆಟಿದ ಪೂವು ಸೋಣೊದ ಪೂವು
ಕೆದು ತುದೆ ಬರಿಟ್ಟ್ ಬುಲೆದ್‍ಂಡ್
ಆರೆಲಿನ ಪೂವು ಬಿರಿದಿನ ಪೂವು
ಜಾಲ್‍ದ ಇಡೆಟ್ಟ್ ತೋಜುಂಡು

ಮದಿಮಲೆ ಪೂವು ಗೊಂಚಿಲ್ ಪೂವು
ಏತೊಂಜಿ ಪೂ ಉಂಡು – ಸೋಣೊದ
ಪೂಜೆಗ್ ಪೊರ್ಲುಂಡು

ಪುಣ್ಣಮೆ ಬಿಮ್ಮನೊ ಪೂಕುಲೆ ಕಮ್ಮೆನೊ
ಆಟಿಕಳೆಂಜನ ಪದ ಉಂಡು
ಬರ್ಸೊದ ಸೊಯ್ಪು ಬುಲೆಕ್ಕುಲೆ ಒಯ್ಪು
ಒಯ್ಲ್‌ದ ಸುದೆ ತೋಡುದ ನಲಿಪ್ಪು
ಮುಗಲ್‌ದ ಕಪ್ಪು ದೊಂಬುದ ಬೆಪ್ಪು
ಪೊರ್ಲುದ ತೌಳವ ತಿಂಗೊಲುಗೊಪ್ಪು
ತುಳುವೆರೆ ಪರ್ಬ ಉಂದು – ಪುಣ್ಣಮೆ
ಪರ್ಬೊದ ಕಬಿತೊ ಉಂದು.

ಮೂಲ : **ಪೇಜಾವರ ಸದಾಶಿವ ರಾವ್**
(ತರ್ಜುಮೆ : ಸಂಪಾದಕೆ)

[1] ಪೊರ್ತು – ನೇಸರ್, ಸೂರ್ಯ, ಸಮಯ
[2] ಬಕ್ತಲೆ – ಬೈತಲೆ
[3] ಮಿನ್ಕ್ – ಮಿನುಗು
[4] ಸೇಲೆ – ವಯ್ಯಾರ
[5] ಬಿರು – ಅಜ್ಜಬಿರು, ಕಾಮನಬಿಲ್ಲು
[6] ಸಿಮೊ – ಚಳಿ
[7] ಕುರ್ವೆ – ಸಣ್ಣ ಬುಟ್ಟಿ

ತುಳುನಾಡ ಹಾಡು

ಸೇಡಿಯಾಪು ಕೃಷ್ಣಭಟ್ಟ

೧

ಮುನ್ನೀರ ಮಡಿಲ ಹಸುಳೆ – ತುಳುನಾಡೆ!
ಎನ್ನ ತಾಯ್, ತಂಗೆ, ಮಗಳೆ!
ಕಂಡೆ ನೂರೂರ ನಾಡಾಡಿ – ನಾನಕ್ಕ
ಕಂಡಿಲ್ಲ ನಿನ್ನ ಸರಿಜೋಡಿ.
ನಿನ್ನ ಬೆವರಿನ ಗಾಳಿ ಬಂದು ತಟ್ಟಿದರೊಡನೆ
ತುಂಬಿ ತುಳುಕುವುದು ನರನಾಡಿ!

೨

ನಿನ್ನ ನಿಮ್ನೋನ್ನತ ಶರೀರ – ಓ ತಾಯೆ!
ಮನ್ಮಶಃ ಶಿಶು ಸುಖ ವಿಹಾರ!
ನಿನ್ನ ಗಿಡ ಮರ ಹುಲ್ಲು, ನಿನ್ನ ಖಗಮೃಗ ಕಲ್ಲು,
ಎಲ್ಲವೂ ಎನ್ನ ಸಂಸಾರ!

೩

ಕಾಡು ಕಣ್ಣಿಗೆ ಕಾಡಿಗೆ, – ಹಸುರುಗುವ
ಬೈಲು ಹೃದಯಕೆ ಹಾಸಿಗೆ, – ತೆಂಗಡಕೆ
ತೋಟ ಮಾನಸಕೆ ಸುಸ್ವಾಗತದ ಮಂಟಪ, ಗ –
ಬೀರ ಜಲನಿಧಿಯ ತೆರೆ ಭಾವಕುಡುಗೊರೆ, ಇಂಥ
ನಾಡಿನಲಿ ಕಣ್ ತೆರೆದುದೆನ್ನ ಪುಣ್ಯ !
ಹಾಡಿ ಹೊಗಳುತ ನಿನ್ನನಪ್ಪೆ ಧನ್ಯ!

೪

ನಿನ್ನ ನೀರೆಲ್ಲ ಸೀನೀರು – ಸೌಳೆಂಬ
ಸೊಲ್ಲ ಕಿವಿಯಲ್ಲಿ ಕೇಳ್ವರಾರು? – ಬರಗಾಲ –
ವನ್ನಿಲ್ಲಿ ಕಂಡವರು ಯಾರು?
ನಿನ್ನ ಬಯಲುಗಳಲ್ಲಿ ಕೆಯ್ ಕುಣಿಯದಿರುವ ದಿನ –
ವೆಲ್ಲುಂಟು? ಇಂಥ ಸೊಬಗೆಲ್ಲುಂಟು? ಎಲ್ಲುಂಟು?

೫

ಘಟ್ಟಗಳ ಗರ್ಭದಿಂದ – ಸೌಂದರ್ಯ
ಘಟ್ಟಿಗಳೆ ಕರಗಿ ಬಂದ – ನೂರಾರು
ದಿಟ್ಟ ತೊರೆಗಳ ಕಲಕಲ – ನಿನ್ನುರದಿ
ಪುಟ್ಟ ಮಕ್ಕಳ ಕಿಲಕಿಲ !

೬

ಕಡಲ ತೆರೆ ಕಾಲ್ಗೆಜ್ಜೆಯಾಗಿ – ರಭಸದಲಿ
ಹರಿವ ಹೊಳೆಗಳೆ ತೋಳ್ಗಳಾಗಿ – ಮಿಂಚೆಸಳ್
ಚಪಲ ನಯನ ವಿಲಾಸವಾಗಿ – ಬೀಸುತಿಹ
ಬಿರುಗಾಳಿ ಚಾರಿನಡೆಯಾಗಿ – ತೆಂಗುಗಳ
ತೊನೆತ ಹಸ್ತಾಭಿನಯವಾಗಿ – ವನಮಹೀ –
ರುಹಕಂಪವನುಭಾವನಾಗಿ – ಜಲಧಾರೆ –
ಯುಲಿಯೆ ತಂತ್ರೀ ಘೋಷವಾಗಿ – ಅಂಭೋದ
ನಿನದವೆ ಮೃದಂಗರವವಾಗಿ, – ಹಗಲಿರುಳು
ಬಿಡಿದುಗ್ಗಡಿಪ ನಿನ್ನ ವರ್ಷರ್ತುಲಾಸ್ಯಕ್ಕೆ
ಸರಿದೊರೆಯ ಭವ್ಯನಾಟ್ಯವ ಕಂಡರುಂಟೆ?
ನೆನೆಯೆ ಮನವೆಸಳೆಸಳ ತೆರೆಯದುಂಟೆ?

೭

ಮನೆಯ ನೆಲ ಕರಿಮಣಿಯ ಫಲಕ, – ಮುಳಿಮಾಡು
ತಲೆಬಾಚಿ ಕುಳಿತ ಮುತ್ತೈದೆಯಲಕ,
ಚತುರಸ್ರವೇದಿಯಲಿ ಪರಮ ಪಾವನ ತುಲಸಿ
ಮನೆಮನೆಯ ಅಂಗಳದ ತಿಲಕ – ಶುಚಿರುಚಿಗೆ
ಸರಳತೆಗೆ ಭಾವುಕತೆಗೆಂಥ ಎರಕ !

೮

ನಿನ್ನ ಹಿತ್ತಲ ಗಿಡಗಳಲ್ಲಿ – ಹೂವಿಂದು
ಇಲ್ಲವೆನ್ನುವ ಮಾತದೆಲ್ಲಿ? – ಬಿಡುವಿರದ
ನಿನ್ನ ಹೆಂಗಳ ಮುಡಿಗಳಲ್ಲಿ – ಹೂವಿಲ್ಲ –
ವೆಂಬುದನು ಕಾಂಬರಾರಿಲ್ಲಿ?

೯

ನಡೆವ ಹೊಂಗೇದಗೆಗಳು, – ಮೆಲುನುಡಿಯೊ –
ಳಡಿಯಿಡುವ ಮಲ್ಲಿಗೆಗಳು, – ಹುರಿದುಂಬಿ
ಪುಟ ನೆಗೆವ ಚೆನ್ನ ಚೆಂಡುಗಳು, – ನಿನ್ನ ಮಂ–
ಗಳ ಭುವಿಯ ಯುವ ಕಿಶೋರಗಳು – ನೋಳ್ಪವರ
ನಯನ ಸಾಮ್ರಾಜ್ಯದರಸುಗಳು !

೧೦

ನೀಲ ಮೇಘದಲಿ ಕಡೆದಿಹೆಯೋ? – ನೀನವರ
ಸೌದಾಮಿನಿಯಲಿ ಸಮೆದಿಹೆಯೋ? – ಮತ್ತೇನು
ಹಾಲ ಹದಿಯಲಿ ನಿರ್ಮಿಸಿಹೆಯೋ? – ಅಲ್ಲದಿರೆ
ಈ ಹೊಳೆವ ಕರಿಯ ಮೆಯ್, ಈ ಹೊಗರ ಬೆಣ್ಣೆ ಮೆಯ್.
ಈ ಮೊಗದ, ಈ ಕಣ್ವ, ಈ ಹಲ್ಲ ಚೆಲುವ ಮೆಯ್
ಬೇರೆಂತು ಬಂತು ಹೇಳಮ್ಮಾ! – ನಾ ಬೇರೆ
ಊರಲ್ಲಿ ಕಂಡೆನಿಲ್ಲಮ್ಮಾ !

೧೧

ನಿನ್ನ ವಾತಾವರಣವಾರ್ದ್ರ, – ಈ ನೆಲದ
ಮಣ್ ಮಳಲ್ ನಿರ್ಮಲ ಜಲಾರ್ದ್ರ, – ಬೆಳೆವೆಲ್ಲ
ಧಾನ್ಯ ಹಣ್‌ಕಾಯತಿ ರಸಾರ್ದ್ರ, – ನಿನ್ನವರ
ಉಲ್ಲಸದ ದುಡಿಮೆ ಸ್ವೇದಾರ್ದ್ರ, – ಅತಿಥಿಗಳ
ಕಾಣ್ಬವರ ಕಣ್ಣು ಸ್ನೇಹಾರ್ದ್ರ, – ನೀನಾಂತ
ಚೆನ್ನ ತುಳುವೆಸರ ಪುರುಳಾರ್ದ್ರ – ಓ ತಾಯಿ,
ನಿನ್ನಂತರಂಗ ಬಹಿರಂಗವಾರ್ದ್ರ! – ಸುಮುಖಿ!
ನಿನ್ನ ಮೇಲೀಶನಾಗಿರಲಿ ಕರುಣಾರ್ದ್ರ!

೧೨

ನಿನ್ನ ಜಲ ನೆಲವ ಬಯಸಿ – ಬಂದವರ,
ಅನ್ಯರುಪಟಳಕೆ ಪರಿತಪಿಸಿ – ಬಂದವರ
ಎಲ್ಲವರ ಇಲ್ಲಿಯೇ ಇರಿಸಿ, – ಮಕ್ಕಳೇ!
ಉಣ್ಣಿರೆಂದೆದೆ ಹಾಲ ಸುರಿಸಿ – ಮೆಯ್ವೊತ್ತಿ,
ಒಂದೊಂದು ನುಡಿಯ ಮೇಣೊಂದೊಂದು ನಡೆಯ ಜನ –

ವೊಂದಾಗಿ ಬಾಳ್ವಂತೆ ಹರಸಿ – ಪಾಲಿಸಿದೆ
ತಂದೆ ನೀ ತಾಯಿ ಅರಸಿ!

೧೩

ನಿನ್ನ ನಾನಾ ದೈವಗಳನು – ದೇವರನು
ಬಾಂಧವ್ಯದಲಿ ಬೆಸೆದು ನೀನು,
ಒಂದೆ ಸತ್ಯದ ಶಕ್ತಿಯೊಂದು ಸಾವಿರವಾಗಿ
ನಂಬಿದರ ಕಾಪಿಡುವುದೆಂಬ ಪರಮಾರ್ಥವನು
ಬಿಂಬಿಸಿದ ಜಾಣ್ಮೆಗಾರ್ ಮಣಿಯರಮ್ಮಾ!
ಒಂದೆ ಮನದೊಂದು ಜನತೆಯ ಗೈದೆ ನಮ್ಮ.

೧೪

ತೊದಲೊ ಜಲ್ಪವೊ ಮುದ್ದು ನುಡಿಯೋ, – ಹಸುಗೂಸಿ –
ನುಲಿಗೆ ಮನಸೋತದನೆ ತಾಯುಲಿಯಳೋ? – ಅಂತೆ
ತುಳುವೊ ಕನ್ನಡವೊ ಕೊಂಕಣಿಯೊ, – ಪುತ್ರ ವ-
ತ್ಸಲೆ! ನಿನ್ನ ಹೊನ್ನುಡಿಗಳಾಗಿವೆಯಲೋ? – ನೀನು
ತುಳು ತಾಲಿ ಕಟ್ಟಿ, ಕನ್ನಡದೋಲೆಯಿಟ್ಟು, ಕೊಂ –
ಕಣಿ ಕಂಕಣವ ತೊಟ್ಟ ಮಾಂಗಲ್ಯ ಮೂರ್ತಿ!
ನಮಿಪೆ ಓ ಕನ್ನಡಿತಿ, ನಮಿಪೆ ಓ ಕೊಂಕಣಿತಿ,
ನಮಿಪೆ ಓ ತುಳುವಿತಿ, ಶ್ರೀಭಾರತಿ.

ತುಳುನಾಡ ಪದೊ

೧

ಕೊಡಿಯಾಲೊದ ಮಟ್ಟೆಲ್ದ ಬಾಲೆ - ತುಳುನಾಡೆ!
ಎನ್ನಪ್ಪೆ, ತಂಗಡಿ, ಮಗಳೆ!
ತೂಯೆ ನೂದೂರ್ದ ನಾಡಾಡಿ - ಯಾನಕ್ಕೆ
ತೂತ್‌ಜ್ಜಿ ನಿನ್ನ ಸರಿಸಮ
ನಿನ್ನ ಬೆಗರ್ದ ಗಾಳಿ ತಾಗಿಬೆಟ್ಟ್‌ಗೆ
ದಿಂಜ್‌ದ್ ಕುಕ್ಕೆರುಂಡೆನ್ನ ಮೈ ರೋಮ!

೨

ನಿನ್ನ ಏರ್‌ತಗ್ಗ್‌ದ ಮೈ - ಓ ಅಪ್ಪೆ!
ಮೋಕೆ ಬಾಲೆಗ್ ಸುಖವಿಹಾರೊ !
ನಿನ್ನ ದೈಮರ ಪಂತಿ, ನಿನ್ನ ಮುರ್ಗೊ ಪಕ್ಕಿ ಕಲ್ಲ್
ಮಾತಲ ಎನ್ನ ಸಂಸಾರೊ!

೩

ಕಾಡಕಣ್ಣ್‌ಗ್ ಕಾಡಿಗೆ - ಪಚ್ಚೆ ಮುಗುರುನ
ಬೈಲುಡಲ್‌ದ ಪಜೆ - ತಾರೆ ಕಂಗ್
ತೋಟೊ ಮನಸ್‌ಗ್ ಎದ್ಕೊನುನ ಮಂಟಪೊ ಗಾಂ-
ಭೀರ ಕಡಲ್‌ದ ಸೆರೆ ಭಾವೊ ಕಾನಿಗೆ, ಇಂಚಿ
ನಾಡ್‌ಡ್ ಪುಟ್ಟುದಿನ ಎನ್ನ ಪುಣ್ಯೊ!
ಸುಗಿತ್‌ದ್ ತರ್ಕ್‌ಂಡ ಯಾನೆ ಧನ್ಯ!

೪

ನಿನ್ನ ನೀರ್ ಚೀಪೆ - ಸೌಳು ಪನ್ಪಿ
ಪಾತೆರೊ ಕೇನ್ಬೆರೇರ್? - ಬರಗಾಲೊ
ಮೂಲು ತೂತಿನೇರ್?
ನಿನ್ನ ಬೈಲ್‌ಡ್ ಕಯ್ ತೋಜಂದಿ ದಿನ-
ವೋಲುಂಡು? ಇಂಚಿ ಸೇಬಿ ಓಲುಂಡು? ಓಲುಂಡು?

೫

ಗಟ್ಟದ ಬಂಜಿಡ್ದ್ - ಪೊರ್ಲು
ಗಟ್ಟ ಕರಗ್‌ದ್ ಬತ್ತಿ - ನೂತೆಣ್ಮ
ತೋಡು ಸುದೆಕ್ಕುಲೆ ಕಲಕಲ - ನಿನ್ನುಡಲ್‌ಡ್
ಎಲ್ಯ ಜೋಕ್ಲೆ ಕಿಲಕಿಲ!

೬

ಕಡಲಸೆರೆ ಕಾರ್ಗಜ್ಜೆಯಾದ್ - ರಭಸೊಡು
ಪರಿಪಿ ಸುದೆತೋಡಲು ಕೈಯಾದ್ - ಮೆಂಚಿದೆಸಳ್
ಆಸೆ ಕಣ್ಣ್‌ದ ಒಂಜಿ ವಿಲಾಸೊನೆ ಆದ್ - ಬೀಜುನ
ಬಿರುಗಾಳಿ ಚಾರಿ ನಡೆಯಾದ್ - ತಾರೆದ
ಬಲಂಕಾಟಿಕೆ ಹಸ್ತಾಭಿನಯವಾದ್ - ಕಾಡ್‌ಡ್
ಬೀಜುನ ಗಾಳಿ ಅನುಭಾವೊವಾದ್ - ಬರ್ಸೊದ
ಸಬ್ದೊನೇ ತಂತ್ರೀಘೋಷವಾದ್ - ಅಕ್ಕಸೊದ
ಆರ್ಭಟೊ ಮೃದಂಗರವವಾದ್ - ರಾತ್ರಿಪಗೆಲ್
ಸೊಯ್ಪುನ ನಿನ್ನ ಬರ್ಸೊದ ಲಾಸ್ಯೊಗು
ಸರಿಯಾಪಿ ಭವ್ಯನಾಟ್ಯೊನು ತೂತಿನೇರ್?
ನೆನೆತ್‌ಂಡ ಎಸಳೆಸಳಾದ್ ಕೋರ್ಪಿನೇರ್?

೭

ಇಲ್ಲ ಜಗಲಿಗ್ ಕರಿಮಣ್ಣ ಸಾರಣೆ - ಮುಳಿಮಾಡ್
ತರೆಬಾರ್‌ದ್ ಕುಲ್ದಿನ ಮುತ್ತೇಸಿ ಪೊಣ್ಣು
ಜಾಲ್‌ಡ್ ತೊಲಸಿದ ಕಟ್ಟೆ
ಪ್ರತಿ ಇಲ್ಲಡ್ ಬೊಟ್ಟುದ ಲಕ - ಮಡಿ
ಮೈಲಿಗೆಗ್ ಸರಳತೆಗ್ ಎಂಚಿ ಎರಕ್ಕೊ?

೮

ನಿನ್ನ ಬಿತ್ತ್‌ಲ್‌ಡ್ ಇನಿ ಪೂವಿಜ್ಜಿ
ಪನ್ಪಿ ಪಾತೆರೊನೆ ಇಜ್ಜಿ - ಪುರುಸೊತ್ತು ದಾಂತಿನ
ಪೊಂಜೊಲೆನ ತರೆಟ್ಟ್ - ಪೂವಿಜ್ಜಂದಿನೆನ್
ತೂಯರುಂಡೋ?

೯

ನಡಪಿ ಬಂಗಾರ್‌ಕೇದಿಗ್ಲೆಲಜು - ತೆಲಿತ್‌ದ್ ಮೆಲ್ಲ
ನಡಪಿ ಮಲ್ಲಿಗೆಲು - ತಂಕೊಡು
ತಿಗಲೆದೆರ್ತ್ ನಡಪಿನ ಪೊರ್ಲುದ ಚೆಂಡುಲು - ನಿನ್ನ
ನೆಲೊಟುಪ್ಪುನ ಜವನೆರ್ - ತೂಪಿನಕುಲೆನ
ಕಣ್ಣ್‌ಡ್ ತುಳುನಾಡ್‌ದರಸುಲು!

೧೦

ಕಪ್ಪು ಮುಗಲ್‌ಡ್ ಕೆತ್ಯನೋ - ಈ ಅಕುಲೆನ್
ಸೊರ್ಗೊಡೇ ಉಂಡುಮಲ್ತನೋ - ಬೊಕ್ಕೆಂಚ
ಪೇರ್‌ಡೇ ಉಂಡುಮಲ್ತನೋ - ಬೊಕ್ಕೆಂಚ
ಈ ಪೊಲೆಪ್ಪುನ ಕಪ್ಪುಮೈ, ಬೊಳ್ಳೈದ ಬೊಲ್ದು ಮೈ
ಈ ಮೋನೆದ, ಈ ಕಣ್ಣ್‌ದ, ಈ ಕೂಲಿದ ಪೊರ್ಲು ಮೈ
ಒಲ್ಪಾಡ್ದ್ ಬತ್ತ್‌ಂಡ್ ಪನ್ಲಮ್ಮಾ ಬೇತೆ
ಓಲ್ಲಾ ತೂತ್‌ಜ್ಜಿ ಯಾನಮ್ಮ

೧೧

ಪಸೆದಿಂಜಿ ಪರಿಸರೊ - ಈ ಮಣ್ಣ್‌ದ
ಪೊಯ್ಯೆಲಾ ಮಡಿನಿರ್ಮಲೊ - ಬುಲೆಪಿ
ಪಲಪಂದ್‌ರ್ ಧಾನ್ಯೊಲಾ ರಸಾದ್ರೊ - ಅಕುಲ್ನ
ಬೆಗರ್‌ಸೀಂಟಿನ ಬೆನ್ಪಾಟಿಕೆಲ; ಬಂಧುಲೆನ್
ಮೋಕೆಡೆದ್ಕೊನುನ ಕ್ರಮೊಲಾ ಪೊರ್ಲು - ನಿನ್ನ ಪುದರುಡುಪ್ಪಿ
ತುಳು ಸಬುದೊದರ್ತೊಲಾ ಪಸೆ - ಎಡ್ಡೆ ಮೋನೆದಾಲೇ
ನಿನ್ನ ಮಿತ್ತುಪ್ಪಡ್ ದೇವೆರೆನ ಕರುಣಾರ್ದ್ರ ದೃಷ್ಟಿ!

೧೨

ನಿನ್ನ ನೀರ್ ಮಣ್ಣ್‌ನ್ ಬಯಕ್‌ದ್ ಬತ್ತಿನಕುಲೆನ್
ಬೇತೆದಕಲ್ನ ಉಪದ್ರ ಸೈಸಿಯರಾವಂದೆ ಬತ್ತಿನಕುಲೆನ್
ಮಾತೆರೆನ್ ಮುಲ್ಪನೇ ಕುಲ್ಲಾದ್ - ಜೋಕ್ಲೇ!
ಉಣ್ಲೆಂದ್ ತರ್ಕ್‌ದ್ ಮಿರೆಪೇರ್ ಕೊರ್ದು
ಪತ್ತಪ್ಪೆ ಜೋಕುಲು ಒಂಜಪ್ಪೆ ಬಾಲೆಲಕ
ಒಂಜಾಪಿನ ಮದಿಪು ಕೊರ್ದು - ಬದ್ಕಾಯ
ಅಮ್ಮ ಈ, ಅಪ್ಪೆ ಈ, ಅರಸಿಲಾ ಈಯೇ!

೧೩

ನಿನ್ನ ದೈವೊಲೆನ್ ದೇವೆರೆನ್
ಬಾಂಧವ್ಯೊಡು ಒಂಜಾದ್ ಮಲ್ತ
ಒಂಜಿ ಸತ್ಯೊದ ಸಕುತಿ ಸಾರೊ ಆದ್
ನಂಬಿನಕುಲೆಗ್ ಇಂಬು ಉಂಡು
ಪಂಡಿ ಪಾತೆರೊಗು ಆಡ್ಡ ಬೂರಂದಿನಕುಲೇರ್!
ಎಂಕ್ಲೆನ್ ಒಂಜಾದ್ ಈ ಮಲ್ತ.

೧೪

ಗೊದ್ದೆ ಪಾತೆರೊ ಮುದ್ದು ಪಾತೆರೊ – ಪುರುಬಾಲೆ
ಪಾತೆರೊಗು ಮನಸೋತ್‌ದ್ – ಆಪ್ಪೆಲಾ ಆವೆನೇ ಪಾತೆರುನಂಗೆ
ತುಳುನೊ ಕನ್ನಡನೊ ಕೊಂಕಣಿನೊ – ಕೊಂಡಾಟ–
ದಪ್ಪೆ! ಮಾತ ಬಂಗಾರ್ ಪಾತೆರೊಲು; ಈ
ತುಳುತ್ತ ಕರಿಮಣಿ ಕಟ್ಟ್‌ದ್ ಕನ್ನಡದ ಓಲೆ ದೀದ್ ಕೊಂ–
ಕಣಿದ ಕಡಗ ಪಾಡ್ದ್ ದುತ್ತೈತ ಮೆರೆಪಿ ಮೂರ್ತಿ!
ಸೊಲ್ಮೆಲು ಓ ಕನ್ನಡತಿ, ಸೊಲ್ಮೆಲು ಓ ಕೊಂಕಣಿತಿ
ಸೊಲ್ಮೆಲು ಓ ತುಳುವೆತಿ, ಶ್ರೀ ಭಾರತಿ

ಮೂಲ : **ಸೇಡಿಯಾಪು ಕೃಷ್ಣಭಟ್ಟ**
(ತರ್ಜುಮೆ : **ಸಂಪಾದಕ**)

ತೆಂಗು ತೋಟದ ತೊಟ್ಟಿಲು

ಅಮ್ಮೆಂಬಳ ಶಂಕರನಾರಾಯಣ ನಾವಡ

ತೆಂಗು ತೋಟದ ತೊಟ್ಟಿಲಲ್ಲಿ
ಹಂಚು ಹೊದಿಕೆಯ ಹೊದೆಯುತ
ಮಂಗಳೂರಿನ ಪೇಟೆ ಪಟ್ಟಿದೆ
ಬಿಂಕ ಬಿನ್ನಣದವೆಸೆಯುತ

ನೀಲ ಶರಧಿಯ ತೆರೆಯ ಬೆಳ್ಳಿಯ
ಜರಿಯ ನಿರಿಗೆಯ ಸೀರೆಯ
ಉಟ್ಟ ವಯ್ಯಾರವು ಮನೋಹರ -
ವಾಯ್ತು ಬೆಡಗಿನ ನಗರಿಯ

ಹೊಳೆಯ ನೇತ್ರಾವತಿಯ ಸೆರಗಿನ
ಶೋಭೆ ಕಣ್ಗಳ ಸೆಳೆವುದು
ರಾತ್ರಿ ಮಿಂಚಿನ ದೀಪದಾಭರ -
ಣಂಗಳೋಳಿಯು ಮೆರೆವುದು

ಹಸಿದರುಂಬರು ಮಿರುಗು ಮುತ್ತಿನ
ತೆರದಿ ಶೋಭಿಸುವನ್ನವ
ತೃಷಿತರೀಂಟುವರಿನಿದು ಸೊದೆಯನು
ಮೀರಿಪೆಳೆ ಸೀಯಾಳವ

ಬಾಳೆ-ಪೇರಳೆ-ಮಾವು-ಕಿತ್ತಳೆ
ಹಣ್ಣಿನಂಗಡಿಯೆಸೆವುವು
ಮೊಲ್ಲೆ-ಮಲ್ಲಿಗೆ-ಜಾಜಿ-ಸಂಪಗೆ
ಹೂವಿನಂಗಡಿ ನಗುವುವು

ಕೋಟ–ಹವಿಕರ ಕನ್ನಡದ ನುಡಿ–
ಯೊಡನೆ ತುಳುವರ ತುಳುವುಲಿ
ಗೌಡಸಾರಸ್ವತರ ಕೊಂಕಣಿ
ಬೆರೆತಿರುವುದೇ ಕತೆಯಲಿ

ಕ್ರೈಸ್ತ – ಮುಸ್ಲಿಮರೆಲ್ಲರೂ ಕ–
ನ್ನಡವ ಹಿಂದುಗಳಂತೆಯೆ
ಕಲಿತು ವಿದ್ಯೆಯ ಸಿರಿಯ ಸಾಧಿಸಿ
ಮೆರೆವರೊಂದೇ ರೀತಿಯೆ

ಕೆಂಪು ಹಂಚಿನ ತವರುಮನೆಯಿದು
ಕಂಪು ಮಲ್ಲಿಗೆ ತಾಯ್ಮನೆ
ಗಳಿಗೆ ಗಳಿಗೆಗೆ ಹೊಸತು ಬೆಡಗಿನ
ಹುಡುಗಿಯರಿಗಿದು ನೆಲೆಮನೆ

ಮುಗಿಲ ಮುಟ್ಟುವ ಸೌಧಗಳ ನೆರೆ–
ಯಲ್ಲಿ ಬಡವರ ಗುಡಿಸಲು
ಸಿರಿಯ ನಗು ನಲವುಗಳು ಮರೆಯಲಿ
ಬಡವರಳುವರು ಸುತ್ತಲು

ತಾರೆ ತೋಟೊದ ಉಜ್ವಾಲ್

ತಾರೆ ತೋಟೊದ ಉಜ್ವಾಲ್‌ಡ್
[1]ಓಡಿಲ್ ಮಾಡ್‌ದ ಪುದೆಪುಡು
ಕುಡ್ಲದ ಪೇಂಟೆನೆ ಮೆರೆಪುಂಡು
ಸೇಲೆ ಸೆರಂಗ್‌ನೆ ರಾಪುಂಡು

ಕಪ್ಪು ಕಡಲ್‌ದ [2]ಸೆರೆತ್ತ ಬೊಳ್ಳಿ
ಜರಿತ್ತ ನಿರಿಗೆದ ಸೀರೆದ
ತುತ್ತೊಂದಿನ ವಯ್ಯಾರನೆ ಪೊರ್ಲುಗ
ತೋಜುಂಡು ಬೆಡಗ್‌ದ ಪೇಂಟೆ

ಸುದೆ ನೇತ್ರಾವತಿದ ಸೆರಂಗ್‌ನೆ
ಪೊರ್ಲುಗ ಮನಸ್‌ಡ್ ದಿಂಜ್‌ಂಡ್
ಇರ್ಲ್‌ಗ ಮೆಂಚ್‌ದ ದೀಪಮಾಲೆದ
ಮೆನ್ಕ್ ಮೆನ್ಕಾಟಿಕೆಡ್ ಪೊರ್ಲ್‌ಗಂಡ್

ಬಡವಾಂಡ ಉಣ್ಪೆರ್ ಮೆರೆಪಿ ಮುತ್ತುದ
ಲಕ್ಕ ತೋಜುನ ಉಣುಪ್ಪುನು
ಬಾಜಲಾಂಡ ಪರ್ಪೆರಮೃತೊನು
ನೆಂಪು ಮಲ್ಪುನ ಬೊಂಡೊನು

ಬಾರೆ ಪೇರೊಳು ಕುಕ್ಕು ಚಿತ್ತುಪುಳಿ
ಪಂದ್‌ರ್‌ಗದಂಗಡಿ ಓಲುಲಾ
ಮುಗ್ಗೆ ಮಲ್ಲಿಗೆ ಜಾಜಿ ಸಂಪಿಗೆ
ಪೂತ ಅಂಗಡಿ ತೆಲಿಪುವಾ

ಕೋಟ ಹವಿಕೆರೆ ಕನ್ನಡೊ ಪಾತೆರೊ –
ದೊಟ್ಟುಗೇ ತುಳುವೆರ್ನ ತುಳುನುಡಿ
ಗೌಡ ಸಾರಸ್ವತೆರ್ ಕೊಂಕಣಿ
ಬಿರಾದುಪ್ಪಿನ ಕರೆಬರಿ

ಕ್ರಿಸ್ತ ಸ್ಯಾಬೆರೆನಕುಲು ಕ-
ನ್ನಡೊನು ಮಾತೆರೆನಂಗೆಯೆ
ಕಲ್ತ್ ವಿದ್ಯೆದ ಸಿರಿನ್ ಸಾಧಿತ್
ಮೆರೆಪೆರೊಂಜೇ ರೀತಿಡ್

ಕೆಂಪು ಓಡುದ ಊರು ಉಂದುವೆ
ಕುಡ್ಲ ಮಲ್ಲಿಗೆ ಕಮ್ಮೆನ
ಗಳಿಗೆ ಗಳಿಗೆಗ್ ಪೊಸತ್ ನಾಡುನ
ಪೊಣ್ಣುಲೆಗ್ ಮೂಲೇ ಬಿಮ್ಮನ

ಮುಗಲ್ ಮುಟ್ಟುನ ಅರಂತಡೆ[3]
ಮುಟ್ಪೊಡೇ ಬಡವೆರ್ನ ಕಿನ್ಯ ಇಲ್ಲಡೆ
ಪಣವು ಕಾಸ್‌ದ ಹಂಕಾರ ಮದಪಡ್
ಬಡವೆರ್ನ ಬದ್ಕ್‌ಲ ಅರಳಡ್

ಮೂಲ : **ಅಮ್ಮೆಂಬಳ ಶಂಕರನಾರಾಯಣ ನಾವಡ**
(**ತರ್ಜುಮೆ : ಸಂಪಾದಕೆ**)

[1] ಒಡಿಲ್ – ಓಡು, ಹೆಂಚು
[2] ಸೆರೆ – ತೆರೆ
[3] ಅರಂತಡೆ – ಅರಮನೆ

ಸುಗಿಪು

ಕೆಲಿಂಜ ಸೀತಾರಾಮ ಆಳ್ವ

ತುಳುನಾಡಪ್ಪೆನ ಸಿರಿಮುಡಿಕ್ ।
ಜಯೊ ಜಯೊನೇ ಜಯೊ ತುಳುನುಡಿಕ್ ॥ ಪಲ್ಲವಿ ॥
ನಾಗ ಸಮಾಜೊದ ತರವಾಡ್ ।
ಬೆಗರ್‌ನ್ ಜಪುಡಯಿ ಪುಲವಾಡ್ ॥
ಈ ತುಳುನಾಡ್‌ಡ್ ದಿನನಿತ್ಯೊ ।
ತೋಜುನೆ ಸಿವಸುಂದರ ಸತ್ಯೊ ॥ ತುಳುನಾಡಪ್ಪೆನ ॥೧॥
ಮದ್ವಾಚಾರ್ಯೆರೆ ದ್ವೈತಮತೊ ।
ಜೈನೆರ್ ಪಾಲಿಪಿ ತತ್ವೊಹಿತೊ ॥
ಅನ್ನಾಬ್ರಮ್ಮೊದ ಒಸಯಾಂಡ್ ।
ಕುಡುಮೊಡು ಧರ್ಮೊದ ನಿಲೆಯಾಂಡ್ ॥ ತುಳುನಾಡಪ್ಪೆನ ॥೨॥
ಉದಿಪುದ ಗಣಪತಿ ಮದವೂರ್ಡು ।
ಆದಿ ಸುಬ್ರಾಯೆನೆ ಊರೂರ್ಡು ॥
ಕಟಿಲ್ ಪುರಾಲ್‌ಡ್ ದೇವಲ್ಯೊ ।
ಕ್ರಿಷ್ಣನ ಉಡುಪಿಯೆ ಕೈವಲ್ಯೊ ॥ ತುಳುನಾಡಪ್ಪೆನ ॥೩॥
ಮಂದಿರೊ ಪಳ್ಳಿಲು ಇಂಗ್ರೇಜಿ ।
ಲೆಕ್ಕೊಗು ಸಾವಿರೊದಂದಾಜಿ ॥
ಕಲ್ಲ್‌ಡೆ ಕೆತ್ತ್‌ದ್ ಕಲ್ಕುಡೆರ್ ।
ಉಂತಯಿ ಮೂರ್ತಿಲೆ ಗುಮ್ಮಟೆರ್ ॥ ತುಳುನಾಡಪ್ಪೆನ ॥೪॥
ಬೈದ್ಯೆರೆ ಗರೊಡಿಲು ಮೂಲುಲ್ಲೊ ।
ದೈವೊಲೆ ಮಾಡೊಲು ಏತುಲ್ಲೊ ॥
ಪಾರ್ದನೊ ಸಂದಿಡ್ ಕತೆ ಉಂಡು ।
ಕಾರ್ನಿಕೊ ಸತ್ಯೊಲ ಸೇರ್ದುಂಡು ॥ ತುಳುನಾಡಪ್ಪೆನ ॥೫॥
ಬರೆಯಿನ ಕಮ್ಮಿಯೆ ಆದುಂಡು ।
ಬರೆಯೆರೆ ಏತ್‌ಲ ಒರಿದುಂಡು ॥
ತುಳುನಾಡಪ್ಪೆಗ್ ಕೈಮುಗಿಪೆ ।
ಜಯೊ ಜಯೊ ಪಂಡೊಂದೇನ್ಸುಗಿಪೆ ॥ ತುಳುನಾಡಪ್ಪೆನ ॥೬॥

ಸ್ತುತಿ

ತುಳುನಾಡಮ್ಮನ ಸಿರಿಮುಡಿಗೆ
ಜಯಜಯವೆಂಬೆ ತುಳುನುಡಿಗೆ ॥ಪಲ್ಲ॥

ನಾಗಪೂಜೆಯ ತರವಾಡು ।
ದುಡಿವ ಜನಗಳ ನೆಲೆವೀಡು ॥
ಈ ತುಳುನಾಡಲ್ಲಿ ದಿನನಿತ್ಯ ।
ಕಾಣುವುದದು ಶಿವ ಸುಂದರ ಸತ್ಯ ॥೧॥

[1]ಮಧ್ವಾಚಾರ್ಯರ ದ್ವೈತಮತ ।
ಜೈನರ ನೀತಿಯ ತತ್ತ್ವಹಿತ ॥
ಅನ್ನಬ್ರಹ್ಮದ ನೈವೇದ್ಯ ।
ಕುಡುಮ[2]ದಿ ಧರ್ಮವೆ ಆರಾಧ್ಯ ॥೨॥

ಉದಿಸಿದ ಗಣಪತಿ ಮದವೂರ[3]ಲ್ಲಿ ।
ಸುಬ್ರಹ್ಮಣ್ಯನು ಊರೂರಲ್ಲಿ ॥
ಕಟೀಲು ಪೊಳಲಿಯ ದೇವಿಯರು ।
ಕೃಷ್ಣನ ಉಡುಪಿಯು ಕೈವಲ್ಯ ॥೩॥

ಮಂದಿರ ಮಸೀದಿ ಚರ್ಚುಗಳು ।
ಲೆಕ್ಕಕೆ ಸಾವಿರಕು ಮೇಲು ॥
ಕಲ್ಲಲಿ ಕೆತ್ತಿದ ಕಲ್ಕುಡರು[4] ।
ನೆಲೆಯಾಗಿಹರು ಗೊಮ್ಮಟರು ॥೪॥

[5]ಬೈದ್ಯರ ಗರಡಿಗಳಿಲ್ಲಿಹವು ।
ದೈವ [6]ಮಾಡಗಳು ತುಂಬಿಹವು ॥
ಪಾಡ್ದನ ಸಂಧಿಯ ಕತೆ ಇಹವು ।
ಸತ್ಯ ಕಾರಣಿಕ ಸೇರಿಹವು ॥೫॥

ಬರೆದುದು ಇದು ಬಹುಕಡಿಮೆ ।
ಇನ್ನೂ ಬರೆಯಲು ಉಳಿದಿಹುದು ॥
ತುಳುನಾಡಬ್ಬೆಗೆ ಕೈಮುಗಿವೆ ।
ಜಯ ಜಯವೆನ್ನುತ ಸ್ತುತಿಗೈವೆ ॥

ಮೂಲ : **ಕೆಲಿಂಜ ಸೀತಾರಾಮ ಆಳ್ವ**
(ಕನ್ನಡ ಅನುವಾದ : ಸಂಪಾದಕ)

[1] ಮಧ್ವಾಚಾರ್ಯ - ಆಚಾರ್ಯತ್ರಯರಲ್ಲಿ ಒಬ್ಬರಾದ ಮಧ್ವಾಚಾರ್ಯರು ತುಳುನಾಡಿನ ಉಡುಪಿ ಹತ್ತಿರದ ಪಾಜಕ ಕ್ಷೇತ್ರದಲ್ಲಿ ಹುಟ್ಟಿ ದ್ವೈತ ಮತ ಬೋಧಿಸಿದರು.
[2] ಕುಡುಮ - ಧರ್ಮಸ್ಥಳ
[3] ಮದವೂರು - ಮಧೂರು
[4] ಕಲ್ಕುಡ - ತುಳುನಾಡಿನ ಗೊಮ್ಮಟನನ್ನು ಕೆತ್ತಿದ ಶಿಲ್ಪಿ ಬೀರು ಕಲ್ಕುಡನೆಂದು ಪ್ರತೀತಿ
[5] ಬೈದ್ಯರು - ತುಳುನಾಡಿನ ಸಾಂಸ್ಕೃತಿಕ ವೀರರಾದ ಕೋಟಿ ಚೆನ್ನಯರು.
[6] ಮಾಡ - ದೈವಸ್ಥಾನ, ಗುಡಿ

ಬಾಳ್ವೆಗಾಸರೆ ಆಗಲಿ

ಡಾ. ಪುಂಡೂರು ವೆಂಕಟರಾಜ ಪುಣಿಂಚತ್ತಾಯ

ಕಡಲು ತಾಯಿಯ ಸುತರು ನಾವು
ಕಡಲೇ ನಮ್ಮಯ ಒಡಲು
ಕಡಲ ರಾಜಕುಮಾರಿ ಲಕ್ಷ್ಮಿಯೆ
ನಮ್ಮ ಸಾಕಿದ ಮಾತೆಯೂ ।

ಹಗಲು ಕಡಲಿನ ನೀರಲಿ
ಇರುಳು ಮನೆಯ ನೆರಳಲಿ
ಚೊಕ್ಕ ಸಂಸಾರದಲ್ಲಿ ಬಾಳುವ
ತುಳುವನಾಡಿನ ಮಕ್ಕಳು – ನಾವು
ತುಳುವ ಮಣ್ಣಿನ ಪುತ್ರರು ।

ಕಡಲಲೇ ಹೊರಳಾಡಿ ಬದುಕುವ
ವೀರ ಜನರೇ ಆದರೂ
ನಮ್ಮ ಈ ಸಂಸಾರ – ಕಡಲಿನ
ತೆರೆಗೆ ಹೆದರುವಾ ಮಕ್ಕಳು ।

ತಾಯೆ ನಮ್ಮಯ ಬದುಕಿಗಾಗಿ
ನೀನೇ ಆಸರೆ ಸತ್ಯವು
ನಿನಗೆ ನಿತ್ಯವು ಕೈಯ ಮುಗಿವೆ
ನಿನ್ನ ದಯೆಯ ಮರೆಯಲಾರೆ ।

ತಾಯೆ ನಿನ್ನಯ ತೆರೆಯ ಕೈಗಳ
ಎತ್ತಿ ಆಶೀರ್ವದಿಪುದು
ಪಲ್ಕೆ ಬೀಳಲಿ ಕಡಲಲಿ
ನಲಿಕೆ ಸಂತಸ ತುಂಬಲಿ ।

ತುಳುವ ನಾಡಿನ ಮಣ್ಣ ಸತ್ಯವ
ತಿಳಿದು ಬದುಕುವ ಹಾಗೆಯೇ
ನಿಮ್ಮ ಕರುಣೆಯ ಕಡಲು ನಮ್ಮಯ
ಬಾಳ್ವೆಗಾಸರೆ ಆಗಲಿ ।

ಬದ್ಕ್‌ಗಾಸರೆ ಆವಡ್

ಕಡಲ್‌ದಪ್ಪೆನ ಬಾಲೆಲೆಂಕುಲು
ಕಡಲ್ ಎಂಕ್ಲೆನ ಉಡಲ್‌ಯೆ
ಕಡಲ ರಾಜಕುಮಾರಿ ಲಕ್ಷ್ಮಿಯೆ
ತಾಂಕುನಂಚಿನ ಅಪ್ಪೆಯೆ

ಪಗೆಲ್ ಕಡಲ್‌ದ ನೀರ್‌ಡ್
ಇರ್ಲ್ ಇಲ್ಲ್‌ದ ನಿರೆಲ್‌ಡ್
ಪೊರ್ಲ್ ಸಂಸಾರೊನು ನಿದೆಪಿನಾ
ತುಳುವನಾಡ್‌ದ ಬಾಲೆಲು-ಎಂಕುಲು
ತುಳುವ ಮಣ್ಣ್‌ದ ಜೋಕುಲು

ಕಡಲ್‌ಡೇ ಪುಡೆರೊಂದು ಬದುಕುನ
ವೀರ ಜನೊಕುಲು ಆಂಡಲ
ನಮೊನ ಈ ಸಂಸಾರೊ-ಕಡಲ್‌ದ
ತೆರೆಕ್ ಪೋಡಿಪೊ ಎಂಕುಲು

ಅಪ್ಪೆ ಎಂಕ್ಲೆನ ಬದ್‌ಕ್‌ಗೀರೆ
ಆಸರೇಂದ್ ನಂಬ್‌ದೊ
ಈರೆಗೇಪಲ ಕಯಿನ್ ಮುಗಿಪೊ
ಈರೆ ದಯೆನ್ ಮದಪಯೊ

ಅಪ್ಪೆ ಈರೆನ ತೆರೆತ ಕೈನೇ
ದೆರ್ತ್ ಕೊರ್‌ಲೇ ಆಬಯೊನು
ಪಲಿಕೆ ಬೂರಡ್ ಕಡಲ್‌ಡ್
ನಿಲಿಕೆ ಸಂತಸೊ ದಿಂಜಡ್

ತುಳುವ ನಾಡ್‌ದ ಮಣ್ಣ ಸತ್ಯೊನು
ಬುಡಂದೆ ಬದುಕುನ ರೀತಿಡೆ
ಈರೆ ಕರುಣೆದ ಕಡಲ್ ಎಂಕ್ಲೆನ
ಬದ್ಕ್‌ಗಾಸರೆ ಆವಡ್

ಮೂಲ ಬೊಕ್ಕ ತರ್ಜುಮೆ :
ಡಾ. ಪುಂಡೂರು ವೆಂಕಟರಾಜ ಪುಣಿಂಚತ್ತಾಯ

ಪುಂಚದ ಬಾಲೆ

(ಮಂದಾರ ರಾಮಾಯಣೊದ ಒಂಜಿ ಎಲ್ಯ ತುಂಡು)

ಮಂದಾರ ಕೇಶವ ಭಟ್ಟ

ಬಡಕಾಯಿ ಮೆಯ್ಯೊಂಜಿ ಊರು ಇತ್ತ್ಂಡವುಳು
ಕಂಡೊಡ್ದು ಕಾಡೆಚ್ಚ, ಕುಡಿಯೆರೆನ ಪಡೆಯೆಚ್ಚ
ಒಂಜಿ ಕಾಡ್‌ದ ಪುಡೆಟ್ ಪುಂಡಿಕೇನೆದ ಮುದೆಲು-
ಳಡ್ಕ ಬಾರೆದ ಪುದೆಲುಳಿತ್ತಿ ಪಡ್ಪುಡು ಪರವು
ತನ್ನೆತೋಡುದರುಟ್ಟು ಮುರಕಲ್ಲ ತೆಕ್ಕೆಲೆಡ್
ಬರೆ ಮೊರಂಪಾಯಿದೆತ್ತರ ಕಟ್‌ದ್ ದೀಯಿ ತಡ-
ಮೆಗ್ ಕಾಡಬೂರು ಮೊಡೆತಿ ಪಡಿನ್ ತಿಕ್ಕಾದ್
ಇಲ್ಲ್‌ದುಳಯಿದ ಜಾಲ್‌ಡೊಂಜಿ ಮೂಲೆಡ್ ಕಾಡ್
ಪೀರೆ ಕಾರೋಳು, ಬಸಲೆದ ದೊಂಪೊಳೀ ಮೆಯ್ಟ್
ಪದ್ಪೆಕಳ, ರಚ್ಚೇವು ಕಂಡೆ, ಪಕಳದ ಪಚ್ಚೆ
ಪರೆಲ್‌ದ ದೂಜಿಲೆನ್ ನಿದ್ಪ ಉಂತಾಯ್ನಲೆಕ
ಪಂದ್‌ರ್ ಕಾಯೆಲ್ ಗೆಜ್ಜೆ ಕಟಿನಂಚ ದಿಂಜ್‌ದಿನ
ಜೀರ್ಗೆ ಮುಣ್ಚೆಲೆದ ದಯ್ಕುಳು –

ನಡುಟು ಮಿರೆ ಗರಿದಿ
ತೊಲಸಿಕಟ್ಟೆದ ಎದುರು ಮುಳಿ ಬೇತಿ ಮಾಡ್ ಚಳಿ-
ತಗ ಪುಡಾದಿನ ಲೂತಿದಾಯ ಕಾರಡಿತಂಚ
ಆವುಳವುಳು ದರಿದಿ ಗೋಡೆಳು ಕಟ್ಟಿ ಮಡಲ ಮುಡೆ
ದರಿದಿ ಕಡ್ಯದ ನಾಲಿ ನೂರಾಯಿ ಗಿಳಿ ಕಂಡಿ
ಮಾಡ್ದಡಿಟ್ಪೊರಗಾದಿ ಬಾಕಿಲ್ದ ತಟ್ಟೆ ಮಾ-
ಡ್‌ದ ತಲಕೆಗಕ್ಕ್‌ಡ್ದಿ ಬುಗುತಿಪ್ಪಿ ತೋಜು ಕೊ-
ಟ್ಯದ ಕುದುಮೆ ಜಪುಡಾದ್ ಕಟ್ಟಿ ಕಿದೆಟೊಂಜಿ ಪಾ-
ರೋಳೊಂಜಿ ಬಚ್ಚೆಲೆರ್ಮ್‌ಲ ಕಾಯಿ ಕಡೆವೊಂದು
ಇತ್ತಿಲ್ಲ್‌ಡೊರ್ತಿ ಪೊಂಜೋವು, ಆಣ್ ಪೊಣ್ಣೊಟ್ಟು-
ಗೇಳ್ ಬಾಲೆಲೆನಪ್ಪೆ ಯಜಮಾಂದಿ, ತನ್ನ ಕಂ
ಡಾನಿ ಬತ್‌ದಿಲ್ಲ್ ಪೊಗ್ಗುನೆ ದುಂಬು ಬೆರಿ ತೂಪ-
ನಾಳಿತ್ತಿ ಕುಟುಮದೆಜಮಾನೆ, ತಾನೊರಿ ಬೆಂದ್-
ದಾ ಕುಟುಮೊನೆತೆದಾಂತೆ ನುಪ್ಪು ಕುಂಟುಗು ಜದ್ರ-
ದಾಂತೆ ನಡಪಾವೊಂದು ಬರ್ಪೇದೆ ಮಲೆಕುಡಿಯೆ.

ಹುತ್ತದ ಹಸುಳೆ

(ಮಂದಾರ ರಾಮಾಯಣದಿಂದ ಆಯ್ದುಕೊಳ್ಳಲಾಗಿದೆ)

ಬಡಗಣ ದೆಸೆಯೊಳೊಂದು ನಾಡಿದ್ದುದಲ್ಲಿ ಹೊಲ -
ದಿಂ ಕಾಡು ಹೆಚ್ಚು ಕುಡಿಯರ ಮಂದಿ ಹೆಚ್ಚೊಂದು
ಕಾಡ ಬದಿಯಲಿ ಹರಳು ಕೇನೆಗಳ ಬುಡವಡ್ಕ -
ಬಾಳೆ ಪೊದರುಗಳಿದ್ದ ಪಡ್ಪಿನಲಿ ಹರಿಯುತಿಹ
ಕಿರು ತೋಡಿನಂಚಿನಲಿ ಮುರಕಲ್ಲ ಚಕ್ಕೆಯಿಂ-
ದಗಳು ಮೊಣಕಾಲೆತ್ತರಕೆ ಕಟ್ಟಿಯಿಟ್ಟ ತಡ -
ಮೆಗೆ ಕಾಡಬಳ್ಳಿ ಹೆಣೆದಿಹ ಪಡಿಯ ಸಿಕ್ಕಿಸುತ -
ಲಿದ್ದೊಳಗಿನಂಗಳದೊಳೊಂದು ಮೂಲೆಯಲಿ ಮಡ -
ಗಲಕಾಯಿ ಕಾರೋಳು ಬಸಳೆ ದೊಂಪಂಗಳೀ-
ಕೆಲದಿ ಹರಿತಿಯ ಕಳವು ಮರಸಣಿಗೆ ಗೆಡ್ಡೆ ಹವ-
ಳದ ಪಚ್ಚೆ ಹರಳುಗಳ ಸೂಜಿಗಳ ನೆಟ್ಟಗಿರಿ-
ಸಿದವೋಲು ಹಣ್ಣು ಕಾಯ್ಗಳು ಗೆಜ್ಜೆ ಕೋದಂತೆ
ತುಂಬಿರುವ ಜೀರಿಗೆಮೆಣಸಿನ ಸಸಿಗಳು ನಡುವೆ
ಮೊಲೆಯಗೆದ ತುಳಸಿಕಟ್ಟೆಯ ಮುಂದೆ ಮುಳಿಚಾವ-
ಣಿಯ ಮಾಡು, ಚಳಿಯಿಂದೊಡೆದ ಲೂತಿಯವನ ಕಾ-
ಲಡಿಯೊಲಲ್ಲಲ್ಲೊಡೆದ ಕೊಡಗೊರಳ ಹೊಗಿಸಿಟ್ಟಿರುವ
ಗಿಳಿಕಂಡಿ ಮಾಡಿನಡಿಯೊರಗಿಸಿದ ಬಾಗಿಲಿನ
ತಡಿಕೆ ಮಾಡಿನ ಗಳಕೆ ತೂಗಿಟ್ಟ ಬಸ್ಮಗೆರ -
ಟೆಯು ಕಾಂಬ ಗುಡಿಸಲಿನ ಬದಿಯಿಳಿಸಿ ಕಟ್ಟಿರುವ
ಕೊಟ್ಟಿಗೆಯೊಳೊಂದು ಪಾರೋಳೊಂದು ಬತ್ತಿದೆ-
ಮ್ಮೆಯು ಮೆಲುಕನಾಡುತಿಹ ಮನೆಯೊಳೊಬ್ಬಾಕೆ ಹೆಂ-
ಗುಸು ಗಂಡು ಹೆಣ್ಣೊಟ್ಟಿಗೇಳು ಮಕ್ಕಳು ತಾಯಿ
ಯಜಮಾನಿತಿಯು ತನ್ನಿನಿಯ ಬಂದು ಮನೆ ಹೊಗಲು
ಮೊದಲು ಬೆನ್ನನು ನೋಡುವವಳಿಹ ಕುಟುಂಬದೆಜ-
ಮಾನ ತಾನೊಬ್ಬ ದುಡಿದಾ ಕುಟುಂಬವನು ವ್ಯಥೆ
ಯಿಲ್ಲದೆಯೆ ಹೊಟ್ಟೆ ಹೊಟ್ಟೆಗೆ ಕೊರತೆಯಿರದೆ ನಡೆ-
ಯಿಸಿಕೊಂಡು ಬರುತ್ತಿದ್ದ ಮಲೆಕುಡಿಯ.

ಮೂಲ ಮತ್ತು ಅನುವಾದ : ಮಂದಾರ ಕೇಶವ ಭಟ್ಟ

ತುಳುನಾಡ್‌ದ ನಿನೆಪು

ಪಾ.ವೆಂ. ಆಚಾರ್ಯ

ತುಳುನಾಡೇ, ಓ ತುಳುನಾಡೇ,
ಎನ ಪಕ್ಕಿದ ಗೂಡೇ!

ಆ – ತುಳುನಾಡ್‌ದ ಮಣ್ಣ್‌ಡ್ ವಾ ಕಂಪುಂಡಾ,
ತುಳುನಾಡ್‌ದ ನೀರ್‌ಡ್ ವಾ ತಂಪುಂಡಾ,
ಆ ಪಡ್ಡಯಿ ಗಾಲಿಡ್ ವಾ ಒಯ್ಪುಂಡಾ,
ಪಿನಯೆ – ಯಾನ್ ಪಿನಯೆ

ಇಜ್ಜಡ– ಒಲ್ಲೊ ಒಲ್ಲೊ ಒಲ್ಪನೊ ತಿರ್‌ಗ್‌ಂಡಲಾ
ನೂದು ಗಾವುದತ ದೂರ ಆಂಡಲಾ,
ಮೂಜಿ ಪತ್ತ್ ಮರಿಯಾಲ ಪೋಂಡಲಾ,
ಒಯ್ಪುಂಡೇ – ಅವು ಒಯ್ಪುಂಡೇ!

ಎನ– ತುಳುನಾಡ್‌ಡ್ ಪರಿಯೆರೆ ತೆಲಿ ದಾಂತೆ,
ತರೆತ ಮಿತ್ತ್ ಮಾಡ್‌ಗ್ ಮುಲಿದಾಂತೆ,
ದಿಕೆಲ್‌ಗ್ ಪುಂಡಿ ಬಿಜಿಕೈಲ ದಾಂತೆ,

ದಿಣ್ಣ–ದಿಣ್ಣ ಕಾರ್ ಒಯ್ತೊಂದು,
ವಾ ವಾ ದೇಸೊನು ಸುತ್ತು ಪಾಡಿಯೆ,
ಒಳ್ಳೊಳ್ಳು ಸ್ನೇಹದ ಬಿತ್ತ್ ಪಾಡಿಯೆ,
ಊರುದ ಮೋಕೆನಿ ಕುತ್ತು ಪಾಡಿಯೆ,
ಕುಡಲಾ ಬುಡಂದೆ ಚಿಗ್‌ರುಂಡೇ!

ಈ -   ತುಳು ನಾಡ್‌ದ ಸೀಮೆಗ್ ಬತ್ತ್‌ಂಡ,
ತುಳು ಪಾತೆರ ಕೆಬಿಕ್ಕ್ ಬೂರುಂಡ,
ತುಳು ನೇಸರ್ ಎನ ಮೆಯ್ಯ್‌ಕ ಮುಟುಂಡ,

ಮನಸ್‌ದ-ಗೊಡ್ಡುಗು ಬಂಜಿ ಬರ್ಪುಂಡ!
ಪತ್ತ್ ಬಾಸೆಲೆನಿ ಕಲ್ತೆ, ಬರೆಯೆ,
ನೂದೂ ಗುವ್ವೆಲ್‌ದ ನೀರ್‌ನಿ ಪರಿಯೆ,
ಸಾರ ಜಾಗುಲೆಡ್ ಮನಸ್‌ನಿ ನಡಿಯೆ.
ಒಲ್ಪಲ ಬೇರೇ ಕೊಲ್ಪಂದೇ!

ಮಲೆತ್ತ್ ನಡಪು ತುಳುನಾಡ್‌ದ ಆಣ್,
ತೆಲ್ತ್ ಪಾತೆರುನ ಅಲ್ಪದ ಪೊಣ್ಣು
ಗುರೆತ್ತ್ ಕೂಗು ತುಳುನಾಡ್‌ದ ಕಡಲ್,

ಬೇತೆನೇ-ಅವು ಬೇತೆನೇ!
ತುಳು ನಾಡ್‌ಡ್ ಬದ್ಕೆರೆ ಆಜ್ಜಡಲಾ,
ತುಳುನಾಡ್‌ಡ್ ನಲ್ಪೆರೆ ಆಜ್ಜಡಲಾ,
ಕಡೆತ್ತ ಉಸುಲುನಿ ಬುಡರೆಗಾಂಡಲಾ

ತುಳು -ನಾಡ್‌ಗ್ ಪೋವೊಡು ತೋಜುಂಡು.
ತುಳು ನಾಡ್‌ದ ಗಾಳಿಡ್ ಗಾಳಿ ಆದ್
ಕಡಲ ಕರೆತ ಗಾಳಿದ ಮರಕುಲೆಡ್,
ಪನಂದೆ ಒರಿತಿನ ಎನ ಪದೊಕುಲೆನ್
ನುಡಿವೊಡು ಪಂಡ್‌ದ್ ಎಣ್ಣುಂಡು.

ತುಳುನಾಡಿನ ನೆನಪು

ತುಳುನಾಡೇ, ಓ ತುಳುನಾಡೇ
ನನ್ನ ಹಕ್ಕಿಯ ಗೂಡೇ!

ತುಳುನಾಡಿನ ಮಣ್ಣಲಿ ಎಂಥ ಪರಿಮಳವು
ತುಳುನಾಡಿನ ನೀರಲಿ ಎಂಥ ತಂಪಿಹುದು
ಪಡುವಣ ಗಾಳಿಯಲಿ ಎಂಥ ರಭಸವಿದೆ
ತಿಳಿಯದು – ನನಗೆ ತಿಳಿಯದು

ಇಲ್ಲದಿರೆ – ಎಲ್ಲೆಲ್ಲೋ ತಿರುಗಿದರೂ
ನೂರು ಗಾವುದ ತಿರುಗಾಡಿದರೂ
ಮೂವತ್ತು ಮಳೆಗಾಲ ಕಳೆದರೂ
ತುಯ್ಯುತಿದೆ – ಅದು ತುಯ್ಯುತಿದೆ!

ನನ್ನ ಊರಲಿ ಉಣ್ಣಲು ಗಂಜಿ ಇಲ್ಲದೆ
ಮನೆ ಮಾಡಿಗೆ ಹೊದೆಸಲು ಹುಲ್ಲಿಲ್ಲದೆ
ಒಲೆಗೆ ಹಾಕಲು ಹಿಡಿ ತರಗೆಲೆಯೂ ಇಲ್ಲದೆ

ಭಾರ ಭಾರ ಕಾಲೆಳೆದು
ಎಷ್ಟೊಂದು ದೇಶ ಸುತ್ತಿದೆ
ಗೆಳೆತನದ ಬೀಜ ಬಿತ್ತಿದೆ
ಊರಿನ ಮೋಹವ ತುಂಡರಿಸಿದೆ
ಆದರೂ ಮತ್ತೆ ಚಿಗುರುತ್ತಿದೆ?

ಈ ತುಳುನಾಡಿನ ಸೀಮೆಗೆ ಬಂದರೆ,
ತುಳುಮಾತು ಕಿವಿಗೆ ಬಿದ್ದರೆ,
ತುಳು ಕಿರಣ ನನ್ನ ಮೈ ಸೋಕಿದರೆ,

ಮನಸ್ಸಿನ ಜಾಡ್ಯಕ್ಕೆ ಸ್ಫೂರ್ತಿ ಬರುವುದು!
ಹತ್ತು ಭಾಷೆಗಳ ಕಲಿತೆ – ಬರೆದೆ
ನೂರು ಬಾವಿಗಳ ನೀರು ಕುಡಿದೆ
ಸಾವಿರ ಕಡೆ ಮನಸ್ಸು ನೆಟ್ಟೆ
ಎಲ್ಲೂ ಬೇರೂರಲೆ ಇಲ್ಲ!

ಎದೆಯೆತ್ತಿ ನಡೆವ ತುಳುನಾಡಿನ ಗಂಡು
ನಗುಬೀರುತ ನಡೆಯುವ ಅಲ್ಲಿನ ಹೆಣ್ಣು
ಮೊರೆಯುತ ಕೂಗುವ ತುಳುನಾಡಿನ ಕಡಲು

ಬೇರೆಯೇ – ಅದು ಬೇರೆಯೇ
ತುಳುನಾಡಲ್ಲಿ ಬದುಕಲಾಗದಿದ್ದರೂ
ತುಳುನಾಡಲ್ಲಿ ಕುಣಿಯಲಾಗದಿದ್ದರೂ
ಕೊನೆಯ ಉಸಿರು ಬಿಡಲಾದರೂ

ತುಳುನಾಡಿಗೆ ಹೋಗಬೇಕೆಂದೆನಿಸುವುದು
ತುಳುನಾಡಿನ ಗಾಳಿಯಲ್ಲಿ ಗಾಳಿಯಾಗಿ
ಕಡಲದಂಡೆಯ ಗಾಳಿಮರಗಳ ನಡುವೆ
ಹೇಳದೆ ಉಳಿದ ನನ್ನ ಹಾಡುಗಳನ್ನು
ಹಾಡಬೇಕೆಂದೆನಿಸುವುದು.

ಮೂಲ : ಪಾ.ವೆಂ. ಆಚಾರ್ಯ
(ಅನುವಾದ : ಸಂಪಾದಕ)

ಚಿನ್ನದ ಬಟ್ಟಲು

ಪ್ರೊ. ಅಮೃತ ಸೋಮೇಶ್ವರ

ಚಿನ್ನದ ಬಟ್ಟಲು ಈ ತುಳುನಾಡು
ನೋಡಲು ಸಾವಿರ ಕಣ್ಗಳೆ ಬೇಕು,
ಸೊಬಗಿನ ತವರು ಭಾಗ್ಯದ ಬೀಡು
ಬೀರರ ಗಂಡೆದೆ ಬಿರ್ದಿನ ನಾಡು
ನಮ್ಮಯ ತುಳುನಾಡು
ಹೆಮ್ಮೆಯ ಕರೆನಾಡು

ಮೂಡಣಗಟ್ಟ ಪಡುವಣ ಕಡಲು
ತೆಂಗಿನ ಕಂಗಿನ ಬಾಳೆಯ ನೆರಳು
ಸಿಂಗರ ಕದಿರು ಕಲೆಯಂಗಳವು
ಸರ್ವರೊಮ್ಮಯಿಸಿ ಬಾಳುವ ನೆಲೆಯು
ನಮ್ಮಯ ತುಳುನಾಡು
ಹೆಮ್ಮೆಯ ಕರೆನಾಡು

ಗದ್ದೆಯ ಕಳದಲಿ, ತಾಳೆಯ ತುದಿಯಲಿ
ಗೆಯ್ಮೆಯು ಹುಣೆಯಿಲ್ಲದ ಹೊಲದಲ್ಲಿ
ಬಗೆಬಗೆ ಕುಣಿತ ಕಂಬಳ ಕೋಲ
ಗರಡಿಯ ಸಾದಕ ಆಟದ ಮೇಳ
ನಮ್ಮಯ ತುಳುನಾಡು
ಹೆಮ್ಮೆಯ ಕರೆನಾಡು

ಹೆಣ್ಣಾಳಿಕೆಯಾ ಚೆಲುವಿನ ಮಣ್ಣು
ಪುಣ್ಯದ ಹರಿವು ಐಸಿರಿ ಕಣ್ಣು
ಸವಿಸವಿಯುಣಿಸು ಬಗೆಬಗೆ ತಿನಿಸು
ಒಳಿತಿನ ಬಯಕೆ ಮಲ್ಲಿಗೆ ಮನಸು
ನಮ್ಮಯ ತುಳುನಾಡು
ಹೆಮ್ಮೆಯ ಕರೆನಾಡು

ಬಂಗಾರ್ದ ಕಜಣ

ಬಂಗಾರ್ದ ಕಜಣ ಈ ತುಳುನಾಡ್
ತೂಯೆರೆ ಸಾವಿರ ಕಣ್ಣ್‌ಳೆ ಬೋಡು
ಪೊರ್ಲುದ ತಮೆರಿ ಭಾಗ್ಯೊದ ಬೂಡು
ಬೀರೆರೆ ಬಿರ್ದ್‌ದ ತಂಕೊದ ನಾಡ್
ನಮ್ಮ ತುಳುನಾಡ್
ಪೆರ್ಮೆದ ಕರೆನಾಡ್

ಮೂಡಯಿಗಟ್ಟ ಪಡ್ಡೆಯಿ ಕಡಲ್
ತಾರೆದ ಬಾರೆದ ಕಂಗ್‌ದ ನಿರೆಲ್
ಸಿಂಗರ ಕುರಲ್ ಕಲೆಕುಳೆ ಜಾಲ್
ಸರ್ವೆರೊಮ್ಮಯಿತ್‌ದ್ ಬಾಳುನ ಇಲ್ಲ್
ನಮ ತುಳುನಾಡ್
ಪೆರ್ಮೆದ ಕರೆನಾಡ್

ಕಂಡದ ಕಳೊಟು, ತಾರಿದ ಕುಬೆಟ್
ಸಾಗೊಳಿ ಪುಣೆದಾಂತಿ ಕಂಡೊದ ಮೆಯಿಟ್
ಬಗೆಬಗೆ ನಲಿಕೆ ಕಂಬುಳ ಕೋಲ
ಗರೊಡಿದ ಸಾದಕ ಆಟೊದ ಮೇಳ
ನಮ ತುಳುನಾಡ್
ಪೆರ್ಮೆದ ಕರೆನಾಡ್

ಪೊಣ್ಣಾಳಿಕೆದ ಪೊರ್ಲುದ ಮಣ್ಣ್
ಪುಣ್ಯೊದ ಪರಿಪು ಐಸುರ ಕಣ್ಣ್
ರುಚಿರುಚಿದೊಣಸ್ ಬಗೆಬಗೆ ತಿನಸ್
ಎಡ್ಡೆಪು ಮೋಕೆ ಮಲ್ಲಿಗೆ ಮನಸ್
ನಮ ತುಳುನಾಡ್
ಪೆರ್ಮೆದ ತುಳುನಾಡ್

ಮೂಲ ಬೊಕ್ಕ ತರ್ಜುಮೆ :
ಪ್ರೊ. ಅಮೃತ ಸೋಮೇಶ್ವರ

ಸಾರೊ ಎಸಳ್‌ದ ತಾಮರೆ

ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈ

ಏತ್ ಪೊರ್ಲುದ ಬಾಸೆ ನಮ ತುಳು
ಸಾರೊ ಎಸಳ್‌ದ ತಾಮರೆ;
ಪಂಡಿಬಾಯಿಡ್ ಕೇಂಡಿ ಕೆಬಿಟ್
ಉರ್ಕುಂಡಮೃತೊದ ನುರೆ ನುರೆ.

-೨-

ಅಪ್ಪೆಪೇರ್‌ದ ಒಪ್ಪ[1] ಜತ್ತ್‌ಂಡ್
ಮೈಟ್ ಮನಸ್‌ಡ್ ದಿಂಜೆಂಡ್
ನಿದ್ರೆ ಕನಟ್‌ಲ ಅಪ್ಪೆಪಾತೆರೊ
ಜೀವೊಡೇ ಸೊರೊ ಸೇರ್‌ಂಡ್.

-೩-

ಎತ್ತರೆತ್ತರೊ ಗುಡ್ಡೆಬೆರಿ[2]ಟ್,
ನೀಲೊ ನೀರ್‌ದ ಕಡಲ ಬರಿಟ್,
[3]ಕಳಮೆ ಕಮ್ಮೆನೊದಿಂಜಿ ಕಂಡೊ,
ಪೊರ್ಲುಡಿಂಚಿನ ಭೂಮಿ ಉಂಡೊ?

-೪-

ಮಿತ್ತ ಸೊರ್ಗೊದ ಪೆತ್ತ್ ಕಂಜಿ
ತುಳುವನಾಡ್‌ಗ್ ಬತ್ತ್‌ಡೊಂಜಿ
[4]ಸತ್ಯಪುತ್ರೆರೆ ಬದ್‌ಕ್‌ಗಾದ್
ನಿತ್ಯ ಉಂತುಂಡು ಜಾಗೆತೂದ್

-೫-

ದಯಿತ ಸಾಲ್‌ಡ್ ಮರತ ಮೇಲ್‌ಡ್
ಗಿಳಿಯೊ ಕಲಕಲ ಕೋಗಿಲೆ;
ವೀಣೆರಾಗೊದ ತಂತಿ ಕೇನೊಡೊ
ಪಾತೆರೊಡು ತುಳು ಜೋಕುಲೆ.

-೬-

ಅಗೆಲ ತಿಗಲೆದ ಗಲ್ಲ ಮೀಸೆದ
ರಟ್ಟೆಗಟ್ಟಿದ ಜವ್ವನೆ,
ರಾಪೆ ಪಲಯಿಡ್[5] ತೂಪೆರಂಚಿಗೆ
ಓರೆಕಣ್ಣ್‌ಡ್ ಆಯನೆ;

-೭-

ಅಕುಲೆ ತುಳುವೆರೆ ಪೊರ್ಲುಡು ಪೊಂಜೊವು-
ಮುಗುರುಮಲ್ಲಿಗೆ ತೆಲಿಕೆಡ್,
ಸಾಲ್ ಸಾಲ್‌ಡ್ ಸೇಲೆ ಸೇಲೆಡ್
ನೇಜಿ ನಡ್‌ಪೆರ್ ನಲಿಕೆಡ್.

-೮-

ಮೆಲ್ಲ ಮೆಲ್ಲಗ್ ಗಾಳಿ ಬೀಜುಂಡು
ಪೂತ ಪರಿಮಳೊ ಸುತ್ತಲ,
ತಾರೆಬಾರೆಲ ತರೆನ್ ತೂಂಕುಂಡು
[6]ಓಬೆಲೆದ ದನಿ ಕೇನ್‌ಲ.

-೯-

ಕಂಡೊ ದತ್ತ್‌ದ್ ಬೆನ್ನಿ ಬೆಂದ್‌ದ್
ಬಾಲೆಲಿಲ್ಲಗ್ ಬನ್ನಗ,
ತುಳುತ ಅಪ್ಪೆನ ತೆಳಿತ ಗಂಜಿಡ್
ಎಂಚಿ ಸಂತೊಸು-ಉನ್ನಗ.

-೧೦-

ಗುಡ್ಡೆ ಏರ್‍ಯೆರ್ ಕಡಲ್ ದಾಂಟ್ಯೆರ್
ದೂರೊದೂರುಗು ಪೋಯೆರ್;
ಓಲು ಉಪ್ಪಡ್ ಬಾಸೆ ಒಂಜೇ
ಅಕ್ಕೆ ಅಣ್ಣಾ ಲೆತ್ತೆರ್.

-೧೧-

ಬುಡುಗಡೆದ ಸಿರಿ ಬೊಳ್ಪು ತೋಜೆಂಡ್
ಗಾಂಧಿತಪಸ್‌ದ ಪುಣ್ಯೊಡು;
ದೇಸೊದೆಡ್ಡೆಗ್ ಬಾಸೆದೆಡ್ಡೆಗ್
ಬೆನೊಡು ನಮೊ ಸಮೊ ಮಣ್ಣಗ್.

1. ಒಪ್ಪ - ಜೊತೆಗೆ 2. ಗುಡ್ಡೆಬೆರಿ - ಜೇರೊ, ತಪ್ಪಲು 3. ಕಳಮೆ - ಬತ್ತ
4. ಸತ್ಯಪುತ್ರ - ಅಶೋಕನ ಕಾಲದಲ್ಲಿ ತುಳುನಾಡಿಗೆ ಸತ್ಯಪುತ್ರ ಎಂಬ ಹೆಸರಿತ್ತು.
5. ಪಲಯಿ - ಉತ್ತ ಗದ್ದೆಯನ್ನು ಸಮತಲಗೊಳಿಸಲು ಎತ್ತುಗಳೆಳೆಯುವ ಹಲಗೆ
6. ಓಬೆಲೆ - ನೇಜಿ ನಡುವಾಗ ಸಾಮೂಹಿಕವಾಗಿ ಹಾಡುವ ಹಾಡು

ಸಾವಿರ ಎಸಳಿನ ತಾವರೆ

ಏನು ಸೊಬಗಿನ ಭಾಷೆ ಸಿರಿತುಳು
ಸಾವಿರದ ದಳ ತಾವರೆ
ನುಡಿವ ಬಾಯಲಿ ಕೇಳ್ವ ಕಿವಿಯಲಿ
ಉಕ್ಕುವುದು ಸುಧೆ ನೊರೆ ನೊರೆ

೨

ತಾಯಿ ಹಾಲೊಡಗೂಡಿ ಬಂದಿದೆ
ಕಾಯ ಮನದಲಿ ಬೆರೆತಿದೆ
ನಿದ್ದೆ ಕನಸಲಿ ತಾಯಿ ನುಡಿಗಳು
ಜೀವದೊಳು ಸ್ವರ ಸೇರಿದೆ

೩

ಎತ್ತರೆತ್ತರ ಗುಡ್ಡೆ ತಪ್ಪಲು
ನೀಲ ನೀರಿನ ಕಡಲ ತಡಿಗಳು
ಕಳಮೆ ಕಂಪಿನ ನೆಲ್ಲ ಹೊಲಗಳು
ತುಳುವ ನಾಡತಿ ಚೆಲುವು ಭುವಿಯೊಳು

೪

ಮೇಲೆ ಸ್ವರ್ಗದ ಹಸುವು ಕರುವು
ತುಳುವನಾಡಿಗೆ ಬಂತು ಇಳಿದು
ಸತ್ಯಪುತ್ರರ ಬದುಕಿಗಾಗಿ
ಇಲ್ಲೆ ಉಳಿಯಿತು ಜಾಗ ತಿಳಿದು

೫

ಗಿಡದಸಾಲಲಿ ಮರದ ತುದಿಯಲಿ
ಗಿಳಿಯೊ ಕಿಲಕಿಲ ಕೋಗಿಲೆ
ವೀಣೆರಾಗದ ತಂತಿ ಮಿಡಿದಿದೆ
ತುಳುವ ಮಕ್ಕಳ ಮಾತಲೇ

೬

ಗಟ್ಟಿ ಎದೆಹರ ಗಲ್ಲ ಮೀಸೆಯ
ರಟ್ಟೆ ಬಲುಹಿನ ಯುವಕರು

ಮೆಟ್ಟಿ ಹಲಗೆಯ ಹಾರುವವನನು
ನೆಟ್ಟ ದಿಟ್ಟಿಲಿ ನೋಳ್ಪರು

೭

ಅವರು ತುಳುವರು ಚೆಲ್ವ ಹೆಣ್ಗಳು -
ಮೊಗ್ಗು ಮಲ್ಲಿಗೆ ನಗೆಯೊಳು
ಸಾಲು ಸಾಲೊಲು ಬಳುಕಿ ಮೈಯನು
ನಾಟಿಗೈವರು ಕುಣಿಯುತ

೮

ಮೆಲ್ಲ ಮೆಲ್ಲನೆ ಗಾಳಿ ಬೀಸಿದೆ
ಹೂವ ಪರಿಮಳ ಸುತ್ತಲು,
ತೆಂಗುಬಾಳೆಯು ತಲೆಯ ತೂಗಿವೆ
ಓ ಬೇಲೆಯಾ ಸ್ವರ ಕೇಳಿದೆ

೯

ಗದ್ದೆ ಉಳುತಲಿ ದುಡಿಮೆ ಮಾಡುತ
ಮನೆಯ ಮೆಟ್ಟಲು ಏರಲು
ತುಳುವ ಅಮ್ಮನ ಗಂಜಿ ನೀರಲಿ
ಎಂಥ ರುಚಿಯದೋ ಉಂಡರೆ

೧೦

ಗುಡ್ಡೆ ಏರುತ ಕಡಲು ದಾಟುತ
ದೂರದೂರಿಗೆ ಹೋದರು
ಎಲ್ಲೆ ಹೋಗಲಿ ಭಾಷೆಯೊಂದೇ
'ಅಕ್ಕ' 'ಅಣ್ಣಾ' ಅಂದರು.

೧೧

ಬಿಡುಗಡೆಯ ಸಿರಿಬೆಳಕು ಕಂಡಿತು
ಗಾಂಧಿ ತಪಸಿನ ಪುಣ್ಯದಿ
ದೇಶದೇಳ್ಗೆಗೆ ಭಾಷೆಯೇಳ್ಗೆಗೆ
ದುಡಿವ ನಾವ್ ಸಮ ಮಣ್ಣಿಗೆ

ಮೂಲ : ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈ
(ಅನುವಾದ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್)

ಮೀನುಗಾರರ ಹಾಡು

ಬಿ.ಎಂ. ಇದಿನಬ್ಬ

ಹೊಯ್ಯಾರೆ ಹೊಯ್ಯ ! ಹೊಯ್ಯಾರೆ ಹೊಯ್ಯ !
ಹೊಯ್ಯಾರೆ ಹೊಯ್ಯ ! ಹೊಯ್ಯ ಹೊಯ್ಯ ಹೊಯ್ಯ !

೧

ಕೃಷ್ಣ ಬಾರೊ ತನಿಯ ಬಾ
ಸೋಮ ಬಾರೊ ರಾಮ ಬಾ
ಸೇಶ ಬಾರೋ ಕೂಸ ಬಾ
ಗುರುವ ಬಾರೋ ಕರಿಯ ಬಾ
ಓಡೋಡಿ ಬನ್ನಿರೋ, ದುಡಿಮೆಗಾಗಿ ಬನ್ನಿರೋ ॥

೨

ನಮ್ಮ ಬದುಕು ನಮ್ಮ ಭಾಗ್ಯ
ಇರುವ ನಾಡಿಗೇ
ನಮಗೆ ಕಷ್ಟ ನಮಗೆ ಸೌಖ್ಯ
ಕೊಡುವ ಬೀಡಿಗೇ

೩

ನಮ್ಮ ನಾಡು ಬಾನಿನಂಚ
ಮುಟ್ಟಿ ನಿಂತಿದೆ
ನಮ್ಮ ನೆಲೆಯು ಲೆಕ್ಕಮೀರಿ
ದಾಟಿ ಸಾಗಿದೆ

೪

ಕಡಲ ನೀರು ಏರುತಿದೆ
ಕಡಲ ತೆರೆಗಳೇಳುತಿದೆ
ನೊರೆಯು ಕಾರಿ ಹಾರುತಿದೆ
ಕಡಲು ಭೋರ್ಗರೆಯುತಿದೆ!

೫

ಅನ್ನನೀರಗೊಡವೆ ಇಲ್ಲ
ಮಡದಿ ಮಕ್ಕಳಾರು ಇಲ್ಲ
ಬಂಧುಬಳಗ ಎಂತು ಇಲ್ಲ
ದುಡಿದು ದಣಿದು ಸೋತೆವಲ್ಲ

೬

ನಮ್ಮ ದೋಣಿ ನಮ್ಮ ಏಣಿ
ತೆರೆಯ ಎಳೆತಕೆ
ಒಮ್ಮೆ ಜಿಗಿದು ಒಮ್ಮೆ ಕುಣಿದು
ಹಾರಿ ಮುಂದಕೆ

೭

ಹೋಗುತಿದೆ ಸಾಗುತಿದೆ
ನೋಡಿ ದಡದಲಿ
ಹೆದರುತಿದೆ ಮುದುರುತಿದೆ
ಜೀವ ಭಯದಲಿ

೮

ಜೀವನ್ಮರಣದಂತೆ ದುಡಿಮೆ
ನೋಡುತಿರುವಿರಾ?
ನೆಲದಿ ಸುಖದಿ ಮೆರೆದು ನೀವು
ಮರೆಯುತಿರುವಿರಾ?

೯

ಅಯ್ಯೊ ! ಬಿರುಗಾಳಿ ಬಂತು !
ದಿಕ್ಕು ಕಾಣೆವು !
ಅಯ್ಯೊ ! ಜೀವ ಉಳಿವುದೆಂತು
ದಡವ ಕಾಣೆವು

೧೦

ಮೇಲೆ ನೋಡೆ ಬರಿಯ ಗಗನ
ಕೆಳಗೆ ನೋಡೆ ನೀಲ ಜಲವು
ಎಡಕು ಬಲಕು ಅಲ್ಲು ಇಲ್ಲು
ಯಾರು ಇಲ್ಲವು

೧೧

ನಮಗೆ ಸಾವೆ ! ದೇವ ದೇವ
ನೆರವು ಇಲ್ಲವು
ಜೋರು ಜೋರು ಹುಟ್ಟು ಎಳೆದು
ಬಲವು ಇಲ್ಲವು !

೧೨

ಇದು ನಮ್ಮ ಬಾಳು
ಇದು ನಮ್ಮ ಭಾಗ್ಯ
ಇದು ನಮ್ಮ ಗೋಳು
ಇದು ನಮ್ಮ ಸೌಖ್ಯ !

ಮೀನ್ಕ್ಲೆನ ಪದೊ

ಹೊಯ್ಯಾರೆ ಹೊಯ್ಯ ! ಹೊಯ್ಯಾರೆ ಹೊಯ್ಯ !
ಹೊಯ್ಯಾರೆ ಹೊಯ್ಯ ! ಹೊಯ್ಯ ಹೊಯ್ಯ ಹೊಯ್ಯ !

೧

ಕೃಷ್ಣ ಬಲ ತನಿಯ ಬಲ
ಸೋಮ ಬಲ ರಾಮ ಬಲ
ಸೇಸ ಬಲ ಕೂಸ ಬಲ
ಗುರುವ ಬಲ ಕರಿಯ ಬಲ
ಬಲಿತ್ ಬಲೆ, ಬೇಲೆ ಮಲ್ಪುಗಾ ॥

೨

ನಮ್ಮ ಬದ್ಕ್ ನಮ್ಮ ಭಾಗ್ಯೊ
ಉಪ್ಪಿ ನಾಡ್‌ಗ್
ನಂಕ್ ಬಂಜ ನಂಕ್ ಸೌಖ್ಯೊ
ಕೊರ್ಪಿ ಬೂಡುಗ್

೩

ನಮ್ಮ ನಾಡ್ ಬಾನ ನಿಲ್ಕೆ
ದಿಂಜಿದುಂತ್‌ಂಡ್
ನಮ್ಮ ನಿಲೆ ಲೆಕ್ಕ ಮೀರ್ದ್
ದಾಂಟ್‌ದಾತ್‌ಂಡ್

೪

ಕಡಲ ನೀರ್ ಏರೊಂದುಂಡು
ಎರ್ತೆ ಸೆರೆ ಲಕ್ಕೊಂದುಂಡು
ನೊರೆನ್ ಕಾರ್ದ್ ಹಾಕೊಂದುಂಡು
ಕಡಲ್ ಕೊರೆಪುಂಡು

೫

ನುಪ್ಪು ನೀರ್‌ದೆಚ್ಚರಿಜ್ಜಿ
ಬುಡೆದಿ ಜೋಕ್ಲು ಏರ್ಲ ಇಜ್ಜಿ
ನೆಂಟರಿಷ್ಟೆರಂತು ಇಜ್ಜಿ
ಬೇಲೆ ಬೆನ್ದ್ ಸೋತ್ ಪೋಯೆರ್

೬

ಎಂಕ್ಲೆ ಓಡ ಎಂಕ್ಲೆ ಪಾಯಿ
ಸೆರೆತ ಒಯ್ಲ್‌ಗ್
ಒರ ಬೂರ್ದು ಒರ ಲಕ್ಕ್‌ದ್
ಪಾರ್ದ್ ದುಂಬುಗ್

೭

ಪೋವೊಂದುಂಡು ಸಾಗೊಂದುಂಡು
ತೂಲೆ ಕಡಲ್‌ಡ್
ಪೋಡಿಪುಂಡು ಉಂತುದ್‌ಂಡ್
ಜೂವೊ ನಡ್ಗುಂಡು

೮

ಮರಣ ಭಯೊಟು ಎಂಕ್ಲೆ
ಬೇಲೆ, ತೂವೊಂದಲ್ಲರಾ?
ನೆಲೊಟು ಸುಕೊಟು ಬದ್ಕ್ ಮಲ್ತ್
ಮೆರೆಯೊಂದುಲ್ಲರಾ?

೯

ಅಯ್ಯೊ ! ಗಾಳಿ ಬೀಜ್ಂಡ್ !
ಸಾದಿ ತೋಜಂದ್ !
ಅಯ್ಯೊ ! ಜೀವ ಒರಿಪುನೆಂಚ?
ಕರೆನೆ ತಿಕ್ಕಂದ್

೧೦

ಮಿತ್ತ್ ಉಂಡು ಬೊಲ್ದು ಮುಗಲ್
ತಿರ್ತ್ ಉಂಡು ಕಪ್ಪು ನೀರ್
ದತ್ತ್ ಬಲತ್ತ್ ಅಲ್ಪ ಮುಲ್ಪ
ಇಜ್ಜೆರ್‌ಲಾ

೧೧

ಎಂಕ್ಲೆಗೆಂಕ್ಲೇ ದೇಬೆರ್
ತಾಂಗ್ ಮೂಲಿಜ್ಜಿ
ಜೋರು ಜೋರು ಜಲ್ಲೊ ಒಯ್ತ್‌ದ್
ಬಲೊನೆ ಕೈಟ್‌ಜ್ಜಿ

೧೨

ಉಂದುವೆ ಎಂಕ್ಲೆ ಬದ್‌ಕ್
ಉಂದು ಎಂಕ್ಲೆ ಭಾಗ್ಯೊ
ಉಂದು ಎಂಕ್ಲೆ ಮುರ್‍ಯೊ[1]
ಉಂದು ಎಂಕ್ಲೆ ಸೌರ್‍ಯೊ![2]

ಮೂಲ : ಬಿ.ಎಂ. ಇದಿನಬ್ಬ
(ತರ್ಜುಮೆ : ಸಂಪಾದಕ)

1. ಮುರ್‍ಯೊ – ಅಳು
2. ಸೌರ್‍ಯೊ – ಶೌರ್ಯ

ಪೊರ್ಲಕಂಟ್ ನಾಡ್

ಡಾ. ಕನರಾಡಿ ವಾದಿರಾಜ ಭಟ್ಟ

ಪೊರ್ಲಕಂಟ್ ನಾಡ್ । ತೂಲೆ । ನಮ್ಮ ತುಳುವ ನಾಡ್
ಸತ್ಯದರ್ಮಬೂಡು । ಏಪಲ । ನಂಕ್ ಬೋಡೆ ಬೋಡು

ಚೀಪೆ ಉಪ್ಪು ನೀರ್ । ಮುಲ್ಪ । ದಿಂಜೊಂದಿತ್ತಿ ಊರು
ಸುಖೊದುಕ್ಕೊನಲ್ಕೆ । ಅಯ್ಪೆ । ಬದ್ಕೊಂದಿತ್ತಿ ಪಲ್ಕೆ

ಪಚ್ಚೆ ಪೊದೆತಿ ಗೂಡು । ಸುತ್ತ । ಗುಡ್ಡೆ ಬೈಲ್ ಕಾಡ್
ಪಣವುದಾತ್ ಪೊರ್ಲು । ಅವ್ವೆ । ಬೂಮಿದೇವಿ ತಿರ್ಲ್

ಅಮುರ್ತೊತುಂಬಿತಾರೆ । ಹೊ । ಬಂಗಾರ್ ಕೈಲ್ ಬಾರೆ
ಗಿಜ್ಜೆ ಕಟ್‌ದಿ ಕಂಗ್ । ತೂಪಿ । ಕಣ್ಣ್‌ಗೊಂಜಿ ಅಂಗ್

ಕೋಲೊ ನೇಮಪರಕೆ । ನೆಟ್ಪ್ । ತುಳುವ ಬದ್ಕ್ ಸರ್ಕೆ
ನಂಬಿಬೂತೊ ದೈವ । ನಮ್ಮ । ಮದಿಪು ಬುಡ್ದು ಪೋವ?

ಕಪ್ಪುರೆಂಕಿದುಂಡೆ । ಮೋನೆದ । ಬೊಲ್ಪು ಚಾಯೆ ಪೋಂಡೆ
ಬ್ಯಾರ ದಿಂಜಿಪೋಂಡೆ । ಬದ್ಕ್‌ಡ್ । ದುಡ್ಡೆ ಒಂಜಿ ಆಂಡೆ

ಎಡ್ಡೆ ಮಲ್ಪಿ ಮನಸ್ । ಲೋಕೊಗು । ತುಳುವೆ ಕೊರ್ಪಿ ತಿನಸ್
ಜ್ಞಾನದೇವೆರಾರ್ । ಅವ್ವೆ । ಕಬೆತಿ ಪೆತ್ತ ಪೇರ್.

ಚಂದದ ನಾಡು

ಚಂದದ ನಾಡು । ನೋಡಿ । ನಮ್ಮ ತುಳುವ ನಾಡು
ಸತ್ಯ ಧರ್ಮ ಬೀಡು । ಎಂದಿಗು । ನಮಗೆ ಬೇಕೇ ಬೇಕು

ಸಿಹಿ ಉಪ್ಪು ನೀರು । ಇಲ್ಲಿ। ತುಂಬಿರುವ ಊರು
ಸುಖ ದುಃಖ ನಲಿವು । ಇಲ್ಲೆ। ಬದುಕಿರುವ ಬೀಡು

ಹಸಿರು ತುಂಬಿರುವ ಗೂಡು । ಸುತ್ತ । ಗುಡ್ಡೆ ಬಯಲು ಕಾಡು
ನಾಣ್ಯದಷ್ಟು ಚಂದ । ಅದುವೆ । ಭೂದೇವಿ ಮೋದ

ಸುಧೆ ತುಂಬಿದ ತೆಂಗು । ಹೋ । ಬಂಗಾರ ಬಾಳೆಗೊನೆ
ಗೆಜ್ಜೆಯಂತೆ ಅಡಿಕೆ । ನೋಡುವ । ಕಣ್ಣಿಗೆಂಥ ಮಾಟ

ಕೋಲ ನೇಮ ಹರಕೆ । ಅಲ್ಲೆ। ತುಳುವ ಬದುಕು ಮೆರೆಯೆ
ನಂಬಿದ ಭೂತ ದೈವ । ನಮ್ಮ। ಬಯಕೆ ತುಂಬಿ ನೀಡೆ

ಬಿಳಿಯ ಛಾಯೆ ಹೋಯ್ತೇ । ಮೋರೆಗೆ । ಕಪ್ಪು ಬಳಿದರಲ್ಲೇ
ಹಣವೆ ಆಯ್ತು ಬದುಕು । ಇಲ್ಲಿ। ವ್ಯವಹಾರವೆ ದೊಡ್ಡದಾಯ್ತು

ಒಳಿತಾಗಲೆಂದು । ಲೋಕಕೆ । ಶುಭವ ಕೊಡುವ ತುಳುವ
ಜ್ಞಾನ ದೇವರವನೇ । ಅದುವೆ । ಕಪಿಲೆ ಹಸುವ ಹಾಲು

ಮೂಲ : ಡಾ. ಕನರಾಡಿ ವಾದಿರಾಜ ಭಟ್ಟ
(ಅನುವಾದ : ಸಂಪಾದಕ)

ಏತ್ ಪೊರ್ಲುಂ

ಶ್ರೀಮತಿ ಸುನೀತಾ ಎಂ. ಶೆಟ್ಟಿ

ಕಡಲ ಬರಿತ ನಾಡ್ ನಮ್ಮವು ಪಚ್ಚೆ ಪಜಿರ್‌ದಾ
ಉಡಲ್ ದಿಂಜುನ ಗಟ್ಟಸೀಮೆಲು ಏತ್ ಪೊರ್ಲುಂದಾ ॥

ಗುತ್ತು ಬರ್ಕೆಲು ನಾಡ್ ಬೂಡು[1]ಲು ಅಳಿಯ ಕಟ್ಟ್‌ದಾ
ಪತ್ತ್ ಮಂದೆಲು[2] ಒಪ್ಪೊಡಿತ್ತಿನ ಕೂಡುಕಟ್ಟ್‌ದಾ ।
ಸುತ್ತು ಮದ್‌ಲ್[3]ಗ್ ಆನೆಬಾಕಿಲ್[4] ಚಿತ್ರ ಚಿತ್ರದಾ
ಸತ್ಯ ದೈವೊಲೆ ಬೂತ ಚಾವಡಿ ಏತ್ ಪೊರ್ಲುಂದಾ ॥೧॥

ಕಿದೆಟ್ ಗಿಡ್ಡೆರು[5] ಬಾಲೆ ಕಂಜಿಲು ನಲಿಕೆ ಬಲಕೆದಾ
ಕುದಿತ ಕಂಬುಲ ಕೋರಿ ಕಟ್ಟಲ ಬಾರಿ ಬಿರ್ಂದಾ ।
ಪುದರ್ ಪೋಯಿನ ಅಂಕ ಆಯನ ಗೌಜಿ ಗಡ್ಡ್‌ದಾ
ಮದಪೆರಾವಂದಿ ನೇಮ ತಂಬಿಲ ಏತ್ ಪೊರ್ಲುಂದಾ ॥೨॥

ಇಲ್ಲದುಲಯಿಡ್ ಕಿನ್ನಿ ಮದಿಮಲ್ ಪೊರ್ಲುಂಕಂಟ್‌ದಾ
ಮಲ್ಲದೊಂಪೊಡು ದಲ್ಯ[6] ಪಾಡ್ದೆರ್ ಕಟ್‌ದಿ ಜೋರ್ನದಾ[7] ।
ಮಲ್ಲಿಗೆದ ಬುಡು[8]ಜಲ್ಲಿ ಪಾಡ್ದಿನ ಕಂಚಿಲ್[9] ಬಾಲೆದಾ
ಇಲ್ಲ ಪರಬೆರೆ ಮಂಚಿಲ್[10] ದಿಬ್ಬಣ ಏತ್ ಪೊರ್ಲುಂದಾ ॥೩॥

ಕುರಲ್ ಕಟ್ಯೆರ್ ಪೊಲಿ[11] ಪೊಲಿಂದೆರ್ ವಣಸ್ ಪುದ್ದರ್[12]ದಾ
ಮರತನೇ ಗಜಕಂಬ ಬೋದಿಗೆ[13] ದರಿ ಮೊಗಂಟೆ[14]ದಾ ।
ವರ್‌ಸದಗೆಲ್‌ಗ್ ಕೂಡು ಕುಟುಮೊಲು ಅಲ್ಪ ಮುಲ್ಪದಾ
ಸೇರುನಂಚಿನ ಕಟ್ಟ್‌ಕಟ್ಟಲೆ ಏತ್ ಪೊರ್ಲುಂದಾ ॥೪॥

ಓಡೆ ಪೋಂಡುಯೆ ಇಂಚಿ ಮೋಕೆಲು ಒಂಜಿ ಅಗೋಲಿ[15]ದಾ
ನಾಡ್‌ಬುಡುನಗ ಪಿರ್ತಿ ಪಾರ್‌ಂಡ್ ಗಾಲಿ ಪೇಂಟೆದಾ ।
ಮೂಡ ಪಾರುಂಡು ಸಂಪುನಟ್ಟುಂಡು ಪೊರ್ಲುಗು ಬದ್‌ಕ್‌ದಾ
ಗೋಡೆಕಟ್ಟ್‌ಗ ಮಾಡ್‌ದೆರ್ಪುಗ ತುಳುವ ಐಸ್‌ರದಾ ॥೫॥

1. ಬೂಡು- ಗುತ್ತು, ಬರ್ಕೆ, ಬೂಡು - ಸಿರಿವಂತ ಗಣ್ಯರ ಮನೆಗಳು 2. ಮಂದೆ - ಮಂದಿ 3. ಮದ್‌ಲ್-ಗೋಡೆ. 4. ಆನೆಬಾಕಿಲ್-ಹೆಬ್ಬಾಗಿಲು 5. ಗಿಡ್ದೆರು-ಕಂಬಳದ ಕೋಣಗಳು 6. ದಲ್ಯ-ಬಿಳಿಯ ಮಡಿಬಟ್ಟೆ 7. ಚೋರ್ನ-ತೋರಣ 8. ಜಲ್ಲಿ-ಜಡೆಗೆ ಹೂಮಾಲೆ ಸುತ್ತಿದ 9. ಕಂಚಿಲ್ - ಒಂದು ವಿಧದ ಹರಕೆ, ಕರು ಕಟ್ಟುವ ಜಾಗ 10 ಮಂಚಿಲ್-ಪಲ್ಲಕಿ 11. ಪೊಲಿ-ಅದೃಷ್ಟ 12. ಪುದ್ದರ್-ಪುದ್ವಾರ್, ಹೊಸ್ತೂಟ 13. ದರಿ - ದಳಿ 14. ಮೊಗಂಟೆ - ಮೊಗಸಾಲೆ 15. ಅಗೋಲಿ - ಅಗಲವಾದ ದೊಡ್ಡ ಬಟ್ಟಲು

ಎಷ್ಟೊಂದು ಸುಂದರ

ಕಡಲ ತಡಿಯ ನಾಡು ನಮ್ಮದು ಹಚ್ಚ ಹಸುರಿನದು
ಕಣ್ಣು ತುಂಬುವ ಘಟ್ಟ ಸೀಮೆಯ ಚೆಲುವ ಬೀಡಿನದು

ದೊಡ್ಡ ಮನೆತನ ನಾಡುವಾಡೆಯ ಅಳಿಯಕಟ್ಟಿನಲಿ
ಹತ್ತು ಮಂದಿಗಳೊಂದೆ ಮನೆಯಲಿ ಕೂಡುಬಾಳಿನಲಿ
ಕೋಟೆ ಕೊತ್ತಲ ಆನೆಬಾಗಿಲು ಚಿತ್ತಚಿತ್ತಾರ
ಸತ್ಯ ದೈವಗಳಿರುವ ಚಾವಡಿ ದೈವ ಭಂಡಾರ

ಕರೆವ ಹಸುಕರು ಹೋರಿ ಎತ್ತುಗಳಿಹವು ಹಟ್ಟಿಯಲಿ
ಕೋಳಿ ಅಂಕಗಳಿಹವು ಕಂಬಳ ನೇಮ ಗೌಜಿಯಲಿ
ನಾಡ ಮೆರೆಸುವ ಜಾತ್ರೆ ಆಯನ ಬೆಂಡು ಬತ್ತಾಸು
ಮರೆಯಲಾಗದು ಕೋಲ ಬಂಡಿ ಸಿರಿಯ ನಾಡಿನಲಿ

ಪುಟ್ಟ ಮದುಮಗಳಿಹಳು ಒಳಗೆ ಚೆಲುವ ಬಂಗಾರ
ಸಿಂಗರಿಸಿಹರು ಮದುವೆ ಮಂಟಪ ಕಟ್ಟಿ ತೋರಣವ
ಮಲ್ಲಿಗೆಯ ಬಿಡುಜಲ್ಲೆ ಹಾಕಿದ ಮುದ್ದು ಮಗಳವಳು
ಮುದುಕ ಮುದುಕಿಯರ ಮೇನೆ ದಿಬ್ಬಣದ ನೆನಪು ಸೊಗಸಿನದು

ತೆನೆಯ ಕಟ್ಟಿ ಮನೆಯ ತುಂಬಿ ಉಣ್ಣುವರು ಹೊಸಕ್ಕಿ ಊಟ
ಮರದ ಗಜಕಂಬ ಬೋದಿಗೆ ಹೊಸಿಲ ಚಿತ್ತಾರ
ವಾರ್ಷಿಕದ ತಿಥಿಕೂಟಕ್ಕೆ ಸೇರಿರುವ ದೂರ ಹೋದವರು
ಒಟ್ಟು ಸೇರುವ ನೋಟವದು ಎಂಥ ಚೆಲುವಿನದು

ಇಂಥ ಪ್ರೀತಿ ಎಲ್ಲಿ ಹೋಯಿತು ಮಾರು ದೂರದಲಿ
ಊರು ಬಿಟ್ಟರೆ ಪ್ರೀತಿ ಹೋಯಿತೆ ಪೇಟೆ ಗಾಳಿಯಲಿ
ಚೆಲುವ ಬದುಕಿನ ತಂಪನರಸುತ ಮನಸು ಸಾಗಿಹುದು
ಗೋಡೆಯೇರಿಸಿ ಮಾಡನೆಬ್ಬಿಸಿ ತುಳುವ ನಾಡಿನದು

ಮೂಲ : **ಶ್ರೀಮತಿ (ಡಾ.) ಸುನೀತಾ ಎಂ. ಶೆಟ್ಟಿ**
(ಅನುವಾದ : ಸಂಪಾದಕ)

ಪಡುವಣ ನಾಡು

ಕುರಾಡಿ ಸೀತಾರಾಮ ಅಡಿಗ

ಪಡುನಾಡಿನ ಗಾಂಭೀರ್ಯದ
ಗದ್ದಲವೇನೋ ಓಹೋ ।

ಸಿರಿವೈಭವ ಎತ್ತೆತ್ತಲು
ಜನಜೀವನ ಒಹೊಹೋ ॥ಪ॥

ಪಡುಗಡಲಿನ ಮೊರೆತದ ಧ್ವನಿ ।
ನಿತ್ಯ ಶುಭಾಶಯದೊಸಗೆ ।
ಎದುರೆತ್ತರ ಸಹ್ಯಾದ್ರಿಯ ।
ಎದೆಧೈರ್ಯದ ಬೆಸುಗೆ ॥
ಉದ್ದಗಲಕೆ ಮೈಚಾಚಿದ ।
ನದಿಯಮೃತವು ಧರೆಗೆ ।
ವಿಸ್ತಾರದ ಹಸುರಿನ ಹೊಲ ।
ವನ ವೈಭವದುಡುಗೆ ॥೧॥

ಬಾನೆತ್ತರ ಕತ್ತೆತ್ತಿದೆ ।
ತೆಂಗಿನ ತೆಳು ಚವುರಿ ।
ಸುತ್ತೆತ್ತಲು ನರುಗಂಪಿನ ।
ಹೂ ಬನ ಸಿರಿ ಲಹರಿ ॥
ಮಳೆ ಮೋಡದ, ಸೆಳೆ ಮಿಂಚಿನ ।
ಧಾರಾವರ್ಷದ ವಾರಿ ।
ಪ್ರಕೃತಿಯ ಸೆರೆ, ತತ್ವದ ಅಲೆ ।
ಇಲ್ಲೇ ನಿಂತ ಮುರಾರಿ ॥೨॥

ಕಲ್ಲರಳಿದ, ಕಲೆ ಮಿರುಗಿದ।
ಗೊಮ್ಮಟ ಮೇಗಾಟ।
ವೈವಿಧ್ಯದ ಧರ್ಮಾಮೃತ।
ಭಾಷೆಯ ಒಡನಾಟ॥
ಪೌರಾಣಿಕ ಭಾವೋನ್ನತಿ।
ಬಣ್ಣದ ಬಯಲಾಟ।
ಕೈಗಾರಿಕೆ, ಕೃಷಿತತ್ಪರ।
ದುಡಿಮೆಯ ಸವಿಯೂಟ॥೩॥

ಪಡ್ಡೈದೂರು

ಪಡ್ಡೈದೂರುದ ಗಾಂಭೀರೊದ
ಗೌಜಿ ಎಂಚಿನ, ಓಹೋ
ವೋಲು ತೂಂಡಲ ಸಿರಿವೈಭವೊ
ಬದ್ಕ್ ಭಾಗ್ಯೊ ಒಹೋಹೋ!

ಪಡ್ಡೈ ಕಡಲ್‌ದ ಗರ್ಜನೆದಾ ಸೊರ
ಕೊರ್ಪಿನ ನಿಚ್ಚೊದ ಮದಿಪು
ಎದುರೆತ್ತರೊ ಸಹ್ಯಾದ್ರಿದ
ತಂಕದ ಬೀರದ ಬೆಸುಪು
ಉದ್ದಗಲೊಡು ಪರಿತೊಂದುಪ್ಪುನ
ಸುದೆಸೊದೆ ನೆಲಕ್
ಪರಡೊಂದುಪ್ಪುನ ಪಜಿರ್‌ದ ಬೂಮಿ
ಕುಂಟುದಲಕ ಮೈಮನೊಕು ॥೧॥

ಅಕ್ಕಸದೆತ್ತರೊ ಬುಲೆದ್‌ಂಡ್
ತಾರೆದ ತಿರಿ ಚವೆರಿ
ಸುತ್ತಲಮುತ್ತಲ ಕಮ್ಮೆನ ದಿಂಜಿನ
ಪೂ ಬನ ಸಿರಿಲಹರಿ
ಕರಿ ಮುಗಲ್‌ದ ಮೆನ್ಕುನ ಮೆಂಚ್‌ದ
ದೊರಿಯುನ ಬರ್ಸೊದ ಧಾರೆ
ಬೂಮ್ಯಪ್ಪೆನ ತೆರೆ ತತ್ವೊದ ನಿಲೆ
ಮೂಲುಂತುದೆ ನಂದಕುಮಾರೆ ॥೨॥

ಕಲ್ಲರಳ್‌ದ್ ಕಲೆ ಮೆನ್ಕ್ಂಡ್
    ಗುಮ್ಮಟೆರೆನ ಕೂಟೊ
ತರತರ ಧರ್ಮೊಲೆ ಸೊದೆ
    ಬಾಸೆದ ಒಡನಾಟೊ
ಪೌರಾಣಿಕ ಭಾವೋನ್ನತಿ
    ಬಣ್ಣೊದ ಬಯಲಾಟೊ
ಕೈಗಾರಿಕೆ ಬೆನ್ನಿದ ಬೆನ್ಪಾಟಿಕೆ
    ಒಣಸ್ ತೆನಸ್‌ದ ರಸಕೂಟೊ

ಮೂಲ : **ಕುರಾಡಿ ಸೀತಾರಾಮ ಅಡಿಗ**
(ತರ್ಜುಮೆ : ಸಂಪಾದಕೆ)

ಪಯಸ್ವಿನೀ ತೀರದ ಮಳೆ

ಕುತ್ಯಾಳ ನಾಗಪ್ಪ ಗೌಡ

ಬಾನು ಹೊದೆಯಿತು ಕಪ್ಪು ಕಂಬಳಿ,
ವಿದ್ಯುತ್ತಿಲ್ಲದ ಇರುಳು!
ಗುದ್ದಾಡಲು ಓಡಾಡುವ ಗುಡುಗಿಗೆ
ಕೋಲ್ಮಿಂಚಿನ ಬೆಳಕು!

ಊರಿನ ದಾರಿಯ ಮೋರಿಯ ಬಾಯಿಯ
ತೊಳೆಯುತ ದುರ್ನಾತದ ದೂರು;
ರಸ್ತೆಯ ದುರವಸ್ಥೆಯ ಕಸಕಡ್ಡಿಯ ಅಡ್ಡಿಯ
ಲೆಕ್ಕಿಸದುಕ್ಕಿತು ಮಳೆ ನೀರು,
ತೆಂಗಿನ ಕಂಗಿನ ಹೆಮ್ಮೆಯ ತಲೆಗಳ
ಮಣಿಸುತ ಜರಗಿದ ದರಬಾರು!

ಮಣ್ಣಿನ ಬಣ್ಣದ ಸೀರೆಯನುಟ್ಟಳು
ಪಯಸ್ವಿನಿ ಗಡಿಬಿಡಿಯಲ್ಲಿ,
ವಿದಾಯ ಬಯಸಿವೆ ಎಲೆಗಳ ಹನಿಗಳು
ಬಾಗಿದ ಮರದಡಿಯಲ್ಲಿ

ಬಿಸಿ ಮೈ ಬಂಡೆಯ ಸುತ್ತಲು ಸರಿದಳು,
ಮಂಡೆಯ ಸವರಿದಳು;
ದಂಡೆಯ ಮೇಲಿನ ಆಟದ ಮನೆಗಳ
ಅಂಗಳವೇರಿದಳು.

ನಿಂತ ಪಯಸ್ವಿನಿ ಹೊರಟೇ ಬಿಟ್ಟಳು
ದೂರದ ದೊರೆ ಮನೆಗೆ;
ಏರುತ ಇಳಿಯುತ ಕರೆಯುತಲಿರುವನು
ಅಕ್ಷಯದರಮನೆಗೆ.

ನಡೆಯುತಲಿರುವಳು ಮುಗಿಲಿನ ಮಗಳು
ಪರಿಚಿತ ಬೀದಿಯಲಿ.
ತೂಗುವ ಸೇತುವೆ ಬಾಗುತ ಇಣುಕಿದೆ
ನೆನಪಿನ ಭಾರದಲಿ.

ಹಕ್ಕಿಯ ಹಾಡಿನ ಪಕ್ಕದ ಕಾಡಿನ
ಗಿಡಮರ ಎಲೆ ತಲೆದೂಗುತಿವೆ.
ಒಣಗಿದ ಬೀಜದ ಒಳಗಿನ ಕಿರುನಗು
ಮಣ್ಣಿನ ಮುಖದಲಿ ಮೊಳೆಯಲಿದೆ.

ಪಯಸ್ವಿನಿ ಬರಿತ್ತ ಬರ್ಸೊ

ಬಾನ ಪುದೆತ್‌ಂಡ್ ಕಪ್ಪು ಕಂಬೊಳಿ
ಕರೆಂಟ್‌ದಾಂತಿನ ಇರ್ಲ್!
ಲಡಾಯಿಗ್ ಪಿದಾಡಿನ ತೆಡಿಲ್‌ಗ್
ಕೋಲು ಮೆಂಚಿದ ಸೂಟೆ[1] !

ಊರುದ ಸಾದಿಡ್ ಮೋರಿದ ಬಾಯಿಡ್
ದುರ್ನಾತೊನು ದೆಕ್ಕಿನ ದೂರು
ಮಾರ್ಗೊದ ಬಂಜೊನು ಕಜವುದ ರಾಸಿನ್
ಗೆಣೆಪ್ಪಂದೆ ಬತ್ತ್‌ಂಡ್ ಬರ್ಸೊದ ನೀರ್
ತಾರೆದ ಕಂಗ್‌ದ ಹಂಕಾರೊದ ತರೆನ್
ಬಗ್ಗಾದ್ ನಡಪಂಡ್ ದರಬಾರ್!

ಮಣ್ಣ್‌ದ ಬಣ್ಣೊದ ಸೀರೆನ್ ತುತ್ಯೊಳ್
ಪಯಸ್ವಿನಿ ಗಡಿಬಿಡಿಟ್
ಅಗಪು[2]ನ ಬಯಕೆದ ಇರೆ ಇರೆ ಪನಿಕುಲು
ಬಗ್ಗಿನ ಎಗ್ಗೆದ ಮರತ್ತಡಿಟ್

ಬೆಚ್ಚನೆ ಪಾದೆನ್ ಸುತ್ತೊಲ ತಾಂಟ್ಯೊಲು
ಮಂಡೆನ್ ಬಾಮ್ಯೊಲು[3]
ಸುದೆಬರಿ ಮಿತ್ತ್‌ದ ಆಟೊದ ಇಲ್ಲದ
ಜಾಲ್‌ನ್ ಬಡತ್ತಿಯಲ್

ಉಂತಿನ ಪಯಸ್ವಿನಿ ಪಿದಡ್ದ್ ಪೋಯಲ್
ದೂರೊದ ಅರಸುನ ಇಲ್ಲಡೆಗ್
ಏರೊಂದು ಮಗ್‌ರೊಂದು ಲೆಪ್ಪುವೆ ಅರಸೆ
ಅಕ್ಷಯದರಸ್ತ್‌ನೊಗು

ನಡತ್ತೊಂದುಲ್ಲಲ್ ಮುಗಲ್ದ ಮಗಳ್
ಏಪೊಲ ಪೋಪುನ ಸಾದಿಬರಿ
ತೂಂಕುನ ಸಂಕೊ ಬಗ್ಗ್‌ದ್ ತೂಂಡ್
ನೆಂಪುದ ದುನ್ನೊಡು ಓಲಸರಿ

ಮುಟ್ಟೊದ ಕಾಡ್‌ದ ಪಕ್ಕಿಲೆ ಕಿಲೆಪುಗು
ದಯಿಮರ ಇರೆ ತರೆ ತೂಂಕುಂಡು
ನಿಂಗಿನ ಬಿತ್ತ್‌ದ ಉಲಯದ ತೆಲಿಪು
ಮಣ್ಣ್‌ದ ಮೋನೆಡ್ ಕೊಡಿಪ್ಪುಂಡು.

ಮೂಲ : **ಕುತ್ಯಾಳ ನಾಗಪ್ಪಗೌಡ**
(ತರ್ಜುಮೆ : **ಸಂಪಾದಕೆ**)

1. ಸೂಟೆ – ಪಂಜು
2. ಆಗಪು – ವಿದಾಯ
3. ಬಾಮ್ಯುನೆ – ಪ್ರೀತಿಯಿಂದ ನೆನೆಯುವುದು
4. ಅರಸ್ತನ – ಅರಮನೆ, ಆಡಳಿತ

ತುಳುವಪ್ಪೆ ಮದಿಪು

ಕುದ್ಕಾಡಿ ವಿಶ್ವನಾಥ ರೈ

ತೈ ತೈ ಪನ್ಲೆಯ ನಲಿಪುಪಲಪ್ಪೆ
ಮೈಮೆದ ಅಪ್ಪೆ ತುಳುವಪ್ಪೆ
ಅಜ್ಜಿನ ಪಿಜ್ಜಿನ ದೊಡ್ಡನ ಮಗಲ್
ಕನ್ನಡೊತಪ್ಪೆನ ಒಪ್ಪತ ಸಿದ್ಯಪ್ಪೆ

ಕೊಂಗು ಚೇರಲು ತೆಲುಂಗು ಕೊಡಗೆರೆ
ಒಪ್ಪತ ಅಪ್ಪೆಯ ತುಳುವಪ್ಪೆ
ಕಾರ್‍ನ್ ದೆಕ್ಕುಂಡು ಕಡಲ್‍ತ ಮೋದೋ
ತರೆತಣಿಯಾಲೆಗ್ ಮುಡಾಯಿಗಟ್ಟ

ದತ್ತ್ ಬಲತುಲ್ಲವು ತುಳ್ಳಲ್ ಕತೆಲ್
ತಿಗಲೆಡ್ ಪುಗರ್ತೆದ ಆಟೊದ ಮಜಲ್
ರಡ್ಡ್ ಸಾವಿರ ಒರ್ಸೊತ ಕೊಳಿಕ್ಕೆ
ಗ್ರೀಕೆರೆ ನಾಟಕೊ ತುಳುತವು ನಲಿಕ್ಕೆ

ಬಾರ್ಕೂರುಡಾಳ್‍ನ ಬಾರಗೆರುಲ್ಲೆರ್
ಆಳೂಪ ವಂಸೊತ ಆಳ್ವೆರ್‍ಂದುಲ್ಲೆರ್
ಬಂಟೆರ್ ಜೈನೆರ್ ಬಲ್ಲಾಕ್ಲ್ ಉಲ್ಲೆರ್
ಬೆರ್ಮೆರ್ ಬೈದೆರ್ ಕಡಲ್‍ತ ಬಾಲೆಲ್

ಮನ್ಸೆರ್ ಪರವೆರ್ ನಲ್ಕೆತ ಮೂಲ್ಯೆರ್
ಅಪ್ಪೆನ ಮೂಲೊತ ಲೆಪ್ಪುಗು ಉಲ್ಲೆರ್
ದೈವೊ ದೇವೆರ್ ಬೂತೊಗುಳಾತೆರ್
ಗಡಿಪತ್ತಿ ಬೂಲ್ಯೊನು ನಡಪಾವೊನುಲ್ಲೆರ್

ಬರವು ಸರವು ಇದ್ಯಾಂತಿನ ಬಾಸೆ
ಉಡಲ್‌ಡ್ ಪುಟುದಿನ ಸುತಿಯವು ಬಾಸೆ
ತೆಂಬರೆ ದುಡಿಕ್‌ಲೆ ದುನಿಪುನ ದನಿಕ್
ಎಕ್ಕಲ ವಾದ್ಯೊತ ಜಕ್ಕೆದ ಬಲಿಕ್

ಬಲಿ ಬಲಿಯೇಂದ್ರನ್ ಲೆಪ್ಪುನ ಜನೊಕು
ಕೊರ್ಲಪ್ಪೇ ಈ ಪೊರ್ಲುತ ಮದಿಪು.

ತುಳುವಬ್ಬೆಯ ಹಾರೈಕೆ

ಥೈ ಥೈ ನುಡಿಯಿರಿ ನಲಿಯುವಳಮ್ಮ
ಮಹಿಮೆಯ ಅಮ್ಮ ತುಳುವಮ್ಮ
ಅಜ್ಜಿಯ ಪಿಜ್ಜಿಯ ಅಕ್ಕನ ಮಗಳು
ಕನ್ನಡಮ್ಮನ ಮುದ್ದಿನ ಚಿಕ್ಕಮ್ಮ

ತಮಿಳು ಕೇರಳ ತೆಲುಗು ಕೊಡವರ
ಸಹೋದರಿ ಈ ತುಳುವಮ್ಮ
ಕಾಲನು ತೊಳೆಯುವ ಕಡಲಿನ ಮೋದ
ತಲೆಮಣಿ ಆಕೆಗೆ ಮೂಡಣ ಘಟ್ಟ

ಎಡದಲಿ ಬಲದಲಿ ತುಳ್ಳಲ್[1] ಕತೆಗಳು[2]
ಹೃದಯದಿ ಹೆಮ್ಮೆಯ ಆಟದ ಅಟ್ಟ[3]
ಎರಡು ಸಾವಿರ ವರ್ಷದ ನಂಟು
ಗ್ರೀಕರ ನಾಟಕಕು ಅಂಟು

ಬಾರ್ಕೂರಿನಲಿ ಬಾರಗರು
ಆಳೂಪ ವಂಶದ ಆಳ್ವರು ಇಹರು
ಬಂಟರು ಜೈನರು ಬಲ್ಲಾಳರು
ಬ್ರಾಹ್ಮಣ ಬಿಲ್ಲವ ಮೀನುಗಾರರು

ಮಾನ್ಯರು ಪರವರು ನಲ್ಕೆಯ ಮೂಲ್ಯನೆ
ಅಮ್ಮನ ಹಿಂದಣ ಮೊದಲ ಮಕ್ಕಳು
ದೈವ ದೇವರು ಭೂತಗಳಿಹವು
ನಾಡಿನ ರಕ್ಷಣೆ ಮಾಡುತಲಿಹವು

ಓದು ಬರಹ ಇಲ್ಲದ ಭಾಷೆ
ಹೃದಯದಿ ಹುಟ್ಟಿದ ಭಕ್ತಿಯ ಭಾಷೆ
ತೆಂಬರೆ ದುಡಿ ವಾದ್ಯದ ನುಡಿಗೆ
ದನಿಗೊಡುತಿರುವುದು ದೇವರ ಬಲಿಗೆ

ಬಲಿ ಬಲಿಯೇಂದ್ರನ ಕೂಗುವ ಜನಕೆ
ಹಾರೈಸಮ್ಮ ಶುಭದೊಸಗೆಯ ಹರಕೆ

ಮೂಲ : **ಕುದ್ಕಾಡಿ ವಿಶ್ವನಾಥ ರೈ**
(ಅನುವಾದ : **ಸಂಪಾದಕ**)

1 ತುಳ್ಳಲ್ - ಕೇರಳದ ತುಳ್ಳಲ್ ಉತ್ಸವ.
2 ಕತೆಗಳು - (ತುಳುನಾಡಿನ ಒತ್ತಟ್ಟಿಗಿರುವ) ಉತ್ತರ ಕನ್ನಡ ಜಿಲ್ಲೆಯ ಯಕ್ಷಗಾನ ಕತೆಗಳು
3 ಆಟದ ಅಟ್ಟ - ಯಕ್ಷಗಾನ

ಕಾಸರಗೋಡು

ಡಾ. ಕೆ.ವಿ. ತಿರುಮಲೇಶ್

ಎಷ್ಟೊ ನಾಡುಗಳಿವೆ ಎಷ್ಟೊ ಕಾಡುಗಳಿವೆ
ಕಾಸರಗೋಡು ಒಂದೇ
ಅದು ನಾ ಹುಟ್ಟಿ ಬೆಳೆದ ನಾಡು

ಕಾಶ್ಮೀರವಲ್ಲ ಕುಲು ಮನಾಲಿಯಲ್ಲ
ನೀಲಗಿರಿ ಊಟಿಯಲ್ಲ
ಆದರೂ ಅದಕಿರುವುದು
ಅದರದೇ ಆದ ಚಂದ

ಪಡುಗಡಲ ತಡಿಯ
ಒಂದು ತುಣುಕು
ಸುಂದರ ಚಂದ್ರಗಿರಿ ನದಿಪಕ್ಕ
ಚಂದ್ರಖಂಡದಂತಹ ಸೊಬಗು

ಭೋರ್ಗರೆವ ಸಮುದ್ರ ಪಡುವಲಲಿ
ಆಕಾಶಚುಂಬಿ ಸಹ್ಯಾದ್ರಿ ಬೆಟ್ಟ ಮೂಡಲಲಿ
ಮಧ್ಯೆ ಹಾಸಿ ಮಲಗಿದೆ ನಮ್ಮ
ಪ್ರೀತಿಯ ಕಾಸರಗೋಡು

ಕನ್ನಡ ತುಳು ಮಲೆಯಾಳ
ಕೊಂಕಣಿ ಮರಾಠಿ ಉರ್ದು
ಹಲವು ಹಕ್ಕಿಗಳ ಕಲರವದಂತೆ
ಅದೆ ಒಂದು ಕೇಳ್ವ ಸೊಗಸು

ದೇವಾಲಯ ಇಗರ್ಜಿ ಮಸೀದಿ
ಅಲ್ಲಲ್ಲಿ ಜಾತ್ರೆ ತೇರು ಬೆಡಿ ಸಂತೆ ಭೂತಕೋಲ
ಚೆಂಡೆ ಮದ್ದಳೆ ಯಕ್ಷಗಾನ ಬಯಲಾಟ
ಲೋಕದೊಳಗೆ ಇದೊಂದು ಲೋಕ

ಮಾವು ಇಮ್ಮಾವು ಹಲಸು
ತೇಗ ಬೀಟಿ ಶ್ರೀಗಂಧ
ಗೇರುಬೀಜ ಕಾಳುಮೆಣಸು
ಹುಲಿ ಹಂದಿ ಕಾಡುಗೆಣಸು

ಕಂಗು ತೆಂಗು ಬಾಳೆ ಹಸಿರು
ಭತ್ತ ಕಬ್ಬು ಗದ್ದೆ ಬಯಲು
ಬೆಟ್ಟ ಕಣಿವೆ ಹಳ್ಳಕೊಳ್ಳಗಳ
ನೋಟ ಸಾಲು ಸಾಲು

ಅದು ನೋಡು ಬೆರ್ಚಪ್ಪ
ಇದು ನೋಡು ಬೈಪಣೆ
ಇದು ತೊಂಡೆಚಪ್ಪರ ಬೆಂಡೆ ಬದನೆ ಸಾಲು
ಅಲಸಂಡೆ ಕುಂಬಳ ಸಿಹಿಗುಂಬಳ
ಸೊರೆಕಾಯಿ ಸೌತೆ
ಅಲ್ಲಲ್ಲಿ ಸಿಹಿನೀರ ಒರತೆ
ಇನ್ನೇನು ಯಾವುದಕೆ ಕೊರತೆ

ನೋಡುನೋಡು ಪನ್ನೀರು
ನೋಡು ಮಲ್ಲಿಗೆ ಸೇವಂತಿಗೆ
ನೋಡು ಎರವಂತಿಗೆ ನಿತ್ಯಪುಷ್ಪ
ನೋಡು ಕೇದಿಗೆ ರತ್ನಕಂಟಿಕೆ ಇದು ತುಲಸಿ
ನೋಡಿದೋ ತುಂಬಿ ಜೇನ್ನೊಣ ಜೇನು
ತೊಡವೆ ಮಂಜೆಟ್ಟಿ ಕೋಲುಜೇನು ಹೆಜ್ಜೇನು
ಇದೊ ಕಾಗೆ ಕೋಗಿಲೆ ಗಿಳಿ ಗುಬ್ಬಿ ಬಜಕರೆ ಹಕ್ಕಿ
ಇದಿಗೊ ಮನೆಬಾಗಿಲಿಗೆ ಸಿಹಿನೀರ ತರುವ ಅಬ್ಬಿ

ಕುಂಬಳೆ ಮಂಜೇಶ್ವರ ಮಂಗಲ್ಪಾಡಿ
ಕಾರಡ್ಕ ಬದಿಯಡ್ಕ ಬೋವಿಕಾನ
ಪೆರ್ಲ ಮುಳ್ಳೆರ್ಯ ಸುಳ್ಯ ಮಧೂರು
ಸೂರಂಬೈಲು
ಏನೆಂಥ ಹೆಸರುಗಳ ಊರು
ಓ ಆತ ಪಕ್ಕೀರ ಈತ ಕೊರಗ ತುಕ್ರ ತನಿಯ

ಅವ ಮಾಲಿಂಗು ಈಕೆ ಕೊರಪಾಳು
ಇನ್ನಿವಳು ಬೆಳ್ಳಚ್ಚಿ
ನನ್ನನೆತ್ತಿದವರು ಸೊಂಟದಲಿ ಹೆಗಲಲ್ಲಿ
ನೆತ್ತಿಯಲಿ
ನನ್ನನಾಡಿಸಿದವರು ಪ್ರೀತಿ ನೀಡಿದವರು
ಮಾತು ಕಲಿಸಿದವರು
ಈಗೆಲ್ಲಿ ಅವರು ಓ ಈಗೆಲ್ಲಿ ಅವರು

ಪಂಪನಿಗೆ ಬನವಾಸಿ ನಾನೊ ಅನಿವಾಸಿ
ಪಂಪನಂತೆಯೆ ನಾನು ವ್ಯಸನಿ
ಆರಂಕುಶಮಿಟ್ಟೊಡಂ
ನೆನೆವುದೆನ್ನ ಮನ ನನ್ನ ಹುಟ್ಟೂರ

ತೆಂಕಣಗಾಳಿಯಲಂಪು
ನಮ್ಮವರ ಮಾತಿನಿಂಪು
ನೆನಪುಗಳು ಕರೆಯುವುವು
ಮೇಘಗಳಂತೆ ಮಳೆಯಂತೆ
ದಿನದಿನವು ವರ್ಷಧಾರೆ

ಹರ್ಷವೆನಲಾರೆ ದುಃಖವೆನಲಾರೆ
ಹೆಸರಿಲ್ಲದೊಂದು ಭಾವ
ನನ್ನ ಮನಃಪಟಲದಲ್ಲಿ ತುಂಬಿದೆ ಸದಾ
ನನ್ನೆಚ್ಚರದಂತೆ ನನ್ನ ಮನಃಸಾಕ್ಷಿಯಂತೆ

ಅದು ಮಿಡಿವ ತನಕ
ನನಗೆ ಭಯವಿಲ್ಲ
ಬೇಸರವಿಲ್ಲ
ಸ್ವರ್ಗವೋ ನರಕವೋ
ಆವೂರೊ ಈವೂರೊ
ಅದು ಮಿಡಿವ ತನಕ
ನಾನತೀತ ಎಂದೆಂದಿಗೂ

ಕಾಸರಗೋಡು

ಏತೊ ನಾಡ್‌ಲು ಉಲ್ಲ ಏತೊ ಕಾಡ್‌ಲು ಉಲ್ಲ
ಕಾಸರಗೋಡು ಒಂಜೇ
ಅವು ಯಾನ್ ಪುಟ್ಟು ಬಲತ್ತಿನ ನಾಡ್

ಕಾಶ್ಮೀರ ಅತ್ತ್ ಕುಲುಮನಾಲಿ ಅತ್ತ್
ನೀಲಗಿರಿ ಊಟಿಯತ್ತ್
ಆಂಡಲಾ ಆಯಿಕ್ಕುಂಡು
ಆಯಿನವೇ ಆಯಿ ಪೊರ್ಲು

ಪಡ್ಡೈಕಡಲ ಕರೆತ್ತ
ಒಂಜಿ ತುಂಡು
ಚಂದ್ರಗಿರಿ ಸುದೆತ್ತ ಬರಿ
ತಿಂಗೊಲ್ದ ಬೊಲ್ಪು ಲಕ್ಕಂತಿ ಸೇಬಿ

ಮುರೆಪಿ ಕಡಲ್ ಪಡ್ಡೈಡ್
ಅಕ್ಕಸೊನು ತೂಪಿ ಸಹ್ಯಾದ್ರಿ ಮೂಡಯಿಡ್
ನಡುಟು ಜೆತ್ತೊಂದುಂಡು ಎಂಕ್ಲೆನ
ಮೋಕೆದ ಕಾಸರಗೋಡು

ಕನ್ನಡ ತುಳು ಮಲಯಾಳ
ಕೊಂಕಣಿ ಮರಾಠಿ ಉರ್ದು
ಪಾಕೊ ಪಕ್ಕಿಲೆನ ಕಿಲೆಪುದ ಲಕ್ಕ
ಆಯಿನ್ ಕೇನುನವೆ ಒಂಜಿ ಪೊರ್ಲು

ದೇವಾಲ್ಯೊ ಇಂಗ್ರೇಜಿ ಪಳ್ಳಿ
ಊರ ಆಯನೊ ತೇರ್ ಬೆಡಿ ಸಂತೆ ಬೂತಕೋಲೊ
ಚೆಂಡೆ ಮದ್ದಲೆ ಯಕ್ಷಗಾನ ಬಯಲಾಟೊ
ಲೋಕೊದ ಉಲಯಿ ನನೊಂಜಿ ಲೋಕೊ

ಕುಕ್ಕು ಪೆಲ
ಜಾತಿ ಬೀಟಿ ಗಂಧ
ಗೋಂಕು ಎಡ್ಡೆಮುಣ್ಚೆ
ಪಿಲಿಪಂಜಿ ಕಾಡ್‌ಕಿರೆಂಗ್

ಕಂಗ್ ತಾರೆ ಬಾರೆ ಪಜಿರ್
ಬಾರ್ ಕಂಬುಳ ಕಂಡ ಬೈಲ್
ಗುಡ್ಡೆ ಒಂಕುರ್ಲು ಪಳ್ಳತೋಡುಲೆನ
ನೋಟೊ ಸಾಲ್ ಸಾಲ್

ಆವು ತೂಲ ಬೆರ್ಚಪ್ಪ
ಉಂದು ಬೈಪ್ಪಣೆ
ಮನೊಲಿ ಬಸಳೆ ದೊಂಪ ಬೆಂಡೆ ಬದನೆಸಾಲ್
ಲತ್ತಂಡೆ ಕುಂಬಡ ಕೆಂಬುಡೆ
ತುರೆಕಾಯಿ ತೌತೆ
ಅಲ್ಪಲ್ಪ ನೀರ್‌ದ ಒರತೆ
ನನ ದಾದ, ಒಯಿಕ್ಕುಂಡು ಕೊರತೆ

ತೂಲ ತೂಲ ಪನ್ನೀರ್
ತೂಲ ಮಲ್ಲಿಗೆ ಸೇಮತಿಗೆ
ತೂಲ ಎರವಂತಿಗೆ ನಿತ್ಯಪುಪ್ಪೊ
ತೂಲ ಕೇದಾಯಿ ರಸ್ನಗೆಂಟಿಗೆ ಉಂದು ತೊಳಸಿ
ತೂಲ ಉಂದು ತುಂಬಿ ತೇನ್‌ಪುರಿ ತೇನ್
ತೊಡ್ವೆ ಮುಜೊಂಟಿ ಕೋಲ್‌ಚೀಯೊ ಪೆರಿಯ
ಉಂದು ಕಕ್ಕೆ ಕೋಗಿಲೆ ಗಿಲಿ ಗುಬ್ಬಿ ಬಜಕ್ಕೆರೆ ಪಕ್ಕಿ
ಉಂದು ಇಲ್ಲಬಾಕಿಲ್‌ಗೇ ಪರ್ಜಿನೀರ್ ಬರ್ಪುನ ಅರ್ಬಿ

ಕುಂಬಳೆ ಮಂಜೇಶ್ವರ ಮಂಗಲ್ಪಾಡಿ
ಕಾರಡ್ಕ ಬದಿಯಡ್ಕ ಬೋವಿಕ್ಕಾನ
ಪೆರ್ಲ ಮುಳ್ಳೆರ್ಯ ಸುಳ್ಯ ಮಧೂರು
ಸೂರಂಬೈಲು
ಎಂಚೆಂಚಿ ಪುದರ್‌ದ ಊರುಲು

ಓ ಆಯೆ ಪಕ್ಕೀರೆ ಇಂಬ್ಯೆ ಕೊರಗ್ಗೆ ತುಕ್ರೆ ತನಿಯೆ
ಆಯೆ ಮಾಲಿಂಗು ಇಂಬಳ್ ಕೊರಪ್ಪಾಳ್
ಬೊಕ್ಕ ಇಂಬಳ್ ಬೆಳ್ಳಚ್ಚಿ
ಎನ್ನನ್ ತಟೊನುನಕುಲು ಸೊಂಟೊಡು ಪುಗೆಲ್‌ಡ್
ತರೆತ್ತಮಿತ್ತ್
ಎನ್ನನ್ ಗೊಬ್ಬಾಯಿನಕುಲು ಪಿರ್ತಿ ಕೊರಿನಕುಲು
ಪಾತೆರ ಕಲ್ಪಾಯಿನಕುಲು
ಇತ್ತೆ ಓಲುಲ್ಲೆರ್ ಓ ಇತ್ತೆ ಓಲುಲ್ಲೆರ್ ಆಕುಲು

ಪಂಪಗ್ ಬನವಾಸಿ ಯಾನ್ ಅನಿವಾಸಿ
ಪಂಪನಂಗೇ ಯಾನ್‌ಲಾ ವ್ಯಸನಿ
ಆರಂಕುಶಮಿಟ್ಟೊಡಂ
ನೆನೆಪುಂಡೆನ್ನ ಮನಸ್ ಯಾನ್ ಪುಟ್ಟಿನ ಊರು

ತೆನ್ಕಾಯಿದ ಗಾಳಿದ ಕಮ್ಮೆನ
ಎನ್ಕುಲೆ ಪಾತೆರೊದ ಪೊರ್ಲು
ನೆಂಪುಲು ಲೆತ್ತೊಂದುಂಡು
ಮುಗಲ್‌ದ ಲಕ್ಕ ಬರ್ಸೊದ ಲಕ್ಕ
ದಿನೊದಿನೊಲ ಸ್ವೊಪುನ ಬರ್ಸೊ

ಕುಸಿ ಆತ್‌ಂಡ್ ಪಣಯೆ ದುಕ್ಕ ಆತ್‌ಂಡ್ ಪಣಯೆ
ಪುದರಿಜ್ಜಂದಿ ಒಂಜಿ ಭಾವೊ
ಎನ್ನ ಮನಸ್ಸ್‌ಡ್ ದಿಂಜ್‌ದ್‌ಂಡ್ ನಿತ್ಯೊ
ಎನ್ನ ಎಚ್ಚರದ ಲಕ್ಕ ಮನಸಾಕ್ಷಿದ ಲಕ್ಕ

ಅವು ಮೆದ್ಕುನ ಮುಟ್ಟ
ಎಂಕ್ ಪೋಡಿಗೆ ಇಜ್ಜಿ
ಬೇಜಾರ್ ಇಜ್ಜಿ
ಮಿರ್ಲೋಣಕೊನೋ ತಿರ್ತಲೋಣಕೊನೋ
ಆ ಊರೋ ಈ ಊರೋ
ಅವು ಮೆದ್ಕುನ ಮುಟ್ಟ
ಯಾನ್ ಏಪೊಗುಲ ಅತೀತೆ.

ಮೂಲ : ಡಾ. ಕೆ.ವಿ. ತಿರುಮಲೇಶ್
(ತರ್ಜುಮೆ : ಸಂಪಾದಕೆ)

ತುಳುವೆರೆಂಕುಲು

ಮಲಾರ್ ಜಯರಾಮ ರೈ

ತುಳುವೆರೆಂಕುಲು, ತುಳುವೆರೆಂಕುಲು
ತುಳುವೆರೆಂಕುಲು ತುಳುವೆರ್ ॥
ತುಳುನಾಡ ಧೀರೆರ್ ತುಳುವೆರ್
ತುಳುವಪ್ಪೆ ಬಾಲೆಲು ತುಳುವೆರ್ ॥ಪ॥

ಬಿರುವೆ ಬಂಟೆರ್, ಬ್ರಾಣೆ ಕೊರಗೆರ್
ಪರವೆ ಪಂಬದೆ ಮಲೆಯರ್ ॥
ನಲ್ಕಿದಾಕುಲು ಬಾಕುಡೆರ್ ನನ
ಸೇರೆಗಾರೆರ್ ಮೇರೆರ್ ॥೧॥

ಬೂಮಿ ಬೆಂದ್‌ದ್ ಬೆನ್ನಿ ಮಲ್ತ್‌ದ್
ಒಕ್ಕೆಲಾಕುಲು ಮೆರೆಯೆರ್ ॥
ಕಡಲ್ ಬೆಂದ್‌ದ್ ಮೀನ ಕಸಬುಡು
ಗೆಂದ್ಯೆರಾ ಮೊಗವೀರೆರ್ ॥೨॥

ಕಡಲ್ ಪಡ್ಡೆಯಿ, ಘಟ್ಟ ಮೂಡಯಿ
ಮಲೆಯಾಳ ತೆನ್ಕಯಿ ತುಳುನಾಡ್‌ದಾ ॥
ಬಡಕಾಯಿ ಕನ್ನಡದಪ್ಪೆ ರಾಜ್ಯೊ
ತುಳುನಾಡ ಸೀಮೆಲು ಸರ್ವದಾ ॥೩॥

ಕೋಲ ಕಂಬುಲ ಗರೊಡಿ ತಂಬಿಲ
ವೀರ ಬೆರ್ಮೆ ಸಾನೊಲು ॥
ಜಾಗೆ ಜಾಗೆಡ್ ಗುತ್ತು ಬೂಡುಡು
ದೈವ ದೇವೆರ್ ತುಳುರಾಜ್ಯೊದಾ ॥೪॥

ಅಂಕ ಆಯನ ನೇಮ ನಡಾವಳಿ
ತುಳುವೆರೆಂಕುಲೆ ಕಟ್ಟುಲು ॥
ನಂಬಿನಾಕುಲೆಗಿಂಬು ಕೊರ್ದು
ಕಾತೆರೋ ತುಳುನಾಡ ಸತ್ಯೊಲು ॥೫॥

ಊರು ಬುಡ್‌ಂಡಲ, ದೇಸೊ ಬುಡ್‌ಂಡಲ
ಬಾಸೆನಾಕುಲು ಬುಡೆಯರ್ ॥
ತುಳುವೆರೇಪೊಲ ತಂಕದಾಕಲು
ಆತ್ಮ ಗವುರವ ಒರಿಪೆರ್ ॥೬॥

ದುಡ್ಡು ಕಾಸತ್ತ್, ಆಸ್ತಿ ಬದ್‌ಕತ್ತ್
ನರಮಾನ್ಯ ಆತ್ಮೊದ ಸಂಪೊತ್ತು ॥
ಬಾಸೆ ಕಟ್ಟಲೆ, ನೀತಿ ನಡತೆನೆ
ತುಳುವೆರೆನ ನಿಜ ಸಿರಿಸೊತ್ತು ॥೭॥

ಏತೋ ಜಾತಿಲು, ಏತೋ ನೀತಿಲು
ಏತೋ ದೇವೆರ್ ಬೂತೊಲು ॥
ಮಾತೆರ್‌ಲ ಒಂಜಪ್ಪೆ ಬಾಲೆಲು
ತುಳುನಾಡ ಮಣ್ಣ್‌ದ ಪುಣ್ಯೊಡು ॥೮॥

ನಾವು ತುಳುವರು

ನಾವು ತುಳುವರು ನಾವು ತುಳುವರು
ನಾವು ತುಳುವರು ತುಳುವರು ॥
ತುಳುನಾಡ ಧೀರರು ತುಳುವರು
ತುಳು ತಾಯ ಮಕ್ಕಳು ತುಳುವರು ॥ ಪ ॥

ಬಂಟ ಬಿಲ್ಲವ ಕೊರಗ ಪಂಬದ
ಪರವ ಬ್ರಾಹ್ಮಣ ಮಲೆಯರು ॥
ನಲಿಕೆಯವರು ಬಾಕುಡರು ಮತ್ತೆ
ಸೇರೆಗಾರರು ಮೇರರು ॥೧॥

ಉತ್ತು ಬಿತ್ತಿ ಹೊಲದಿ ಗೈದು
ಒಕ್ಕಲಾಗಿ ಮೆರೆದರು ॥
ಕಡಲಿಗಿಳಿದು ಮೀನು ಹಿಡಿದು
ದುಡಿದರಾ ಮೊಗವೀರರು ॥೨॥

ಕಡಲು ಪಶ್ಚಿಮ ಘಟ್ಟ ಪೂರ್ವದಿ
ದಕ್ಷಿಣದಿ ಕೇರಳ ತುಳುನಾಡಿಗೆ ॥
ಉತ್ತರದಿ ತಾಯಿ ಕನ್ನಡ ರಾಜ್ಯ
ಸರ್ವದಾ ಸೀಮೆ ತುಳುನಾಡಿಗೆ ॥೩॥

ಕೋಲ ಕಂಬಳ ಗರಡಿ ತಂಬಿಲ
ವೀರ ಬ್ರಹ್ಮರ ಬದಿಗಳು ॥
ಜಾಗೆ ಜಾಗೆಗೆ ಗುತ್ತು ಬೀಡು
ದೈವ ದೇವರ ಗುಡಿಗಳು ॥೪॥

ಅಂಕ ಆಯನ ನೇಮ ಜಾತ್ರೆ
ತುಳುಜನರ ಕಟ್ಟಳೆ ॥
ನಂಬಿದವರಿಗಿಂಬು ಕೊಟ್ಟು
ನಾಡಕಾಯುವ ಸತ್ಯರು ॥೫॥

ಊರು ಬಿಟ್ಟರು ದೇಶ ತೊರೆದರು
ಬಿಡರು ಆಡುವ ಭಾಷೆಯ ॥
ತುಳುವರೆಂದಿಗು ವೀರ ಜನರು
ಆತ್ಮಗೌರವ ಮೆರೆದವ ॥೬॥

ಹಣಕಾಸಲ್ಲ ಆಸ್ತಿ ಬದುಕಲ್ಲ
ಮಾನವನ ಆತ್ಮವೇ ಸಂಪತ್ತು ॥
ಭಾಷೆ ನಡವಳಿಕೆ ನೀತಿ ಕಟ್ಟಳೆ
ತುಳುವರ ನಿಜ ಸಿರಿಸೊತ್ತು ॥೭॥

ಎಷ್ಟೋ ಜಾತಿಗಳು ಎಷ್ಟೋ ನೀತಿಗಳು
ಎಷ್ಟೋ ದೇವ ದೈವಗಳು ॥
ಎಲ್ಲರೂ ಒಂದೇ ತಾಯ ಮಕ್ಕಳು
ತುಳುನಾಡ ಮಣ್ಣಿನ ಪುಣ್ಯಕೆ ॥೮॥

ಮೂಲ : ಮಲಾರ್ ಜಯರಾಮ ರೈ
(ಅನುವಾದ : ಸಂಪಾದಕ)

ಸೊಲ್ಮೆ ಸಂದಾಪೆ

ಪಡಾರು ಮಹಾಬಲೇಶ್ವರ ಭಟ್

ಓ ತುಳುವೆರುಳ್ಳಾಲ್ದಿ ಎನನ್ ಸಾಂಕಿನ ಅಪ್ಪೆ
ತರುಕೊಣ್ದು ತಾಂಗು ಕೊರತೆನನ್ ತೂಯರ್
ಉಂದೆ ಎನ್ನ ಸೊಲ್ಮೆ ಸಂದಾಪೆ ॥ ೧ ॥

ಈರೆ ಮಣ್ಣ್‌ಡ್ ಬೀಜಿನಾ ಗಾಳಿ ಬೆಪ್ಪುಡ್
ಬುಳಾಯಿನೆನ್ನ ಕಣ್ಣ್‌ಗ್ ಸೊರ್ಗೊನೇ ತೋಜ್‌ಂಡ್
ಉಂದೆ ಎನ್ನ ಸೊಲ್ಮೆ ಸಂದಾಪೆ ॥ ೨ ॥

ಈರೆ ಮಣ್ಣ್‌ಡ್ ಊಜಿನಾ ನೀರುನುಪ್ಪುಡು
ಬುಳೆಯಿನೆನ್ನ ಸರ್‍ರೊ ಸಮ್‌ದ್ರಾದ್ ಪೆರ್ಚ್‌ಂಡ್
ಉಂದೆ ಎನ್ನ ಸೊಲ್ಮೆ ಸಂದಾಪೆ ॥ ೩ ॥

ಈರೆ ಮಣ್ಣ್‌ಡ್ ಬೆನ್ಪಿ ಮೈಯಿಮನಸ್‌ಗಾಪಿ
ಮಾಮಲ್ಲ ಸಗ್ತಿನ್ ಕೊರುತನನ್ ನಡಪಾಲೆ
ಉಂದೆ ಎನ್ನ ಸೊಲ್ಮೆ ಸಂದಾಪೆ ॥ ೪ ॥

ಈರೆ ಮಣ್ಣ್‌ನ್ ನಂಬಿ ಸಾರ ಸಂಸಾರೊಡು
ಎನ್ನನ್ಲಾ ದೀವೊಂದು ಇಂಬುಡೇ ಕಾತೊನ್ಲೆ
ಉಂದೆ ಎನ್ನ ಸೊಲ್ಮೆ ಸಂದಾಪೆ ॥ ೫ ॥

ನಮನ ಸಲ್ಲಿಸುವೆ

ಓ! ತುಳುವರ ಒಡತೀ ನನ್ನ ಸಾಕಿದ ತಾಯಿ
ಅಪ್ಪಿ ಹಿಡಿದೆನ್ನ ಎತ್ತಿ ಹಿಡಿದೆ
ಇದೊ, ನನ್ನ ನಮನ ಸಲ್ಲಿಸುವೆ ॥ ೧ ॥

ನಿನ್ನ ಮಣ್ಣಲಿ ತೀಡಿದ ಗಾಳಿ ಬಿಸುಪಿಗೆ
ಕಣ್ಣರಳಿ ಸ್ವರ್ಗವೇ ಕಂಡಿತು ನನಗೆ
ಇದೊ, ನನ್ನ ನಮನ ಸಲ್ಲಿಸುವೆ ॥೨॥

ಇನ್ನ ಮಣ್ಣಲಿ ಒಸರಿದ ನೀರು ಆಹಾರಕ್ಕೆ
ಬಳೆದ ಈ ದೇಹ ಕಡಲಾಗಿ ಉಕ್ಕಿತು
ಇದೊ, ನನ್ನ ನಮನ ಸಲ್ಲಿಸುವೆ ॥೩॥

ನಿನ್ನ ಮಣ್ಣಲಿ ದುಡಿವ ಮೈ ಮನಸ್ಸಿಗೆ
ಶಕ್ತಿ ಕೊಟ್ಟೆನ್ನ ನಡೆಸಿಬಿಡು
ಇದೊ, ನನ್ನ ನಮನ ಸಲ್ಲಿಸುವೆ ॥೪॥

ನಿನ್ನ ನೆಲದಲ್ಲಿರುವ ಹಲವು ಸಂಸಾರ ಜೊತೆ
ನನಗೂ ಜಾಗವಿತ್ತು ಕಾಪಾಡು, ತಾಯಿ
ಇದೊ, ನನ್ನ ನಮನ ಸಲ್ಲಿಸುವೆ ॥೫॥

ಮೂಲ : ಪಡಾರು ಮಹಾಬಲೇಶ್ವರ ಭಟ್
(ಅನುವಾದ : ಸಂಪಾದಕ)

ಕೊಡಿ ಏರಡ್

ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್

ಏರಡ್ೀ.... ಏರಡ್ೀ.........
ಏರಡೇರಡ್ ಏರಡ್ೀ.........
ತುಳುನಾಡ ಕೊಡಿ[1] ಮಿತ್ತೇರಡ್ ॥ಅ.ಪ.॥

ಮೇರು ಪರ್ವತ ದೂರಸಾಗರ ಬೈಲ ಸೀಮೆಡ್ ಏರಡ್
ಸಾರೊ ಜನೊ ಒಂಜಾದ್ ಸೇರ್‌ಗೊ ಬಾನೊಡೇ ಕೊಡಿ ಪಾರಡ್
ನೀರ್ ಪರಿಪಡ್ ಪೇರ್ ಉರ್ಕಡ್ ಬಾರ್ ಬಜ್ಜೆಯಿ ಬುಳೆವಡ್
ಬೇರ್ ತೆಗ್‌ಲಡ್[2] ಪುರಪು ಒರಿಯಡ್ ಬಾಸೆ ಲೋಕೊಡು ಕಬಿಯಡ್ ॥೧॥

ಜಾತಿಧರ್ಮೊದ ಭೇದೊ ಕಡಿತ್‌ದ್ ನೀತಿನೊಂಜೇ ನಡಪಗೊ
ಭೀತಿಪೋಡಿಗೆ ಬುಡುದು ನಮ ತುಳುನಾಡ್‌ನೆಂಚಲ ಕಟ್ಟುಗೊ
ಕಾಶ ಪೆಗಿಪಲೆ ಅಕ್ಕ ತಂಗಡಿ ಮಾತ ತುಳುಜನ ಎನ್ನಿಗೊ
ದೂಷನೆಗ್ ಎಡೆದಾಂತಿ ತಾದಿಡೆ ನಾಡ ತೇರ್‌ನ್ ಒಯ್ಯುಗೊ ॥೨॥

ವಿಷ್ಣುತುಂಗನ ಭಾಗವತೊ ಕೆಬಿನಿಲಿಕೆ ನಂಕೊರ ಕೇನಡ್
ಕೋಟಿ ಚೆನ್ನಯೆ ಅಗೊಳಿ ಮಂಞಣೆ ನಮ್ಮ ರಟ್ಟೆಡ್ ಸೇರಡ್
ಸಂದಿ ಪಾರ್ದನೊ ಉರಲ್ ಕಬಿತೆಲೆಗಿತ್ತಿ ಬಂಧನ ಕಳೆವಡ್
ಅಂಕ ಆಯನೊ ಆಟೊ ಕೂಟೊಡು ನಮ್ಮ ತುಳು ಜನ ಮೆರೆವಡ್ ॥೩॥

ತುಳುತ ನಿಧಿ ಇನಿ ಅಡಿಕ್ ಸೇರ್ದ್‌ಂಡ್ ಅವೆನ್ ನಮ ಇನಿಗರ್ಪುಗೋ
ಕಳಟ್ ಬುಳೆದ್‌ಂಡ್[3] ಕೊನಲೆದಾ ಕೆಯಿ ಪೊರ್ತು ಪಿದಯಿಲ ದಕ್ಕುಗೊ
ನೆಲತ ಕಮ್ಮೆನೊ ಕಳೆದ್ ಪೋಪುಂಡು ಅವೆನ್ ನಮ ಇನಿ ಒರಿಪಗೊ
ನಿಲೆನೆದಾಂತಿನ ನಮ್ಮ ಅಪ್ಪೆಗ್ ಅರಂತಡನೆ ನಮೊ ಕಟ್ಟುಗೊ ॥೪॥

ಪಡಿಲ್‌ಬೂರ್ದಿನ ಕಂಡೊ ಪೂರಾ ಬೆನ್ನಿ ಸಾಗೊಳಿ ಆವಡ್
ತುಡರ್ ಬೆಳಗಡ್ ಕಳೆದ್ ಕರ್ಜಿಮೆ[4] ಬಡವು ತುಳುವೆರೆಗರಪಡ್
ಉಡಲ್‌ಡಿತ್ತೀ ಕಜವು ಕೊಸರ್[5]ಲ್ ತೆಲಿದ್ ಸೀರ್ತೊನೆ ಆವಡ್
ತಡೆವುನಕುಲೇರುಂಡು ನಮ್ಮನ್ ನಮ್ಮ ಪತ್ತಯ ದಿಂಜಡ್ ॥೫॥

1. ಕೊಡಿ–ಧ್ವಜ, 2. ಪುರಪು–ಸಂಸ್ಕೃತಿ, 3. ಕೊನಲೆ – ಕಳೆಗಿಡ, 4. ಕರ್ಜಿಮೆ – ಮೌಢ್ಯ, 5. ಕೊಸರ್ – ಕೊಳೆ

ಧ್ವಜ ಏರಲಿ

ಏರಲೀ.... ಏರಲೀ....
ಏರಲೇರಲಿ ಏರಲೀ....
ತುಳುನಾಡ ಧ್ವಜ ಮೇಲೇರಲಿ ॥ ಅ.ಪ. ॥

ಮೇರು ಪರ್ವತ ದೂರ ಸಾಗರ ಬಯಲು ಸೀಮೆಯೊಳೇರಲಿ
ಧೀರ ಸಾವಿರ ಜನರು ಸೇರಲಿ ಬಾನಿನೆತ್ತರ ಹಾರಲಿ
ನೀರು ಹರಿಯಲಿ ಹಾಲು ಉಕ್ಕಲಿ ಬತ್ತ ಕಂಗದು ಬೆಳೆಯಲಿ
ಬೇರು ಚಿಗುರಲಿ ಸಾರ ಉಳಿಯಲಿ ಭಾಷೆ ಲೋಕದಿ ಪಸರಲಿ ॥೧॥

ಜಾತಿಧರ್ಮದ ಭೇದ ಕಳೆಯುತ ನೀತಿ ಮಾರ್ಗದಿ ನಡೆಯುವ
ಭೀತಿ ಭಯವನು ದೂರಸರಿಸುತ ನಾಡು ತುಳುವನು ಕಟ್ಟುವ
ಒಂದೆ ತಾಯಿಯ ಮಕ್ಕಳೆಲ್ಲರು ಬಂಧುಗಳು ನಾವೆನ್ನುವ
ಕುಂದುಕೊರತೆಯ ದೂರವಿರಿಸುತ ತುಳುವ ತೇರನು ಎಳೆಯುವ ॥೨॥

ವಿಷ್ಣುತುಂಗನ ಭಾಗವತ ಸ್ವರ ಕಿವಿಗೆ ಇಂಪನು ನೀಡಲಿ
ಕೋಟಿ-ಚೆನ್ನಯ ಅಗೋಳಿ ಮಂಜಣ ನಮ್ಮ ರಟ್ಟೆಯ ಸೇರಲಿ
ಸಂಧಿ ಪಾಡ್ದನ ಉರಲ್ ಕವಿತೆಗೆ ಇರುವ ಬಂಧನ ಕಳೆಯಲಿ
ಅಂಕ ಜಾತ್ರೆಯೊಳಾಟಕೂಟದಿ ನಮ್ಮ ತುಳು ಜನ ಮೆರೆಯಲಿ ॥೩॥

ಎಲ್ಲ ಸೇರುತ ತುಳು ನಿದಾನವನಗೆದು ಮೇಲಕೆ ಎತ್ತುವ
ಕಳೆದು ಕಳೆಗಿಡ ಹೊನ್ನ ಧಾನ್ಯವ ಹಸನು ಹೊಲದೊಳು ಬಿತ್ತುವ
ನೆಲದ ಸೊಗಡದು ಮಸುಕುಗೊಳುತಿದೆ ಹೊಳೆಯುವಂತಹನೆಸಗುವ ।
ನೆಲೆಯೆ ಇಲ್ಲದ ನಮ್ಮ ತಾಯಿಗೆ ಮನೆಯನೊಂದನು ಕಟ್ಟುವ ॥೪॥

ಪಾಳು ಬಿದ್ದಿಹ ಬರಡು ನೆಲದೊಳು ಹುಲುಸು ಪೈರದು ಬೆಳೆಯಲಿ
ಸಾಲು ದೀಪಗಳುರಿದು ಕತ್ತಲೆ ತೊಲಗಿ ಮೌಢ್ಯವು ಸರಿಯಲಿ
ಸೋಲು ಅಳಿಯಲಿ ಗೆಲುವು ಉಳಿಯಲಿ ಮನಸು ನಿರ್ಮಲವಾಗಲಿ
ಬಾಳ ನೆಮ್ಮದಿಗಾರ ತಡೆಯಿದೆ ನಮ್ಮ ಕಣಜವು ತುಂಬಲಿ ॥೫॥

ಮೂಲ ಮತ್ತು ಅನುವಾದ : **ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್**

1. ನಿದಾನ – ಮಣ್ಣಡಿಯಲ್ಲಿರುವ ನಿಧಿ

ತುಳುನಾಡ ಕಬಿತೆ

ಡಾ. ವಾಮನ ನಂದಾವರ

ಪಡ್ಡೆಯಿ ಕಡಲ್‌ದ ಬರಿಟ್‌ಲನೆ
ಮೂಡಯಿ ಗಟ್ಟದ ಪುಡೆಟ್‌ಲನೆ
ಸತ್ಯೊಲೆ ಪ್ರೀತಿದ ದಯೆಟ್‌ಲನೆ
ಮೆರೆಪುಂಡು ಪೊರ್ಲುದ ತುಳುನಾಡ್

ತಾರೆಲು ಕಂಗುಲು ಬಾರೆಲೆಡ್
ತಾರಯಿ ಬಜ್ಜೆಯಿ ಪಂದ್‌ಲನೆ
ಜೊಂಕಿಲ್ ಜೊಂಕಿಲ್ ನೇಲೊಂದುಂಡು
ತೆಲಿಪುಂಡು ಪೊರ್ಲುದ ತುಳುನಾಡ್

ಆರೆಗಲ ಮರಿಯಲ ಏಪಲನೆ
ಬರೆಗಲ ಬರಂದ್ ಮುಲ್ಪಲನೆ
ಕುಕ್ಕುಲ ಪೆಲಕಯಿ ತಿಂದ್‌ಂಡನೆ
ಕೊದಿಬಿದಿ ಕಾರಂದ್ ಮೂಲುಲನೆ

ಏನೆಲ್ ಸುಗ್ಗಿಲ ಕೊಳಕೆಲೆನ್
ಬೈಲ್‌ದ ಬೊಟ್ಟುದ ಸಾಗೊಳಿನ್
ಬಿತ್ತ್‌ಲ್ ತೋಟದ ಬುಳೆಕುಲೆನ್
ತೂಂಡನೆ ದಿಂಜುಂಡು ಕಣ್ಣ್‌ಲನೆ

ಪ್ರಾಕ್‌ದ ಕಟ್ಟಲೆನೊರಿತೊಂದು
ಧರ್ಮದ ತಾದಿಡೆ ನಡತೊಂದು
ನೀತಿದ ನೇಮದ ಬೊಳ್ಪಾದ್
ಬೆಳಗುಂಡು ಪೊರ್ಲುದ ತುಳುನಾಡ್

ಬೆನ್ನಿನ ಪೊಣ್ಣೊವು ಆಣ್ಣೊಲೆಡ್
ಸಾಲೆಗ್ ಪೋಪುನ ಜೋಕುಲೆಡ್
ಗೊಬ್ಬುನ ಬುಲ್ಪುನ ಬಾಲೆಲೆಡ್
ತೆಲಿಪುಂಡು ನಲಿಪುಂಡು ತುಳುನಾಡ್

ಮಲ್ಲಿಗೆ ಸಂಪಿಗೆ ಸೇಮಂತಿಗೆ
ಕೇದಗೆ ಗುಲಾಬಿ ಪೂ ಸೊರಗೆ
ಗಮಗಮ ಪರಿಮಳ ಬೀರೊಂದುಂಡು
ಪೊರ್ಲುಡ್ ಆರಳ್‌ದ್ ತೆಲಿತೊಂದುಂಡು

ಅಂಚಿಲ ತೂಂಡನೆ ಕಡಲಯೆನೆ
ಇಂಚಿಲ ತೂಂಡನೆ ಮಡಲಯೆನೆ
ಬೈಲ್‌ಡ್ ಕಾಡ್‌ಡ್ ವನರಾಣಿ
ಪಚ್ಚೆದ ಪಟ್ಟೆಡ್ ಮೆರೆಪಲಲ್

ಸಿರಿ ಕುಮಾರನ ಸತ್ಯದ ನಾಡ್
ಕಲಿ ದುಗ್ಗಣ್ಣನ ಧೈರ್ಯದ ನಾಡ್
ರಾಣಿ ಅಬ್ಬಕ್ಕನ ಶೌರ್ಯದ ನಾಡ್
ಕೋಟಿ ಚೆನ್ನಯ್ಯೆರೆ ಬಿರ್ಸ್‌ದ ನಾಡ್

ಪೈಗುಳು ಮುಳಿಯೆರ್ ಪಂಜೆದಾರ್
ಮುದ್ದಣೆ ಕಡೆಂಗೋಡ್ಲು ಕಾಮತೆರ್
ಪಣೆಯಾಡಿ ಕಿಲ್ಲೆರ್ ಹೆಗ್ಗಡೆರ್
ನಾಡ್‌ದ ಪೊರ್ಲುನು ಪುಗರ್‌ದೆರ್

ತುಳುನಾಡ ಕವಿತೆ

ಪಡುವಣ ಕಡಲಿನ ಕರೆಯಲ್ಲೆ
ಮೂಡಣ ಗಟ್ಟದ ತಡಿಯಲ್ಲೆ
ಸ್ತ್ಯಗಳೊಲುಮೆಯ ದಯೆಯಲ್ಲೆ
ಮೆರೆವುದು ಚೆಲುವಿನ ತುಳುನಾಡು

ತೆಂಗು ಕಂಗು ಬಾಳೆಗಳು
ಅಡಕೆ ಕಾಯಿ ಹಣ್ಣುಗಳು
ಗೊಂಚಲು ಗೊಂಚಲು ತೂಗುತಿವೆ
ನಗುತಿದೆ ಸೊಬಗಿನ ತುಳುನಾಡು

ಬೇಸಗೆ ಮಳೆಗಾಲ ಏನೇ ಇರಲಿ
ಬರಗಾಲವಿರದು ಇಲ್ಲೆಂದೂ
ಮಾವೂ ಹಲಸೂ ತಿಂದರೆನೆ
ಬಯಕೆಯದೆಲ್ಲ ಈಡೇರುವುದು

ಎಣೆಲು ಸುಗ್ಗಿ ಕೊಳಕೆ ಬೆಳೆ
ಬಯಲು ಬೆಟ್ಟಿನ ಬೇಸಾಯ
ಹಿತ್ತಿಲು ತೋಟದ ಬೆಳೆಗಳು
ನೋಡಲು ತುಂಬುವು ಕಣ್ಣುಗಳು

ಹಿಂದಿನ ಕಟ್ಟಳೆ ಉಳಿಸುತಲಿ
ಧರ್ಮದ ಹಾದಿಲಿ ಸಾಗುತಲಿ
ನೀತಿಯ ನಿಯಮದ ಬೆಳಕಾಗಿ
ಬೆಳಗಿದೆ ಅಂದದ ತುಳುನಾಡು

ದುಡಿಯುವ ಹೆಣ್ಣು ಗಂಡಿಲ್ಲಿ
ಕಲಿಯಲು ಸೇರುವ ಮಕ್ಕಳಿಲ್ಲಿ
ಆಡುವ ಅಳುವ ಹಸುಳೆಗಳಿಂದ
ನಗುತಿದೆ ನಲಿದಿದೆ ತುಳುನಾಡು

ಮಲ್ಲಿಗೆ ಸಂಪಿಗೆ ಸೇವಂತಿಗೆ
ಕೇದಗೆ ಗುಲಾಬಿ ಹೂ ರೆಂಜೆ
ಗಮಗಮ ಪರಿಮಳ ಸೂಸುತಿವೆ
ಚಂದದಿ ಅರಳುತ ನಗುತಲಿವೆ

ಆ ಕಡೆ ಕಡಲಿನ ಮಕ್ಕಳು
ಈ ಕಡೆ ಮಣ್ಣಿನ ಮಕ್ಕಳು
ಬಯಲಲಿ ಕಾಡಲಿ ವನರಾಣಿ
ಹಚ್ಚನೆ ಹಚ್ಚಡ ಮೆರೆದಿಹಳು

ಸಿರಿ ಕುಮಾರನ ಸತ್ಯದ ನಾಡು
ಕಲಿ ದುಗ್ಗಣ್ಣನ ಧೈರ್ಯದ ನಾಡು
ರಾಣಿ ಅಬ್ಬಕ್ಕನ ಶೌರ್ಯದ ನಾಡು
ಕೋಟಿಚೆನ್ನಯರ ಅಭಯದ ನಾಡು

ಪೈಗಳು ಮುಳಿಯ ಪಂಜೆಯವರು
ಮುದ್ದಣ ಕಡೆಂಗೋಡ್ಲು ಕಾಮತರು
ಪಣಿಯಾಡಿ ಕಿಲ್ಲೆ ಹೆಗ್ಗಡೆಯವರು
ನಾಡಿನ ಸೊಬಗನು ಹೊಗಳಿಹರು.

ಮೂಲ ಮತ್ತು ಅನುವಾದ : ಡಾ. ವಾಮನ ನಂದಾವರ

ಮಂಗಳೂರು

ಡಾ. ವಸಂತಕುಮಾರ ಪೆರ್ಲ

ಕಳೆದ ರಾತ್ರಿಯ ಮಂದಬೆಳಕಿನ ಅಮಲಿಗೆ
ಸಮುದ್ರ ಉಕ್ಕಿದ ಹಾಗೆ
ಮುಂಜಾನೆಯೇ ದಡದಡ ಎದ್ದು ನಿಲ್ಲುತ್ತದೆ
ಅಂಗಡಿ ಮುಂಗಟ್ಟುಗಳ ಸಾಲು
ಚಿಲಿಪಿಲಿಗುಟ್ಟುತ್ತದೆ ಅಳಿವೆಬಾಗಿಲು
ಗುರುಗುಟ್ಟಿ ದೌಡಾಯಿಸುತ್ತವೆ ಬಸ್ಸು
ಲಾರಿಕಾರುಗಳ ಜನನಿಬಿಡ ಗಲ್ಲಿಗಳಲ್ಲಿ
ಮೊಳಮೊಳ ಮಲ್ಲಿಗೆ ಹೂ
ಮತ್ಸ್ಯಗಂಧಕ್ಕೆ ಸಾವ ಕಾಗೆಡೇಗೆ
ಸಮಯವೇ ಇಲ್ಲ; ಸಮಯವೇ ಇಲ್ಲ
ಚಕ್ರಕಟ್ಟಿದ ಕಾಲುಗಳಿಗೆ ಇಲ್ಲಿ
ಸದಾ ಉರುಳಾಟ
ಉರಿಹತ್ತಿದ ಸೌಳಿಯ ಹಾಗೆ ಊರು

ನಿರಂತರ ಸುರಿಯುತ್ತಲೇ ಇದೆ ಇಲ್ಲಿ
ಮಳೆಗಾಲವೂ ಸತತ ಬೆವರು
ಸೂಸುತ್ತ ಲೈಟ್‌ಹೌಸ್‌ನ ಬೆಳಕು
ಮಜಬೂತು ಮಿರುಗುತ್ತಾವೆ ರಸ್ತೆಗಳು
ಕಿಲಕಿಲ ಪರಿಮಳ ಬೀರುತ್ತಾವೆ
ರಾತ್ರಿಗಳು ನರಳಿ ಹೊರಳುತ್ತಾವೆ
ದೀಪಸ್ತಂಭದ ಕೆಳಗೆ ಮರಳಿನಲ್ಲಿ
ರಾಶಿರಾಶಿ ಮೀನುಗಳ ಎಣಿಸುತ್ತಾರೆ
ನಗುನಗುತ್ತ ಕಣ್ಣಿನಲ್ಲೇ ಮರಳುತ್ತಾರೆ
ಎಲ್ಲಿಂದಲೋ ಕೇಳುತ್ತದೆ ಬಾಂಗ್
'ಶರವು ಮಹಾಗಣಪತಿ ನಮಗೆ ನಿನ್ನದೇ ಸ್ತುತಿ.....'
ಢಣಢಣ ಗಂಟೆ ಮಂಗಳಾರತಿ

ಮಂಗಳೂರೆಂದರೆ ಹಾಗೆ ಮಂಗಳೂರಿನ ಹಾಗೆ
ಸಮುದ್ರವೇ ಸರಿದು ನಿಂತ ಹಾಗೆ!

(ಸೌಳಿ-ಮರದಲ್ಲಿ ಇರುವ ಒಂದು ಬಗೆಯ ಕಚ್ಚುವ ಕೆಂಪಿರುವೆ)

ಕುಡಲ

ಕರಿನ ರಾತ್ರೆದ ಮಂದ ಬೊಲ್ಪುದ ಅಮಲ್‌ಗ್
ಕಡಲ್‌ದರ್ತೆದ ಲಕ
ಪುಲ್ಯಕಾಂಡೇನೇ ಲಕ್ಕ್‌ದುಂತುಂಡು
ಅಂಗಡಿ ಬಂಡಸಾಲೆದ ಸಾಲ್
ಕಿಲೆಪುಂಡು ಅರ್ವೆ ಬಾಕಿಲ್
ಪಂತೊಡು ನುರ್ಕೊಂದುಲ್ಲ ಬಸ್ಸುಲು
ಲಾರಿ ಕಾರ್‌ಲೆನ ಇಡೆಟ್ಟ್ ಗಲ್ಲಿ ಓಣಿಲೆಡ್
ಬಾರೆದಿರೆತ್ತ ಮದೆಡ್ದೇ ತೆಲಿಪುನ ಮಲ್ಲಿಗೆ ಚೆಂಡ್
ಮೀನ್‌ದಾಸೆಗ್ ರಾದ್ ಬರ್ಪುನ ಕಕ್ಕೆ ಗಿಡಿಕ್ಕುಲು
ಸಮಯನೇ ಇಜ್ಜಿ ಸಮಯನೇ ಇಜ್ಜಿ
ಚಕ್ರಕಟ್ಟಿನ ಕಾರ್‌ಗ್ ಮೂಲು
ಮೂಜಿ ಪೊರ್ತುಲಾ ಸೇಲೆ
ಸಾಲ್ ದರಿನ ಪಿಜಿನ್‌ದಲಕ
ಪುರುಸೊತ್ತು ದಾಂತಿನ ಬೇಲೆ

ಒಸರ್‌ದಲಕ ಜತ್ತೊಂದುಂಡು ಮೂಲು
ಮರ್ಯಾಲೊಲಾ ಬೆಗರ್
ಲೈಟ್‌ಹೌಸ್‌ದ ಮೆನ್ಕುನ ಬೊಲ್ಪುಡು
ಮೀಯೊಂದುಂಡು ನಗರ
ತೆಲಿಕೆದ ಕಮ್ಮೆನೊಡು ಘಮಿಪುನ ರಾತ್ರಿಲು
ನರಕ್ಕ್‌ದ್ ಪೊರೆಲೊಂದುಂಡು
ದೀಪಸ್ತಂಭದ ತಿರ್ತ್ ನಿರೆಲ್‌ಡ್
ತರತರೊತ್ತ ಮೀನುಲು
ಲಾಗೊಂದು ಪೊರೆಲೊಂದು
ಆರೆಲೊಂದುಲ್ಲ ಎರ್ತೆ ಜಪ್ಪೆಲ್‌ಡ್

ಒಲ್ಪಡ್ದೋ ಕೇನುಂಡು ಬಾಜ್ಸ್
ಪಿರವುಡ್ದೇ ಮೈಕ್
'ಶರವು ಮಹಾಗಣಪತಿ ನಮಗೆ ನಿನ್ನದೇ ಸ್ತುತಿ....'

ಕುಡಲ ಪಂಡ ಕುಡಲದ ಲಕ್ಕ
ಕಡಲ್ ಜಾರ್‌ದ್ ಉಂತಿ ಲಕ್ಕ !

ಮೂಲ ಬೊಕ್ಕ ತರ್ಜುಮೆ : ಡಾ. ವಸಂತಕುಮಾರ ಪೆರ್ಲ

ತುಳುನಾಡ್‌ದ ಪೆರ್ಮೆ

ಎನ್.ಪಿ. ಶೆಟ್ಟಿ ಮುಲ್ಕಿ

ಅಪ್ಪೆ ಪದಿನಾಲೆನ್ನ ತುಳು ಕಲ್ಪಾದ್ ಮೋಕೆಡ್ ತಾಂಕ್ಯೊಲು
ಅಪ್ಪೆ ಪಾತೆರ ತುಪ್ಪೆ ದಿಂಜಿದಿ ಲೆಪ್ಪುಗೀ ಕುಸಿ ಕೊರ್‍ಯೊಲು

ಅಮ್ಮೆರೆನ್ನ ಪುರಾಣ ಪ್ರವಚನ ತಾಳ ಮದ್ದೊಳಿದರ್ಥೊಡು
ಕಮ್ಮೆನೆದ ತುಳುಬಾಸೆ ಬಿರ್ಸೆರ್ ಪುದರ್ 'ಕವಿಗುರು' ಸುತ್ತೊಡು

ಆರ್ ಪೊದಿಕೆನ್ ಕೊರಿನ ಸಾಲದ ತಿಕ್ಕಿನಾಶೀರ್ವಾದೊಡು
ನೀರ್ ಪರತ್‌ದ್ ಬುಲೆಯಿ ಭಾಗ್ಯದ ಪದೊನು ನಿಕಲೆಗ್ ಪಟ್ಪೊಡು

ಓಲು ಪೋಂಡಲ ತಿಕಿನ ತಿನಸ್‌ಡ್ ತುಳುತ ವಣಸ್‌ದ ತಮ್ಮನ
ಜೋಳಿಗೆಡ್ ದಿಂಜಾದ್ ದಿವ್ವರೆ ತುಳುವ ಮನಸ್‌ದ ಕಮ್ಮನ

ಕೋಲ ಆಯಣ ನಾಗಮಂಡಲ ಊರುಊರುಡು ತಂಬಿಲ
ಮೂಲ ಕಾರ್ಯೊಲು ಬಲಿನಡಾರಿಲು ನೇಮ ನಿಷ್ಟೆಡ್ ದುಂಬಲ

ಲಟ್ಟೆಗಟ್ಟಿದ ಬಾರಿ ದೈರದ ಪೆಟ್ಪ್‌ಪುಡೆ ತೆರಕಾಯಿದಾ
ಲಟ್ಟ ಜವಣೆರೆ ಪಿರ್ತಿ ಸೇರಿನ ಕಟ್ಪ್ ಈ ತುಳುನಾಡ್‌ದಾ

ಮೂಲು ತಪ್ಪಂಗಾಯಿ, ಬಾಯಂಗಾಯಿ ಜನೊಕುಲು ತುವ್ವರೆ
ಓಲು ತೂಂಡಲ ಒಯಿಪು ಅಡಿಮೇಲಾಯಿ ತಾರಯಿ ದಿವ್ವರೆ

ಏರೆ ಕೈಕ್‌ಲಾ ಪೋರೆಕೇಣೋ ಏರ್‌ದುಂತಿದಿ ಜವಣನ
ಬಾರಿ ಬಿರ್ಸಾದಿಗೆದ ಪುಂಡಿಡ್ ತಾರ್‌ದುಂತಿನ ನೆವನನ

ಪಲ್ಲಿ ಪತಿಯೆರ್ ಸೂಂಬು ಪಿರಿಯೆರ್ ಕೈತಲೇರ್‌ಲ ಪೋವೆರ
ಬಲ್ಲಿ ಬುಡ್ಪಾರವೆನ್ ಉಡ್ಡುಡ್ ಬೆಲ್ಲ ಗುದ್ದುದ ತಿನುವೆರ

ಬತ್ತ್ ಕೆಡ್ಡಸ ಪೊತ್ತಿಕುಡು ಅರಿ ಇತ್ತಿ ಜೋಕುಲು ಮಾತೆರ್
ಕತ್ತಿ ದೋಂಟಿನ್ ಪತ್‌ದ್ ಪುಂಡದೆ ಜತ್ತಿ ಮುಂಡೆವು ನುರ್ತೆರ್

ಅಷ್ಟೆಮಿದ ಸಿರಿಪರ್ಬ ಜವಣೆರ್ ಕಿಷ್ಣ ರಾಮೆರ್ ಬತ್ತೆರ್
ಕಷ್ಟ ಕಳೆವರೆ ಕೊಜಿಪು ಕುಡಿಕೆದ ಇಷ್ಟಗೊಬ್ಬುನ್ ನಲಿತೆರ್

ತಪ್ಪುದಾದವು ನಮ್ಮ ಬಲಿಯೇಂದ್ರನವು ಪಾತಳೊಡುಪ್ಪರೆ
ಲೆಪ್ಪು ಮೂಜೆ ಬರ್ಪಿವರಸರಿ ಕಟ್ಟ್‌ಕಟ್ಟಳೆ ಕರಿಪರೆ

ತುಡರ್ ದೀವೊಡು ಮಾತ ಕಂಡೊಗು ಪುಡೆಟ್ ಬಚ್ಚಿರೆ ಪೂಲುನು
ಉಡಲ್ ದಿಂಜಿದ್ ಲೆತ್ತಿ ಸಾತ್‌ಗ್ ಬಲಿನ ಓಕೊನು ಕೇಣುನು

ಪುರಲ್ ದೇವಿನ ಚೆಂಡ್ ದಂಟರೆ ಪುರೆಲು ಕಂಡೊಡು ಮುಂಡೊಡು
ಅರಿವು ಬೆಗರ್‌ದ ಬೆಸರ್ ತೆರಿವಾ ಬಾಜೆಲ್‌ಗ್ ಪರಿ ಬೊಂಡೊಡು

ಬೀಲ ಪತ್‌ದ್ ಗಿಡಾದ್ ಎರ್ಲೆನ್ ಪಲಯಿ ದೊಂಕುದು ಬೀರೆರ್
ಮೇಲ್ ಗೆಲ್ಮೆಡ್ ನಿರ್ಸನಿಗ್ ರಾಪಾದ್ ನೀರ್‌ನ್ ಪಾರೆರ್

ತೂಟೆದಾರದ ಅಗ್ನಿ ಗೊಬ್ಬುಗು ಮನಸ್ ತಲಿಪುನ ನೀರ್‌ದ
ನಾಟೊಕೊಡು ಪೊಸಪೊರ್ಲು ಉಡಲ್‌ಡ್ ಸೊಚ್ಚ ಪರಪುನ ಪೇರ್‌ದ

ಯಕ್ಷಗಾನದ ಬಂಟೆರುಲ್ಲೆರ್ ಯಕ್ಷಲೋಕೊನ್ ದಾಂಟ್‌ದ್
ನಕ್ಷೆ ಪೊಸತೇ ಬರೆಪಿ ಬಿರ್ದ್‌ದ ಅಕ್ಷಯದ ಕುಸಿ ಸೀಂಟ್‌ದ್

ಗರೊಡಿ ವಿದ್ಯೆನ್ ಕಲ್ತ್ ಕೆಲವೆರ್ ಗರುಡೆರಾತೆರ್ ತ್ಯಾಗೊಡು
ಪುರೆಡು ಕುಸ್ತಿದ ಕಲ್ವ ಪೆಟ್ಟ್‌ದ ಪಟ್ಟ್ ತೆರಿನೀ ಜಾಗೊಡು

ಕರಿನ ಬೀರೆರ್ ಕೋಟಿ ಚೆನ್ನಯೆ ಬಾರೆರಿರ್ವೆರ್ ಬನ್ನಗ
ಸಿರಿ ಕುಮಾರನ ಸೊನ್ನೆ ಗಿಂಡೆನ ಕೀರ್ತಿ ಅಬ್ಬಗ ದಾರಗ

ದೇವುಪೂಂಜನ ಕಿಲೆಪು ಕಟ್ಟದ ಕೋರಿ ಕಾದುನ ಈ ದಿನ
ಕಾವು ತೆರಿನಾ ಉಡ್ಡು ಕಳ ಪೊಡಿಮಲ್ತಿನಾಯನ ಆಯನ

ಬಬ್ಬು ಬಾರಗೆ ಕೊರಗ ತನಿಯನ ಅಬ್ಬರದ ಪೊಸ ಪೊರ್ಲುನು
ಕಬ್ಬ ಬರೆವರೆ ತನ್ನಿ ಮಾನಿಗ ಪೊತ್ತಿ ಮದನಗ ಕರ್ಲ್‌ನ್

ರಾವು ಗುಳಿಗೆ ಜುಮಾದಿ ಮಯಿಸಂದಾಯೆ ನಿಲ್ಕುವೆ ಕಲ್ಕುಡೆ
ಆವು ಈ ತುಳುನಾಡ್ ನಮನಿಲೆವೊಂದು ಅಬಯನೆ ಕೊಡಿಕಡೆ

ಆ ಮಹಾ ಪಂಜುರ್ಲಿ ಬಾಮಕುಮಾರೆ ಗಣಪತಿ ಭಗವತಿ
ಸೀಮೆದರಸಬ್ಬಕ್ಕ ರಾಣಿನ ಮೋನೆಗಾವೊಡು ಆರತಿ

ನೆಲಟ್ ಉಂತುದು ಬಾನ ಮುಟುದೆರ್ ದಿವ್ಯ ಜ್ಞಾನೊಡು ಗೊಮ್ಮಟೆ
ನಿಲೆಯಿ ಕಾರ್ಕಳ ಉಲೆವು ಧರ್ಮಸ್ಥಲೊಟು ವೇಣೂರಂದತೆ

ಬಪ್ಪನಾಡ್‌ದ ಅಪ್ಪೆ ಮೆರೆಯಿನ ಊರು ದೋಲುದ ಸಬ್ದೊಡು
ದಪ್ಪ ದಂಬೆದ ಕಲ್ಲ್ ಕಣದಿನಿ ಆಗೊಳಿ ಮಂಜಣೆ ಬೀರೊಡು

ಮೂಲು ಜಾರಂತಾಯೆ, ಕೊಡಮಣಿತಾಯೆ ಬಲಿ ಸಂದಾಯೆರ್
ಓಲು ಪೋಂಡಲ ತುಳುವ ದೈವೊಲು ನುಡಿಪು ಪೊರ್ಲುನು ಕೇಣೆರ್

ಲೆಕ್ಕಿಸಿರಿ ಮಲೆರಾಯೆ, ಕೊಡಮಣಿತಾಯೆ ಬಲಿ ಸಂದಾಯೆರ್
ಲಕ್ಕಿಸಾತ್‌ಗ್ ಭೋಗಹಾರೊನ್ ಗೆತೊನು ಕಾರ್ನಿಕ ತೂವೊಡು

ತುಳುವ ನಾಡ್‌ದ ಪುದರ್ ಮೆರೆವೊಡು ನಾಲ್‌ದಿಕ್ಕ್‌ಡ್ ದೇಸೊಡು
ತುಳುವ ಜನ ತಿಳಿವಳಿಕೆ ವಿದ್ಯೆದ ಬಲೊಟ್ ಗೆಂದ್‌ದ್ ತಿರ್ಗೊಡು

ಎನ್ನ ದೇವೆರ್ ಕೊರ್ತಿ ಸಕ್ತಿಡ್ ಸುಗಿಪು ತುಳುಟೇ ಪಾಡ್ದನ
ಡೆನ್ನ ಡೆನ್ನನ ಮರ್ಲ್ ಮನಸ್‌ದ ಕುಸಿತ ಕಬಿತೆದ ಕಮ್ಮೆನ

ಅಪ್ಪೆ ಪೆದಿನಾಲೆನ್ನ ತುಳು ಕಲ್ಪಾದ್ ಮೋಕೆಡ್ ಸಾಂಕ್ಯೊಲು
ಅಪ್ಪೆ ಪಾತೆರ ತುಪ್ಪೆ ದಿಂಜಿದಿ ಲೆಪ್ಪುಗೀ ಕುಸಿ ಕೊರ್ಯೊಲು

ತುಳುನಾಡಿನ ಹೆಮ್ಮೆ

ತಾಯಿ ಹಡೆದವಳೆನ್ನ ತುಳು ಕಲಿಸುತ್ತ ಪ್ರೀತಿಯ ಚುಂಬಕ
ತಾಯಿ ನುಡಿ ಹಿಡಿ ಮಧುರ ರಸವನು ಮಾತುಮಾತಿಗೆ ತುಂಬುತ

ತಂದೆಯೆನ್ನ ಪುರಾಣ ಪ್ರವಚನ ಪಟುವು 'ಕವಿಗುರು' ಖ್ಯಾತಿಯ
ಮುಂದೆ ಯೆನಗೀ ದೇಸಿ ಬಾಸೆಯ ಭಾಗ್ಯ ಸಂಪದ ವಿತ್ತಿಹ

ಅವರ ಸಾಲದ ಹೊರೆಯ ಇಳಿಸಲು ಅದನು ನಿಮಗೇ ಬಡಿಸುವೆ
ಭುವನ ಭಾಗ್ಯದ ತುಳುವಿನೊಲುಮೆಯ ಕವನ ಖಾದ್ಯವ ಉಣಿಸುವೆ.

ಎಲ್ಲಿ ಹೋದರು ತುಳುವ ತಿಂಡಿಯ ಸವಿತೆ ತಮ್ಮನ ಬಲ್ಮನ[1]
ಮೆಲ್ಲ ಜೋಳಿಗೆಯಲ್ಲಿ ತುಂಬುತೆ ಹಂಚಲಿರುವೆನು ಕಂಪಿನ

[2]ಕೋಲ, ಆಯನ, ನಾಗಮಂಡಲ ಊರು ಊರಲಿ ಉತ್ಸವ
ಮೂಲ ಕಾರ್ಯವು ಬಲಿ ನಡಾರಿಯು ನೇಮ ನಿಷ್ಠೆಯ ಹಂಬಲ

ರಟ್ಟೆ ಗಟ್ಟಿಯ ಧೈರ್ಯ ತುಂಬಿದ ಹೊಡತ ಬಡಿತಕೆ ಅಂಜದ
ಲಟ್ಟ ಜವಣೆಗರಲ್ಲಿ ತುಂಬಿದ ಒಲುಮೆ ಈ ತುಳುನಾಡಿನ

ಇಲ್ಲಿ ತಪ್ಪಂಗಾಯಿ[3] ಜನಗಳು ತೆರೆದ ಬಾಯಿಯ ನೋಟದಿ
ಎಲ್ಲಿ ಮಾಯವು ಕಾಯಿ ಅಚ್ಚರಿ ಪಡಲು ಮೋಜಿನ ಆಟದಿ

ಯಾರ ಕೈಗೂ ಕಾಯಿ ಸಿಗುವುದೆ ಏರಿ ನಿಂತಿಹ ತರುಣನ
ಭೂರಿ ಅಂಗ್ಯೆಯೊಳಗೆ ಸೇರುತ ಕಾಣದಾಗಿಹ ಪರಿಯದೆ.

ಪಲ್ಲಿ[4] ಹಿಡಿಯಲು, ಸೂಂಬು ಪಿರಿಯಲು ಯಾರು ಹತ್ತಿರ ಸುಳಿವರು
ಮೆಲ್ಲ ಬಿಡಿಸಲು ಬಂದರಾದರೆ ಬೆಲ್ಲ ಗುದ್ದಿನ ಸುರಿಮಳೆ

ಬರಲು ಕೆಡ್ಡಸ್[5] ಅಕ್ಕಿ ಹುರುಳಿಯ ಹುರಿದು ತಿನ್ನುವ ಹಬ್ಬವು
ಕರದಿ ಹಿಡಿಯುತ ಕೋಲು ಬೇಟೆಗೆ ಹೊರಟು ನಿಂತರು ಯುವಕರು

ಅಷ್ಟಮಿಯ ಸಿರಿಪರ್ವ ವೇಷದಿ ಕೃಷ್ಣರಾಮರು ಬಂದರು
ಇಷ್ಟದಿಂದಲಿ ಮೊಸರು ಕುಡಿಕೆಯ ಆಟವಾಡುತ ಹೋದರು

[6]ತಪ್ಪು ಮಾಡಿದ್ದೇನು ತುಳು ಬಲಿಯೇಂದ್ರ ಪಾತಳಕ್ಕಿಳಿಯಲು
ಒಪ್ಪಿ ಕರೆಯಲು ಮೂರು ಕೂಗಿಗೆ ಬೆಳಕ ಹಬ್ಬಕೆ ಬರುವನೆ?

ದೊಂದಿ ಉರಿಸಲು ಎಲ್ಲ ಹೊಲದಲಿ ಅಡಿಕೆ ವೀಳ್ಯವನಿರಿಸುತ
ಬಂದೆ ಬರುವನು ಕರೆದಡೆಂಬುದು ಬರಿಯ ನಂಬುಗೆಯಾಗದೆ?

ಪುರಲು ದೇವಿಯ ಚೆಂಡಿನುತ್ಸವ ಆಡಿದಣಿವು ನಿವಾರಿಸೆ
ಮರಳಿ ಕುಡಿದಿಹ ಬೊಂಡ ದಮೃತ[7] ನೀರು ಚೇತನವಾಗುತೆ

ಬಾಲ ಹಿಡಿಯುತ ಹೊಡೆದು ಕಾಟಿಗಳನ್ನು ಕಂಬುಲ ಓಟದಿ
ಮೇಲೆ ನೀರ್‌ನಿರ್ಸಾನಿ ಹಾರಿಸಿ ಗೆದ್ದ ತರುಣರ ನೋಡಿರಿ

ಸೂಟೆದಾರ್‌ದ ಅಗ್ನಿಯಾಟಕೆ ಮನದಿ ಖುಷಿಯನು ಪಡೆಯಲು
ನಾಟಕದ ಹೊಸ ಹುರುಪು ಒಡಲಲಿ ಸ್ವಚ್ಛ ಹರಿಯುವ ಧಾರೆಯು

ಯಕ್ಷಗಾನದ ಬಂಟರಿರುವರು ಯಕ್ಷಲೋಕವ ದಾಂಟುತ
ನಕ್ಷೆ ಹೊಸತೇ ಬರೆವ ಜಾಣರು ಅಕ್ಷಯದ ಸುಖ ಪಡೆಯುತ

ಗರಡಿ ವಿದ್ಯೆಯ ಗುಟ್ಟು ಕಲಿಯುತ ವೀರ ತ್ಯಾಗದಿ ಮೆರೆದರು
ಗರಡಿ ವಿದ್ಯೆಯ ಪರಿಣತಿಯ ತುಳುನಾಡ ವೀರರು ಶೂರರು

ತುಳುವ ವೀರರು ಕೋಟಿ ಚೆನ್ನಯ [9]'ಬಾರೆ' ಯುಗಳರು ಬಂದರು
ಒಲವಿನಾ ಸಿರಿ[10] ಸೊನ್ನೆ ಗಿಂಡೆಕುಮಾರ ಅಬ್ಬಗ ದಾರಗ

ದೇವು ಪೂಂಜ[11]ನು ರಣಭಯಂಕರನಾಗಿ ಕಾದಿದ ಕಥೆಯನು
ನೀವು ತಿಳಿಯಿರಿ ದಂಡಿನಧಿಪತಿಯಾಗಿ ಮರೆದಾ ಪರಿಯನು.

[12]ಬಬ್ಬು ಬಾರಗ ಕೊರಗ ತನಿಯರ ಅಬ್ಬರದ ಹೊಸ ಪರಿಯನು
ಕಬ್ಬ ಬರೆಯಲು ತನ್ನಿಮಾನಿಗ ಮತ್ತೆ ಮದನಗ ದುಗುಡವ

[13]ರಾಹು ಗುಳಿಗ ಜುಮಾದಿ ಮೈಸಂದಾಯ ಕಲ್ಕುಡ ಎಲ್ಲರು
ನಾವು ತುಳುನಾಡವರು ಎನುತಲಿ ಅಭಯಹಸ್ತವ ನಿತ್ತರು.

[14]ಆ ಮಹಾ ಪಂಜುರ್ಲಿ ಭಾಮ ಕುಮಾರ ಗಣಪತಿ ಭಗವತಿ
ಸೀಮೆಯರಸಬಕ್ಕ ರಾಣಿಯ ಮುಖಕೆ ಎತ್ತಿರಿ ಆರತಿ

ನೆಲದಿ ನಿಂತೇ ದಿವ್ಯಜ್ಞಾನದಿ ಗಗನವೇರಿದ ಗೊಮ್ಮಟ
ನೆಲಸಿ ವೇಣೂರಲ್ಲಿ ಕಾರ್ಕಳದಲ್ಲಿ ಧರ್ಮಸ್ಥಳದಲಿ
ಬಪ್ಪನಾಡಿನ ತಾಯಿ ಮೆರೆದಿಹ ಊರು ಡೋಲಿನ ನಾದಕೆ
ದಪ್ಪ ದಂಬೆಯ ಕಲ್ಲ ತಂದನು ವೀರ ಮಂಜಣನಲ್ಲಿಗೆ

ಇಲ್ಲಿ ಜಾರಂತಾಯ ಕೊಡಮಣಿತಾಯ ಉತ್ಸವ ನಡೆಯಿತು
ಎಲ್ಲಿ ಹೋದರು ಮೆರೆದ ದೈವಗಳಿಂದ ಅಭಯದ ನುಡಿಗಳು

ಲೆಕ್ಕಿಸಿರಿ ಮಲೆರಾಯ ಆಟಿಕಳೆಂಜ ಬಂದರು ನಿಂದರು
ಲೆಕ್ಕವಿಲ್ಲದ ದೈವ ದೇವರು ಹರಕೆ ಪಡೆದರು ಮೆರೆದರು

ತುಳುವ ನಾಡಿನ ಹೆಸರು ಮೆರೆಯಲಿ ನಾಲ್ಕು ದಿಕ್ಕಲಿ ದೇಶದಿ
ತುಳುವ ಜನ ತಿಳುವಳಿಕೆ ವಿದ್ಯೆಯ ಬಲದಿ ಎತ್ತರ ಏರಲಿ.

ನನಗೆ ಅವರೇ ಕೊಟ್ಟ ಶಕ್ತಿಯ ಬಳಸಿಕೊಂಡೆನು ಹಾಡಲು
ಜನನ ಸಾರ್ಥಕವಾಗೆ ತುಳುವರು ಕಲಿತು ಕಲಿಸುತ ಮುಂಬರೆ

ತಾಯಿ ತುಳು ಕಲಿಸುತ್ತ ಸಾಕಿದಳೆನ್ನ ಪ್ರೀತಿಯ ಪೂರದಿ
ಕಾಯ ಸವೆಸಲು 'ಕಬಿತೆ' ಮುಖದಲಿ ಭಾಷೆ, ದೇಶಕೆ ಸೇವೆಯು.

ಮೂಲ ಮತ್ತು ಅನುವಾದ : **ಎನ್.ಪಿ. ಶೆಟ್ಟಿ ಮುಲ್ಕಿ**

1. ಬಲ್ಮನ – ಗೌರವ
2. ಕೋಲ-ಆಯನ-ಇತ್ಯಾದಿ – ದೈವಗಳಿಗೆ ತುಳುನಾಡಿನಲ್ಲಿ ನಡೆಸುವ ಉತ್ಸವಗಳು
3. ತಪ್ಪಂಗಾಯಿ ಆಟ – ತುಳುನಾಡಿನಲ್ಲಿ ಪ್ರಚಲಿತವಿರುವ ತೆಂಗಿನಕಾಯಿ ಎಳೆಯುವ ಸ್ಪರ್ಧೆ. ಹಲವು ತರುಣರು ಒಂದಾಗಿ ತೆಂಗಿನಕಾಯಿ ಹಿಡಿಯುತ್ತಾರೆ. ಯಾರಾದರೊಬ್ಬ ಅದನ್ನು ಎಲ್ಲರ ಕೈಯಿಂದ ತಪ್ಪಿಸಿ ಎತ್ತಿ ಹಿಡಿಯಬೇಕು. ಅವನು ಜಯಶೀಲನಾದಂತೆ.
4. ಪಲ್ಲಿ ಹಿಡಿಯುವುದು
   ಸೂಂಬು ಪಿರಿಯುವುದು – ಪಲ್ಲಿ ಹಿಡಿಯುವುದು ಒಂದು ಆಟ. ಇಬ್ಬರು ಒಬ್ಬರ ಕೈ ಇನ್ನೊಬ್ಬರು ಬಲವಾಗಿ ಹಿಡಿದು ಅದನ್ನು ಬಿಡಿಸಲು ಬಂದವರನ್ನು ಹೊಡೆಯುತ್ತಾರೆ. ಪಲ್ಲಿ ಹಿಡಿದು ಬಿಡಿಸುವ ಪ್ರಕ್ರಿಯೆಗೆ ಅಣಿಯಾಗುವುದೆ ಸೂಂಬು ಪಿರಿಯುವುದು.

5. ಕೆಡ್ಡಸ- ಖೆಡ್ಡಾಸ – ತುಳುವರಹಬ್ಬ – ಭೂಮಿತಾಯಿ ಬಹಿಷ್ಠೆಯಾಗುವಳೆಂದು ನಂಬಲಾಗುವ ದಿನ.

6. ತಪ್ಪು ಮಾಡಿದ್ದೇನು? – ತುಳು ಬಲಿಯೇಂದ್ರ ಸತ್ಯಪುತ್ರ – ಮಣ್ಣಿನ ಮಗ ಆದರೂ ಅವನು ಪಾತಾಳಕ್ಕೆ ತಳ್ಳಲ್ಪಟ್ಟ ಕಾರಣವೇನು? ತುಳುವರಿಗೆ 'ದೀಪಾವಳಿ' ಎಂದರೆ ಬಲಿಯೇಂದ್ರನನ್ನು ಕರೆಯುವುದು – ಹೊಲಗಳಿಗೆ ದೀಪ ಇಡುವ ಹಬ್ಬ

7. ಬೊಂಡದಮೃತ ನೀರು – ಎಳನೀರಿನ ಅಮೃತೋಪಮ ನೀರು ಕುಡಿದಾಗ ನವಚೇತನ ಹೊಮ್ಮುವುದು.

8. ಸೂಟೆದಾರ – ದೇವಸ್ಥಾನ-ದೈವಸ್ಥಾನಗಳ ಕೊನೆಯ ದೊಡ್ಡ ಉತ್ಸವದ ಕೊನೆಗೆ ಬೆಂಕಿಯ ದೊಂದಿಗಳನ್ನು ಎರಡು ಬಣದವರು ಹಾರಿಸಿ ಆಡುವ ಆಟ.

9. ಬಾರೆಯುಗಳರು – ಕಾಂತಾಬಾರೆ-ಬೂದಬಾರೆ ಎಂಬ ಅವಳಿ ಸಹೋದರರು.

10. ಸಿರಿ – ಇತ್ಯಾದಿ – ತುಳುನಾಡ ಸಿರಿ ಎಂದು ಜಾನಪದ ವಾಙ್ಮಯದಲ್ಲಿ ಹೆಸರು ಪಡೆದ, ದಿಟ್ಟತನಕ್ಕೆ ಹೆಸರಾದ ಸ್ತ್ರೀ ಮತ್ತು ಅವಳ ಬಳಗ. (ಏಳು ಜನ ಸಿರಿಯರು)

11. ದೇವುಪೂಂಜ – ದೇವುಪೂಂಜ ಸೇನಾಧಿಪತಿಯಾಗಿ ಯುದ್ಧ ಸಾಧಿಸಿದ ವೀರ

12. ಬಬ್ಬು-ಬಾರಗ-ಕೊರಗ – ತುಳುನಾಡಿನ ಬೇರೆ ಬೇರೆ ಆರಾಧನಾ (ಗತಿಸಿದ) ವ್ಯಕ್ತಿಗಳು

13. ರಾಹು-ಗುಳಿಗ- ಇ- – ಬೇರೆ ಬೇರೆ ದೈವಗಳು

14. ಆ ಮಹಾಪಂಜುರ್ಲಿ – ಪಂಜುರ್ಲಿ ದೈವ

ಮತ್ತೆ ಕನ್ಯಾನಕ್ಕೆ

ಡಾ. ನಾ. ಮೊಗಸಾಲೆ

ಈಗ ಬಂದಿದೆ ಚಳಿಗಾಲ - ಆಹಾ! ರಗ್ಗು ಕಂಬಳಿ ಹೊದ್ದು
ಅಪ್ಪಿಕೊಂಡಂತೆ ಅಜ್ಜಿ ಮೊಮ್ಮಗಳ!
ಪ್ರತಿ ಎಲೆಯ ಮೇಲೆ ಮಂಜಿನ ಮುತ್ತು-ನೆನಪಿನ ಲಗ್ಗೆ
ಬಾಲವಾಡಿಯ ಚಿಣ್ಣ ಕಲಿವ ಕಾಗುಣಿತ.

ಮುಚ್ಚಿಕೊಳಬೇಕು-ಬೆಚ್ಚಗಿನ ಬಾಲ್ಯದನುಭವದ ಕಲ್ಲಿದ್ದಲ್ಲ
ಹೊತ್ತಿಸದೆ ಏಕಾಂತದಲಿ ಎಂದಿದ್ದರೂ ಉಗಿಬಂಡಿ
ಓಡುತಿದೆ ಬಹುಕಾಲ ಬಾಲ್ಯವ ಕಳೆದ ಕನ್ಯಾನಕ್ಕೆ
ಬೆಟ್ಟದಲಿ ಇಳಿದಂತೆ ಬೈಗು, ತಂಗಾಳಿ.

ಎಂಥ ಪರ್ವತ ಪಂಕ್ತಿ-ಕಳೆಂಜಿಮಲೆ! ಕೆಳಗಿರುವ
ಮಳೆಮೋಡ ಹೊಲಹೆಣ್ಣಿನನುರಕ್ತಿಯಲ್ಲಿ
ಚಳಿಗಪ್ಪಿಕೊಂಡ ನೆನಪಿನ ತೆಂಗುಕಂಗಿನ ಬೇರು
ಇನ್ನೂ ನೀರುಂಡು ಫಲಿಸುತ್ತಿದೆ ನನ್ನೆದೆಯಲಿ

ಧೂಳು ತುಂಬಿದ ರಸ್ತೆ ಬೆವರಿಳಿದ ಎದೆರಟ್ಟೆ
ತುಂಬದಿದ್ದರು ಹೊಟ್ಟೆ ಸುಖವಾದ ನಿದ್ದೆ
ಮಂಜಪ್ಪ ಗೌಡ ಚನಿಯ ನಾಯ್ಕ ಮುದುಕ ಹರಿಜನ ಕೊರಗ
ಅಡಿಕೆ ತೋಟದ ನಡುವೆ ದುಡಿದರು ಏತದಂತೆ

ಗೇರು ಮಾಮರ ನಿತ್ಯ ಬಿಟ್ಟಂತೆ ಹೂಹಣ್ಣು
ವಡಿಯೂರಿನಜ್ಜಿಮನೆ : ಸ್ವಾತಿಮಳೆ ಬಂದು-
ತೇವ ನಿಂತಿಹ ಮಣ್ಣು; ಪಂಜಾಜೆ ಮಾಸ್ತರರ
ಕನ್ನಡದೊಳಗಣ್ಣು - ಬೆಳೆಯಿಸಿತು ನನ್ನದೆಯೆ ಮುತ್ತು.

ಬಂದ್ಯಡ್ಕ ಚಡವಿನಲ್ಲಿ ಬಸುರಿ ನಡೆಯುವ ಬಸ್ಸು
ಕಣಿಯೂರ ತಿರುವಿನಲಿ ಮಗು ಅಳುವ ಹಾಗೆ
ಇಳಿಬಿಸಿಲ ನಂದನದಲ್ಲಿ ದನಗಾಹಿಗಳ ಕೊಳಲು
ಮಳೆಗಾಲದಲಿ ಮಕ್ಕಳೇ ಗೊರಬೆಯಾದಂತೆ.

ಮುಳಿಹುಲ್ಲ ಮನೆ ಮುಂದೆ ಕಳೆಂಜಿಮಲೆ ಇಳಿದಂಥ
ತೋಟ! ತೋಟದ ಬೇಲಿಯಾಚೆ ಹುಲಿ ಕೂಗು.
ನುಸಿಯ ಕಾಟಕ್ಕಾಗಿ ಹಚ್ಚಿದಗ್ಗಿಷ್ಟಿಕೆಯ ಶಿಖೆ
ಜವ್ವನಿಗರೆದೆಯಲ್ಲಿ ಮಿಂಚುಳ್ಳಿಲಾಗು.

ಈಗೆಲ್ಲಿ ಇಂಥ ಕನ್ಯಾನದಸ್ತಿತ್ವ? ಕಳೆಂಜಿಮಲೆ
ಗೂ ಬೆನ್ನು ನೋವು! ಮತ್ತೆಲ್ಲಿ ಮಳೆ ಮೋಡ?
ಧೂಳು ರಸ್ತೆಗೆ ಟಾರು ಮನೆಗಳ ಸೂರು-ಕಾಂಕ್ರೀಟು
ಮುಳ್ಳು ತುಳಿಯದ ಹಾಗೆ ಪ್ರತಿ ಕಾಲುಗಳಿಗೆ ಎಕ್ಕಡ-ಪಾವಡ!

ಹೆಮ್ಮರಗಳಳಿದಲ್ಲಿ ಕಮ್ಯುನಿಸ್ಟು ಗಿಡ! ಪ್ರತೀ-
ಮನೆಯೊಳಗೆ ನಾಲ್ಕು ಒಲೆ! ಋತುಭೇದವಿರದ
ಹವೆ, ಹವಾಮಾನ! ಕೆರೆಕೊಳದ ಏಡಿಕಪ್ಪೆಗಳೆಲ್ಲ
– ಇರದೆ, ಹೋದವೆ ಬಾತು ಕೊಕ್ಕರೆ ಸಮೂಹ?

ಈಗ ಕನ್ಯಾನಕ್ಕೆ ದಿಲ್ಲಿ ಹತ್ತಿರ : ನನ್ನ
ಹೆಜ್ಜೆ ಗುರುತಿಗೆ ಸಾಕ್ಷಿ – ಶಾಲೆ ಮಾತ್ರ.
ನಿಮ್ಮ ಕನ್ಯಾನ ಹೇಗೇ ಇರಲಿ ನನ್ನ ಕನ್ಯಾನಕ್ಕೆ
ಮುಪ್ಪಿಲ್ಲ; ಬೇಕೆಂದಾಗ ತಕೋ ಪ್ರತ್ಯಕ್ಷ !

ಕುಡ ಕನ್ಯಾನೊಗು

ಬತ್ತ್‌ದಿಂಡಿತ್ತೆ ಚಳಿಗಾಲೊ - ಆಹಾ! ರಗ್ಗ್ ಕಂಬೊಳಿ ಪೊದೆದ್
ಆರಾದ್ ಪತ್ತಿಲೆಕ್ಕೊ ಅಜ್ಜಿ ಪುಳ್ಯಾಡಿಲೆನ್
ಇರೆಇರೆತ್ತ ಮಿತ್ತ್ ಮೈಂದ್‌ಪನಿ - ನೆಂಪಾಪುಂಡಿತ್ತೆ
ಬಾಲವಾಡಿದ ಬಾಲೆ ಸಾಲೆ ಕಲ್ಪಿಲಕ್ಕ

ಮುಚ್ಚೊಡು ಬೆಚ್ಚನೆದ ಬಾಲ್ಯದನುಭವೊದ ಕಲ್ಲಿಜ್ಜಲ್‌ನ್
ಪೊತ್ತಾವಂದೆ ಒರಿಯೆನೇ ಏಪಾಂಡಲಾ ಅಬೆಗಾಡಿ
ಬಲಿಪುಂಡು, ಬಹುಕಾಲೊ ಕರಿನ ಕನ್ಯಾನೊಗು
ಗುಡ್ಡೆಡ್ದ್ ಜತ್ತಿಲಕ ಬಯ್ಯ, ತಂಪುಗಾಳಿ!

ಎಂಚಿ ಅಮ್ಮೆದ ಮಾಲೆ - ಕಳೆಂಜಿಮಲೆ ! ತಿರ್ತ್
ಬರ್ಸೊದ ಮುಗಲ್ ಬೈಲ್ ಪೊಣ್ಣನ ಮಿತ್ತ್ ಮೋಕೆ ದಿಂಜ್‌ದ್
ಚಳಿಕ್ಕರಾದ್ ಪತ್ತಿ ನೆಂಪುದ ತಾರೆ ಕಂಗ್‌ದ ಬೇರ್
ಇತ್ತೆಲಾ ಫಲ ದಿಂಜ್‌ದುಂತ್‌ದ್‌ಂಡ್ ಎನ್ನುಡಲ್‌ಡ್

ದೂಳುದಿಂಜಿನ ಮಾರ್ಗೊ ಬೆಗರ್‌ಜತ್ತಿನ ಮೈರಟ್ಟೆ
ದಿಂಜ್‌ದಿಜ್ಜ್‌ಂಡಲಾ ಬಂಜಿ ಎಂಚಿ ಸುಖನಿದ್ರೆ
ಮಂಜಪ್ಪ ಗೌಡೆ ಚನಿಯ ನಾಯ್ಕೆ ಪರಬೆ ಹರಿಜನ ಕೊರಗೆ
ತೋಟೊದುಲಯಿಡ್ ಬೆಂದೆರ್ ಜೊಟ್ಟೆದಂಗೆ

ಗೋಂಕು ಕುಕ್ಕುದ ಮರ ದಿನೊಲಾ ಬುಡಿಲಕ್ಕ ಪೂ ಪಂದ್ರ್
ಒಡಿಯೂರುದಜ್ಜಿನ ಇಲ್ಲ್ ಸೋದೆ ಬರ್ಸೊಗು
ಪಸೆ ಜತ್ತಿ ಮಣ್ಣ್ ಪಂಜಾಜೆ ಮಾಸ್ತೈನ
ಕನ್ನಡದುಲಗಣ್ಣ್ ಬುಲೆಪ್ಪಾಂಡ್ ಎನ್ನುಡಲ್‌ಡ್ ಮುತ್ತು

ಬಂದ್ಯಡ್ಕದೇರ್‌ಡ್ ಪೆದ್ಮೆದಿಲಕ್ಕ ಬಸ್ಸ್
ಕಣಿಯೂರ್ದ ತಿರ್ಗಾಸ್‌ಡ್ ಬಾಲೆ ಬುಲಿಪ್ಪಿ ಲಕ್ಕ
ಜಪ್ಪಿ ದೊಂಬುದ ನಂದನೊಡು ದೇರುನಾಯನ ಪುರಲ್
ಮರ್ಯಾಲೊಡು ಜೋಕುಲೇ ಕಿಡೆಂಜಿಲಾಯಿ ಲಕ್ಕ

ಮುಳಿ ಮಾಡ್‌ದಿಲ್ಲದ ಎದುರು ಕಳೆಂಜಿಮಲೆನೇ ಜತ್ತಿನಂಚಿನ
ತೋಟೊ! ತೋಟೊದ ಬೇಲಿಯಾಪೆಡ್ ಪಿಲಿತ್ತ ಮುಕ್ಕುರು
ಉಮಿಲ್ದ ಪೆಟ್ಟ್‌ಗ್ ಪೊತ್ತಾಯಿದಗ್ಗಿಷ್ಟಿಕೆದ ಗೆಂಡ
ಜವನೆರೆನುಡಲ್‌ಡ್ ಮೀನಂಕೊಳ್ಳಿ ನಲಿಕೆ

ಓಲಿತ್ತೆ ಇಂಚಿ ಕನ್ಯಾನೊ ಕಳೆಂಜಿಮಲೆ –
ಕ್ಕಲಾ ಬೆರಿಬೇನೆ! ಬೊಕ್ಕ ಒಲ್ಪಾಡ್ದ್ ಬರ್ಸೊದ ಮುಗಲ್?
ದೂಳು ಮಾರ್ಗೊಗು ಟಾರ್, ಇಲ್ಲ ಮಾಡ್‌ಗ್ ಕಾಂಕ್ರೀಟ್
ಮುಳ್ಳು ತಾಗಂದಿಲಕ್ಕ ಮಾತೆರೆಗ್ಲಾ ಜೋಡು–ಪಾವಡೆ!

ಮರ ಕಡ್ತ್‌ನಲ್ಪ ಕಮ್ಯುನಿಸ್ಟ್‌ದ ಬಿದೆ! ಒಂಜೇ
ಇಲ್ಲದುಲಯಿಡ್ ನಾಲಡ್ಪೆಲ್! ಋತುಭೇದ ದಾಂತಿನ
ಕಾಲೊ, ಕಾಲಮಾನೊ! ಕೆಮುಗುವೆಲುಡುಪ್ಪಿ ಎಟ್ಟಿ ಕಪ್ಪೆಲು ಮಾತ
ಓಲುಂಡು, ಪೋಯೊನೇ ಬಾತು ಕೊರೆಂಗುಲು ಮಾಯವಾದ್?

ಇತ್ತೆ ಕನ್ಯಾನೊಗು ಡೆಲ್ಲಿ ಬಾರೀ ಮುಟ್ಟ; ಎನ್ನ
ಪಜ್ಜೆ ಗುರ್ತೊಗು ಸಾಕ್ಷಿ – ಸಾಲೆ ಮಾತ್ರ
ನಿಕ್ಲೆ ಕನ್ಯಾನೊ ಎಂಚನೇ ಉಪ್ಪಡ್; ಎನ್ನ ಕನ್ಯಾನೊಗು
ಪ್ರಾಯ ಪೋತ್‌ಜ್ಜಿ ಬೋಡುಂದಾಂಡ ತೂಲೆ ಪ್ರತ್ಯಕ್ಷ!

ಮೂಲ : **ಡಾ. ನಾ. ಮೊಗಸಾಲೆ**
(ತರ್ಜುಮೆ : **ಸಂಪಾದಕೆ**)

ಪಾವಡೆ – ಕೆಂಪು ಹಾಸು (Red carpet)

ಕೋಟೆಮಲೆ

ಜಿ.ಎಸ್. ಉಬರಡ್ಕ

ನೂರೆಂಟು ಹುಳಿರಗಳೆ, ಅಗಾಧ ಚಿಂತೆಗಳು–
ಏಕಾ ಏಕಿ ಏಕಾಕಿ ಮನೆಯಾಚೆ ಹೊರಟವನೆ
ಕೋಟೆಮಲೆ ಕಾಡು ಕಣಿವೆಯ ಕಡೆಗೆ ಹೆಜ್ಜೆಯಿಟ್ಟೆ:

ಕಾಡಲ್ಲಿ ಗಜಗಾತ್ರ ಖಂಡಿಮರ, ಪೀಚು ಮೈ ದೋಟಿ ಮರ,
ಗಿಡ್ಡಮರ, ಅಡ್ಡಮರ – ತಳಿರು ತೋರಣ ಕಂಬ
ದಾಟುತ್ತ ದಾಟುತ್ತ ಹಸಿರು ಕೊಡೆ ನೆರಳಲ್ಲಿ
ಗಿಡ ಬಳ್ಳಿ ಪೊದೆ ನುಗ್ಗಿ ಮುಂದೆ ಸರಿದೆ.

ಕಾಡಲ್ಲಿ ಹಕ್ಕಿಗಳ ಚಿಲಿಪಿಲಿಗೆ ಆಹ್ಲಾದಗೊಳ್ಳುತ್ತ
ಅಳಿಲು, ಮೊಲ, ಕಾಡ್ಕೋಳಿ, ಕಾಡುಕುರಿ, ಮಂಗಗಳ ಕಾಣುತ್ತ
ಖುಷಿಯಲ್ಲಿ ಕೋಟೆಮಲೆ ಏರಿ ನಿಂತೆನು ಕೊನೆಗೆ.

ಎಡಗಡೆಗೆ ಬಂಟಮಲೆ, ಬಲಗಡೆಗೆ ಪೂಮಲೆ,
ಮಿನುಂಗೂರು ಮಲೆಗಳು;
ಮುಂದುಗಡೆ ಕಾಣುವುದೆ ಮ್ಯಾಲಕೋಟೆಯ ಬೆಟ್ಟ
ಅದರಾಚೆ ಕುಮಾರ ಪರ್ವತ ತಡಪೆ ಕಿರೀಟದ ಸಾಲು.

ನಯನ ಮನೋಹರ ನೋಟ ಎದೆ ತುಂಬ ತುಂಬಿಕೊಳ್ಳುತ್ತ
ಅಲ್ಲೆ ನಿಂತಲ್ಲೆ ಬೆನ್ನ ಹಿಂದಿನ ನೇರಳೆಯ ಮರವನ್ನೆ ನೋಡುತ್ತ
ಬುಡದಲ್ಲೆ ಒರಗಿ ಕೂತವನೆ ಕ್ಷಣ ಧ್ಯಾನಿಸಿದೆ :

ಕರೆಗಂಟೆ ಹೊಡೆದಂತೆ ಎಡೆಬಿಡದ ಕೂಗು –
ಟುವ್ವಿ ಟುವ್ವಿ... ಟುವ್ವಿ ಟುವ್ವಿ...
ಅರರೆ! ಇದು ಎಲ್ಲಿಂದ ಕೇಳಿಸಿತೆಂದು ತಲೆಯೆತ್ತಿ ನೋಡಿದರೆ
ಆ ಮರದ ರೆಂಬೆ ಸೆರೆಯಲ್ಲಿ ಬಾಲ ಪುಟಿಸುತ್ತ
ಹಾಡುತ್ತಲಿತ್ತು ಪುಟ್ಟ ದರ್ಜಿ ಹಕ್ಕಿ

ಕವಿಯೇ ಕವಿಯೆ.... ಕವಿಯೇ ಕವಿಯೆ....
ಚಿಂತಿಸಿ ಯಾಕೋ ಹಲುಬುತ್ತೀಯ?
ರಗಳೆಗೆ ಅಂಜಿ ಓಡುತ್ತೀಯ?
ಎದುರಿಸಿ ತಲೆಯೆತ್ತೋ
ನನಗೂ ಕಾಡುವ ಕೇಡುಗಳುಂಟು –
ಬದುಕಿಗೆ ಅಂಟಿದ ನಂಟಿನ ಗಂಟು !

ನುಡಿದಂತಾಯಿತು ಹಕ್ಕಿಯ ಹಾಡು –
ಎಚ್ಚರಗೊಂಡೆನು ನಾನು
ಹಾಡುವ ಹಕ್ಕಿಯೆ, ಆಸರೆ ನೀಡಿದ ಮರವೇ
ನಿಮಗಿದೊ ವಂದನೆಯೆಂದೆ.

ಇನ್ನೆಲ್ಲಿಯ ಬೇಸರ – ಬೆನ್ನ ಮೇಲೆಲ್ಲ ಮೆತ್ತಗೆ
ನೀಳ ಕೈ ಆಡಿಸಿದ ರಾಗರಂಜಿತ ನೇಸರ
ಮನೆಯ ದಾರಿಯ ಹಿಡಿದು
ಕೋಟೆಮಲೆ ಕಿಬ್ಬೊಟ್ಟೆ ಇಳಿಜಾರಿಗಿಳಿದಂತೆ
ನೆರಳು ಚಾಚಿತು ಕೋಟೆಮಲೆ
ನನ್ನ ಬೆನ್ನ ಹಿಂದೆ.

ನಡೆದು ಬಂದಂತೆ...
ಬಂದಂತೆ.... ಬಂದಂತೆ....
ಕಿಬ್ಬದಿಯಾಚೆಗೆ ಹರಿಯುವ ತೊರೆಗಳ ಕಲ ಕಲ ನಾದ
ಲೇಲೇ ಪದಗಳ, ದುಡಿಯ ಸುನಾದ
ಕೊಳಲನ್ನೂದುವ ಮಧುರ ನಿನಾದ.

ಕೋಟೆಮಲೆ

ನೂತೆಣ್ಮ ಪುಳಿರಗಳೆ ಬಾರೀ ತರೆಬೆಚ್ಚ
ರಪ್ಪ ಒರಿಯೆನೇ ಇಲ್ಲಡ್ದ್ ಪಿದಾಯಿ ಬತ್ತ್‌ದ್
ಕೋಟೆಮಲೆ ಕಾಡ್‌ದಂಚಿ ಪಜ್ಜೆ ದೀಯೆ.

ಕಾಡ್‌ಡ್ ಆನೆಲಕ್ಕಂತಿ ಖಂಡಿಮರ ಸಪೂರ ದೋಟಿಮರ
ಕುದ್ಯಮರ ಅಡ್ಡಮರ ಪಜಿರ್ ತೋರಣ ಕಂಬ
ಕಡತ್ತೊಂದು ಕಡತ್ತೊಂದು ಪಚ್ಚೆಕೊಡೆ ನಿರೆಲ್‌ಡ್
ದೈ ಬೂರು ಬಲ್ಲೆ ನುರ್ಕುದು ದುಂಬು ಪೋಯೆ

ಕಾಡ್‌ಡ್ ಪಕ್ಕಿಲೆನ ಕಿಲೆಪ್ಪುಗು ಖುಷಿ ಪಡೆಯೊಂದು
ಚಣಿಲ್ ಬರ್ಕ ಕಾಟ್‌ಕೋರಿ ಕಾಡ್‌ಕುರಿ ಮಂಗೆರೆನ್ ತೂವೊಂದು
ಖುಷಿಟ್ಟ್ ಕೋಟೆಮಲೆ ಏರ್ದ್ ಉಂತಿಯೆ ಅಕೇರಿಗ್

ಎಡಮೈಟ್ ಬಂಟಮಲೆ ಬಲಮೈಟ್ ಪೂಮಲೆ
ಮಿನುಂಗೂರು ಮಲೆಕ್ಕುಲು ;
ದುಂಬು ತೋಜುನವು ಮ್ಯಾಲಂಕೋಟೆದ ಗುಡ್ಡೆ
ಅಯಿತ್ತಂಚಿ ಕುಮಾರ ಪರ್ವತೊ ತಡಪೆ ಕಿರೀಟೊದ ಸಾಲ್

ಪೊರ್ಲುಕಂಟ್‌ದ ನೋಟೊಲೆನ್ ಕಣ್ಣ್‌ಡ್ ದಿಂಜಾವೊಂದು
ಉಂತಿನಲ್ಪನೆ ಪಿರವುಡು ನೇರೊಳುದ ಮರೊನೇ ತೂವೊಂದು
ಮುದೆಲ್‌ಡ್ ಒರಗ್‌ದ್ ಕುಲ್ಲಿನಾಯೆ ಒಂಜಿಕ್ಷಣ ಧ್ಯಾನ ಮಲ್ತೆ ;

ಗಂಟೆ ಹಾಕಿಲಕ ಒಂಜೇ ಸಮ ಕಿಲೆಪು-
ಟುವ್ವಿ... ಟುವ್ವಿ.. ಟುವ್ವಿ ಟುವ್ವಿ...
ಅರೆ! ಉಂದು ಒಲ್ಪಾಡ್ದ್‌ಂದ್ ತರೆದೆರ್ತ್ ತೂಂಡ
ಆ ಮರತ್ತ ಗೆಲ್ಲ್‌ದಿಡೆಟ್ಟ್ ಬೀಲ ಹಾಕೊಂದು
ಕಿಲೆತೊಂದಿತ್ತ್‌ಂಡ್ ಎಲ್ಯ ದರ್ಜಿ ಪಕ್ಕಿ

ಕಬಿಯೇ... ಕಬಿಯೇ... ಕಬಿಯೇ... ಕಬಿಯೇ...
ವ್ಯಥೆ ದಿಂಜ್‌ದ್ ದಾಯೆ ಬುಲಿಪುವ?
ರಗಳೆಗ್ ಪೋಡ್ತ್‌ದ್ ದಾಯೆ ಬಲಿಪುವ?
ಎದುರಿಸಾದ್ ಉಂತಿಯರ ಕಲ್ಪು
ಎಂಕ್‌ಲ ಬೆರಿಬುಡಂದಿ ಕೇಡುಂಡು
ಬದ್ಕ್‌ಗ್ ಆಂಟಿನ ನಂಟ್‌ದ ಗಂಟ್!

ಪಂಡಿಲಕ್ಕಾಂಡ್ ಪಕ್ಕಿದ ಕಿಲೆಪು-
ಎಚ್ಚರಾಂಡ್ ಎಂಕ್
ಪಾಡುನ ಪಕ್ಕಿಯೆ, ಆಸರೆ ಕೊರ್ತಿ ಮರನೇ
ನಿಕುಲೆಗ್ ಸೊಲ್ಮೆಲು ಪಂಡೆ

ನನ ಒಲ್ಪದ ಬೇಜಾರ್ - ಬೆರಿತ್ತ ಮೇಲ್‌ಡ್ ಮೆಲ್ಲ
ಉದ್ದ ಕೈಟ್ ಪೂಜಿನ ಪಿರ್ತಿದಿಂಜಿನ ನೇಸರ್
ಇಲ್ಲದ ಸಾದಿ ಪತೊಂದು
ಕೋಟೆಮಲ್ತ್ತ ಮಟ್ಟೆಲ್‌ಗ್ ಜಾರಿಲಕ್ಕ
ನಿರೆಲ್ ಕಬಿಯಿಂಡ್, ಕೋಟೆಮಲೆ
ಎನ್ನ ಪಿರವುಡು

ನಡತ್ತೊಂದು ಬತ್ತಿಲಕ್ಕನೆ
ಬತ್ತಿಲಕ್ಕನೆ... ಬತ್ತಿಲಕ್ಕನೆ...
ಎನ್ನಾಪೆಗ್ ಪರಿಪುನ ತೋಡುಲೆನ ಸೊರ
ಲೇ ಲೇ ಪದೊಕ್ಕುಲೆನ, ದುಡಿತ್ತ ದುನಿಪು
ಪುರಲ್ ಉರಿಪುನ ಸೊಂಪು ಸೊರ.

ಮೂಲ : ಜಿ.ಎಸ್. ಉಬರಡ್ಕ
(ತರ್ಜುಮೆ : ಸಂಪಾದಕೆ)

ಪಿಲಿ ಪೆತ್ತ ನೀರ್ ಪರ್ಪಿನ ಕೆದು

ಕೆ.ಟಿ. ಗಟ್ಟಿ

ಉಂದು ಪಿಲಿಲ ಪೆತ್ತಲ ಒಟ್ಟುಗು ನೀರ್ ಪರ್ಪಿನ ಕೆದು;
ಪಿಲಿ ಸಾರ ಒರ್ಸೊಗು ದುಂಬು, ಪೆತ್ತ ಕೋಡೆ ಮುರಾನಿ
ಇನಿ ಬಾಕಿ ಐತ ಮೂಜಿ ಪೊಣ್ಣುಕಂಜಿಲು ಮಾತ್ರ;
ಇತ್ತೆ ಉಂದು ಕಂಬುರ್ದ ಬಿತ್ತಿಲ್‌ಡ್ದ್ ಬತ್ತಿ ಕುದ್ಕೆರ್
ಬಿತ್ತಿಲ್‌ಡೇ ಇಡೀ ರಾತ್ರೆ ಜೆತ್ತ್‌ದ್, ಪುಲ್ಯಕಾಂಡೆ ಲಕ್ಕ್‌ದ್
ಗುಡ್ಡೆಗ್ ಮಿತೆರುನ ಕಡಪು;
ಅಂಚಿಗುಂಡು ತೂಲೆ, ಆವು ನಾಗಬನ;
ಇತ್ತೆ ಉಪ್ಪಿನಿ ನಾಗೆರ್ ಮಾತ್ರ, ಬನ ಓಟುಡು ಗೆಂದಿನಾರೆ ಅಟ್ಟೊಡು,
ಬನೊತ ಪೊರ್ಲುದ ಬೂತ ಆರೆನ ಚಾವಡಿಡ್;
ಉಂದು ನಾಗೆರೆಗ್ ಪೇರ್ ಮೈಪುನ ಜಾಗ;
ಇತ್ತೆ ಚಂಜಾಯಿ ಪೆತ್ತದ ಮಾಸ ತಿನ್ಪಿ ಪಿಲಿಕುಲೆಗ್‌ಲಾ
ಪೆತ್ತದ ಪೇರ್ ಪರ್ಪಿ ನಾಗೆರೆಗ್‌ಲಾ.

ಹುಲಿ ಹಸು ನೀರು ಕುಡಿವ ಕೆರೆ

ಇದು ಹುಲಿ ಹಸು ಜೊತೆಯಾಗಿ ನೀರು ಕುಡಿವ ಕೆರೆ;
ಹುಲಿ ಸಾವಿರ ವರ್ಷ ಹಿಂದೆ, ಹಸು ನಿನ್ನೆ ಮೊನ್ನೆ
ಇಂದು ಅದರ ಮೂರು ಹೆಣ್ಣು ಕರುಗಳು ಮಾತ್ರ ಉಳಿದಿವೆ
ಈಗ ಇವು ಕಬ್ಬಿನ ಹಿತ್ತಲಿಂದ ಬಂದ ನರಿಗಳು
ಇಡೀ ರಾತ್ರಿ ಹಿತ್ತಲಲ್ಲೇ ಮಲಗಿ, ಮುಂಜಾನೆ ಎದ್ದು
ಗುಡ್ಡೆ ಹತ್ತುವ ಕಡಸು;
ಅಲ್ಲಿ ಇದೆ ನೋಡಿ, ಅದು ನಾಗಬನ;
ಈಗ ಇರುವುದು ಹಾವುಗಳು ಮಾತ್ರ, ಬನ ವೋಟಿನಲ್ಲಿ ಗೆದ್ದವರ ಮಹಡಿಯಲ್ಲಿ
ಬನದ ಚಂದದ ದೈವ ಅವರ ಚಾವಡಿಯಲ್ಲಿ;
ಇದು ನಾಗನಿಗೆ ಹಾಲೆರೆವ ಜಾಗ;
ಈಗ ಸ್ನೇಹ ಹಸುವಿನ ಮಾಂಸ ತಿನ್ನುವ ಹುಲಿಗಳಿಗೂ
ಹಸುವಿನ ಹಾಲು ಕುಡಿವ ನಾಗರಿಗು

ಮೂಲ : **ಕೆ.ಟಿ. ಗಟ್ಟಿ**
(ಅನುವಾದ : **ಸಂಪಾದಕ**)

ತುಳುವನಾಡ್‌ಗ್ ಎದ್ಕೊನುವೆ

ಚಿದಂಬರ ಬೈಕಂಪಾಡಿ

ಬಲೇ ಬಲೇ ಎಂಕ್ಲೆನ ತುಳುವನಾಡ್‌ಗ್
ಬಲೇ ಬಲೇ ಗುತ್ತು ಬರ್ಕೆದ ಹಳ್ಳಿಬೂಡುಗ್
ಕಡಲಪ್ಪೆನ ಮಟ್ಟೆಲ್ದ ಮೋಕೆದ ನಾಡ್
ದೈವೊಲು ಮದಿಪು ಕೊರ್ಪಿ ಪೆರ್ಮೆದ ನಾಡ್

ಪಚ್ಚೊ ಪಚ್ಚೊ ರಂಗ್‌ದ ಮೈಮರ್ಲುನ ಕಾಡ್ ಪೊರ್ಲು
ತಾರೆ ಬಾರೆ ಕಂಗ್ ಬಾರ್ ಕುರಲ್ ದಿಂಜಿದಿ ಸೊರ್ಕು
ನಟ್ಟಿ ನಡ್ಪಿನ, ಕೆಯ್ ಬಾರ್ ತುಂಬುನ ಜನೊಕುಲು
ವೋಡ ಜಾರಾದ್ ಕಡಲ್ ದತ್ತ್‌ದ್ ಮೀನುಪತ್ತುನಕುಲು

ಕಟ್ಟೋಗ್ ಪೋಯಿಪಂಡ್ದ್ ಜಾಲ್‌ಡಿತ್ತಿ ಪೂಂಜೆ ಕೆಲೆಪುಂಡು
ಕಂಬುಲೊಗ್ ಜಪ್ಪುಲೆಂದ್ ಕಿದೆಟ್ಟಿತ್ತಿ ಯೆರು ಲೆಪ್ಪುಂಡು
ತಪ್ಪಂಗಾಯಿ, ಚೆನ್ನೆಮಣೆ ಗೊಬ್ಬು ನೂದುಂಡು
ಆಟಿ ಕಳೆಂಜ, ಕೋಲಬಲಿ ನೇಮ ಮೂಲುಂಡು

ತೇವು ತಿಂತರಾ, ಕನಿಲೆ ತೂತರಾ, ಕಂಚಲದ ಕಜಿಪು
ಬಂಗುಡೆ, ಬೂತಾಯಿ, ಮಾಂಜಿ ಮರ್ವಾಯಿ ಯೆಟ್ಟಿಪೊಡಿತ್ತ್ ಚಟ್ನಿ
ಕೋರಿ ರೊಟ್ಟಿ ಮೂಡೆ, ಗಟ್ಟಿ ಪತ್ರೊಡೆ ಕಮ್ಮೆನೊದ ಅಡ್ಡೆ
ಬಂಜಿದಿಂಜಿನ ತೊಡು ಕಳೆವುನ ತೆನಸ್ ತಿಂದ್ ತೂಲೇ

ರಾಣಿ ಅಬ್ಬಕ್ಕ, ಕೋಟಿಚೆನ್ನಯೆ, ಆಗೊಳಿಮಂಜಣೆ ಪುಟ್ಟಿನ ತುಳುನಾಡ್
ರತ್ನಾಕರ, ಮುದ್ದಣ ಬರವುಬೆನ್ನಿಡ್ ಪುದರ್ ಪಡೆಯಿನ ನಾಡ್
ಪಾಪೊನುಕರ್ತ್‌ದ್ ಪುಣ್ಯ ಕೊರ್ಪಿನ ಸೀರ್ತೊದ ಸುದೆಕುಲು ಪರಪುನ ನಾಡ್
ಪಡ್ಡಾಯಿ ಕಡಲ್ ಮೂಡಾಯಿ ಗಡಿಮುಟ್ಟದ ನಾಡ್ ಪೆರ್ಮೆದ ತುಳುನಾಡ್

ತುಳುನಾಡಿಗೆ ಸ್ವಾಗತ

ಬನ್ನಿ ಬನ್ನಿ ನಮ್ಮ ತುಳುವ ನಾಡಿಗೆ
ಬನ್ನಿ ಬನ್ನಿ ನಾಡುವಾಡೆ ಇರುವ ಬೀಡಿಗೆ
ಕಡಲ ತಾಯ ಮಡಿಲ ಮೋಹದೆಂಥ ನಾಡಿದು
ದೈವಗಳು ಹಾರೈಸುವ ಹೆಮ್ಮೆಯಿರುವುದು

ಹಸುರು ಬಣ್ಣದಿಂದ ಎಸೆವ ಕಾಡೆ ಚಂದವು
ತೆಂಗು ಬಾಳೆ ಕಂಗು ಬತ್ತ ಕದಿರು ಚಂದವು
ನಾಟಿ ಮಾಡಿ ಹೊರೆಯ ತುಂಬಿ ದುಡಿವ ಜನಗಳು
ದೋಣಿ ಇಳಿಸಿ ಕಡಲ ಕ್ಕೊವ ಮೀನುಗಾರರು

ಕೋಳಿ ಅಂಕಕೆಂದು ಹುಂಜ ಕೂಗುತಿರುವುದು
ಕಂಬಳಕ್ಕೆ ಕಟ್ಟಿರೆಂದು ಕೋಣ ಮೊರೆವುದು
ತಪ್ಪಂಗಾಯಿ,[1] ಚೆನ್ನೆಮಣೆ ಆಟವಿರುವುದು
ಆಟಿಕಳೆಂಜ ಕೋಲ ಬಲಿ ನೇಮವಿರುವುದು

ಕೆಸುಕಣಿಲೆ ಹಾಗಲದ ಗೊಜ್ಜು ಸವಿಯಿರಿ
ಬಂಗುಡೆ ಬೂತಾಯಿ ಮಾಂಜಿ ಏಡಿ ತಿಂದು ನೋಡಿರಿ
ಕೋಳಿರೊಟ್ಟಿ ಮೂಡೆಗಟ್ಟಿ[2] ಪತ್ರೊಡೆ[3] ಪರಿಮಳ
ಹೊಟ್ಟೆತುಂಬ ತಿಂದು ತೇಗಿ ರುಚಿ ಅಸದಳ

ರಾಣಿ ಅಬ್ಬಕ್ಕ ಕೋಟಿ ಚೆನ್ನಯ ಅಗೋಳಿ ಮಂಜಣರು
ರತ್ನಾಕರ ಮುದ್ದಣ ಕಾವ್ಯ ಮೆರೆದರು
ಪಾಪ ಕಳೆದು ಪುಣ್ಯ ಹರಕೆ ಕೊಡುವ ನದಿಗಳು
ಪಡುವ ಕಡಲು ಮೂಡಘಟ್ಟದಿಂದ ನಾಡು ಮೆರೆವುದು

ಮೂಲ : **ಚಿದಂಬರ ಬೈಕಂಪಾಡಿ**

(ಅನುವಾದ : ಸಂಪಾದಕ)

1. ಮೂಡೆ – ಉದ್ದು ಅಕ್ಕಿ ಬೆರೆಸಿ ಮಾಡಿದ ಇಡ್ಲಿಯಂತಹ ತಿಂಡಿ, 2. ಗಟ್ಟಿ – ಅದ್ಯೆ, ಅಕ್ಕಿ ತಿಂಡಿ, 3. ಪತ್ರೊಡೆ – ಕೆಸುವಿನ ಎಲೆ ಮತ್ತು ಅಕ್ಕಿ ಬೆರೆಸಿ ಮಾಡಿದ ತಿಂಡಿ

ಅಪ್ಪೆ ಇಲ್ಲ್

ಆತ್ರಾಡಿ ಅಮೃತಾ ಶೆಟ್ಟಿ

ಪೊರ್ಲ ಬಂಗಾರ ತೆಗ್ಲ್ ನಾಡ್
ನಲಿಪು ಸುದೆ ಕೈಯಿದಯಿಕ್ಲೆ ಕಲಡ್
ಉಂದು ಯಾನ್ ಪುಟುದು ಬಲತ್ತಿ
ಎನ್ನ ತುಲುವ ನಾಡ್‌ಯೆ
ಒಯಿಪು ಉರೊಲು[1] ಪನ್ಪಿ ಪಾಡ್ದನ[2]
ಮುಗೆಪು ಬಿಗರ್ದ ಕಂಟ್ ಕಮ್ಮೆನ
ಅಂಚಿ ಇಂಚಿ ಒಂಚಿ ತೂಂಡಲ
ಪೊರ್ಲು ಪೊರ್ಲೇ ಪೊರ್ಲುಯೆ
ನಾಲ್ ಮೆಯಿಟಿಪ್ಪು ಪರಪು ಪನಿಪು
ಮೋಕೆ ದಿಂಜಾವು ಪೊರ್ಲ ಪಾರುಲು[3]
ತೂಪಿ ಜನಮಾನಿ ಅಚ್ಚಿರೊಡುಂತುದು
ಮರ್ಲ ಆಪೆರ್ ಮೂಲುಯೆ
ನಡ್ಯೊಡುಲ್ಲೆ ಗೊಲ್ಲ ಕಿಷ್ಣೆ
ತೆನ್ಕಾಯಿದ ಮಂಜುನಾಥೆ
ಅಪ್ಪೆ ದೇವಿ ಕಟೀಲ್ ಮಾತೆ
ಕೊರ್ಪೊಲೆಂಕ್ಲೆಗ್ ಅಭಯೊನು
ರಾಣಿ ಅಬ್ಬಕ್ಕೆ ಶಿಲ್ಪಿ ಕಲ್ಕುಡೆ
ಅಕ್ಕಸದುದ್ದದ ಗೊಮ್ಮಟೆ
ಕಣ್ಣ್ ನಲಿಪು ಮನಸ್ಸ್ ತೆಲಿಪುಂಡು
ಉಂದೆನ್ ಮಾತಾ ತೂನಗ
ಕಿಲ್ಲೆ ಕಾರ್ನಾಡ್ ಮಲ್ಯೆ ಪನಿಯಾಡಿ
ರಾಷ್ಟ್ರಕವಿ ಪೈಕುಲ
ಆಜಿ ಲೋಕೊಗು ತೋಜ ಕೊರಿಯೆರ್
ನಮ್ಮ ಮಲ್ಲ ಪೆರ್ಮೆನ್

ಕೋಲ ತಂಬಿಲ ನೇಮ ಗೋಂದೊಲು
ಇರ್ಲ್ ಪಗೆಲ್ ಒಂಜಿಯೆ
ಚೆಂಡೆ ತೆಂಬರೆ ಗುಮ್ಮೆ ಸಬ್ದೊದ
ಬಾರಿ ಮಲ್ಲಾ ಮರ್ಲ್‌ಯೆ
    ಪರ್ಬ ಪಂಚೆಮಿ ಊರ ನೇಮ
    ಬಾರಿ ಗೌಜಿ ಗಡ್ದ್‌ಯೆ
    ಪರೇಡಿ[4] ಪಾಯಸ ಕೋರಿತಮ್ಮನ
    ಸೇಮೆದಡ್ಯದ ರಿತಿ[5]ಲಯೆ
ಕುಡು ಎಣ್ಣೆ ಗೋಂಟು ತಾರಾಯಿ
ತಿಂದ್ ಬಲಿಪು ಗಿಡ್ದೆರುಕುಲು
ಎಲ್ಯ ಚೊಟ್ಟು ಮಲ್ಲ ಆರುವಾಯಿ
ಕಿಲೆಪು ಕಟ್ಟದ ಕೋರಿಲು
    ತಾರೆ ಬಾರೆ ಕಂಗ್ ತೆಕ್ಕಿ
    ಕೇಪ್ಲ ನನಿಲ್ ಕುಕ್ಕು ಪರ್ಂಗಟೆ
    ಗಂಧ ಮಾಗಧ ಮಾತಾ ಉಂಡು
    ಕಣ್ಣ್ ಬುಲಾದ್ ತೂಂಡಯೆ
ಎಂಚ ಪನ್ಕೆ ದಾದವುನ್ಕೆ
ನಾಲ್ ಬಾಯಿ ಯಾರುಜಿ
ಸ್ವರ್ಗ ರಾಜೊನೆ ಮೂಲು ಉಂಡು
ಪಂಡ್‌ದ್ ಸುದಿಲ ಬೂರುಜಿ
    ಒರ ಬಲ್ಲೆ ಸಮೊಟು ತೂಲೆ
    ಪಿರಪ ನಿಕುಲು ಬರುವರ್
    ಯಾನ್ ಪಂಡಿ ಪಾತೆರದ
    ಸರ್ವ ಸತ್ಯ ಬೆನುವರ್.

1. ಉರೊಲು –ಗದ್ದೆ ಉಳುವ ಸಮಯದಲ್ಲಿ ಉಳುವಾತ ಹೇಳುವ ಜನಪದ ದ್ವಿಪದಿಗಳು, 2. ಪಾಡ್ದನ – ತುಳು ಜನಪದ ಲಾವಣಿ, 3. ಪಾರುಲು – ಎಮ್ಮೆಕರು, 4.ಪರೇಡಿ ಪಾಯಸ – ತುಳುನಾಡಿನ ಒಂದು ಬಗೆಯ ವಿಶಿಷ್ಟ ಪಾಯಸ, 5. ರಿತಿ–ರುಚಿ

ತವರು ಮನೆ

ಪುತ್ಥಳಿ ಬಂಗಾರ ಬೆಳಗುವ ನಾಡು
ನಲಿಯುವ ನದಿ ಪೈರು ಪಚ್ಚೆಗಳ ಹೊಲ
ಇದು ನಾನು ಹುಟ್ಟಿ ಬೆಳೆದ
ನನ್ನ ತುಳುವ ನಾಡು

ಪದಪಾಡ್ದನ ಹಾಡು ಉರಲು
ಮೊಗೆವ ಬೆವರ ಗಾಢ ಕಂಪು
ಆಚೆ ಈಚೆ ಎತ್ತ ನೋಡಿದರೂನು
ಚಂದ ಚಂದ ಚಂದವೊ

ನಾಲ್ಕು ದಿಕ್ಕಿಗು ಹರಿವ ನದಿಗಳು
ಪ್ರೀತಿ ಹುಟ್ಟುವ ನಾಡ ಹಸು
ಕಂಡಮಂದಿ ಮೈಮರೆತು ನಿಂತು
ಕಲ್ಲಾಗುವರು ಇಲ್ಲಿಯೆ

ಮಧ್ಯದಲ್ಲಿ ಗೊಲ್ಲ ಕೃಷ್ಣನು
ತೆಂಕಣದಿ ಮಂಜುನಾಥ
ದೇವಿ ಕಟೀಲು ಮಾತೆಯು
ಕೊಡುವಳವಳು ಅಭಯವ

ರಾಣಿ ಅಬ್ಬಕ್ಕ ಶಿಲ್ಪಿ ಕಲ್ಕುಡ
ಆಕಾಶದೆತ್ತರದ ಗೊಮ್ಮಟ
ನೋಡುತಿದ್ದರೆ ಇವುಗಳನ್ನು
ಕಣ್ಣು ತಂಪು ಮನಕೆ ಮುದ

ಕಿಲ್ಲೆ ಕಾರ್ನಾಡು ಮಲ್ಯ ಪಣಿಯಾಡಿ
ರಾಷ್ಟ್ರಕವಿ ಗೋವಿಂದ ಪೈ
ತೋರಿಸಿಕೊಟ್ಟರು ನಮ್ಮ ಕೀರ್ತಿಯ
ಸುತ್ತ ಆರು ಲೋಕಕೆ

ಕೋಲ ತಂಬಿಲ ನೇಮ ಗೋಂದೊಳು
ಹಗಲು ರಾತ್ರಿ ಒಂದೇ
ಚೆಂಡೆ ತೆಂಬರೆ ಗುಮ್ಟೆ ಶಬ್ದವು
ಕಿವಿಯ ತುಂಬುವುದಿಲ್ಲಿಯೇ

ಹಬ್ಬ ಹುಣ್ಣಿಮೆ ಊರ ಜಾತ್ರೆ
ತುಂಬ ಗೌಜು ಸಂಭ್ರಮ
ಸಿಹಿತಿಂಡಿ ಪಾಯಸ ಮಾಂಸದೂಟ
ಶ್ಯಾವಿಗೆ ಕೊಟ್ಟಿಗೆ ತಿಂಡಿಗೆ

ಹುರುಳಿ ಎಣ್ಣೆ ಒಣ ಕೊಬ್ಬರಿ
ತಿಂದು ಬಲಿತ ಕೋಣವು
ಸಣ್ಣ ಜುಟ್ಟು ದೊಡ್ಡ ಮಾಲೆ
ಕೂಗು ಕೋಳಿಯಂಕವು

ತೆಂಗು ಕಂಗು ಸಾಗುವಾನಿ
ಮಾವು ನನಿಲ್ ಕೇಪ್ಲ ಆಮಟೆ
ಬಾಳೆ ಗಂಧ ಮಾಗಧಾದಿ
ಕಣ್ಣು ತೆರೆದು ನೋಡಿರಿ

ಏನು ಹೇಳಲಿ ಹೇಗೆ ಹೇಳಲಿ
ನಾಲ್ಕು ಬಾಯಿ ಸಾಲದು
ಸ್ವರ್ಗದೊಡೆಯನೆ ಇಲ್ಲಿಹನು
ಹೇಳಿ ಕತೆಯು ಮುಗಿಯದು

ಒಮ್ಮೆ ಬನ್ನಿ ಕಣ್ಬಿಟ್ಟು ನೋಡಿ
ಮತ್ತೆ ಮತ್ತೆ ಬರುವಿರಿ
ನನ್ನ ಮಾತಿನ ಒಳಸತ್ಯ
ನಿಮಗೆ ತಿಳಿದು ಬರುವುದು

ಮೂಲ : **ಆತ್ರಾಡಿ ಅಮೃತಾ ಶೆಟ್ಟಿ**
(ಅನುವಾದ : **ಸಂಪಾದಕ**)

ಕೊಂಕಣ ರೈಲು

ವಸಂತಿ ಶೆಟ್ಟಿ ಬ್ರಹ್ಮಾವರ

೧

ನಾ ಕಂಡ ಮನೆಯದು ಚಿಕ್ಕ ಚೊಕ್ಕಟ
ಬೆಂಕಿ ಪೊಟ್ಟಣದಂತೆ
ಸುತ್ತಲಿನ ತಾಣವದು ಅಪ್ಪಟ
ಲಂಕಾ ಪಟ್ಟಣದಂತೆ

ಬಾಗಿ ಬಾಗಿ ಜೋತಾಡುತಿಹ ಕಂಗು
ತಾಗಿ ತಾಗಿ ತೊಯ್ದಾಡುತಿಹ ತೆಂಗು
ಗೊನೆದುಂಬಿ ತುಳುಕುತಿಹ ಬಾಳೆ
ಹೂ ಬಿಟ್ಟು ಘಮಘಮಿಪ ಮಾವು ಕೆಂಬಾಳೆ.

ಮಿಡಿಯಾಸೆಗೆ ಮರದಡಿ ಹುಡುಕಾಡುತಿಹ ನೀರೆ
ಬಸುರಿ ಹೆಂಗಸಿನ ಬಿಸಿಯುಸಿರ ಕಣ್ಣೀರ ಧಾರೆ
ಮರುಗದಿರೆಲೆ ತಾಯೆ ನೀ ಹೆರುವ ಮಗುವಿನ ಒಳಿತಿಗೆ
ಕಡಿಯ ಹೊರಟಿಹೆವು ಮರವ ನಾಡ ಜನತೆಯ ಪ್ರಗತಿಗೆ

ಜಾತಿಗೀತಿಯ ಭೇದ ನಮಗೆಂದು ಇಲ್ಲ
ಮತ ಪಂಗಡಗಳ ಪರಿವೆ ಇಲ್ಲವೇ ಇಲ್ಲ
'ಕಡಿಯುವೆವು ಅಗೆಯುವೆವು ರೈಲ ಹಳಿಗಾಗಿ
ಪರಿಹಾರ ಕೊಡುತಿಹೆವು ನಿಮ್ಮಳಿವಿಗಾಗಿ'
ಎನ್ನುತ್ತಿದಂತೆಯೇ ಕೊಂಕಣ ರೈಲ ಮೇಲಧಿಕಾರಿ –

ಹಕ್ಕಿ ಬೇಟೆಗೆ ಹೊರಟ ಪುಟ್ಟ ಕಮಾನಿನ ಹುಡುಗ
ಪುಟ್ಟನಾದರೂ ಬಲು ದಿಟ್ಟ
ಕಣ್ಣಿಟ್ಟ ಗುರಿಯಿಟ್ಟ ನಿಂತ ಅಧಿಕಾರಿಯೆಡೆಗೆ
ಜಾತಿ ಜಾತಿ ಎನ್ನುತ್ತ ಮರುಳು ಮಾಡುವಿರೇನೋ

ನಮ್ಮೂರ ಜನರಿಗೆ?
ಅಂತಿದ್ದರೆ ಬಿಡಬಾರದಿತ್ತೇ ನಿಮ್ಮ ಪೇರಿ
ಕೊಂಕಣದ ಕೇರಿಗೆ?!

೨

ಅಂದು ಸುರಿದ ಜಡಿ ಮಳೆಯ ಸೊಲ್ಲು
ನೆಲಕಚ್ಚಿದ ಮಾಡು ಮುಳಿ ಹುಲ್ಲು
ಜಲಪಾತದ ಡೌಲು
ಕಿವಿಗಡಚ್ಚಿಕ್ಕುವ ಗುಲ್ಲು ಎಲ್ಲೆಲ್ಲೂ -

ಅಂದು ರೈಲು ಕೂಗಿರಲಿಲ್ಲ
ಖಾಲಿ ಕಂಪಾರ್ಟ್‌ಮೆಂಟಿನ ಓಡಾಟವಿರಲಿಲ್ಲ
ಅಚ್ಚರಿಯ ನೋಟಗಳಿರಲಿಲ್ಲ
ಹಳ್ಳಿಗೂ ಕಂದರಕೂ ಅಂತರವಿರಲಿಲ್ಲ

ಆಗ ರಸ್ತೆ ಓಣಿ ಓಣಿಗಳಲ್ಲಿ ದೋಣಿ
ಮನೆಯ ಮುಂಭಾಗದಲೂ ಕಾಗದದ ದೋಣಿ
ಬಾಯಿಬ್ಬಿಟ್ಟರೆ ನೆರೆ ಹೊಗ್ಗೀತೆಂಬ ಹಣ್ಣು ಹಣ್ಣು ಮುದುಕಿ
ಬಳಿಕ ಒದರಿತದು ಸಿಡುಸಿಡುಕಿ !

ಇಳಿವ ಸೂಚನೆಯಂತು ಇಲ್ಲವೇ ಇಲ್ಲ
ಒಟ್ಟಾಗಿ ಹೋದರಂತೂ ರಗಳೆಯಿಲ್ಲ
ಇಳಿಯದಿದ್ದರೂ ನೆರೆ ಚಿಂತೆಯಿಲ್ಲ
ಹಸಿದ ಹೊಟ್ಟೆಗೆ ಇಡುವ ಒದ್ದೆ ಬಟ್ಟೆಗೆ
ನೀರ ಕೊರತೆಯಿಲ್ಲ

ಬಳಿಯೆ ಆಡುತ್ತಿದ್ದ ಪುಟ್ಟ ದೋಣಿಯ ಹುಡುಗ
ಮಡಚಿ ಇಳಿಬಿಟ್ಟ ಕಾಗದದ ದೋಣಿ ನೀರೊಳಗೆ
ಹೆದರದಿರು ಅಳುಕದಿರು ಅಜ್ಜಿ
ಇಳಿಬಿಟ್ಟೆ ನಾನೀಗ ಪರಿಹಾರಕಾಗಿ ಬರೆದಿಟ್ಟ ಅರ್ಜಿ!

ಕೊಂಕಣ ರೈಲ್

ಯಾನ್ ತೂಯಿನ ಇಲ್ಲ್ ಅವು ಬಜಿ ಎಲ್ಯ
ತೂತ್ತಪೆಟ್ಯದ ಲಕ್ಕ
ಮುಟ್ಟದ ಜಾಗ್ ಮಾತ ಎಡ್ಡೆ
ಲಂಕಾ ಪಟ್ಟಣದಲಕ್ಕ

ದುನ್ನೊಡು ಒಡಿತ್ತೊಂದುಪ್ಪುನ ಕಂಗ್
ತಾಂಟ್‌ದ್ ಒಚ್ಚೊಂದುಪ್ಪುನ ತಾರೆ
ಕೊನೆಪಾಡ್ದ್ ನೇಲೊಂದುಪ್ಪುನ ಬಾರೆ
ಪೂ ಬುಡ್ದ್ ಕಮ್ಮೆನ ದಿಂಜಿನ ಕುಕ್ಕು ಕೆಂಬಾರೆ

ಮುಡಿತ್ತಾಸೆಗ್ ಮರತ್ತಡಿ ನಾಡುನ ಬಾಲೆ
ಬಂಜಿನಾಲೆನ ಬೆಚ್ಚ ಉಸುಲುದ ಕಣ್ಣೀರ್ದ ದಾರೆ
ಬುಲ್ಪೊಡ್ಚಿ ಪೊಣ್ಣೆ ಈ ಪೆದ್ದುನ ಬಾಲೆದ ಎಡ್ಡೆಪ್ಪುಗಾದ್
ಕಡ್ಪಿಯರ ಬೈದೊ ಈ ಮರನ್ ಊರ್ದ ಜನೊಕ್ಲೆಗಾದ್

ಜಾತಿ ಭೇದ ಎಂಕ್ಲೆಗಿಜ್ಜಿ
ಮತ ಪಂಗಡೊದ ಗೊಡವೆನೇ ಇಜ್ಜಿ
ಕಡ್ಪನೆ ಗರಿಪ್ಪುನೆ ರೈಲ್‌ದ ಪಟ್ಟೆಗಾದ್
ಪರಿಹಾರ ಕೊರ್ಪೊ ನಿಕ್ಲೆಗ್
ಕೊಂಕಣ ರೈಲ್‌ದ ಮೇಲಧಿಕಾರಿ ಪನೊಂದಿತ್ತಿಲಕ್ಕನೇ –

ಪಕ್ಕಿ ಬೋಂಟೆಗ್ ಪಿದಾಡ್ನ ಆಣ್ ಬಾಲೆ
ಆಟೊದ ಬಿರುಪಗರಿ ಪತ್ತೊಂದು ಪಂಡೆ :
ಜಾತಿ ಜಾತೀಂದ್ ಮರ್ಲ್ ಮಲ್ಪುವರಾ
ಎಂಕ್ಲೆ ಜನಕ್ಲೆನ್?
ಅಂಚ ಇತ್ತ್ಂಡ ಪೋಯರ ಆತುವಾಂದಾ
ಕೊಂಕಣದ ಕೇರಿಗ್?

೨

ಆನಿ ಬೂರ್ದಿನ ಮಾಮಲ್ಲ ಬರ್ಸೊಗು
ಮುಳಿಮಾಡ್‌ದ ಇಲ್ಲ್ ನೆಲಸಮ
ಅರ್ಬಿದಾರೆದ ಸಬುದ್ದೊ
ಕೆಬಿ ಪುಡಾಪಿಲಕ್ಕ

ಆನಿ ರೈಲ್ ಬುಲಿತಿಜ್ಜಾಂಡ್
ಖಾಲಿ ಕಂಪಾರ್ಟ್‌ಮೆಂಟ್‌ದ ಬಲಿಪಾಟ ಇಜ್ಜಾಂಡ್
ಅಚ್ಚರಿಡ್ ತೂಪುನ ಕಣ್ಣ್‌ಲು ಇಜ್ಜಾಂಡ್
ಊರುಗ್‌ಲ ಕಾಡ್‌ಗ್‌ಲ ಅಂತರೊ ಇಜ್ಜಾಂಡ್

ಆನಿ ಮಾರ್ಗೊದ ಓಣಿ ಓಣಿಲೆಡ್ ಓಡ
ಇಲ್ಲ್‌ದ ದುಂಬುಲಾ ಕಾಗಜಿದ ಓಡ
ಒಯ್ಲ್ ಇಲ್ಲಗ್ ನುರ್ಕುಂಡುಂದು ಪರಬು
ಬೊಬ್ಬೆ ಪಾಡ್‌ದ್ ಪರಂಚೊಂದಿತ್ತ್‌ಂಡ್

ಜಪ್ಪುನ ಅಂದಾಜ್ ಇಜ್ಜಿ
ಒಟ್ಟುಗೆ ಪೋಂಡ ರಗಳೆ ಇಜ್ಜಿ
ಜತ್ತಿಜ್ಜಿಂಡಲಾ ಯೋಚನೆ ಇಜ್ಜಿ
ಬಡವು ಬಂಜಿಗ್ ಕಟ್ಟುನ ಚಂಡಿಕುಂಟುಗು
ನೀರ್ದ ಕೊರತೆ ಇಜ್ಜಿ

ಮುಟ್ಟೊಡು ಗೊಬ್ಬೊಂದಿತ್ತಿನ ಎಲ್ಯ ಓಡೊದ ಬಾಲೆ
ನೀರ್‌ಗ್ ಬುಡ್ಯೆ ಕಾಕಜಿದ ಓಡ
ಪೋಡ್ಪೊಡ್ಚಿ ಅಜ್ಜಿ ಬುಲಿಪೊಡ್ಚಿ
ಜಪ್ಪಾದ್ ಬುಡಿಯೆ ಯಾನಿತ್ತೆ ಪರಿಹಾರೊಗು ಬರೆಯಿನ ಅರ್ಜಿ!

ಮೂಲ : **ವಸಂತಿ ಶೆಟ್ಟಿ ಬ್ರಹ್ಮಾವರ**
(ತರ್ಜುಮೆ : **ಸಂಪಾದಕೆ**)

ತುಳುನಾಡ ರಾಣಿ

ಎನ್.ಎಸ್. ಕಿಲ್ಲೆ

ತುಳುನಾಡ ರಾಣಿಯೇ ಧನ್ಯೆ ಧನ್ಯೆ
ಕಳೆಯೇರ್ದ್ ಬಲದೇವಿ! ಈ ಲೋಕಮಾನ್ಯೆ ॥ ಅ.ಪ. ॥

ನಿಲೆ ದಾಂತಿ ತಲ ಈಯೆ ಪಾತಾಳದಾ ಭೂಮಿ! ।
ನೆಲತುಂಬಿ ಭಾಗ್ಯದಾ ಸತ್ಯನೇ ಸ್ವಾಮಿ ॥

[1]ತಲಬೇರ್ ತುಳುವೆರೇ ಸತ್ಯಪುತ್ರೆರ್ ನಿನ್ನ।
ಕಲೆ ದಿಂಜಿ ಕಾಂತಿ ಬುಲೆ ಸಲೆನೆ ಮೆಯ್ವನ್ನ॥೧॥

ದೆರ್ತಿ ತರೆ ಮೇಲಾದ್ ಮಿತ್ತ್‌ದ ಕಿರೀಟಮಲೆ ।
ತಿರ್ತ್ ಪೊಸ ತೆರೆ ತೆರೆತ ಸಾಲ ನಡು ಸೇಲೆ ॥

ಅರ್ತಿದಾ ಪಾದ ಪಯ್ಜನಿದ ದನಿ ಕಡಲ ಸರ ।
ಒರ್ತಿಯೇ ಮದೆವೊಂದು ಮೆರೆಪಿ ಸಿರಿ ಪೂರ ॥೨॥

ದತ್ತ್ [2]ಗರ್ಗತ ಬಲತ್ ನೀಲೇಶ್ವರನೆ ನಿನ್ನ।
ಸುತ್ತೊಂದಿ ಬಾಲೆಲೆನ್ ತಟ್‌ದ್ ತರ್ಕ್‌ದಿನ ॥

[3]ಪತ್ತ್‌ದಾಕರ್ಯರ್ಡ್ದ್ ಪೊರ್ಲುನಿದಿ ತೋಜುನವೆ ।
ತುತ್ತೊಂದಿ ಪಚ್ಚೆ ಪಚ್ಚಡೆ ಬಯ್ಲ ನಡುವೆ ॥೩॥

ತೋರ ತೋರದ ನೆಲ್ಲಿ, ಕಾಚಿ, ಪುಲಿ, ಗಾಲಿ, ಕಾ- ।
ಯೇರ್, ಅತ್ತಾಸ ಮರ, ಗೋಲಿ ತಿದಿ ಪಾಕ ॥॥

ನೇರೋಲು, ಕುಕ್ಕು, ಪೆಜ, ಪೆಲ, ಪೊನ್ನೆದಾ ಕೂಟ ।
ತಾರೆ, ಬಾರೆದ, ಕಂಗ್ ಸಿಂಗಾರ ದೋಟ ॥೪॥

ದುಂಬು ಜಯಮಾಲೆ ಕಾತಿನ ಹುಬ್ಬ ಸೀಕೆ ತನ ।
ತುಂಬೊಂದಿ ಶಕ್ತಿಡೇ ಮೆರೆಪಾಯಿ ಮಾನ ॥

ಒಂಬೊಂಡ ಕುಡರಿ ರಾಮನ ತರೆನ್ ತೂಂಕಾದ್ ।
ನಂಬಿ ಮಾತೆರೆಗಿಂಬು ಕೊರಿಯೆ ತಾನಾದ್ ॥೫॥

ಆ ರಾಮಭೋಜನಾ ಭೂತಾಳಪಾಂಡ್ಯೆರೆನ್ ।
ಬಾರಿಗೆಂದಾದಿ ನೆಲ, ಆ ಮಲ್ಲ ಸಿರಿನ್ ॥

ಏರೆಂಚ ಪಂಡೊನಡ್! ಈ ಮಧ್ವ ವಿಕ್ರಮೆರೆ ।
ಪೇರ್ ಕೊರಿ ಪೆದಿಯಪ್ಪೆ ಪುಣ್ಯ ಫಲದಾರೆ ॥೬॥

ಬಾಲೆಲೆಂಕುಲೆ ತುಳುವ, ಕನ್ನಡ, ಮರಾಟ, ಮಲೆ ।
ಯಾಲ, ಕೊಂಕಣ, ಹಿಂದಿ ಪಾತೆರದ ಮಾಲೆ ॥

ಸಾಲಾಯಿ ಹಿಂದು, ಜಿನ, ಮಹಮದೀ ಕ್ರಿಸ್ತ ಜನ ।
ಮೂಲೊಂಜೆ ಸೇರೊನುವ ಕೊರು ಸೇವೆ ದಾನ ॥೭॥

ಪರವೇಷ, ಪರದಾಸ್ಯ, ಪರಬಾಸೆ ಪಾತೆರೊನು ।
ಪಿರ ಗಿಡದ್ ನಿಜ ಬಲೊಟು ಮಿಥ್ಯ ಪಶು ಬಲೊನು ॥

ತೊರಿತೊಂದು ಸತ್ಯೊಡೇ ಸ್ವಾತಂತ್ರ್ಯ ಸಮದರ್ಶಿ ।
ತರೆ ಯೇರ್ದ್ ತೋಜಾವು ಮಂಗಳದ ಕೀರ್ತಿ ॥೮॥

[1] ತಲಬೇರು – ತಾಯಿ ಬೇರು, [2] ಗರ್ಗತ –ಗೋಕರ್ಣ, [3] ಪತ್ತ್‌ದಾಕರ್ಯ– ಹೆಸರಾಂತ ನದಿಗಳು, ದಾಟುವ ಸ್ಥಳಗಳು.

ತುಳುನಾಡ ರಾಣಿ

ತುಳುನಾಡ ರಾಣಿಯೇ ಧನ್ಯೆ ಧನ್ಯೆ ।
ಕಳೆಯೇರಿ ಬಾ ದೇವಿ ನೀ ಲೋಕ ಮಾನ್ಯೆ ॥ ಅ.ಪ. ॥

ನೆಲೆ ಸಿಗದ ತಳ ನೀನೆ ಪಾತಾಳ ಭೂಮಿ
ನೆಲ ತುಂಬ ಸತ್ಯದಾ ಭಾಗ್ಯವೇ ಸ್ವಾಮಿ ॥

ತಾಯ್ಬೇರು ತುಳುವರೇ ಸತ್ಯ ಪುತ್ರರು ನಿನ್ನ
ಮೆಯ್ಬಣ್ಣ ಕಲೆ ಮೆರೆವ ಬೆಳೆ ಭಾಗ್ಯ ಚಿನ್ನ ॥೧॥

ಎತ್ತಿರುವ ತಲೆ ಮೇಲೆ ಸುತ್ತಿರುವ ಕಿರೀಟ ಮಲೆ
ಮುತ್ತಿಕ್ಕುತಿದೆ ಅಡಿಯ ಕಡಲ ತೆರೆ ವಯ್ಯಾರ ಮಾಲೆ ॥

ಸಾಗರದ ತೆರೆಯ ನೊರೆ ಹುರಿಗೆಜ್ಜೆ ಸರವು ಪದಕೆ
ಬಾಗಿ ನಮಿಸುವೆ ಮೆರೆಯುತಿಹ ಬಲು ಸಿರಿಯ ನೆಲಕೆ ॥೨॥

ಎಡಕೆ ಗೋಕರ್ಣ ಬಲಕೆ ನೀಲೇಶ್ವರ ಪಟ್ಟಣದ ಬೆಡಗು
ನಡುವಿನೊಳು ಮಕ್ಕಳನು ಎತ್ತಿ ಹಿಡಿದಾಡಿಸುವ ಸೊಬಗು ॥

ಉಟ್ಟಿರುವ ಹಸಿರು ಸೀರೆಯಂತೆಸೆವ ಬಯಲುಗಳು
ಪಟ್ಟೆ ಜರಿ ಸೆರಗಂತೆ ಹೊಳೆಯುತಿಹ ನದಿಗಳೂ ॥೩॥

ಭಾರಿ ಗಾತ್ರದ ನೆಲ್ಲಿ ಕಾಚಿ ಹುಣಸೆಯು ಚಬುಕು
ತೋರುತಿದೆ ಅಶ್ವತ್ಥ ಆಲಮರಗಳು ದೂರಕೂ ॥

ನೇರಳೆಯು ಮಾವು ಹೆಬ್ಬಲಸು ಹಲಸು ಹೊನ್ನೆಯಾಕೂಟ
ಪೇರಳೆಯು ತೆಂಗು ಬಾಳೆ ಕಂಗಿನ ಸಿಂಗಾರ ತೋಟ ॥೪॥

[1]ಹುಬ್ಬಶಿಕ ಮೆರೆದರಸು ತುಳುವ ಜಯಮಾಲೆ
ಮಬ್ಬು ಕಳೆಯುತ ಶಕ್ತಿ ತೋರಿದನು ಲೀಲೆ ॥

[2]ಕೊಡಲಿ ರಾಮನ ಒಲುಮೆ ಗೊಲಿದೆ ನೀ ತಾಯೆ
ಕಡಲ ಮೀರುತ ಬಂದೆ ನಂಬಿದರ ಕಾಯೆ ॥೫॥

[3]ರಾಮಭೋಜನು ಮತ್ತೆ [4]ಭೂತಾಳ ಪಾಂಡ್ಯ
ಆ ಮಹಾರಾಜರುಗಳಾಳಿದ ನೆಲವು ಲೋಕದೊಳ್ ಮಾನ್ಯ ॥

ಹೇಳುವವರೇನೆನಲಿ ನೀ [5]ಮಧ್ವವಿಕ್ರಮ ಖ್ಯಾತೆ
ಹಾಲುಣಿಸಿದಾ ಮಾತೆ ಪುಣ್ಯ ಫಲದಾತೆ ॥೬॥

ಬಾಲರೆಲ್ಲರು ನಾವು ತುಳು ಕನ್ನಡ ಮಲೆಯಾಳ
ಬಾಳುತಿಹ ಹಿಂದುಸ್ತಾನಿ ಕೊಂಕಣಿ ಭಾಷಿಗರ ಮೇಳ ॥

ಸಾಲಾಗಿ ಹಿಂದು ಜಿನ ಮುಸ್ಲಿಮರು ಕ್ರೈಸ್ತ ಜನ
ಓಲೈಸಿ ಬಕುತಿಯಲಿ ಭಜಿಪರೆಲ್ಲರು ನಿನ್ನ ॥೭॥

ಪರವೇಷ ಪರಭಾಷೆ ಪರರೊಡೆತನದ ಸಂಕಲೆಯ
ಸರಿಸು ದೂರಕೆ ದೂಡು ಹರಿಸು ಬಂಧನದ ಬಲೆಯ ॥

ಹಿಮ್ಮೆಟ್ಟಿ ದಾಸ್ಯದಾ ಬಂಧನವ ಸ್ವಾತಂತ್ರ್ಯ ತೊಡಿಸು
ಒಮ್ಮೆ ನೀ ಶಿರವೆತ್ತಿ ಮಂಗಳದ ಕೀರ್ತಿ ಹರಸು ॥೮॥

ಮೂಲ : ಎನ್.ಎಸ್. ಕಿಲ್ಲೆ

(ತರ್ಜುಮೆ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್)

[1] ಹುಬಶಿಕ – ತುಳುನಾಡನ್ನಾಳಿದ ಕೋಟೇಶ್ವರದ ದಲಿತ ರಾಜ.
[2] ಕೊಡಲಿರಾಮ – ಪರಶುರಾಮ, ಐತಿಹ್ಯದ ಪ್ರಕಾರ ತುಳುನಾಡ ಸೃಷ್ಟಿಕರ್ತ.
[3] ರಾಮಭೋಜ – ತುಳುನಾಡನ್ನಾಳಿದ ಉಡುಪಿಯ ಬ್ರಾಹ್ಮಣ ರಾಜ.
[4] ಭೂತಾಳಪಾಂಡ್ಯ – ತುಳುನಾಡನ್ನಾಳಿದ ಬಾರ್ಕೂರಿನ ರಾಜ.
[5] ಮಧ್ವ – ಮಧ್ವಾಚಾರ್ಯರು.

ತುಳುನಾಡ್

ಡಾ. ಬೆಳ್ಳಿಪಾಡಿ ಸತೀಶ್ ರೈ

ತುಳುವ ನಾಡ್ ಪೊರ್ಲುಬೂಡು।
ಸ್ವರ್ಗದಾತ್ ಸೋಕುದ॥
ಎಡ್ಡೆಬುದ್ದಿ ಎಡ್ಡೆಗುಣೊತ।
ನಮ್ಮ ಊರು ಶಾಂತಿದ॥

ಜಾತಿ ಮತೊದ ಬೇದ ಬಾವ।
ಮೂಲು ದಾಲ ಇಜ್ಜಿಯೆ॥
ದೇವಸ್ಥಾನ ಚರ್ಚ್ ಪಳ್ಳಿ।
ಮುಲ್ತ ಜನೊಕ್ಕು ಒಂಜೆಯೆ॥

ಕಲ್ಬುನೆಟ್ಟ್ ಬಿರ್ಸೆರಿಪ್ಪಿ।
ನ್ಯಾಯ ನಂಬಿ ಜನೊಕ್ಕುಳು॥
ಪೆಟ್ಟ್ ದೊಂಬಿ ಮೂಲು ಇಜ್ಜಿ।
ಪಾತೆರುನ ಸತ್ಯೊಲು॥

ಸುತ್ತ ಮುತ್ತ ಪಚ್ಚೆ ಕಾಡ್।
ಬೆನ್ಪಿ ಕಂಡ ತೋಜಿಬೊ॥
ಬೂತ ಕೋಲ ಕೋರ್ದ ಕಟ್ಟ।
ಕಂಬುಳದ ಸೋಜಿಗೊ॥

ವಿದ್ಯೆ ಬರವು ಮುಲ್ತ ಜನೊಕು।
ಬಾರಿ ಬೇಗ ಬರ್ವುಂಡು॥
ದೋಸ್ತಿ ಕತೆತ ಗುರ್ತಮಾತ।
ಸೈಪಿನೇಟ ಇಪ್ಪುಂಡು॥

ಆಟ ಕೂಟ ಯಕ್ಷಗಾನ।
ಮೂಲು ಪುಟುದು ಬುಳೆದ್ಂಡ್॥
ಓಡು ಬೀಜೊ ಕಾರ್ಖಾನೆಲು।
ತೂಯಿನಲ್ಪ ತೋಜುಂಡು॥

ಬೇಂಕ್ ಕಟ್ದ್ ಮೆರೆಯಿನಗ್ಲೆ।
ಸೂಕ್ಷ್ಮ ಬುದ್ಧಿ ಬೇರೊಡು॥
ದೈವ ಭಕ್ತಿ ಧರ್ಮ ಶಕ್ತಿ।
ನಂಬೊಂದಿಂಚಿ ಊರುಡು॥

ಧರ್ಮಸ್ಥಳೊಟು ಮಂಜುನಾಥೆ।
ಉಡುಪಿ ಕೃಷ್ಣ ದೇವೆರ್॥
ಬೂಡು ಗರೊಡಿಡಿಪ್ಪಿ ದೈವ।
ನಮ್ಮ ಎಡ್ಡೆಗುಳ್ಳೆರ್॥

ನಮ್ಮ ಭಾಷೆ ತುಳುವ ಭಾಷೆ।
ಕೇನುನನೆ ಪ್ರೀತಿಲ॥
ನಮ್ಮ ನಾಡ್ ತುಳುವ ನಾಡ್।
ಮೆರೆಯೊಂದಿಪ್ಪಡೇಪೊಲ॥

ತುಳುನಾಡು

ತುಳುವ ನಾಡು ಚೆಲುವ ಬೀಡು
ಸ್ವರ್ಗದಷ್ಟು ಸೊಬಗಿನಾ ॥
ವಿದ್ಯೆ ಬುದ್ಧಿ ಒಳ್ಳೆ ಗುಣದ
ನಮ್ಮ ಊರು ಶಾಂತಿಯಾ ॥೧॥

ಜಾತಿ ಮತದ ಭೇದಭಾವ
ಇಲ್ಲ ಇಲ್ಲಿ ಸರ್ವದಾ ॥
ದೇವಸ್ಥಾನ ಚರ್ಚು ದರ್ಗ
ಎಲ್ಲ ಒಂದೆ ಧರ್ಮದಾ ॥೨॥

ಕಲಿಕೆಯಲ್ಲಿ ಮೊದಲ ಸ್ಥಾನ
ನ್ಯಾಯ ನಂಬಿ ನಡೆವರು ॥
ದೊಂಬಿ ಗಲಭೆ ಗಿಂಬು ಇಲ್ಲ
ಸತ್ಯವನ್ನೆ ನುಡಿವರು ॥೩॥

ಸುತ್ತಮುತ್ತ ಹಸಿರು ಕಾಡು
ದುಡಿವ ಬಯಲು ಹೊಲಗಳು
ಭೂತಕೋಲ ಅಂಕ ಅಯನ
ಕಂಬಳವತಿ ಸೋಜಿಗ ॥೪॥

ವಿದ್ಯೆ ಬರಹ ಕಲಿತ ಜನರು
ಬುದ್ಧಿವಂತರೆಲ್ಲರು
ಇಷ್ಟ ನಿಷ್ಟ ಬಂಧು ಪ್ರೇಮ
ಎಷ್ಟೋ ಕಾಲ ಮರೆಯರು ॥೫॥

ಆಟಕೂಟ ಯಕ್ಷಗಾನ
ಇಲ್ಲಿ ಹುಟ್ಟಿ ಬೆಳೆದಿದೆ
ಹೆಂಚು ಗೇರುಬೀಜ ಪ್ಯಾಕ್ಟ್ರಿ
ಎಲ್ಲ ಕಡೆಯು ನೆಲೆಸಿದೆ ॥೬॥

ಬ್ಯಾಂಕ್ ಕಟ್ಟಿ ಮೆರೆದ ಜನರು
ಆರ್ಥಿಕತೆಯ ಜಾಣರು
ದೈವಭಕ್ತಿ ಧರ್ಮಶಕ್ತಿ
ನಂಬಿಕೆಯ ತವರಿದು ॥೭॥

ಕುಡುಮದಲ್ಲಿ ಮಂಜುನಾಥ
ಉಡುಪಿ ಕೃಷ್ಣ ದೇವರು ॥
ಬೀಡುಗರಡಿಲಿರ್ಪ ದೈವ
ನಮ್ಮ ಸಲಹುತಿರುವರು ॥೮॥

ನಮ್ಮ ಭಾಷೆ ತುಳುವ ಭಾಷೆ
ಕೇಳಲೆಷ್ಟು ಇಂಪದು ॥
ನಮ್ಮ ನಾಡು ತುಳುವನಾಡು
ಕಾಣಲೆಷ್ಟು ಸೊಂಪದು ॥೯॥

ಮೂಲ : ಡಾ. ಬೆಳ್ಳಿಪಾಡಿ ಸತೀಶ್ ರೈ
(ಅನುವಾದ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್)

ಪೊಸ ಅಂಗಿ ಬತ್ತ್ಂಡೆ?

ಕೆದಂಬಾಡಿ ಜತ್ತಪ್ಪ ರೈ

ಸೊಸಂತ್ರೊ ತಿಕ್ಯೆರೆ ಯೇತೋ ದುಂಬು
ಕಡಲ ಪುಡೆತ್ತ ಕುಡಾರಿ ರಾಮೆ ತೆಡಿಲಾದ್ ಗುಡುಗ್ಯೆರ್
ಪೊಸ ಅಂಗಿ ಬರ್ಪುಂಡು ಪೊಸ ಅಂಗಿ
ಪರ ಅಂಗಿ ಪೋಪುಂಡು 'ಪರೇಂಗಿ'
ರಂಗ್ ಬಿಂಗ್ ಡಿಂಗಿದಂಗಿ, ಪೊಸ ಅಂಗಿ,
ಪೊಸ ಅಂಗಿ ಬರ್ಪುಂಡು ಪೊಸ ಅಂಗಿ
ಯೇನಿಲ ಮಸ್ಕಂದಿ ಪೊಸ ಅಂಗಿ,
ಪೊಸ ಅಂಗಿ ಬರ್ಪುಂಡು ಪೊಸ ಅಂಗಿ.
    ಆಸೆಡ್ ನಲಿತ್ತೊ ಎಂಕುಲುಲಾ,
    ಪೊಸ ಅಂಗಿ ಪಾಡುನ ಸಡಗರೊಡು,
    ಆರ್‌ಲ ನಲಿತ್ತೆರ್ ಸಂತೆಸೊಡು.
    ಪೊಸ್ತ್ತೆನ್ ಎದ್ರೊನು ಉಲ್ಲೇಸೊಡು,
    ಸೊಸಂತ್ರೊ ಬತ್ತ್‌ದ್ ಕರಿಂಡೊರ್ಸೊ ಆವೊ
    ಬತ್ತ್ಂಡೆ ಪೊಸ ಅಂಗಿ
ನಂಮ ಅದೃಷ್ಟೊಗ್ ತಿಕ್ಕ್‌ನಿ ನಂಕ್,
ಪರೆಂಗಿಲು ಬುಡು ಪೋಯಿ ಪರ ಅಂಗಿ,
ಸುರಾಲ್, ಬೂಟೀಸ್ ಕೆಕ್ಕಿ ಕೋಮಣೊ
ಆಕ್ಕೆ ಪೊಲ್ಲು ಕಟ್ಟ ಪಾಡೊಂದು
ತುತ್ತು ಪುದೆಪ್ಪುನಿ ನಮೊಯಿನಿಲಾ

ಹೊಸ ಅಂಗಿ ಬಂದಿದೆಯೇ?

ಸ್ವಾತಂತ್ರ್ಯ ಸಿಗುವದಕ್ಕೆಷ್ಟೋ ಮುನ್ನ
ಕಡಲತಡಿಯ ಕೊಡಲಿರಾಮ[1] ಸಿಡಿಲಾಗಿ ಗುಡುಗಿದ
ಹೊಸ ಅಂಗಿ ಬರಲಿದೆ ಹೊಸ ಅಂಗಿ
ಹಳೆಯಂಗಿ ಪರರ ಅಂಗಿಕಳೆಯಲಿದೆ 'ಪರೆಂಗಿ'
ರಂಗಿನಂಗಿ ಬಿಂಗಿ – ಡಿಂಗಿನಂಗಿ ಹೊಸ ಅಂಗಿ
ಹೊಸ ಅಂಗಿ ಬರಲಿದೆ ಬರುವುದಯ್ಯ ಹೊಸ ಅಂಗಿ
ಯಾವತ್ತೂ ಮಸುಕದ ಹೊಸ ಅಂಗಿ
ಹೊಸ ಅಂಗಿ ಬರಲಿದೆ ಬರುವುದಯ್ಯ ಹೊಸ ಅಂಗಿ

ಆಸೆಯಲಿ ನಲಿದಾಡಿದೆವು ನಾವು
ಹೊಸ ಅಂಗಿತೊಡುವ ಸಡಗರವೆಮಗೆ
ಅವರೂ ನಲಿದರು ಸಂತೋಷದಲ್ಲಿ
ಹೊಸತ ಎದುರ್ಗೊಳಲು ಉಲ್ಲಾಸದಿಂದ
ಸ್ವಾತಂತ್ರ್ಯ ಬಂದೈವತ್ತು ಕಳೆದರೂ
ಬಂದಿತೇ ಹೊಸ ಅಂಗಿ ಇಲ್ಲ ನಾವು ಕಮಂಗಿ

ನಮ್ಮ ಹಣೆಬರಹಕ್ಕಷ್ಟೇ ಸಿಗುವುದು ನಮಗೆ
ಪರೆಂಗಿಗಳು ಬಿಟ್ಟು ಹೋದ ಪರರಂಗಿ
ಪ್ಯಾಂಟು ಬೂಟು ಕಂಠ ಲಂಗೋಟಿ
ಅದಕ್ಕೂ ಅಲ್ಲಲ್ಲಿ ಬಣ್ಣಬಣ್ಣದ ತೇಪೆ
ನಮ್ಮುಡುಗೆ ಭಾಷೆಯಿಂದ ಅವರಿಗಾಯ್ತು ನಫೆ

ಮೂಲ : **ಕೆದಂಬಾಡಿ ಜತ್ತಪ್ಪ ರೈ**

(ಅನುವಾದ : **ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್**)

1. ಕೊಡಲಿರಾಮ – ತುಳುವರ ಸಾಂಕೇತಿಕತೆ

ಬಾರ ಯಾತ್ರಿಯೆ ತುಳುವ ನಾಡಿಗೆ

ಏರ್ಯ ಲಕ್ಷ್ಮೀನಾರಾಯಣ ಆಳ್ವ

ನೆಲದ ಚೆಲ್ವಿಕೆ ಮನವನರಳಿಸೆ
ಕಣ್ಣು ಧನ್ಯತೆ ಪಡೆಯೆ ಹೃದಯದಿ
ಸಂತಸದ ತೊರೆಯುಕ್ಕಿ ಹರಿಯಲು
ಬಾರ ಯಾತ್ರಿಯೆ ತುಳುವ ನಾಡಿಗೆ

ತುಳುವ ನಾಡಿನ ಹಸಿರ ಉಸಿರಿದೊ
ಕಂಗು ತೆಂಗಿನ ಬಾಗು ಬೀಸಿದೊ
ಪಡುವ ಕಡಲಿನ ತೆರೆಗಳಬ್ಬರ
ಮೂಡು ಗಟ್ಟದ ಸಾಲಿನೆತ್ತರ

ನಡುವೆ ನದಿಗಳ ಸಾಲು ಹರಿವಿನ
ಸದ್ದು ಮರ್ಮರ ಪುಳಕ ತನುಮನ
ಜೀವ ಜೀವನ ಅಮೃತ ತೊಟ್ಟಿಯು
ತಾಯಿ ತುಳುವಿತಿಯೊಲವ ಮಟ್ಟಿಲು

ಬಲಿತ ವೀರರು ತುಳುವ ಮಕ್ಕಳು
ನೆಲವನುತ್ತರು ಬಿತ್ತಿ ಬೆಳೆದರು
ಕಡಲನಳೆಯುವ ಭಾರಿ ಸಾಹಸ
ತೋರಿ ಬದುಕಿನ ದಿನದಿ ಮೆರೆದರು

ಬಾನ ಚುಂಬಿಪ ತಾಳಿ ಮರಗಳು
ಏರಿ ಇಳಿಯುವ ಇಳಿದು ಏರುವ
ಸಾಹಸಂಗಳೆ ಬದುಕಿಗಾಸರೆ
ಆದ ಬಿಲ್ಲವ ವೀರ ಬೈದರು

ನೆಲವನುಳುವಾ ಬಾನನಳೆಯುವ
ಕಡಲೊಳಾಡುವ ತುಳುವ ಮಕ್ಕಳು
ಬಳಲಿ ಬಂದರಿಗೆಲ್ಲ ಆಸರೆ
ಇತ್ತು ಸಲಹಿದ ಹೃದಯವಂತರು

ಯಕ್ಷಗಾನದ ತವರು ಮನೆಯಿದು
ಚೆಂಡೆಯನುರಣ ನೇಮ ಜಾತ್ರೆಯ
ತಾಸೆ ದೋಲಿನ ದುಡಿಯ ಅಬ್ಬರ
ಅಂಕ ಆಯನದ ಬಿಂಕ ಕಂಬಳ

ತೆಂಕು ಗಾಳಿಯ ಬಿರುಸ ಬೀಸಿಕೆ
ಮಿಂಚು ಸಿಡಿಲಿನ ರೌದ್ರ ತಾಡನ
ಒನಕೆ ಗಾತ್ರದ ಮಳೆಯ ಸುರಿಯಿಕೆ
ತುಂಬಿ ಹರಿಯುವ ತೋಡು ನದಿಗಳು

ರೌದ್ರ ರಮಣೀಯತೆಯ ಮೆರೆದಿಹ
ಚೆಲವ ನಾಡಿನ ಪುಣ್ಯದಾಗರ
ತುಳುವರೊಲುಮೆಯ ಹೃದಯದೈಸಿರಿ
ಕರೆಯುತಿಹುದೋ ಯಾತ್ರಿ ನಿನ್ನನು

ಬಿದರೆ ವರ್ಣಿಯ ಭೋಗತ್ಯಾಗವ
ಪಾರ್ತಿಸುಬ್ಬನ ರಾಮಚರಿತವ
ರಸಿಕ ಮುದ್ದಣ ನೊಲವಸರಸಿಕೆ
ಕಬಿತೆ ಪಾಡ್ದನ ಸವಿಯ ಬನ್ನಿರಿ

ಪೊಳಲಿ ಕಟಿಲಿನ ಮಂಗಳಾಂಬೆಯ
ಸುಬ್ರಹ್ಮಣ್ಯದ ಕುಡುಮ ಉಡುಪಿಯ
ಕೊಲ್ಲೂರಮ್ಮನ ಪುಣ್ಯಕ್ಷೇತ್ರವ
ಕಂಡು ಪಾವನರಾಗ ಬನ್ನಿರಿ

ಬಾರ ಬಾ ಬಾ ಎಂದು ಕರೆವುದು
ನೆಲದ ಚೆಲುವಿಕೆ ಮನವನರಳಿಸೆ
ಕಣ್ಣು ಧನ್ಯತೆ ಪಡೆಯೆ ಹೃದಯದಿ
ಸಂತಸದ ತೊರೆಯುಕ್ಕಿ ಹರಿಯಲು

ತುಳುವರೊಲುಮೆಯ ಹೃದಯದೈಸಿರಿ
ಕರೆಯುತಿಹುದೊ ಯಾತ್ರಿ ನಿನ್ನನು.

ಬಲ ಬಲ ಯಾತ್ರೀ ತುಳುವನಾಡ್‌ಗ್

ನಿಲತ ಪೊರ್ಲಣವು ಮನಸ್ ಅರ್ಲಣವು
ಕಣ್ಣ್ ತಲ್ಮೆನ ಪಡೆವು ಉಡಲ್‌ಡ್
ಒರತೆ ಸಂತೆಸ ಉರ್ಕು ಪರಿಪವು
ಬಲ... ಬಲ ಯಾತ್ರಿಯೆ ತುಳುವನಾಡ್‌ಗ್ ॥

ಪಜಿರ್ ಕಮ್ಮೆನ ಗಾಳಿ ಬೀಜುಂಡು
ಕಂಗ್ ತಾರೆಲು ದಂಗ್‌ದುಂತುದೊ
ಕಡಲ್ ಪಡ್ಡಯಿ ತೆರೆಲು ಗದ್ದವೊ
ಮುಡಯಿ ಗಟ್ಟನೆ ಲಕ್ಕ್‌ದುಂತುಂಡು ॥

ನಡುವೆ ಸುದೆಕುಲೆ ಪರಿಪು ಸಾಲ್‌ಡ್
ಜುಳು ಜುಳೆನ್ನಗ ಮೆಯಿನೆ ಇರ್ಮೆನ
ಜೂವೊ ಬದ್ಕ್‌ದ ಅಮುರ್ತೊ ಬಾಜನ
ಅಪ್ಪೆ ತುಳುವೆದಿ ಮೋಕೆ ತೊಟ್ಟಿಲ್ ॥

ಬುಳೆಯಿ ಬೀರೆರ್ ತುಳುವ ಜೋಕುಲು
ನಿಲನ್ ದತ್ತೆರ್ ಬುಳೆನ್ ಬುಳೆಯೆರ್
ಕಡಲ್ ಲಪ್ಪುನ ಬಾರಿ ಕಜ್ಜೊದ
ಬದ್ಕ್ ತೋಜದ್ ಕೊರ್ದು ಮೆರೆಯೆರ್ ॥

ಬಾನೊದೆತ್ತರ ತಾರಿ ಕಟ್ಯೆರ್
ಮೂರ್ತೆಗಾದ್ ಮಿತ್ತೇರ್ದ್ ಜತ್ತೆರ್
ಸಾಧನೆನೆ ದಿನೊನಿಚ್ಚೊ ಆಸರೆ
ಮಲ್ಲ ಬಿರುವೆರ್ ಬೀರ ಬೈದ್ಯೆರ್ ॥

ನೆಲನ್ ದಪ್ಪುನ ಬಾನಲಪ್ಪುನ
ಕಡಲ್ ಗೊಬ್ಬುನ ತುಳುವ ಜೋಕುಲು
ಬಡವು ಬಾಜೆಲ್‌ಗಾದ್ ಬತ್ತಿನ
ಜನೊನು ಕಾಪೆರ್ ಉಡಲ್ ಮೆರೆವೆರ್ ॥

ಯಕ್ಷಗಾನೊದ ತಮೆರಿ ಬೂಡುಲ
ಚೆಂಡೆ ಮದ್ದಲೆ ನೇಮೊ ಕೋಲೊಲ
ತಾಸೆ ತೆಂಬರೆ ದುಡಿತ ಅಬ್ಬರ
ಅಂಕ ಆಯನ ತಂಕ ಕಂಬುಳ ॥

ಬೀಜುಗಾಳಿದ ರಭಸ ತೆನ್ಕಯಿ
ಮೆಂಚಿ ತೆಡಿಲ್‌ದ ದೋಲು ಗುದ್ದ್‌ಂಡ
ಬರ್ಸದೊರಿಪುಂಡು ದಾರೆ ಕಟ್ಟ್‌ದ್
ತೋಡು ಸುದೆ ಕೆರೆ ಬೊಲ್ಲ ಏರ್ದ್‌ಂಡ್ ॥

ಭೀಕರತೆಟ್‌ಲ ಸೋಕು ತೋಜುಂಡು
ಪೊಲ್ಸುದಾ ನಿಲ ಪುಣ್ಯೊದಾ ಸೆಲೆ
ತುಳುವೆರೆರ್ತಿದ ಉಡಲ್ ದೈಸಿರೊ
ಲೆಪ್ಪುಂಡವು ಬಲ ಬೇಗ ಯಾತ್ರಿಯೆ

ಬಿದರೆ ವರ್ಣನ ಭೋಗ ಭಾಗ್ಯೊದ
ಪಾರ್ತಿಸುಬ್ಬನ ರಾಮಚರಿತೊನು
ರಸಿಕ ಕಬಿ ಮುದ್ದಣನ ಮೋಕೆನ್
ಕಬಿತೆ ಪಾರ್ತನ ಚಬಿಪು ಬಲ ಈ ॥

ಪುರಲ್ ಕಟಿಲ್‌ದ ಮಂಗಲಾಂಬೆನ
ಕುಕ್ಕೆ ಕುಡುಮದ ಒಡಿಪು ಕದ್ರೆದ
ಕೊಲ್ಲೂರಮ್ಮನ ಪುಣ್ಯೊದಾನಿಲ
ತೂದು ಉಡಲ್‌ನೆ ಸುದ್ದೊ ಮಲ್ತೊನಿ ॥

ಬಲೆಯೆ ಬಲೆ ಬಲೆ ಒಲೆಪು ಕೊರ್ಪುಂಡು
ನಿಲತ ಪೊರ್ಲವು ಮನಸ್ ಅರ್ಲವು
ಕಣ್ಣ್ ತಲ್ಮೆನ ಪಡೆವು ಉಡಲ್‌ಡ್
ಒರತೆ ಸಂತೆಸ ಉರ್ಕು ಪರಿಪಡ್ ॥

ತುಳುವೆರೆರ್ತಿದ ಉಡಲ್ ದೈಸಿರಿ
ಲೆಪ್ಪುಂಡವು ಬಲ ಬೇಗ ಯಾತ್ರಿಯೆ ॥

ಮೂಲ : ಏರ್ಯ ಲಕ್ಷ್ಮೀನಾರಾಯಣ ಆಳ್ವ
(ತರ್ಜುಮೆ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್)

ಚೊಕ್ಕಾಡಿ

ಸುಬ್ರಾಯ ಚೊಕ್ಕಾಡಿ

ನನ್ನೂರು ಚೊಕ್ಕಾಡಿಗೆ ಹೇಳಿಕೊಳ್ಳುವಂಥ ಪ್ರತ್ಯೇಕ ಸ್ಥಳ ಪುರಾಣವೇನೂ ಇಲ್ಲ.
ದಶಾವತಾರದ ಪೈಕಿ ಯಾವೊಂದು ಅವತಾರವೂ ಇಲ್ಲಿ ಆಗಿಲ್ಲ
ಅಥವಾ ಯಾವ ದೇವರೂ ಇಲ್ಲಿ ವಿಶ್ರಾಂತಿಗಾದರೂ ಕ್ಷಣಕಾಲ ತಂಗಿದ ಕುರುಹು ಇಲ್ಲ.

ಯಾವುದೇ ಅರಮನೆ ಇಲ್ಲಿ ಎದ್ದಿಲ್ಲ [1]ಜಲಸಾ, [2]ದರ್ಬಾರು ನಡೆದಿಲ್ಲ
ಬಂಡೆಗಳಲ್ಲಿ ಶಾಸನಗಳನ್ನು ಕೊರೆದಿಲ್ಲ ಸ್ಮಾರಕಗಳೆದ್ದಿಲ್ಲ
ಹೆಚ್ಚೇನು? –
ಯಾವ ಭೂಪಟದಲ್ಲೂ ಈ ಊರ ಉಲ್ಲೇಖವಿಲ್ಲ
ಪಂಪನ ಹಾಗೆ ಈ ಊರ ಕುರಿತು ಹಾಡು ಕಟ್ಟುವುದಕ್ಕೆ ನನಗೆ ವಿಷಯಗಳೇ ಸಿಕ್ಕಿಲ್ಲ.

ಎಲ್ಲ ಊರುಗಳಂತೆ ನಮ್ಮ ಚೊಕ್ಕಾಡಿಯಲ್ಲಿ ಇದೆ :
ಮಳೆಗಾಲಕ್ಕೆ ಉಕ್ಕುತ್ತ ಬೇಸಿಗೆಗೆ ಒಣಗುತ್ತ
ಪಂಪ್‌ಸೆಟ್ಟುಳ್ಳ ಶ್ರೀಮಂತರಿಗೆ ಧಾರಾಳ ನೀರುಣಿಸುತ್ತ
[3]ಚೊಟ್ಟೆಯ ದರಿದ್ರರಿಗೆ ನಕಾರ ಹೇಳುವ ಹೊಳೆ.
ಮಳೆಗಾಲದಲ್ಲಿ ಭೀತಿ ಹುಟ್ಟಿಸುವ ಕಪ್ಪಾಗಿ
ಬೇಸಿಗೆಯಲ್ಲಿ ಉರಿದು ಬೋಳಾಗಿ ಹಲ್ಕಿರಿವ ಬಂಟಮಲೆ
ಮತ್ತೆ ಯಥಾಪ್ರಕಾರ ಉಳ್ಳವರಿಗೆ ಅಧಿಕ ಇಳುವರಿ
ಇಲ್ಲದವರಿಗೆ ಅಲ್ಲಲ್ಲಿ ಇಳುವರಿಯ ಹೊಲ ತೋಟಗಳು.
ಗುಡ್ಡಗಳ ಬಾಗುಬೆನ್ನೇರಿ, ತಿರುವಲ್ಲಿ ಮರೆಯಾಗುತ್ತ
ಬದಿಯ ಗೇರುಮರಗಳಿಗೆ ಧೂಳುಡಿಸಿ, ಹಾದಿಹೋಕರಿಗೆ
ಕೈಗೆ ಕಾಸೀಯುವ ಕೆಂಪುರಸ್ತೆಗಳು

ನೀರಿಲ್ಲದ ಪಳ್ಳಗಳಲ್ಲಿ ಒರಗಿ ಬಾಯಾಡಿಸುವ ಎಮ್ಮೆ ಕೋಣಗಳು
ಎಲುಬಾಡಿಸುವ ದನ ಎತ್ತುಗಳು. ಮತ್ತೆ
ಚಡಾವಲ್ಲಿ ಕಿರುಲುವ ಗಾಡಿಗಳು; ಉಸಿರೆಳೆವ ನೇಗಿಲುಗಳು.

★ ★ ★

೨
ಈಗಾಗಲೇ ನೀವು ಸಂಶಯಿಸುತ್ತಾ ಅಥವಾ ಊಹಿಸುತ್ತಾ
ಇರುವಿರಲ್ಲವೆ? ನಿಜ. ನಮ್ಮ ಈ ಊರಲ್ಲೂ ಉಳಿದೆಲ್ಲ ಊರುಗಳಂತೆ
ಇದ್ದಾರೆ ಮನುಷ್ಯರು. ಮನುಷ್ಯರಿದ್ದಾರೆಂದೇ ಇಲ್ಲಿ
ಒಂದು ನಮೂನೆಯ ಬದುಕೂ ಇದೆ. ಈ ಬದುಕಿಗನುಗುಣವಾಗಿ
ಸಾವಿನ ಚಹರೆ ಹೊತ್ತ ಚಲನೆ; ಬದುಕಿದ್ದನ್ನು ಸಾಧಿಸುವ ಛಲವಾಗಿ
ಕಲಾಸಕ್ತಿ ಇತ್ಯಾದಿ. ಯಕ್ಷಗಾನದ ಹುಟ್ಟು ಇಲ್ಲೇ ಎಂಬ ನಂಬಿಕೆಯಂತೆ
ರಾತ್ರಿ ಹಗಲೆನ್ನದೆ ಇಲ್ಲಿ ಎಲ್ಲೆಂದರಲ್ಲಿ
ರಾಜವೇಷವೋ ತಡ್ಪೆ ಕಿರೀಟವೋ ಕೋಡಂಗಿಯೋ
ಅಥವಾ ಕಟ್ಟುವೇಷಗಳೋ ಕಾಣಿಸುತ್ತವೆ.
ಚಂಡೆಮದ್ದಳೆ ಜಾಗಟೆಯ ಸದ್ದಿನ ನಡುವೆ ಲಂಕಾದಹನ
ಸೀತಾಪಹಾರ ಕೃಷ್ಣಸಂಧಾನ ಊರುಭಂಗ ಪ್ರಸಂಗಗಳು
ನಡೆಯುತ್ತವೆ; ಸತ್ತ ಮಾತಿಗೆ ರುಚಿಯ ನೀಡುತ್ತವೆ.

★ ★ ★

ಹೊಸ ಹೊಸಾ ದೇವರು ಸುದ್ದಿಯಾಗುತ್ತಾರೆ; ಪೂಜೆಗೊಳ್ಳುತ್ತಾರೆ ಇಲ್ಲಿ.
ಈ ನಡುವೆ, ನಾಯರೋ ಉಳ್ಳಾಕಳೋ ದೈವಗಳು
ಗೆಜ್ಜೆ ಸದ್ದಿನ [4]ಪಯ್ಯೊಳಿಕೆ ನೃತ್ಯಭಂಗಿಯಲಿ ಓಡಾಡಿ
ಕಾರ್ಣಿಕಗಳನ್ನು ಕೆತ್ತುತ್ತಾವೆ ಅಲ್ಲಲ್ಲಿ
ವಿದೇಶೀಯಾತ್ರಿಕರ ಆಕರ್ಷಣೆಯ ಕೇಂದ್ರವಾಗಿ.

★ ★ ★

ಚರಿತ್ರೆಯಲ್ಲೋದಿ ಮರೆತಿದ್ದ ತುಘಲಕನೋ, ಚಿಕವೀರರಾಜ, ಹರ್ಷವರ್ಧನನೋ
ಅಥವಾ ಅಳಿಯ ರಾಮರಾಯನೋ ಮುಪ್ಪಿನ ಬಹಾದ್ದೂರ್‌ಷಹನೋ
ಹಠಾತ್ ಎದುರಾಗುತ್ತಾರೆ ಈಗಲೂ ನಮಗೆ ಬೀದಿಗಳಲ್ಲಿ.
ಪ್ರಿವೀಪರ್ಸ್ ಕಳಕೊಂಡ ರಾಜಾಧಿರಾಜರು ತಮ್ಮ

ಆಸ್ಥಾನದಿರಿಸಲ್ಲೇ ಕಾಣಸಿಕ್ಕುತ್ತಾರೆ.
ಮೊಹರಮ್ಮಿನ ಹುಲಿವೇಷ ತಿರುವಲ್ಲಿ ಸಿಕ್ಕಿ ನಿಮ್ಮನ್ನು ಬೆದರಿಸುತ್ತದೆ
ಕಲ್ಯಾಣಪ್ಪನ ಕತ್ತಿಯೋ ನಾಡಕೋವಿಯೋ ಅಮೂರ್ತದಲ್ಲಿ ಶಬ್ದಿಸುತ್ತದೆ
ಮುಂದುವರಿದಲ್ಲಿ,
ಮೈಯಿಡೀ ಬಾಯಾದ ಅಥವಾ ಹೊಟ್ಟೆಯಾದ
ಬರೀ ಮಿದುಳಾದ ಅಥವಾ ಬತ್ತಲೆ ಸೊಂಟವಾದ
ವಿಚಿತ್ರರೂಪಗಳು ನಿಮ್ಮೆದುರು ಅಣಕಿಸುತ್ತಾ ಬಂದು
ಗೊಂದಲದಲ್ಲಿ ಬೀಳಿಸುತ್ತವೆ. ಈ ರೂಪಗಳು
ಬೆಟ್ಟಕ್ಕೋ ಅಥವಾ ಕಟ್ಟಡಕ್ಕೋ ಬಿದ್ದ ಬೆಂಕಿಯಲಿ
ಮೈಕಾಯಿಸಿಕೊಳ್ಳುತ್ತಾವೆ. ದೇಹಕ್ಕೆ
ಚೆನ್ನದಬಣ್ಣ ಕೊಟ್ಟುಕೊಳ್ಳುತ್ತಾವೆ. ತಮ್ಮ ಮೋಹಿನಿಯರ
ನಮ್ಮತ್ತ ಛೂ ಬಿಡುತ್ತಾವೆ.

ಈ ನಡುವೆ ಹಿನ್ನೆಲೆಯ ಶ್ರುತಿಯಂತೆ
– ನಿಮಗೆ ಕಿವಿಯಿದ್ದರೆ – ಆಗ
ಜರಿದ ಪಾಡಜೆ ಗುಡ್ಡೆಯಡಿಗೆ ಸಿಕ್ಕ ಆತ್ಮಗಳು
ಅಮೂರ್ತ ಅಲೆದಾಡುತ್ತಾ
ನರಳುವ ಸದ್ದು ಕೇಳುತ್ತದೆ. ದಟ್ಟಿಗೆಯ
ಖಾಲಿಹೊಟ್ಟೆಗಳ ಗುಡುಗು
ಕೊಳಲಿನ ಸ್ವರವಾಗಿ, ದುಡಿಯ ಧ್ವನಿಯಾಗಿ
ರೂಪಾಂತರಗೊಳ್ಳುತ್ತದೆ. ರಟ್ಟೆಯಲ್ಲಿಲ್ಲದ ರೊಚ್ಚು
ಕೊಳ್ಳಿದೆವ್ವ[5]ಗಳಾಗಿ ಅಲೆಯುತ್ತದೆ.
ಕೇಳುತ್ತಾ ಇದ್ದೀರಾ? ಇದು ಸತ್ಯ – ನೋಡಿ ಸ್ವಾಮೀ,
ಹ್ಯೂಯೆನ್‌ತ್ಸಾಂಗ್[6]ನಂಥ ಯಾವ ಪ್ರವಾಸಿಯೂ ಈ ಊರಿಗೆ ಬಂದಿಲ್ಲ
ಯಾವ ಅನ್ವೇಷಕನೂ ಈ ಊರಿನ ಬಗ್ಗೆ ಕುತೂಹಲ ವ್ಯಕ್ತಪಡಿಸಿಲ್ಲ
ಉತ್ಖನನ[7]ಕ್ಕೆ ಈ ಊರು ಇನ್ನೂ ಆಹಾರವಾಗಿಲ್ಲ
ಕಾರಣವೆಂದರೆ,
ಇಲ್ಲಿನ ವಿಶೇಷ ಯಾವ ಉತ್ಖನನಕ್ಕೂ ದಕ್ಕುವುದಿಲ್ಲ.

ಅದೇ ಶಾಲೆ ಅಂಚೆಕಛೇರಿ ಪಂಚಾಯತಿ ಜನಗಳು
ದನಹುಲಿಗಳು ದೇವಾಲಯ ಬೆಟ್ಟಕಾಡುಗಳು

ವರ್ಷಕ್ಕೊಮ್ಮೆ ನಡೆವ ಅಧ್ಯಾತ್ಮ ಭಾಷಣಗಳು
ಸಿಹಿಯೂಟ ಕೋವಿ ಯಕ್ಷಗಾನದ ಗುತ್ತುಗಳು
ನಡುವೆ ಹರಿಯುವ ಅಮೂರ್ತಧ್ವನಿಗಳು
ವಿಚಿತ್ರರೂಪಗಳು.....
ಈ ನಡುವೆ ನಾವು ಮುಖಾಮುಖಿ ಕೂತು
ನಿರ್ಧರಿಸೋಣ. ಅರ್ಥಗಳಲ್ಲಿ
ಖಚಿತಪಡಿಸೋಣ.

ಆಗಷ್ಟೇ ತಿಳಿದೀತು
ಎಲ್ಲ ಊರುಗಳಂತೆ ಈ ಊರು
ಅಥವಾ
ಎಲ್ಲ ಊರುಗಳಂತೆ ಅಲ್ಲ ಈ ಊರು.

[1] ಜಲಸಾ – ಮೇಳ
[2] ದರ್ಬಾರು – ಓಲಗ
[3] ಚೊಟ್ಟೆ – ಏತ
[4] ಪಯ್ಯೊಳಿಕೆ – ನೆಗೆತ
[5] ಕೊಳ್ಳಿದೆವ್ವ – ರಾತ್ರಿ ಹೊತ್ತು ಪಂಜು ಹಿಡಿದು ಅಲೆದಾಡುವ ದೆವ್ವ
[6] ಹೂಯೆನ್‌ತ್ಸಾಂಗ್ – ಚೀನಿ ಯಾತ್ರಿಕ
[7] ಉತ್ಖನನ – ಭೂಶೋಧಕ್ಕಾಗಿ ಅಗೆಯುವುದು

ಚೊಕ್ಕಾಡಿ

ಎನ್ನೂರು ಚೊಕ್ಕಾಡಿಗ್ ಪನ್ಪಿನಂಚಿನ ಸ್ಥಳಪುರಾಣ ದಾಲಾ ಇಜ್ಜಿ
ದಶಾವತಾರೊದ ಪೈಕಿ ವಾವೊಂಜಿ ಅಬತಾರೊಲಾ ಮೂಲು ನಡತ್‌ದಿಜಿ
ಅತ್ತಂಡ ವಾದೇವೆರ್ಲಾ ಮೂಲು ಬಚ್ಚೆಲರ ಪಯರೆಗಾದ್
ಒಂಜಾತ್ ಪೊರ್ತುರ್ಜ ಕುಲ್ದುತ್ತಿನ ಕುರುಹುಲಾ ಇಜ್ಜಿ

ವಾ ಅರಂತಡೆಲ ಮೂಲು ಲಕ್ಕ್‌ದುಂತುದಿಜಿ ಮೇಳೊ
ಓಲೆಗೊ ದರ್ಬಾರ್ ನಡತ್‌ದಿಜಿ
ಪಾದೆಕಲ್ಲ್ ಪಲಯಿ ಕಲ್ಲ್‌ದ ಕಲ್ಬರವು ನೆಂಪು ಸೊತ್ತುಲು ಮೂಲಿಜ್ಜಿ
ಚೊಕ್ಕದಾದ
ವಾ ಭೂಪಟೊಟ್ಲಾ ಈ ಊರ್ದ ಪುದರೇ ತೋಜುಜಿ
ಪಂಪನಂಚನೆ ಈ ಊರ್ದ ಬಗೆಟ್ ಪದ ಬರೆಯರೆ
ಎಂಕ್ ಸಂಗತಿಲೇ ತಿಕ್ಕ್‌ದಿಜಿ.

ಮಾತ ಊರ್ದಲೆಕ ಎಂಕ್ಲೆ ಚೊಕ್ಕಾಡಿಲಾ
ಮರೆಯಾಲೊಡು ಉರ್ಕುಂಡು ಅರೆಗಾಲೊಗು ಸಿರ್ಕುಂಡು
ಪಂಪ್‌ಸೆಟ್ಟುಪ್ಪಿ ಸಿರಿವಂತೆರೆಗ್ ಧಾರಾಳ ನೀರ್ ಪರ್ಪುಂಡು
ಪನೆಕೊಟುನದರಿದ್ರೆರೆಗ್ ದಾಲ ಇಜ್ಜಿ ಪನ್ಪಿನ ತಾರ್
ಮರೆಯಾಲೊಡು ಪೋಡಿಗೆ ಪುಟ್ಟವುನ ಕಪ್ಪಾದ್
ಅರೆಗಾಲೊಡು ಪೊತ್ತುದು ಬೋಳಾದ್ ಕೂಲಿ ಚಿರ್ಪದುಂತುನ ಬಂಟಮಲೆ
ಬೊಕ್ಕ ಅಂಚನೆ ಇತ್ತಿನಕುಲೆಗೇ ದಿಂಜ ಬುಳೆಸಲೆ
ದಾಂತಿನಕುಲೆಗ್ ಅಲ್ಪಲ್ಪ ಬುಳೆ ಕೊರ್ಪಿ ಕಂಡ ತೋಟೊಲು
ಗುಡ್ಡೆಲ್‌ನ ಜೇರೊ ಮಿತರ್ದ್ ತಿರ್ಗಾಸ್‌ಡ್ ಮಾಯ ಆಪಿನ
ಬರಿಟ್ಟಿ ಗೋಂಕು ಮರಕುಲೆನ್ ಧೂಳುಡು ಮುರ್ಕದ್

ಸಾದಿ ಪೋಪಿ ನಕುಲೆ ಕೈಕ್ ಕಾಸ್ ಕೊರ್ಪಿನ ಕೆಂಪು ಮಾರ್ಗೊ
ನೀರ್‌ದಾಂತಿ ಪಳ್ಳಡ್ ಜೆತೊಂದು ಕಾಯಿ ಕಡೆಪುನ
ಎರ್ಮೆಗೋಣೆರ್
ಎಲು ಆಡವೊಂದು ಪೋಪಿ ಎಲ್ಯು ಪೆತ್ತ
ಚಡಾವುಡು ಕೀರಿ ಕುತ್ತೊಂದು ಪೋಪಿ ಗಾಡಿಲು
ಉಸುಲ್ಯೊತೊಂದುಪ್ಪಿ ನಾಯೆರ್ಲು

★ ★ ★

ಇತ್ತೆ ನಿಕುಲು ಅನುಮಾನೊಡುಪ್ಪರ್ ಅತ್ತಂಡ
ಅಂದಾಜಿ ಮಲ್ತ್‌ದುಪ್ಪರ್ ಅತ್ತೇ? ನಿಜ
ಎಂಕ್ಲೆ ಈ ಊರುಡ್ಲಾ ಬೇತೆ ಊರುಡಿತ್ತಿಲೆಕನೆ
ನರಮಾನ್ಯೆರುಲ್ಲೆರ್, ನರಮಾನಿ ಉಲ್ಲೆರ್‌ಂದೇ
ಒಂಜಿ ನಮೂನೆದ ಬದ್ಕ್ ಉಂಡು. ಈ ಬದ್ಕ್‌ಗ್
ಸರಿಯಾದ್ ಸೈಪುನ ಚರ್ಯೆ ತೋಜುನ ಮೆದ್ಕಾಟ
ಬದ್ಕ್‌ನ್ ಸಾಧನೆ ಮಲ್ತ್
ತೋಜವುನ ಹಟೊಟು ಕಲೆಟ್ ಉಮೇದ್
ಇಂಚ ಮಾತ
ಯಕ್ಷಗಾನದ ಉಟರ್ನೆ ಮೂಲೇ ಆಂಡ್ ಪನ್ಪಿ ನಂಬಿಕೆ
ದೀವೊಂದು ರಾತ್ರೆ ಪಗೆಲ್ ಬುಡಂದೆ ಅವುಲು-ಮೂಲು
ಓಲು ತೂಂಡಲಾ ರಾಜ ವೇಸೊನೋ, ತಡ್ಪೆ ಕಿರೀಟೊನೋ
ಕೋಡಂಗಿಯೋ ಅತ್ತಂಡ ಕಟ್ಪ್ ವೇಸೊಲೋ ತೋಜಿದ್
ಬರ್ಪ.
ಚೆಂಡೆ ಮದ್ದಲೆ ಜಾಗಂಟೆದ ಸಬ್ದೊದ ನಡುಟೆ
ಲಂಕಾದಹನ, ಸೀತಾಪಹಾರ, ಕೃಷ್ಣ ಸಂಧಾನ
ಊರುಭಂಗ ಪ್ರಸಂಗೊಲು ನಡತೊಂದುಪ್ಪುವೊ
ಸೈತಿ ಪೆತ್ತಗ್ ಪೇರ್ ಎಚ್ಚಂದ್
ಪಂಡೊಂದಿಪ್ಪುವೆರ್.

★ ★ ★

ಮೂಲು ಪೊಸ ಪೊಸ ದೇವೆರ್
ಸುದ್ದಿ ಮಲ್ಪುವೆರ್. ಪೂಜೆ ಕೈಕೊನುವೆರ್

ಈ ನಡುವೆ ನಾಯರೋ, ಉಳ್ಳಾಕುಲೋ ದೈವೊಲು
ಗೆಜ್ಜೆ ಸಬ್ದೊಡು, ಪಯ್ಯೊಲಿದ ನಲಿಕೆಡ್ ದುಂಬು ಪಿರಪೋದು
ಕಾರ್ಣಿಕೊನು ಕೆತ್ತುವೆರ್ ಅಲ್ಲಲ್ಪ
ಪರದೇಸೊದ ಯಾತ್ರಿಲು ನೆನ್ನ್ ತೂದು ದಿಗಿಲಾಪೆರ್

★ ★ ★

ಚರಿತ್ರೆಡ್ ಓದುದು ಮದತಿನ ತುಗ್ಲಕೆನೋ
ಚಿಕವೀರ ರಾಜೆ, ಹರ್ಷವರ್ಧನೆನೋ ಅತ್ತಂಡ
ಅರ್ವದೆ ರಾಮರಾಯನೋ ಪರಬೆ ಬಹಾದ್ದೂರ್ ಷಹೆನೋ
ಫಕ್ಕನೆ ಎದ್ರಾಪೆರ್. ಇತ್ತೆಲಾ ಎಂಕ್ಲೆ ಊರುದ ಸಾದಿಡೆ
ಪ್ರೀವೀಪರ್ಸ್ ಕಳೆವೊನ್ನ ರಾಜಾಧಿರಾಜೆರ್ ಅಕುಲಕುಲೆ
ಆಸ್ಥಾನೊಡೇ ತೂಯರೆ ತಿಕ್ಕುವೆರ್.
ತಿರ್ಗಾಸ್‌ಡ್ ತಿಕ್ಕಿನ ಮೊಹರಂದ ಪಿಲಿವೇಸೊ
ನಿಕುಲೆನ್ ಪೋಡಿಗಟ್ಟುವುಂಡು
ಕಲ್ಯಾಣಪ್ಪನ ಕತ್ತಿ, ಊರ ಬೆಡಿ ಮೂರ್ತೊರ್ದಾಂತೆನೆ
ಒರೊರ ಪುಡಾವುಂಡು
ದುಂಬೊತ್ತೊಂದು ಪೋಂಡ,
ಮೆಯಿ ಇಡೀಕ ಬಾಯಾದ್ ಅತ್ತಂಡ ಬಂಜಿಯಾದ್
ಬಜೀ ಮೆದುಳಾದ್ ಅತ್ತಂಡ ಉರ್ಬಿಲಿ ಸೊಂಟ ಆದ್
ವಿಚಿತ್ರೊದ ಒರುಟು ನಿಕುಲೆದುರು ಉಂತುದು
ಗೇಲಿ ಮಲ್ತೊಂದು ಬತ್ತ್‌ದ್ ನಿಕುಲೆನ ತರೆ ತಿನ್ಪುಂಡು
ಈ ಸುರ್ಪೊಲು ಗುಡ್ಡೆಗೋ ಗುಡ್ಚಿಲ್‌ಗೊ ಬೂರ್ನ
ಸೂತ ದವೊಟು ಮೆಯಿ ಕಾಯ್ತೊನುನ ಜಾತಿದವು
ಸರ್ರೊಗು ಬಂಗಾರ್ದ ರಂಗ್ ಮೆತ್ತೊನುನವು.
ತನ್ಕುಲೆನ ಸಿರಿಕುಲೆನ್ ನಮ್ಮಂಚಿ ಕಾಟೊ ಕೊರ್ಯರೆಗಾದ್
ಬೆರಿಪತ್ತುನವು.
ನಿಕುಲೆಗ್ ಕೆಬಿ ಇತ್ತ್‌ಂಡ ನೆಕ್ಕ್ ಮಾತ ಸ್ಮೃತಿ ಪತ್ತಿಲೆಕ
ಪಾಟಾಜೆದ ಜರಿನ ಗುಡ್ಡೆದಡಿಟ್ ತಿಕ್ಕೊಂದಿನ ಜೂವೊಲು
ಪೊರ್ತುದಾಂತೆ ಒಳಸರಿ ದೀವೊಂದು
ನರಕುನ ಸಬ್ದೊ ಕೇನುಂಡು. ದಟಿಗೆದ
ಖಾಲಿ ಬಂಜಿಲು ಬುಲಿಪಿಸೊರೊ

ಪುರಾಲ್‌ದ ದನಿಯಾದ್ ದುಡಿತ ದುನಿಪಾದ್
ಒರು ಬದಲೊನುಂಡು. ರಟ್ಟೆದ ತಂಕ
ಕೊಳ್ಳಿ ಭೂತ ಆದ್ ತಿರ್ಗೊಂದುಪ್ಪುಂಡು

★ ★ ★

ಕೇಂಡೊಂದುಲ್ಲರತ್ತಾ? ಉಂದು ಸತ್ಯ- ತೂಲೆ ಮಾರಾಯೆರೆ
ಹ್ಯೂಯೆನ್‌ತ್ಸಾಂಗ್ ನಂಚಿನ ವಾ ಪ್ರವಾಸಿಲಾ ಈಡೆ ಬತ್ತ್‌ದ್‌ಜೆ
ವಾ ಸಂಶೋಧಕೆಲಾ ಈ ಊರ್ದ ಬಗೆಟ್ ಉಮೇದ್ ತೋಜದಿಜೆ
ಗರ್ತ್ ತೂಪಿನಕುಲು ಏರ್ಲಾ ಈಡೆ ಬತ್ತ್‌ದ್‌ಜೆರ್
ದಾಯೆ ಪಂಡ
ಮುಲ್ಪ ವಿಸೇಸೊ ಸಂಗತಿಲು ಏರ್ ಗರ್ತ್ಂಡಲಾ
ತಿಕ್ಕುನವತ್ತ್.
ಆವ್ವೇ ಸಾಲೆ, ಪೋಸ್ಟಾಪೀಸ್, ಪಂಚಾಯಿತಿ ಜನೊಕುಲು
ಪೆತ್ತ ಪಿಲಿಕುಲು ದೇವಸ್ತಾನೊ ದೈವ ಗುಡಿಕುಲ
ಗುಡ್ಡೆ ಕಾಡ್‌ಲು
ವರ್ಸೊಗೊರ ನಡಪುನ ಆಧ್ಯಾತ್ಮ ಭಾಷಣೊಲು
ಚೀಪೆದುನಸ್, ಬೆಡಿ, ಪೋಲಿಸ್, ಯಕ್ಷಗಾನೊದ ಗುತ್ತು
ನಡುನಡುವೆ ಪರಿಪುನ ಮೂರ್ತೊದಾಂತಿ ಸೊರೊಕುಲು
ವಿಚಿತ್ರ ರೂಪೊಲು.
ಈ ನಡುಟು ನಮ ಎದುರೆದುರಾದ್ ಕುಲ್ಲುದು
ನಿರ್ಧಾರ ಮಲ್ಪುಗ ಪಾತೆರೊಡೇಗರ್ಪುನ
ಆರ್ತೊಡು ಸಮಾಧಾನ ಮಲ್ತೊನುಗ
ಬಲೆ ಎಂಕ್ಲೆ ಚೊಕ್ಕಾಡಿಗ್
ಅಪಗ ನಿಕ್ಲೆಗ್ ಗೊತ್ತಾವು ಮಾತ ಊರುದಲೆಕನೆ
ಈ ಊರು
ಆತ್ತಂಡ ಮಾತ ಊರುದಲೆಕ ಇಜ್ಜಿ ಈ ಊರು.

ಮೂಲ : **ಸುಬ್ರಾಯ ಚೊಕ್ಕಾಡಿ**
(ತರ್ಜುಮೆ : **ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್**)

ತುಳುವೆರೆ ಕಲೆಂಬಿ

ಶಿಮಂತೂರು ಚಂದ್ರಹಾಸ ಸುವರ್ಣ

ಪೂವೆ[1]ದೆದ್‌ರ್ ಸಿರಿಪೊಣ್ಣೆ[2]ದ ಮರಕ್ ಗಡಿ ದೀಪಾದ್
ಪುಣ್ಣಮೆರ್ದ್ ಬೊಕ್ಕ ಲೆಕ್ಕಪಿರ್ಕಾರ ಪಲಯಿಲೆನ್ ಕುದ್ಪಾ[3]ದ್
[4]ಅಚ್ಚವೆರೆ ಆಯೊಡು ಗಟ್ಟಿದ ಕಲೆಂಬಿನ್ ಅಜ್ಜೆರ್ ಮಲ್ಪಾದ್
ಎಡ್ಡೆ ಮೂರ್ತೊಡು ಪಡ್ಸಲ್ ಪೊಗ್ಗಾದೆರ್ ಕುತ್ತಿ ಪೂಜೆ ಕೊರ್ದುಂಡ ॥

ಎಂಚಿ ಕಲೆಂಬಿ[7] ಅವು.... ಪಡ್ಸಲೆಡ್ ನೆಗನೆಗತ್ತ್ ತೋಜುನಲ್ಕ
ಮುತ್ತೆಸಿ ಮುಂಡದೆಸಲ್ಡ ಬಟ್ಟಲ್ ಒರುತ್ತ ಕುಂಕುಮದ ಬೊಟ್ಟದಲ್ಕ
ಪೊಡಿಕಾಸ್, ಪದ್ದೆಯಿ ಬಂಗಾರ್ದ ಪೊದಿಕೆ ಜೋಕ್ಲೆನ್ ಮಂಗಟಾವು ತೆನಸುಲು
ಆರಿ ಮುಂಚಿ ಬೆಲ್ಲ ನೆಯಿತ ಕರ್ಡಿಗೆ ಉಪ್ಪಡ್ದ ಬರೊನಿತ್ತಿ ಕಳೆಂಬಿ ॥

ಆಜ್ಜಿನ ಬೇರ್‌ಮರ್ದ್, ಎಣ್ಣೆದ ಕಲ್ಪಡ್[8] ಬಚ್ಚಿರೆದ ಆರಿಯಣ
ಪೇನ್‌ತೊಯ್ಪು ಊರನೆ[9] ಮುಡಿತೊಲ್ಪು ಮುರ್ನಾಲಿ[10] ತರೆತ್ತ ಉದಿರಿ[11]
ತರೆ ಬರ್ಚುಂಡ ಬರ್ಚುನೆ... ಕೈಕ್ ದೀಪಿ ಮಣ್ಣ್‌ದ ಕಾಜಿಲು
ಬತ್ತಿಬಿನ್ನೆರ್ ಪಡ್ಸಲೆಡ್ ಕುಲ್ದು ಬಚ್ಚೆಲ್ ಗೆಪ್ಪುನಂಚಿನ ಕಳೆಂಬಿ ॥

ಗಡಿಪತ್‌ದಿ ಗುರ್ಕಾರ್ಲುಂಡ ಪಜೆ ಪಾಡ್ದ್ ಜೆಪ್ಪುನ ಕಾರ್ನಿಕದ ಕಳೆಂಬಿ
ದೈವದ ಬಾಲ್ ಬಂಡಾರೊನು ದಿಂಜಾದ್ ದೀಪಿನ ಬಂಡಾರ್‌ದ ಕಳೆಂಬಿ
ಇಲ್ಲ ಗುರ್ಕಾರ್ದಿನ ಬೀಗ ಮುದ್ರೆದ ಕಟ್ಟ್‌ಕಾವಲ್ದ ಕಳೆಂಬಿ
ಇಲ್ಲ್‌ದ ನೇಗ[12]... ಸಿರಿ ಸಿಂಗಾರದ ಪೊಲ್ಸು[13] ಆ ಪೊರ್ಲುಂಡ ಕಳೆಂಬಿ ॥

ಗಂದದ ಗುಳಿಗೆ ಪಿಂಗಾರದ ಪಾಲೆಡ್ ಸಿರಿ ಪುಟುದಿನಿ ಕಲೆಂಬಿದುಲಯಿಡ್ದ್
ಕೇಂಜವನ ತೆತ್ತಿಡ್ದ್ ಪಿಲ್ಚಿಂಡಿ ದೈವ ಉಂಡಾಯಿನಿ ಕಲೆಂಬಿದುಲಯಿಡ್ದ್
ಸುವರ್ಣ ಕೇದಗೆ ಪುಟುದಿನ ತೆತ್ತಿ ಇತ್ತಿನ ಬಟ್ರೆನ ಕಲೆಂಬಿ ದುಲಯಿಡ್ದ್
ಅಬ್ಬಗೆ-ದಾರಗೆನ ಅಂತ್ಯ ಮಲ್ತಿನ ಚೆನ್ನೆದ ಮಣೆ ಇತ್ತಿನಿ ಕಲೆಂಬಿದುಲಯಿಡ್ ॥

ಕಲೆಂಬಿ ಕಲೆಂಗಿ[14] ಪತ್‌ದ್ ಕೋಡಿ ಸೇರುನ ಸೊತ್ತತ್ತ್
ಕಲೆಂಬಿ ಸಿರಿ ಸಂಪೊತ್ತು ಇಂಬು-ಇರ್ಬು ದಿಂಜಿದಿ ಗತ್ತ್
ಕಲೆಂಬಿ ತುಳುವೆರೆ ಇಲ್ಲದ ಬಿಲೆ ಕಟ್ಟರಾವಂದಿನ ಸಂಪೊತ್ತು
ಕಲೆಂಬಿದ ಜಾಗ್ ದಿಂಜಾವುನ ಉಂಡಾ ಒವ್ವಾಂಡಲ ಸೊತ್ತು ॥

[1] ಪುವ್ವೆ - ಹುಣ್ಣಿಮೆಯ ಮೊದಲ ದಿನ, [2] ಸಿರಿ ಪೊಣ್ಣೆ - ಒಂದು ಜಾತಿಯ ಮರ, [3] ಕುದ್ಪು - ಕೊಯ್ಯು, [4] ಆಚ್ಚವ - ಬಡಗಿ, [5] ಪಡ್ಸಲೆ - ಪಡಸಾಲೆ, [6] ಕುತ್ತಿಪೂಜೆ - ಶಿಲಾನ್ಯಾಸ ಪೂಜೆ, [7]ಕಲೆಂಬಿ - ಮನೆಯ ಸಾಮಾನುಗಳನ್ನು ತುಂಬಿಸಿಡಲು, ಮೇಲೆ ಮಲಗಲು ಅನುಕೂಲವಿರುವ ಮರದ ಪತ್ತಾಯ, ದೀವಾನ, [8] ಕಲ್ಪಡ - ಮಿಳ್ಳೆ [9] ಊರನೆ - ಒಯ್ಪನೆ, ಸೀರಣಿಗೆ, [10] ಮುನ್ರಾಲಿ- ಅಕ್ಕಿಮುಡಿಗೆ ಕುತ್ತಿ ಅಕ್ಕಿಯ ಲಕ್ಷಣ ನೋಡುವ ಉಪಕರಣ, [11] ಉದಿರಿ- ತಲೆಚೌರಿ(ಳಿ), [12] ನೇಗ - ಶೋಭೆ, [13] ಪೊಲ್ಸು - ಅದೃಷ್ಟ [14] ಕಲೆಂಗ್ - ಕಿಲುಬು

ತುಳುವರ ಕಲೆಂಬಿ

ಹುಣ್ಣಿಮೆ ಬರುವ ಮುನ್ನ ಸಿರಿಹೊನ್ನೆ ಮರ ಕಡಿಸಿ
ಹುಣ್ಣಿಮೆ ಕಳೆದ ಬಳಿಕ ಲೆಕ್ಕಾಚಾರದಲಿ ಹಲಗೆ ಕೊಯಿಸಿ
ಶಿಲ್ಪಿ ಆಯ ನೋಡಿ ಮಾಡಿದ ಯಜಮಾನ ಕೆತ್ತಿಸಿದ ಕಳೆಂಬಿ
ಮುಹೂರ್ತಕ್ಕೆ ಕಲ್ಲುನೆಟ್ಟು ಪಡಸಾಲೆಯಲ್ಲಿಟ್ಟ ಕಳೆಂಬಿ ॥

ಎಂಥ ಕಳೆಂಬಿ ಅದು... ಪಡಸಾಲೆಯಲ್ಲಿ ಎದ್ದು ಕಾಣುವಂತಿದೆ
ಮುತ್ತೈದೆಯ ನೊಸಲ ಮಧ್ಯದ ಬಟ್ಟಲಾಕಾರದ ಕುಂಕುಮದಂತೆ
ದುಡ್ಡು ಕಾಸು ಆಭರಣ ಕಸವರ[1] ಗಂಟು ಮಕ್ಕಳಕ್ಕರೆಯ ತಿನಿಸು
ನೆಲ್ಲಕ್ಕಿ[2] ಬೆಲ್ಲ ಮೆಣಸು ತುಪ್ಪದ ಮಿಳ್ಳೆ[3] ಉಪ್ಪಿನಕಾಯಿ ಭರಣಿ ತುಂಬಿದ ಕಳೆಂಬಿ ॥

ಅಜ್ಜಿಯ ನಾಟಿಮದ್ದು ಎಣ್ಣೆಯು ಡಬ್ಬಿ ತಾಂಬೂಲ ಹರಿವಾಣ
ಹೇನೆಳೆಯುವ ಸೀರಣಿಗೆ ಮುಡಿತೋಡುವ ಮುರ್ನಾಳಿ ಚೌಲಿ
ತಲೆ ಬಾಚುವ ಬಾಚಣಿಗೆ ಕೈಗಿಡುವ ಗಾಜಿನ ಬಳೆಗಳು
ಬಂದ ನೆಂಟರು ಆಯಾಸ ಕಳೆಯಲು ಕೂರುವ ಪಡಸಾಲೆ ಕಳೆಂಬಿ ॥

ದೀಕ್ಷೆ ಹಿಡಿದ ಗುರಿಕಾರ ಹಾಸು ಹಾಸಿ ಮಲಗುವ ಕಾರಣಿಕದ ಕಳೆಂಬಿ
ದೈವ ದೇವರುಗಳ ಆಯುಧ ಆಭರಣಗಳ ಕಾಯ್ದಿಡುವ ಭಂಡಾರದ ಕಳೆಂಬಿ
ಮನೆಯೊಡತಿಯ ಮೂಲ್ಯ-ಸೊತ್ತುಗಳ ರಕ್ಷಿಸುವ ಬೀಗ ಮುದ್ರೆಯ ಕಳೆಂಬಿ
ಗೃಹಶೋಭೆ ಸಂಪತ್ತು ಅದೃಷ್ಟ ನೀಡುವ ಆ... ಅಂದದ ಕಳೆಂಬಿ ॥

ಪಿಂಗಾರದ ಮಧ್ಯ ಗಂಧದ ಗುಳಿಗೆಯಿಂದೆದ್ದಳು ಸಿರಿ ಕಳೆಂಬಿಯಲಿ
ಕೇಂಜವ[4] ಹಕ್ಕಿಯ ತತ್ತಿಯಿಂದ ಪಿಲಿಚಾಮುಂಡಿಯ ಉದ್ಭವ ಕಳೆಂಬಿಯಲಿ
ಮೊಟ್ಟೆಯೊಡೆದು ಜನಿಸಿದಳು ಸುವರ್ಣ[5] ಕೇದಗೆ ಭಟ್ಟರ ಮನೆಯ ಕಳೆಂಬಿಯಲಿ
ಅಬ್ಬಗ-ದಾರಗೆಯರಂತ್ಯದ ಚೆನ್ನಮಣೆ.... ಇದ್ದುದು ಕಳೆಂಬಿಯಲಿ ॥

ಕಳೆಂಬಿ ಕಿಲುಬು ಹಿಡಿದು ಮೂಲೆ ಸೇರದ ಪವಿತ್ರ ವಸ್ತು
ಕಳೆಂಬಿ ಸಿರಿ ಸಂಪತ್ತಿನ ಶೋಕಿ – ಸಿರಿವಂತರ ಮನೆಯ ಗತ್ತು
ಕಳೆಂಬಿ ತುಳುವರ ಮನೆಯ ಮೌಲ್ಯಯುತ ಸಂಪತ್ತು
ಕಳೆಂಬಿ ಸರಿಸಮಾನವಿಲ್ಲದ ಸೊತ್ತು ಇದ್ದವರಿಗಿಲ್ಲ ಆಪತ್ತು ॥

ಮೂಲ : **ಶಿಮಂತೂರು ಚಂದ್ರಹಾಸ ಸುವರ್ಣ**
(ಅನುವಾದ : **ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್**)

[1] ಕಸವರ – ಚಿನ್ನ, [2] ನೆಲ್ಲಕ್ಕಿ – ಒಂದು ಬಗೆಯ ಅಕ್ಕಿ, [3] ಮಿಳ್ಳೆ – ಸಣ್ಣ ಪಾತ್ರೆ,
[4] ಕೇಂಜವ – ಕಾಲ್ಪನಿಕ ಹಕ್ಕಿ, [5] ಸುವರ್ಣ ಕೇದಗೆ – ದೇಯಿಯ ಮೊದಲ ಹೆಸರು.

ಭೂಮಿಗೀತ

(ಭೂಮಿಗೀತ ಕವಿತೆಯ ಆರಂಭದಿಂದ ಆಯ್ದಭಾಗ)

ಪ್ರೊ. ಎಂ. ಗೋಪಾಲಕೃಷ್ಣ ಅಡಿಗ

ಹುಟ್ಟು :

ಮಲೆಘಟ್ಟ ಸೋಪಾನ ಕೆಳಪಟ್ಟಿಯಲಿ;
ಉರುಳು, - ಮೂರೇ ಉರುಳು, - ಕಡಲ ಕುದಿತದ ಎಣ್ಣೆ ಕೊಪ್ಪರಿಗೆಗೆ.
ತೆಂಗುಗರಿಗಳ ಬೀಸಿ ಕೈಚಾಚಿ ಕರೆದಳು;
ಅಡಿಕೆಗೊನೆಗಿಲಕಿ[1] ಹಿಡಿದಾಡಿಸಿದಳು.
ಕಬ್ಬಿನಾಲೆಯ ತಿರುಪಿನಲ್ಲಿ ಕುಳಿತೆರೆದಳು ಅಜಸ್ರಧಾರೆ[2]ಯ ಕರುಳ ತುಡಿತವನ್ನು;
ಭತ್ತ ಗೋಧುವೆ ರಾಗಿ ಜೋಳ ಮೊರ[3]ಮೊರಮೌರಿ[4]ಯಲ್ಲಿ ಮಾಂಸದ
ಹಾಡನೂಡಿಸಿ[5]ದಳು;
ಗಂಟೆ ಗೋರಟೆ ಜಾಜಿ ಮಂದಾರ ಮಲ್ಲಿಗೆಯ ಗಂಧಗಿರಿಶಿಖರದಲಿ ಮಲಗಿಸಿದಳು;
ಹಕ್ಕಿಗೊರಳಿಂದುಗುವ, ತುಂಬಿ ಮರ್ಮರಮೊರೆವ, ಜಾಮೂನು[6]ನಾದದಲಿ
ಜಾಳಿಸಿದಳು;
ಆಕಾಶದಲ್ಲಿ ಮೋಡದ ವಿಶ್ವರೂಪಕ್ಕೆ ಕೆಳಗೆ ಜೀವಜ್ಯೋತಿ ಕೂಡಿಸದಳು

ಎಳಹರೆಯ :

ಹಾಡಿಯಲಿ ಮರಮರದ ಕೆಳಗೆ ಧೂಪದ ದಟ್ಟಕಾಯಿ ಚಿಗಿತೆಳಮೊಳಕೆ, ನರಳು ಕೇಕೆ;
ಮಳೆಮಂತ್ರದಂಡ ಮುಟ್ಟಿದ ತಿಟ್ಟುನಿಟ್ಟಿನಲಿ ನೆಲವೆಲ್ಲ ಮೊಳೆ, ಮೊಳಕೆ, ಕೊನರು,
ಸಸಿ, ಗಿಡ, ಹುಲ್ಲು;
ತೋಟಗೋರಟೆಗೆ ಮೈಯೆಲ್ಲ ಕಾಮನ ಬಿಲ್ಲ ಬಿಲ್ಬು ಮಾದಕದೀಪ, ಚಿಲ್ಲು, ಗುಲ್ಲು.
ನಂದಬಟ್ಟಲನೆತ್ತಿ ತುಟಿಗಿಟ್ಟು ನರ್ತಿಸಿತು ಅಂದುಗೆಯನಾಡಿಸುತ ಬಂದ ಭೃಂಗ;
ಹಿತ್ತಲ ಜಗಲಿಮೇಲೆ ಕುಳಿತು ಧುಮ್ಮಿಕ್ಕಿದೆನು ಕೆಳಗೆ ಮತ್ತೂ ಕೆಳಗೆ, ತಳಕೆ ಕುಂಗ[7].
ಹಸುರುತೆರೆ ಅಪ್ಪಳಿಸುತಿರೆ ಮೇಲೆ ನೊರೆ ಕಾರಿ, ಬೀಸುತಿರೆ ಬಿರುಗಾಳಿ, ಗುಡುಗು
ಮೊಳಗೆ;

ತಳದಾಣಿಮುತ್ತುಗಳ ಮತ್ತ ದೀಪ್ತಿಗೆ ಕಣ್ಣು ಕುಕ್ಕಿ ಕುರುಡಾಡಿದೆನು ಸಂಜೆವರೆಗೆ-
ಬುಂಡೆ[8]ಗಂಟಿದ್ದ ತುಟಿ ಕಿತ್ತರೂ ಕಲ್ಪನೆ ಹೆಂಡಹೊಂಡದ ಸೆಲೆಯ ಹುಡುಕುತಿತ್ತು.
ಬೇಲಿ ಮೇಗಡೆ, ಗದ್ದೆಯಂಚಲ್ಲಿ, ತೋಪುಗಳ ಅಂಗುಲಂಗುಲದಲ್ಲಿ ತೋಟದೊಳಗೆ
ಎಲ್ಲೆಲ್ಲು ಹೆರಿಗೆಮನೆ : ಬೇನೆ, ಸಂಕಟ, ನಗೆ ; ಕೊರಡು ಚಿಗುರಿದ ಚೆಲುವು, ಚೀರು,
ಕೇಕೆ

* * *

ತಾಯಿಗೂ ಮಿಗಿಲಾಗಿ ಎದೆಗವಚಿಕೊಂಡಳೋ;
ತಿರುತಿರುಗಿ ತನ್ನ ಬಸಿರಲ್ಲಿಟ್ಟು ನವೆದಳೋ;
ಹಕ್ಕಿ ಕೊರಳನು ಹಿಚುಕಿ ಲಾಲಿ ಹಾಡಿದಳು;
ಸಸಿಕೊರಳ ಕೊಯ್ದು ತಿಂಡಿಯನು ತಿನಿಸಿದಳು.
ಪ್ರೇಮ ಧೃತರಾಷ್ಟ್ರನಪ್ಪಿಗೆ ಭಗ್ನ ಬಲಭೀಮ; ಎಲ್ಲು ಕೃಷ್ಣನ ಕಾಪು ಕಾಣಲಿಲ್ಲ.
ಇವಳೆದೆಗೆ ಬೇರಿಳಿದ ಕಾಲು ನನ್ನದು; ಬರಿದೆ ನಕ್ಷತ್ರಲೋಕಕ್ಕು ರೈಲುಬಿಟ್ಟೆ
ಹೆಂಕುಳಿಯ ಹಾಗೆ ನರಸತ್ತು ಹುಡುಕಿದೆ ಮನದ ಬಚ್ಚಲಲಿ ಕೊನೆಯಿರದ
ಕೊನೆಯ ಬಟ್ಟೆ[9]
ಈಡಿಪಸ್ಸನ ಗೂಢ ಪಾಪಲೇಪಿತ ನಾನು;
ಟ್ರಾಕ್ಟರನ್ನೇರಿದೆನು; ಉತ್ತೆ, ಸಿಗಿದೆ.
ಬಿತ್ತಿದೆನು, ಬೆಳೆದ ಅಟಂಬಾಂಬು ಕಾಳುಗಳ;
ಮಾರಕಕ್ರಿಮಿಪ್ಪೈರ ಗೋರಿ ನಲಿದೆ.
ಕರೆಯುವುವು ಮತ್ತು ಮತ್ತೂ ಬಾನ ಹಕ್ಕಿಗಳು;
ಗಾಳಿದರಬಾರಿಗರವತ್ತು ಕರೆಯೋಲೆ;
ಕಿವಿಸುತ್ತ ಬಂದು ಕರ್ಣಪಿಶಾಚಿ ಪಿಸುಗುಟ್ಟಿ ಕಾಡಿದುವು ಮೇಲೆ, ಮೇಲೆ.
ಮಂತ್ರವಾದಿಯ ಕುತಂತ್ರದ ರಗಳೆ ಜೋರಾಗಿ ರೇಗಿದೆನು ನಾ ಬರಿದೆ ನನ್ನ ಮೇಲೆ;
ಢಿಕ್ಕಿ ಹೊಡೆದೆನು ಪಂಜರದ ಕಂಭ, ಮಾಡಕ್ಕೆ;
ಚೀರಿ ಬಡಿದೆನು ರೆಕ್ಕೆ, ಕುಕ್ಕಿ ಪುಕ್ಕವ, ಕಿತ್ತು ರಾಶಿ ಹಾಕಿದೆ ತಿಂಡಿತಟ್ಟೆಯೊಳಗೆ.

* * *

[1] ಗಿಲಕಿ - ಆಟಿಗೆ, [2] ಅಜಸ್ರಧಾರೆ - ಹನಿಕಡಿಯದ ನಿರಂತರ ಧಾರೆ (ಹಾಲು ಹಿಂಡುವುದು), [3] ಮೊರ - ಗೆರಸೆ, [4]ಮೌರಿ-ಒಂದು ಬಗೆಯ ವಾದ್ಯ, [5] ಊಡಿಸು - ಕುಡಿಸು, [6] ಜಾಮೂನು - ಸಿಹಿತಿಂಡಿ, [7]ಕುಂಗ - ಬೆಸ್ತ, [8] ಬುಂಡೆ - ಕಳ್ಳಿನಪಾತ್ರೆ, [9] ಬಟ್ಟೆ - ದಾರಿ.

ಭೂಮಿಗೀತೆ

(ಕಬಿತೆಡ್ದ್ ಅಜತ್ತಿನ ಒಂಜಿ ಭಾಗೊ)

ಪುಟ್ಟು :

ಮಲೆಗಟ್ಟ – ಮೊಟ್ಟೆಕಲ್ಲ್‌ದ ತಿರ್ತ ಮೊಟ್ಟುಡ್ದು
ಮಡಸ್ತನ [1]– ಮೂಜೀ ಮಡಸ್ತನ
ಕೊದಿಪಿ ಎಣ್ಣೆದ ಕೊಪ್ಪರಿಗೆ ಕಡಲ್‌ಗ್
ತಾರೆ ಮಡಲ್‌ದೊಲಿತ ಕೈ ಬೀಸ್‌ದ್ ಲೆತ್ತೊಲ್
ಬಜ್ಜೆಯಿದ ಕಿಲೆ ಜೊಂಕುಲಿ ಗಿಲಿಕಿ[2] ಪತ್ತ್‌ದ್ ಆಡಯಲ್
ಕರ್‌ಂಬುದಾಲೆದ ತಿರ್ಗಣೆಡ್ ಕುಲ್ಲುದು
ಕರ್ಲ ತುಡಿಪು[3]ನು ಬೊರಿದ್ ಮೊಗತಲ್
ಬಾರ್ ಗೋದಿ ರಾಗಿ ಜೋಳೊನು ಮೌರಿದ ಸೊರೊಟು
ಪುಡೆತ್‌ದ್ ತನ್ನ ಮೆಯಿ ಮಾಸೊದ ಪದೊನು ಪುರ್ಪಯೊಲು
ಗಂಟೆ ಗೋರಂಟೆ ಜಾಜಿ ಮಂದಾರ ಮಲ್ಲಿಗೆದ ಕಮ್ಮೆನ
ಪರ್ವತೊದ ಕೊಡಿಟ್ ಜೆಪ್ಪಯೊಲು
ಪಕ್ಕಿ ಕಂಟೆಲ್‌ಡ್ದ್ ಬರ್ಪಿ ಸೊರೊತ ದುಂಬಿದ ಜೇಂಕಾರೊದ
ಜಾಮಾನು ಚೀಪೆದ ದನಿಟ್ ಮಾನದ್ ಬಳಪೊಯೊಲು
ಬಾನೊಡು ತೋಜುನ ಮುಗಲ್‌ದ ವಿಶ್ವರೂಪೊದ ತಿರ್ತ್
ಜೂವೊದ ಬೊಳ್ಪುಲೆನ್ ಬೆಳಗಯೊಲು

ಜವ್ವಂದಿಗೆ :

ಕಾನದ ಮರಮರತ ಅಡಿಟ್ ಬುಳೆದ್ ಬೂರ್ದಿನ ದೂಪೊದ ಕಾಯಿ
ಉಡೆದ್ ಬತ್ತಿನ ಲತ್ತ್ ಮುಂಗೆ ನರಳಾಟ, ಅಟ್ಟಹಾಸೊದ ತೆಲಿಕೆ
ಬರ್ಸದ ಮಂತ್ರದ ಕೋಲು ಮುಟ್ಟಿಸಾತ್‌ಗ್ ಏರ್ ತಗ್ಗ್‌ಡ್ ಅಡ್ಕ ಜೇರೊಡು
ಮುಂಗೆ, ಬೇರ್, ತೆಗ್‌ರ್, ದಯಿ, ಪಜಿರ್, ಕುತ್ತಿಡ್ಲಾ ತೆಗ್‌ರ್
ತೋಟ ಗೋರಂಟೆಗ್ ಮೆಯಿ ಇಡಿಕ ಅಜ್ಜ ಬಿರುತ ಬಿರ್ಸ್

ಚಿಲ್ಲ್[5] ಗುಲ್ಲ್[6] ಅಮಲ್ದ ದೀಪದ ಬೊಲ್ದು
ನಂದಿಬಟ್ಟಲ್ ದೆರ್ತ್‌ದ್ ಬಿಮ್ಮೊಗುದೀದ್ ನಲಿತ್ಂಡ್
ಕಾರ್‌ಡುರಿ ಗೆಜ್ಜೆ ನಾಡವೊಂದು ಬತ್ತಿನ ದುಂಬಿ
ಬಿತ್ತ್‌ಲ್ದ ಜಗಲಿದ ಮಿತ್ತ್ ಕುಲ್ಲುದು ದೆತ್ತ್‌ಲಾಗಿಯೆ ತಿರ್ತ್
ಬೊಕ್ಕಲಾ ತಿರ್ತ್ ಅಡಿ ಪಾತಾಳೊಗು ಮೀನ್‌ಗಾರೆ
ಪಾತಾಳೊಡು ಪಚ್ಚೆ ತೆರೆಹಾಕ್‌ನಗ
ಮಿತ್ತ್ ಬೀಜೊಂದಿತ್ತ್ಂಡ್ ನುರೆ ಕಕ್ಕೊಂದು ಬಿರ್ಗಾಳಿ
ತೆಡಿಲ್-ಗುಡುಗು
ತಿರ್ತ್ ತೋಜುನ ಆಣಿ ಮುತ್ತುಲೆನ ಮತ್ತ್‌ದ ಬೊಳ್ಪುಗು
ಕಣ್ಣೇ ಮಯಮಯ ಆಂಡ್ ಬಯ್ಯ ಮುಟ್ಟ
ಕುಜಿಲಿಗಂಟ್‌ದಿ ಬಿಮ್ಮೊನ್ಯೊತ್ ದೆತ್ತ್ಂಡಲಾ
ಅಬುಲಾಸೆ/ ಕುಜಿಲ್ ದಡಿಟೊರಿದಿ ಕಳಿನ್ ನಾಡೊಂದಿತ್ತ್ಂಡ್
ಬೇಲಿದ ಮಿತ್ತ್ ಕಂಡದ ಪುಣಿಟ್ ಕಾನ್[7]-ಬಾನಡ್ ತೋಟೊದುಲಯಿ
ಮಾತ ಕೋಡಿಡ್ಲಾ ಅಂಗಿಲೊ ಅಂಗಿಲೊ ಪೆದ್ಮೆದಿಲ್ಲ್, ಬೇನೆ, ಸಂಕಟೊ, ತೆಲಿಕೆ
ಕುತ್ತಿತೆಗ್‌ರ್‌ನ ಪೊರ್ಲು, ಕೀರಿಕುತ್ತುನ ಅಟ್ಟಹಾಸೊ ಬುಡಂದೆ ಕೇನುಂಡು

★ ★ ★

ಅಪ್ಪೆಡ್ದ್‌ಲಾ ಮಿತ್ತ್‌ದ ಮೋಕೆ ಸೂಕೆಡ್ ತಿಗಲೆಡ್
ಪಾಡೊಂದು ಮಾನಯಲ್
ಕುಡ ಕುಡ ತನ್ನ ಬಂಜಿಡೇ ದೀವೊಂದು ಬಂಜೊತ್ತಲ್
ಪಕ್ಕಿದ ಕಂಟೆಲ್ ಪುಜೆಂಕ್‌ದ್ ಲಾಲಿ ಪನ್ಪಯಲ್
ದಯಿ ಮರತ ಕೆಕ್ಕಿ ಮುತ್ತುದು ತಿನಸ್ ತಿನ್ಪಯಲ್
ದೃತರಾಷ್ಟ್ರೆ ಮೋಕೆಡ್ ಭೀಮನ್ ತರ್ಕೊನ್ನಗ
ಭೀಮೆ ಪೊಡಿ ಪೊಡಿ
ಕೃಷ್ಣೆ ಓಲ್ಲಾ ತೋಜಿಜೆ
ಮೋಳೆನ ಉಡಲ್‌ದುಲಯಿಡೆನ್ನ ತಾಯ್ಬೆರ್ ಕಾರ್
ದಾರಗೆ ದಟ್ಟೊಗು ಬುಡ್ತೆ ಬಜೆ ರೈಲ್
ನರ ಬಚ್ಚವೊಂದು ಆಣ್ಮೆ ಕಳೆವೊನ್ನ ಯಾನ್
ಉಡಲ್ದ ಬೆಂದ್ರ್ ಕೊಟ್ಯಡ್ ನಾಡೊಂದುಲ್ಲೆ ಮುಗಿತಲದಾಂತಿ ಕಡೆತಸಾದಿ
ಈಡಿಪಸ್‌ನ ನಿಗೂಢ ಪಾಪ
ಎಂಕ್‌ಲಾ ಅಂಟೊಂದುಂಡು

ಟ್ರಾಕ್ಟರ್ ಏರ್ದ್ ದತ್ತೆ ನಿಲನ್ ಗರ್ತೆ ತಿಗ್ತೆ
ಬಿತ್ತ್‌ದ್ ಬುಳೆಯಿನ ಪೂರ ಆಟಂಬಾಂಬು ಕಾಯಿಲು
ಮಾರಕ ಕ್ರಿಮಿ ಕೆಯಿತ ಗೋರಿ ಕಟ್ಟ್‌ದ್ ನಲಿತೆ
ಕುಡ ಕುಡ ಲೆತ್ತೊಂದುಲ್ಲ ಬಾನ ಪಕ್ಕಿಲು
ಗಾಳಿದೋಲೆಗೊಗು ಅಜಿಪ ಲೆಪ್ಪೋಲೆ
ಕೆಬಿ ಸುತ್ತ ಬತ್ತ್‌ದ್ ಕರ್ಮ ಪಿಶಾಚಿ ಗುನುಗುಟ್ಟುಂಡು ಸಾಲ್ ಸಾಲ್
ಮಂತ್ರವಾದಿನ ಕುತಂತ್ರೊದ ರಗಳೆ ಜೋರಾಂಡ್
ಎನನೇ ಯಾನ್ ನೆರೊಂಡೆ ಪೊಕ್ಕಡೆ
ರಭಸೊಡು ಪೋದು ಕುಟ್ಯೆ ಕಂಬ, ಮಾಡ್‌ಡಕ್ಕ್‌ಡ್ದಿನ ಗಿಳಿತ ಗೂಡು
ಕೀರಿಕುತ್ತುದು ದಡಿಬೊಟ್ಯೆ, ಸುಯಿತಾಲ್ತ್‌ದ್ ತಿಂಡಿ ತಟ್ಟೆಡ್ ರಾಸಿ ಪಾಡ್ಯೆ

ಮೂಲ : ಎಂ. ಗೋಪಾಲಕೃಷ್ಣ ಅಡಿಗ
(ತರ್ಜುಮೆ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್)

[1] ಮಡಸ್ತನ - ಉರುಳು, [2] ಗಿಲುಕಿ - ಗಿಲಕಿ, ಜೋಕುಲೆ ಗೊಬ್ಬುದ ಸಾಮಾನ್, [3] ತುಡಿಪು - ತುಡಿತ, [4] ಮೌರಿ - ವಾದ್ಯ ಪರಿಕರ, [5] ಚಿಲ್ಲು - ಸಣ್ಣ ಚೀತ್ಕಾರ, [6] ಗುಲ್ಲು - ಗುಜು ಗುಜು ಗಲಭೆ, [7] ಕಾನ-ಬಾನ - ಹಾಡಿ, ವನ ಪ್ರದೇಶ.

ನನ್ನ ಮನೆ

ಉಗ್ರಾಣ ಮಂಗೇಶರಾವ್

ತನ್ನ ಮನೆ ತನ್ನ ಊರಿದು ತನ್ನ ದೇಶವಿದು
ಎನುತಭಿಮಾನದಿ ಕಾಂಬವನೆಯೋಗ್ಯಂ ॥ಅ.ಪ.॥

ಧರೆಯೊಳಗೆ ಸೊಗಸಾದ ಮಾಳಿಗೆ ಮನೆಗಳಿರಲಿ
ತೊರೆ ಕೆರೆಗಳಿಂದೆಸೆವ ಪಟ್ಟಣಗಳಿರಲಿ
ಸಿರಿ ಸಂಪದಗಳಿಂದೆ ಮೆರೆವ ದೇಶಗಳಿರಲಿ
ಕೊರತೆ ಏನ್ ತನ್ನದೇ ಪ್ರಾಮುಖ್ಯವೆಂದು ॥೧॥

ಮನೆಯೊಳಗೆ ಕಲಹಗಳಿಗೆಡೆಗೊಡದೆ ತನ್ನ
ಊರಿನ ಬಲದೊಳಕ್ಕಟ್ಟನಿಂದ ತಾನಿದ್ದು
ಅನುದಿನವು ತನ್ನ ದೇಶದ ಬಲ್ಮೆಗಾಗಿ ತನು
ಮನಧನಗಳನರ್ಪಿಸುತ ಭಕ್ತಿಯಿಂದ ॥೨॥

ಪರರ ರೀತಿಗೆ ಹರಿವ ಮನವನುರೆ ಬಿಗಿಹಿಡಿದು
ತರವಲ್ಲವದು ತನಗೆ ತಂದೆ ಬೋಧಿಸಿದ
ವರಸನಾತನ ಧರ್ಮವೆ ಮಾನ್ಯವೆಂದದನು
ಧರಿಸಿ ಶಿರದಲಿ ಮರೆಯದೆ ಪೂರ್ವಿಕರನು ॥೩॥

ತನ್ನ ಇಲ್ಲ್

ತನ್ನ ಇಲ್ಲುಂದು ತನ್ನ ಊರುಂದು ತನ್ನವೇ ದೇಶೊ
ಮಣ್ಣ್‌ದಭಿಮಾನ ಇತ್ತಿ ಮಾನ್ಯನೇ ಯೋಗ್ಯೆ ॥ಅ.ಪ.॥

ಪೊರ್ಲು ಪೊರ್ಲುದ ಮಲ್ಲ ಉಪ್ಪರಿಗೆದಿಲ್ಲುಪ್ಪಡ್
ಅರ್ಲ್‌ದುಂತಿನ ಪಟ್ಟೊ ಕೆದು ಸುದೆಕುಲುಪ್ಪಡ್
ಸಿರಿಸಂಪೊತ್ತು ಮೆರೆಪಿ ದೇಶೊಲೇ ಉಪ್ಪಡ್
ಕೊರತೆ ನಂಕಿಜ್ಜಿ ನಮ್ಮೂರೆ ನಂಕ್ ಮಲ್ಲೆ॥೧॥

ಓರು ಒರುಂಟನ ಬೊಡ್ಚಿ ಪೆಟ್ಟ್ ಲಡಯಿಲ ಬೊಡ್ಚಿ
ಊರು ಡೊಗ್ಗಟ್ಟ್ ಬೋಡು ಇಲ್ಲಲುಪ್ಪಡ್ ದಿಂಜಿ ಮೋಕೆ
ಭಾರತಾಂಬೆನ ಗೆಲ್ಮೆ ತುಳುವಪ್ಪೆನಾ ಒಲ್ಮೆ
ದಾರೆ ಮಯ್ಯುಗ ನಮ್ಮ ಉಡಲ ಬಕುತಿದ ಚಿಲ್ಮೆ॥೨॥

ಪರದೇಶೊ ಪರಧರ್ಮ ದೂರೊಡುಪ್ಪಡ್ ನಂಕ್
ಪರೆಂಗಿ ಜನ ಸಾಂಗತ್ಯೊ ಬೊಡ್ಚಿ ಬೊಡ್ಚಿ
ಪರ ಪುರಪು ದಾಸ್ಯೊದಾ ಬದ್ಕ್‌ಗಿಂಬುನೆ ಕೊರಂದೆ
ವರ ಸನಾತನ ಧರ್ಮ ಒರಿಪಯರೆ ಬೆನ್ಕೊ ॥೩॥

ಮೂಲ : ಉಗ್ರಾಣ ಮಂಗೇಶರಾವ್
(ತರ್ಜುಮೆ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್)

ಪೂಮಾಲೆ

ಶ್ರೀಮತಿ ಪ್ರಮೋದಾ ಕೆ. ಸುವರ್ಣ

ಓ ಯೆನ್ನ ತುಳುವಪ್ಪೆ ತುಳುನಾಡ್‌ದಬ್ಬೆ
ನಿನ್ನೊಂಜಿ ಬಾಲೆಗಿನಿ ಮದಿಪು ಕೊರೊಡಪ್ಪೆ

ಮುಡಯಿದಾ ಬೊಲ್ಪುಡೂ ನಿನ್ನ ಮೋನೆನ್ ತುಯ್ಯೆ
ಪಡ್ಡಯಿದ ಕೆಂಪುಡೂ ನಿನ್ನ ತೆಲಿಕೆನ್ ತುಯ್ಯೆ
ತುದೆ ಕಡಲ್‌ದ ಮುರತದ ಪುಣ್ಯ ತೀರ್ಥೊನು ಪರಿಯೆ
ನಿನ್ನ ಮಣ್ಣ್‌ಡ್ ನಿತ್ಯ ಪಚ್ಚೆಕುರಲ್‌ನ್ ಬುಳೆಯೆ ॥೧॥

ಆರಲುನಾ ಪುಪ್ಪೊಲೆದ ಪರಿಮಲೊನು ಈ ಕೊರಿಯ
ಧನ ಧಾನ್ಯದ ತುಪ್ಪೆ ದಿಂಜಾದ್ ಕೊರಿಯ
ಮಲೆ ನೀರ್‌ದಾ ಒಸರ್ ಜಪುಡಾದ್ ಕೊರಿಯ
ನಿನ್ನ ನಿರೆಲ್‌ಡ್ ಯೆಂಕ್ ಬದ್ಕ್ ಕಲ್ಪಾಯ ॥೨॥

ಆನ್ನ್ ಕ್ಯಾದ ಬಟ್ಟಿ ಯಾನ್ ಕನದಿಜಿ ತೂಲ
ಪುಂಡಿ ಪನವುದ ಡಬ್ಬಿ ಯೆನಡಿಜ್ಜಿ ದಾಲ
ಕಮ್ಮೆನದ ಕರ್ಪೂರ ಗಂಧ ಚಂದನ ದಾಂತೆ
ಸೊಚ್ಚ ಬಗ್‌ತಿದ ಒಂಟಿ ಪೂ ಮಾಲೆ ಕನದೆ ॥೩॥

ನಿನ್ನಂಗನೊಡು ಬುಲೆತಿ ಪುರ್ಪ ನಾಲೆನ್ ಕ್ಯೊದ್
ಬೊಲ್ದು ಮಲ್ಲಿಗೆ ಕೆಂಪು ಸಂಪಾಯಿ ನೈಯ್ದ್
ತುಳಸಿ ಕದಿಕೆನ್ ಬಿರದ್ ಪಚ್ಚೆಕುರಲ್‌ನ್ ತುರಿದ್
ಪಿಂಗರದ ಪಾಲೆ ನಿನ ಪದ ತಲೊಟು ದೀತೆ ॥೪॥

ನಿನ್ನ ಋಣಭಾರೊನು ಸಂದಾಯೆರಾವಂದೆ
ನಿನ ಕಾರ ಮುದೆಲ್‌ಡ್‌ಃ ತರೆ ಕಂತ ದೀತೆ
ಬುದ್ಧಿ ಬಲ ಕೊರು ಅಪ್ಪೆ ನಿನ್ನ ಕೀರ್ತಿ ಸುಗಿಪೆ
ತುಳುವ ಬಾಸೆಡ್ ಕಿನ್ಯ ಕಬಿತೆ ಮಾಲೆನ್ ಮೊಡೆಪೆ ॥೫॥

ಹೂಮಾಲೆ

ಓ ಎನ್ನ ತುಳುವಮ್ಮ ತುಳುನಾಡಿನಮ್ಮ
ನಿನ್ನ ಮಗುವನು ಹರಸಿ ಪೊರೆಯಮ್ಮ ॥

ಮೂಡಣದ ಬೆಳಕಿನಲಿ ನಿನ್ನ ಮೊಗವನು ಕಂಡೆ
ಪಡುವಣದ ಕೆಂಪಲ್ಲಿ ನಿನ್ನ ನಗುವನು ಕಂಡೆ ।
ನದಿ ಸಮುದ್ರದಲಿ ಪುಣ್ಯತೀರ್ಥವ ಕುಡಿದೆ
ನಿನ್ನ ನೆಲದಲಿ ನಿತ್ಯ ಹಸುರು ತೆನೆಯನು ಬೆಳೆದೆ ॥

ಹೂಗಳರಳಿದ ಪರಿಮಳವ ನೀಕೊಟ್ಟೆ ನನಗೆ
ಧನಧಾನ್ಯದ ಕೊಳಗ ಮೊಗೆಮೊಗೆದು ಎರೆದೆ
ಘಟ್ಟದಿಂದಿಳಿದಬ್ಬಿಯ ಸಿಹಿ ನೀರು ಕೊಟ್ಟೆ
ನಿನ್ನ ನೆರಳಲೆ ಬದುಕಲೆನ್ನನು ಬಿಟ್ಟೆ॥

ಹಣ್ಣು ಕಾಯಿಯ ತಟ್ಟೆ ನಾನು ತಂದಿಲ್ಲ
ಚಿನ್ನ ಕಾಸಿನ ಡಬ್ಬಿ ನನ್ನಲಿಲ್ಲ
ಪರಿಮಳದ ಕರ್ಪೂರ ಗಂಧ ಚಂದನವಿಲ್ಲ
ಮುಗ್ಧ ಭಕ್ತಿಯ ಒಂದು ಹೂಮಾಲೆ ತಂದೆ ॥

ನಿನ್ನ ಅಂಗಣದಿ ಬೆಳೆದ ನಾಲ್ಕು ಹೂವನು ಕ್ಯೊದು
ಬಿಳಿ ಮಲ್ಲಿಗೆ ಕೆಂಪು ಸಂಪಿಗೆ ನೇದು
ತುಳಸಿ ಕರಿಕೆಯ ಹರಡಿ ಹಸಿರು ತೆನೆಗಳ ಬಿಡಿಸಿ
ಸಿಂಗಾರ ಹಾಳೆ ನಿನ್ನ ಪದತಲದಲಿಟ್ಟೆ॥

ನಿನ್ನ ಋಣಭಾರವನು ಸಲಿಸಲಾರದೆ, ತಾಯೆ
ನಿನ್ನ ಕಾಲಬುಡದಲೇ ಶಿರವನಿಡುವೆ
ಬುದ್ಧಿ ಬಲ ಕೊಡು ತಾಯೆ ನಿನ್ನ ಕೀರ್ತಿಯ ನುತಿಸಿ
ತುಳುವಿನಲಿ ಕವಿತೆ ಮಾಲೆಯ ನೇಯುವೆ

ಮೂಲ : ಶ್ರೀಮತಿ ಪ್ರಮೋದಾ ಕೆ. ಸುವರ್ಣ
(ಅನುವಾದ : ಸಂಪಾದಕ)

ಕುಲ್ಕುಂದ ಜಾನುವಾರು ಜಾತ್ರೆ

(ಮಂಜಟ್ಟಿ ಕೋಣ ಖಂಡಕಾವ್ಯದಿಂದ ಆಯ್ದ ಭಾಗ)

ನರ್ಕಳ ಮಾರಪ್ಪ ಶೆಟ್ಟಿ

ಹೃದಯ ಕಮಲದ ಹಾಗೆ ಎದೆ ಗಾ ।
ಯೆದಿ[1]ಗೆ ಜೇನಿನ ಮುರೆಲಿ[2] ವೋಲ್ ॥
ಚದರ ಚೌಕಕೆ ತೌಳವದ ಮ ।
ಧ್ಯದಲಿ ಕೊಳನಾಡೊಪ್ಪಿತು ॥

★ಕೊಳನಾಡಿನ ಮಂಜನಾಳ್ವರು ।
ತುಳುನಾಡಿನ ಕಂಬಳ ಪ್ರಿಯರು ॥
ಕಳಕಿಳಿಸಲು ಕಾಳ್[3] ಜೊತೆಗೆ ।
ಬೊಳ್ಳ[4] ನಾಟ[5]ಕೆ ಹೊರಟರು ॥

ಕಲ್ಲ ಬಸವಗೆ ಕೈಯ ಮುಗಿದರು ।
[6]ಕಲ್ಲೆಗ್ಗಕೆ ಕಾಲಿಟ್ಟರು ॥
ಸುಳ್ಯ ಮಾರ್ಗವ ಬಿಟ್ಟರು ಬಿದಿ[7]
ರ್ಹ್ಳ ದಾಟಿದರಾಳ್ವರು ॥

ಕಾಣಿಯೂರಿ[8]ನ ಮಠವ ಕಳೆದರು ।
ಕಾಣಿಕೆಯ ಕೈ ವರ್ತಿಸಿ ॥
ಕಾಣಿಸಲು ಕೈಕಂಬ[9]ನೆತ್ತಿ[10]ಕ ।
ಲ್ಲೆ[11]ಣ್ಮೂರಲ್ಲಿಳಿದರು ॥

ಸ್ನಾನಕೆ ಭೋಗಿಯನ ಕೆರೆ
ಮೌನಕೆ ಹೊಳೆಯೇಣೆಕಲ್ ॥
ಆನೆಬಾಗಿಲೊಳಾಗಿ ದೇವ ।
ಸ್ಥಾನಕೆ, ಮಧ್ಯಾಹ್ನಕೆ ॥

*ಸುಬ್ಬರಾಯನ ಕಂಡು ಕೈಮುಗಿ ।
ದಬ್ಬರದ ಫಲಹಾರ ಮುಗಿಸಿ ॥
ಒಬ್ಬ ಆಳಿನ ಜೊತೆಗೆ ರಾಸು ।
ಹಬ್ಬ ಮಜಲಿಗೆ ಬಂದರು ॥

ಕಂದಿ[12], ಕರು, ಕಡಸೆತ್ತು[13] ಹೋರಿಗ ।
ಳಿಂದ ಗೋಕುಲ ವಿವಿಧದಿ ॥
ನಂದ ಗೋಕುಲವೆಂದೆ ಆ ಕುಲ[14] ।
ಕುಂದ ಜನಮನಕಾಯಿತು ॥

ಕಾಯಿ[15] ಕಡೆಯುವ ಕಣ್ಣು ಮಲೆಯುವ ।
ಹಾಯಲಾರದೆ ನಿಂತ ಪಶುಗಳ ॥
ಬಾಯಿ ಬಿಡಿಸುವ ಬಗ್ಗಿ ನೋಳ್ಪ ವಿ[16] ।
ಡಾಯಿಯಿಂ ಲಡಾಯಿ ಯಿಂ ॥

ಬಂದು ಹತ್ತಿರ ನೋಡಿ ಎತ್ತರ ।
ಒಂದು ಕೈಯಲಿ ಸೊಂಟದ ॥
ನಿಂದು ಗೇಣನು ಹಾಕುವಾಜನ ।
ರಿಂದಲೀ ಮಜಲೊಪ್ಪಿತು ॥

ಬಿಳಿಯ ಮಚ್ಚೆಯ ಬಾಲದಲಿ ಬಲ ।
ಸುಳಿಯು ಸುತ್ತಿದ ಭುಜದಲಿ ॥
ಹೊಳೆವದಲೆ ಎಳನೀರು ಗಂಗಳ ।
ಚೆಲುವ ಚೆಂದುಟಿಯಿಂದಲಿ ॥

ಮರಿ ತಿಮಿಂಗಿಲದಂತೆ ಮಿಂಗಳ ।
ನೆರವಿನಲಿ ಮಹಿಷಂಗಳ ॥
ಮರಿ ವಿರಾಜಿಸಿ ತಿರುಳ ತಿಂಗಳ[17] ।
ತೆರದಿ ತಾರಕಿ ನಡುವಿನ ॥

ಹಿಡಿದು ಮೆಲ್ಲನೆ ತುಟಿಯ ಹಲ್ಲನೆ ।
ಬಿಡಿಸಿ ನೋಡಿದರಾಳ್ವರು ॥
ಕೊಡುವ ಕೈಯದು ಕೊಂಬ ಕೈಯಿದು ।
ನಡೆಯಲೀ ನೆಂಟಸ್ತಿಕೆ ॥

[★ಘಟನೆ ಜೋಡಣೆಗಾಗಿ ಸಂಪಾದಕರು ರಚಿಸಿಕೊಂಡ ಪದ್ಯಗಳು]

[1] ಯೆದಿ - ಜೇನಿನ ಹುಟ್ಟು [2] ಮುರೆಲಿ- ಹುಟ್ಟಿನಲ್ಲಿ ಜೇನು ತುಂಬಿದ ಭಾಗ, [3] ಕಾಳ - ಕಪ್ಪಿನ ಕೋಣ, [4] ಬೊಳ್ಳ - ಬಿಳಿಬಣ್ಣದ ಕೋಣ, [5] ನಾಟ - ಹುಡುಕಾಟ, [6] ಕಲ್ಲೆಗ - ಊರಿನ ಹೆಸರು, [7] ಬಿದಿರ್ಜಳ್ಳ - ಬೆದ್ರಾಳ, ಊರು, [8] ಕಾಣಿಯೂರು - ಊರು, [9] ಕೈಕಂಬ - ಊರು, [10] ನೆತ್ತಿಕಲ್ಲ್ - ನಿಂತಿಕಲ್ಲು, ಊರು, [11] ಎಣ್ಮೂರು - ಊರು, [12] ಕಂದಿ - ಸಣ್ಣ ಕರು, ಬಾಲೆ ಕಂಜಿ, [13] ಕಡಸು+ಎತ್ತು - ಕಡಸೆತ್ತು, ಕಡಸು - ಬೆಳೆದುನಿಂತ ಕರು, [14] ಕುಲುಕುಂದ - ಸುಬ್ರಹ್ಮಣ್ಯ ಸಮೀಪದಲ್ಲಿ ವರ್ಷಂಪ್ರತಿ ಜಾನುವಾರು ಜಾತ್ರೆ ನಡೆಯುವ ಸ್ಥಳ, [15] ಕಾಯಿಕಡ - ಮೆಲುಕಾಡು, [16] ವಿಡಾಯಿ - ಶಕ್ತಿ, ಹೆಚ್ಚಳ, [17] ತಿಂಗಳು - ಚಂದ್ರ.

ಕುಲ್ಕುಂದ ಎರ್ಲೆ ಜಾತ್ರೆ

ಉಡಲ ತಾಮರೆದಂಚ ತಿಗಲೆದ
ಯೆದಿನೆ ತೊಡ್ವೆದ ಮುರೆಲ್ದ ಲೆಕ್ಕನೆ
ಚದರ ಚೌಕೊಡು ಉಪ್ಪಿ ತುಳು
ನಾಡ್ದುಲಯಿ ಕೊಳನಾಡ್ ॥

ಕೊಳನನಾಡ್‌ದ ಮಂಜನಾಳ್ವೆರ್
ತುಳುವನಾಡ್ದ ಕಂಬ್ಲೊದಿಷ್ಟೆರ್
ಕಳಕ್ ಕಟ್ಯರೆ ಕಾಳನೊಟ್ಟುಗು
ಬೊಳ್ಳ ನಾಟೊಗು ಪಿದಡ್ಯೆರ್

ಕಲ್ಲ ಬಸವಗ್ ಕೈನೆ ಮುಗಿಯೆರ್
ಕಲ್ಲ್‌ಗೊಗು ಕಾರ್‌ದೀಯೆರ್
ಸುಳ್ಯ ಮಾರ್ಗೊನು ಬುಡುದು ಬೆದ್ರ
ಪಳ್ಳ ದಾಂಟ್‌ದ್ ಪೋಯೆರ್

ಕಾಣೆಯೂರುದ ಮಟೊನು ತೂಯೆರ್
ಕಾಣಿಕೆನ್ ಮಲ್ತೊಂಡೆರ್
ಗೋಣೆ ಕನಯರೆ ಪಿದಡಿ ಆಳ್ವೆರ್
ಏಣೆಕಲ್ಲ್‌ದ ಸಾದಿಪತ್ಯೆರ್ ॥

ನಿಂತಿಕಲ್ಲ್‌ಣ್ಣೂರು ಕಡತೆರ್
ಉಂತ್ಯೆರ್ ಬೋಗಾಯನ ಕೆರೆಬರಿ
ಒಂತೆ ದೂರೊಡು ಕೈಕಂಬ ತೂಯೆರ್
ಸಂತೆ ದಾಂಟ್‌ದ್ ಕುಕ್ಕೆತಳೊ ಪೊಗ್ಯೆರ್ ॥

ಕುಕ್ಕೆದಾಯನ್ ತೂದು ಕೈ ಮುಗಿ
ದೊಕ್ಕೆಲಾಯನ್ ಜತೆಟ್ ಲೆತ್ತೊನು
ಬೊಕ್ಕ ಉನಸ್‌ನೆ ಮಲ್ತ್‌ದಾರ್‌ಲ
ಪಕ್ಕ ಬತ್ತೆರ್ ಮಜಲ್‌ಗ್ ॥

ಕಂಜಿ ಎರು ಬೋರಿ ಪಾರೊಲು
ಬಂಜಿ ದಿಂಜವೊಂದುಲ್ಲ ಗೋಣೆರ್
ನಂದಗೋಕುಲ ನಾಕು ಗಡಸುಲು
ಕುಂದು ಪೆತ್ತಲೆಗಿಜ್ಜಿ ಕುಲಕುಂದೊಡು ॥

ಕಾಯಿಕಡೆಪುನ ಕಣ್ಣ್ ಮಲೆಪುನ
ಮೇಯೊಂದುಪ್ಪುನ ಸಾರ ಕಾಲ್ನಡೆ
ಬಾಯಿ ಬುಡ್ಪದ್ ಪರುನು ಗೇಣಿಪು । ಲ
ಡಾಯಿ ಮಲ್ತೊಂದು ಬೇರೊಡುಲ್ಲೆರ್ ॥

ಮುಟ್ಟ ಬತ್ತ್‌ದ್ ತೂದು ಎತ್ತರ
ಕಟ್ಟ್ ಪಾಡ್ದಿನ ಬೋರ್ಲೆನ ಜತ್‌ದ್
ಮಟ್ಟ ಗೇಣ್‌ಡ್ ಲತ್ತೆ ಮಲ್ತ್‌ದ್
ಬೊಟ್ಟು ತೂವೊಂದಿತ್ತೆರ್ ॥

ಉದ್ದೊ ಬೀಲೊದ ಬೊಲ್ದು ಮಜತಾ
ಸುದ್ದೊ ಸುಳಿತೆತ್ತರೊದ ಭುಜೊತ
ಕುದ್ಯೊ ಕೊಂಬುದ ಮೆಣ್ಕು ಕಣ್ಣ್‌ದ
ಬುದ್ದಿದರ್ಲೆನ್ ನಾಡ್ಪೆರ್ ॥

ಗೋಣೆರೆನ ನಡುಟತ್ತಿ ಬೊಳ್ಳೆನೆ
ಬಾನೊದಾರಗೆ ನಡುವೆ ತಿಂಗೊಳು
ಮೀನುಲೆನ ನಡುಟತ್ತಿ ಕಿನ್ನಿ ತಿಮಿಂಗಿಲ
ದಾನಿನೋ ಪನ್ಪಿಂಚ ಆ ಕಳಟ್ ॥

ಬಿಮ್ಮೊ ಬುಡ್ಪದ್ ಕೂಲಿಗೆನಿತ್‌ದ್ ।
ಬಣ್ಣ ತೂಯೆರ್ ಮಂಜನಾಳ್ಪೆರ್ ॥
ಬಿನ್ನಯೊಡು ಎರುಕೊರ್ಲೆ ಪಂಡೆರ್
ಸನ್ನಯೊನೆ ನಡತ್‌ಂಡ್ ಸಮ್ಮಂದೊದ ॥

ಮೂಲ : ನರ್ಕಳ ಮಾರಪ್ಪ ಶೆಟ್ಟಿ
(ತರ್ಜುಮೆ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್)

ತುಳುನಾಡ ಪದ

ಕೆಮ್ತೂರು ದೊಡ್ಡಣ್ಣ ಶೆಟ್ಟಿ

ಮೂಡ್ದು ಬರಡೆಂಕುಳೆನ । ಪೊರ್ಲು ತುಳುವೆರ ನಾಡ್ ।
ಕೂಡ್ದ್ ಜನ ಪ್ರೀತಿಡ್‌ಲ । ನಾಡ್ ಬೆಳಗ್‌ದ್ ಬರಡ್ ॥
ಪುಣ್ಯ ತುದೆಕುಳೆ ಪರಪು । ಪುಣ್ಯ ಭೂಮಿದ ತೆರಪು[1] ।
ದಿನ್ನೊಡೆಂಕುಳೆ ನಾಡ್ । ಬಣ್ಣೊಡುಲ ಬಾಳ್ಬರಡ್ ।
ಕಡಲ್‌ನೇ ಕಡತಿ ಕಲಿ । ಹನುಮ ಪುಟುದಿನ ನಾಡ್
ಕುಡರಿ ಪತ್‌ದ್‌ಲ ಮಿರೆಯಿ ಪರಶುರಾಮನ ನಾಡ್ ॥೧॥
ಸಾಹಿತ್ಯ ಶಿಲ್ಪಿಕಲೆ । ತೋಜಿ ಬರ್ಪಿನ ನಾಡ್ ।
ಸೀತೆ ದ್ರೌಪದಿ ಅನ । ಸೂಯೆ ಪುಟುದಿನ ನಾಡ್ ॥
ಒಡಿಪುದಂಚಿನ ನಂದ । ಗೋಕುಳಿತ್ತಿನ ನಾಡ್ ।
ನಡಪುಡುದು ಕೊರ್ಪಿಂಚಿ । ಕೃಷ್ಣ ದೇವರೆ ನಾಡ್ ॥೨॥

★★★

ಸೊತಂತ್ರದೇವಿಯೇ ಬಲ್ಲೆಮ್ಮಾ

ಸೊತಂತ್ರದೇವಿ ಬಲ್ಲೆಮ್ಮಾ... ಎಂಕುಳೆನಮ್ಮ ।
ಸೊತಂತ್ರದೇವಿ ಬಲ್ಲೆಮ್ಮಾ ॥ ಪ ॥

ಪಚ್ಚೆ ಕೃಷ್ಠಿತ್ತ ಸೀರೆನ್ ತುತುದೂ । ನಿತ್ಯ ಪೂ । ಫಲಕಾಣಿಕೆ ಗೆತೊಂದು
ಆರ್ತಿಡ್ ಮಲ್ತೆತ್ತ ಗಾಳಿನ್ ಬೀಜದ್ ।
ಸತ್ಯಸಂಧೆರೆನ್ ಪೊರ್ಲುಡು ಕುಡೊಂದು ॥ ಸೊ ॥
ಜಾತಿ ಬೇದದ ಗದ್ದಲ ದೆಂಗದ್ । ನೀತಿ ಶಾಂತಿದ ಗಾಳಿನ್ ಪರಡೊಂದು
ಶಿಲ್ಪಿಲು ಕೆತ್ತ್‌ದಿ ಕೆತ್ತನೆ ತೂವೊಂದು ।
ಕೀರ್ತಿದ ಕವಿಕುಳೆ ಕವಿತೆನ್ ಓದೊಂದು ॥ ಸೊ ॥
ಭಾರತ ಭೂಮಿಣ್ಪ ರಥೊಟೀ ಕುಳ್ದು । ದಿನ್ನದ ಭಾರತ ಪತಾಕೆನೇ ರಾಪದ್
ಶಾಂತಿಮೂರ್ತಿ ಬಾಪೂಜಿನ್ ಕೂಡೊಂದು ।
ಸಂತೋಸುಡು ತುಳುನಾಡ್‌ಗ್ ಬಲ್ಲಮ್ಮಾ ॥ ಸೊ ॥

[1] ತೆರಪು – ತೂಪರಿಕೆ

ತುಳುನಾಡ ಪದ

ಮೂಡಿ ಬರಲೆಮ್ಮಯ । ಚೆಲುವ ತುಳುವರ ನಾಡು ।
ಕೂಡಿ ಜನ ಪ್ರೀತಿಯಲಿ । ನಾಡು ಬೆಳಗುತ ಬರಲಿ ॥
ಪುಣ್ಯ ನದಿಗಳ ಹರಿವು । ಪುಣ್ಯಕ್ಷೇತ್ರದ ಮೆರೆವು ।
ಮಾನ್ಯತೆಯ ನೆಲೆ ವೀಡು । ಮನ್ನಣೆಯ ಬಾಳಿಗಿದು ಗೂಡು ॥
ಕಡಲ ದಾಂಟಿದ ಕಲಿಯು । ಹನುಮ ಮದಿಸಿದ ನಾಡು ।
ಕೊಡಲಿ ಹಿಡಿಯುತ ಮೆರೆದ । ಪರಶುರಾಮನ ನಾಡು ॥೧॥
ಸಾಹಿತ್ಯ ಶಿಲ್ಪ ಕಲೆ । ಮೆರೆದು ತೋರುವ ನಾಡು ।
ಸೀತೆ ದ್ರೌಪದಿ ಅನ । ಸೂಯ ಹುಟ್ಟಿದ ನಾಡು ॥
ಉಡುಪಿಯಂತಹ ನಂದ । ಗೋಕುಲದ ಈ ನಾಡು ।
ನಡೆಸಿ ಕೊಡುವಂತಿರುವ । ಕೃಷ್ಣದೇವರ ನಾಡು ॥೨॥

★★★

ಸ್ವಾತಂತ್ರ್ಯದೇವಿಯೇ ಬಾರಮ್ಮಾ

ಸ್ವಾತಂತ್ರ್ಯದೇವಿಯೇ ಬಾರಮ್ಮ । ನಮ್ಮಮ್ಮ
ಸ್ವಾತಂತ್ರ್ಯದೇವಿಯೇ ಬಾರಮ್ಮ

ಪಚ್ಚೆಯ ಕೃಷಿಯ ಸೀರೆಯುಟ್ಟು । ನಿತ್ಯವೂ ಹೂಫಲ ಕಾಣಿಕೆ ಪಡೆದು ।
ಆರ್ತಿಯಿಂದಲೇ ಮಲೆಯ ಗಾಳಿಯ ಬೀಸುತ ॥
ಸತ್ಯಸಂಧರನು ಸಂಗಡ ಕರಕೊಂಡು ॥ಸ್ವಾತಂತ್ರ್ಯ॥
ಜಾತಿ ಭೇದದ ಗೊಂದಲ ಅಡಗಿಸಿ । ನೀತಿ ಶಾಂತಿಯ ಗಾಳಿಯ ಹರಡಿಸಿ ।
ಶಿಲ್ಪಿಯು ಕೆತ್ತಿದ ಕೆತ್ತನೆ ಕಾಣುತ ।
ಕೀರ್ತಿಯ ಕವಿಗಳ ಕವಿತೆಯ ಓದುತ ॥ ಸ್ವಾತಂತ್ರ್ಯ॥
ಭಾರತ ಭೂಮಿಯ ತೇರಲಿ ಕುಳಿತು । ಭಾರದ ಧ್ವಜವನು ನೀವೆತ್ತಿ ಹಿಡಿದು ।
ಶಾಂತಿಯ ಮೂರ್ತಿ ಬಾಪೂಜಿ ಜೊತೆಗೂಡಿ ।
ಸಂತಸದಿಂದಲಿ ಬಾರಮ್ಮ । ತುಳುನಾಡಿಗೆ ನೀನೊಮ್ಮೆ ಬಾರಮ್ಮ ॥ ಸ್ವಾತಂತ್ರ್ಯ ॥

ಮೂಲ : **ಕೆಮ್ತೂರು ದೊಡ್ಡಣ್ಣ ಶೆಟ್ಟಿ**
(ಅನುವಾದ : **ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್**)

ಮೂಡ್ದು ಬರಡ್ ತುಳುನಾಡ್

ವಿದ್ವಾನ್ ಟಿ.ಜಿ. ಮುಡೂರು

ಮೂಡ್ದು ಬರಡಿನಿಕೊಂಜೆ ಕೂಡ್ದು ಬರಡ್ ಪೊರ್ಲು।
ತುಳುನಾಡ ನಡೆನುಡಿಗ್ ಕಳೆದಿಂಜಿದ್ ಬರಡ್ ॥
ಮೂಡಯಿದ ಗಟ್ಟ ತರೆ ಪಡ್ಡಯಿದ ಕಡಲಕೆರೆ ।
ನಡು ಬಯಿಲ್ ಕೂಡ್ಡೊಂಜಿ ಮೂಡ್ದು ಬರಡ್ ॥೧॥

ಕಲ್ಲ ಕೆತ್ತನೆಕಂಬೊ ಮಲ್ಲ ಅರಮನೆ ಮಾಡೊ ।
ಬಲ್ಲಾಳರಾಯೆರೆನ ನೆನಪು ಕೊರಡ್ ನಿತ್ಯೊ ॥
ಸಂಧಿ ಪಾಡ್ದನೊ ನಲಿಕೆಡುತ್ತಿ ಈ ಉಡಲ ನುಡಿ ।
ಬರೆದ್ ಬರಡ್ ದುಂಬುಗೊರಿದ್ ಬರಡ್ ॥೨॥

ರತ್ನಾಕರ ವರ್ಣಿ ನಂದಳಿಕೆ ಮುದ್ದಣ್ಣೆ।
ಪಾರ್ತಿಸುಬ್ಬಗ್ ನನಲ ಜನುಮೊ
ಅಬ್ಬಕ್ಕನಾತಂಕ ಕಲ್ಯಾಣಪ್ಪನ ಬಿಂಕ ಒರಿದ್ ಬರಡ್ ।
ಯಕ್ಷಗಾನೊದ ಅರ್ಲ್ ಭೂತನಲಿಕೆದ ಪೊರ್ಲು ನೆಗತ್ ಬರಡ್ ॥೩॥

ಬಾನೊಡರಳಿನ ಮುಗಲ್ ಪೂಗುಳೆನ್ ತರೆ ಮುಡಿತ್ ।
ಬಯಿಲ ಮಲ್ಲಿಗೆ ಸೀರೆ ಬಂಗಾರ್ ತೊಡುಪು ॥
ಕಡಲ ಕನ್ನಡಿ ತೂದು ತುಳುನಾಡ ಸಿರಿದೇವಿ ।
ನಲಿತ್ ಬರಡ್ ಸುತ್ತು ತೆಲಿತ್ ಬರಡ್ ॥೪॥

ವರುಸೊ ವರುಸೊಗು ಬರಿಸೊ ಫಲಪೈರ್ ಧನಧಾನ್ಯೊ ।
ಬುಳೆ ಬರಡ್ ಫಲೊ ಕೊರಡ್ ಕಿದೆದಿಂಜಿದ್ ಬರಡ್ ॥
ನಿತ್ಯೊ ಸುಕೊ ಶಾಂತಿ ನೆಲೆಯಾದ್ ಲೋಕೊದ ಆದಿ ।
ಸತ್ಯೊಸಗ್ತಿಗ್ ಮಂಗಳಾರತಿ ಬೆಳಗಡ್ ॥೫॥

ಮೂಡಿ ಬರಲಿ ತುಳುನಾಡು

ಮೂಡಿ ಬರಲಿ ಇಂದೊಂದು ಸೊಬಗು ಕೂಡಿ ಬರಲಿ ।
ತುಳುನಾಡ ನಡೆನುಡಿಗೆ ಕಳೆತುಂಬಿ ಬರಲಿ ॥
ಮೂಡಣದ ಘಟ್ಟ ತಲೆ ಪಡುವಣದ ಕಡಲ ಅಲೆ ।
ನಡು ಬಯಲು ಕೂಡಿ ಕೊಳುತಲಿ ಮೂಡಿಬರಲಿ ॥೧॥

ಕಲ್ಲಕೆತ್ತನೆ ಕಂಬ ಇಲ್ಲಿ ಅರಮನೆ ಮಾಡ ।
ಬಲ್ಲಾಳರಾಯನ ಸಂಸ್ಮರಣೆ ನಿತ್ಯ ॥
ಸಂಧಿ ಪಾಡ್ದನ ಕುಣಿತ ಬೆರೆತಿಹ ಒಳ್ನುಡಿ ।
ಬರೆದು ಬರಲಿ ಮುಂದಕ್ಕುಳಿದು ಬರಲಿ ॥೨॥

ರತ್ನಾಕರವರ್ಣಿ ನಂದಳಿಕೆ ಮುದ್ದಣ್ಣ ।
ಪಾರ್ತಿಸುಬ್ಬಗೆ ಇನ್ನು ಜನ್ಮ ನೀಡುತ ಬರಲಿ ॥
ಅಬ್ಬಕ್ಕನಾ ಶೌರ್ಯಾ ಕಲ್ಯಾಣಪ್ಪನ ಧೈರ್ಯ ಉಳಿದು ಬರಲಿ ।
ಯಕ್ಷಗಾನದ ಸೊಬಗು ಭೂತಕುಣಿತದ ಬೆಡಗು ಅಚ್ಚಳಿಯದಿರಲಿ ॥೩॥

ಬಾನೊಲರಳಿದ ಮೋಡ ಹೂಗಳನ್ನು ಮುಡಿಗಿರಿಸಿ ।
ಬಯಲ ಮಲ್ಲಿಗೆ ಸೀರೆ ಬಂಗಾರ ತೊಡಿಸಿ ॥
ಕಡಲ ಕನ್ನಡಿ ನೋಡಿ ತುಳುನಾಡ ಸಿರಿದೇವಿ ।
ನಲಿದು ಬರಲಿ ಸುತ್ತು ನಗುತ ಬರಲಿ ॥೪॥

ವರ್ಷ ವರ್ಷಕ್ಕೆ ಮಳೆ ಫಲಪೈರು ಧನದಾನ್ಯ ।
ಬೆಳೆ ಭಾಗ್ಯ ಒಲಿದು ಕೊಡಲಿ ಗೋ ಸಂಪದವ ॥
ನಿತ್ಯ ಸುಖ ಶಾಂತಿ ನೆಲೆಯಾಗಿ ಲೋಕದ ಜನ
ಸತ್ಯ ಶಕ್ತಿಯಾಳಿರಲು ಮಂಗಳಾರತಿ ಬೆಳಗಲಿ ॥

ಮೂಲ : ವಿದ್ವಾನ್ ಟಿ.ಜಿ. ಮುಡೂರು
(ಅನುವಾದ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್)

ದೆಯ್ಯೊಗು ಬೆರಕೆ ದೇವೆರ್

ಪೇರೂರು ಜಾರು

ಗಾಳಿ ನೀರ್ ಅವ್ವೇ । ಆಂಡ
ಬದಲಾಯೆ ತುಳುವೆ ॥

ಬೂತದ ಮಂಚ ಬುಡಿಯೆ । ಇಲ್ಲಡ್
ದೇವೆರೆ ಕೋಣೆ ಕಟಿಯೆ ॥
ಕಾಲೊಗು ತಕ್ಕ ಕೋಲ ಇನ್ದ್
ದೆಯ್ಯೊಗು ಕಳಸ ಕೊರಿಯೆ ॥

ಪೂಪಾಡುನಡೆ ಪೂತೆಸಲ್ । ದಕಿಯೆ
ಸಯ್ತಿನಗಲೇ ಮಿಸೆಲ್[1] ॥
ಮಲ್ಲಾದಿಗೆದ ಪೂಪೊಲಿ[2] ಕಣತ್
ದೆಯ್ಯುದೆದುರೆ ಕುಸಲ್ ।

ತುಳು ದರ್ಮೊನು ಮದತೆ । ಬದಲ್
ದೆಯ್ಯೊಗು ದೇವೆರೆ ಸುಗಿತೆ ॥
ಬಾಯಿಡ್ ತುಳುತ ಬೋಂಗ್[3] ಬುಡ್ದ್
ತುಳು ಮಾತ ಬೆರಕೆ ಮಲ್ತೆ ॥

[1] ಮಿಸೆಲ್ – ಪ್ರತ್ಯೇಕ ಜಾಗ
[2] ಪೊಲಿಕಣತ್ – ಅದೃಷ್ಟ ತಂದು
[3] ಬೋಂಗ್ – ಗಟ್ಟಿಯಾಗಿ ಒದರುವುದು, ಮಸೀದಿಯ ಕರೆ

ದೈವದೊಂದಿಗೆ ಬೆರೆತ ದೇವರು

ಗಾಳಿ ನೀರು ಅದುವೆ। ಆದರೂ
ಬದಲಾದನಲ್ಲ ತುಳುವ॥

ಭೂತದ ಮಂಚ ಬಿಟ್ಟ। ಮನೇಲಿ
ದೇವರ ಕೋಣೆ ಕಟ್ಟಿಸಿಟ್ಟ॥
ಕಾಲಕ್ಕೆ ತಕ್ಕಂತೆ ಕೋಲವಿನ್ನು
ದೈವಗಳಿಗೂ ಕಲಶ ಹೋಮ ಕೊಟ್ಟ॥

ಪುಷ್ಪಾರ್ಚನೆಯ ಬದಲು ಎಸಳು। ಎಸೆದು
ಸತ್ತವರ ಬೇರೆ ಮಾಡಿ ಬಿಟ್ಟು॥
ಸಿರಿವಂತಿಕೆಯ ಹೂ ಸಿಂಗಾರದಿಂದ
ದೈವಗಳ ಅಣಕಿಸಿಬಿಟ್ಟ॥

ತುಳುವ ಧರ್ಮ ಮರೆತ। ಬದಲು
ದೈವ ದೇವರಿಗೆಲ್ಲ ಕೋಲ ಪೂಜೆ ಕೊಟ್ಟ॥
ಬಾಯಿಯಲ್ಲಿ ತುಳುವ ಬೊಗಳೆ ಬಿಟ್ಟ
ಬೆರಕೆ ಭಾಷೆ ಮಾತನಾಡಿ ತುಳುವನಲ್ಲಿ ಸುಟ್ಟ॥

ಮೂಲ : ಪೇರೂರು ಜಾರು
(ಅನುವಾದ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್)

ಕುಡ್ಲ ಮಲ್ಲಿಗೆ

ಎಸ್.ಪಿ. ಮಂಚಿ

ಕುಡ್ಲ ಮಲ್ಲಿಗೆ ಮುಡಿಪುನ
ತುಳುವ ತರೆಕ್ ಮುಡಿಪುವೆ
ಸಾಂಚಾ ಮಲ್ಲಿಗೆ

ಪೊರ್ಲುದ ಪೊಡುಂಬಾಟಿಕೆದ ಪೂ ಅತ್ತ್
ಇಂದು ಉಲಿ ಕಮ್ಮೆನೊದ
ಮೂಂಕು ಮೂಸಿ ಮೆಯಿ ಇರ್ಮೆನದ
ಮೆದು ಮನಸ್ಸ್‌ದ
ಗಟ್ಟಿ ರಂಪುದ ಇಂಪುದ ಕಂಪುದ
ಸಾಂಚಾ ಮಲ್ಲಿಗೆ
ಮುಡಿಪುವೆ ಕುಡ್ಲ ಮಲ್ಲಿಗೆ

ಈ ಮಲ್ಲಿಗೆ ಗುಂಡು
ಕಡಲ ಕರೆತ ಪುತ್ತೊಳಿ ಗಾಳಿ
ಈ ಮಲ್ಲಿಗೆಗ್ ಉಂಡು
ಮೂಡಾಯಿ ಗಟ್ಟೊದ
ಬೆಗರ್ ಗಮಗಮ

ತೆನ್ಕಾಯಿದ ಬನ್ನಂಗಾಯಿ
ಬಡಕಾಯಿದ ಪಿರಾಕ್‌ದ ಬಸ್ರೂರು
ಪಡ್ಡಾಯಿ ಪರಿಮಳೊ
ಈ ಇರ್ಮನದ ಪುರ್ಪೊನು ಮುಡಿಪವೆ

ಬಿತ್ತ್‌ಲ್ದ ಕೊಡಿ ಪಂಡ್ದ್ ಸಸಾರ
ಮಲ್ಪಡೆ ಮರ್ಗಿಲ್ಡ್ ದೀವೊನ್ಲೆ
ಕಸ್ತೂರಿ ಮುರ್ಗೊದಂಚ
ಮರ್ಗಿಲ್ತ್ತಿನೆನೇ ತೆರಿಯಂದೆ ನರ್ಗಡೆ
ಪೆರ್ಮಡ್ ಲೋಕ ಸಾರ್‌ಲೆ

ಮುಡಿಪುವೆ ತುಳ್ವ ತರೆಕ್
ಕುಡ್ಲ ಮಲ್ಲಿಗೆ ಮುಡಿಪುವೆ
ಸಾಂಬಾ ಮಲ್ಲಿಗೆ

ಮಂಗಳೂರು ಮಲ್ಲಿಗೆ

ಮಂಗಳೂರು ಮಲ್ಲಿಗೆ ಮುಡಿಯುವ
ತುಳುವ ತಲೆಗೆ ಮುಡಿಸುವೆ
ತಾಜಾ ಮಲ್ಲಿಗೆ

ಅಂದ ಚಂದದ ಬೂಟಾಟಿಕೆ ಹೂವಿದಲ್ಲ
ಇದು ನಗುಗುಂಪಿನ ಮಲ್ಲಿಗೆ
ಮೂಸಿದ ಮೂಗಿನ ಮೆಯ್
ರೋಮಾಂಚನಗೊಳ್ಳುವ
ಮೃದು ಮನಸ್ಸಿನ
ದೃಢ ನಿಲುವಿನ ಇಂಪಿನ ಕಂಪಿನ
ತಾಜಾ ಮಲ್ಲಿಗೆ
ಮುಡಿಸುವೆ ಮಂಗ್ಳೂರು ಮಲ್ಲಿಗೆ

ಈ ಮಲ್ಲಿಗೆಗಿದೆ
ಕಡಲಕರೆಯ ಪುತ್ಥಳಿ ಗಾಳಿ
ಈ ಮಲ್ಲಿಗೆಗಿದೆ
ಮೂಡಣ ಘಟ್ಟದ
ಬೆವರ ಘಮ ಘಮ

ತೆಂಕಣದ ಎಳಗಾಯಿ
ಬಡಗಿನ ಪ್ರಾಚೀನ ಬಸ್ರೂರು
ಪಡುವಣದ ಪರಿಮಳ
ಈ ಪುಲಕಿತ ಪುಷ್ಪವ ಮುಡಿಸುವೆ

ಹಿತ್ತಿಲಿನ ಚಿಗುರೆಂಬ ತಾತ್ಸಾರ
ಮಾಡದಿರಿ ಪಕ್ಕದೊಳಿರಿಸಿಕೊಳ್ಳಿ
ಕಸ್ತೂರಿಮೃಗದಂತೆ
ಮಡಿಲೊಲಿದ್ದುದ ತಿಳಿಯದೆ ಅಳುಕದಿರು
ಪೆರ್ಮೆಯ ಲೋಕವೆಲ್ಲ ಪಸರಿಸಿ

ಮುಡಿಸುವೆ ತುಳುವ ತಲೆಗೆ
ಮಂಗ್ಳೂರು ಮಲ್ಲಿಗೆ
ಮುಡಿಸುವೆ ತಾಜಾ ಮಲ್ಲಿಗೆ

ಮೂಲ : **ಎಸ್.ಪಿ. ಮಂಚಿ**
(ಅನುವಾದ : **ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್**)

ತುಳುವ ತಮೇರಿ

ಮುದ್ದು ಮೂಡುಬೆಳ್ಳೆ

ಇರ್ಲ್ ಕರಿದ್‌ಲ ಬೊಲ್ಪು ಬೆಲಗ್‌ಂಡ್ ಕೋರಿ ಕೋಕೋ ಕಿಲೆತ್‌ಂಡ್
ಪೊರ್ಲು ದೇವೆರ್ ನೇಸರುದಿಪನ ತುಳುವ ತಮೆರ್‌ನ್ ಮದಿತ್‌ಂಡ್ ||ಪಲ್ಲ||

ಕಡಲ್ ಪಡ್ಡಯಿ ಗಟ್ಟಮುಡಯಿಲ ತೆಂಕ್ ಬಡಕಯಿ ತುದೆಕುಲು |
ತುಳುವೆ ಕೊಂಕಣಿ ಕನಡೆ ಜಯಿನೆ ಮರಾಟಿ ಮಾತೆರ್ ಮಾನಿಲು |
ಪಿರವು ಡಾವಡ್ ಇನಿಕ್‌ಲಾವಡ್ ಪರಪು ನೆತ್ತೆರ್ ಒಂಜೆನೇ |
'ಯಾನ್ ನಿನ್ನಯೆ ಈಲ ಎನ್ನಾಯೇ' ಪಣ್ಪಿ ಪಾತೆರದಂಚನೇ ||

ಬರವು ಬದ್‌ಕ್‌ದ ವಾನಿ ಮಾನಿನ ಬಾಗೊಗಿತ್ತ್‌ಜಿ ಸತ್ಯನೇ |
'ಒರ್ಲ ತಪ್ಪಡ ಇರ್ಲ ಉಪ್ಪಡ' ಪಣ್ಪಿ ಪಾತೆರದಂಚೆನೇ |
ಬೋರ್ಲು ಎರು ಕೈಕಂಜಿ ಕೋರಿಲು ಕಾಡ್‌ಕಂಡೊದ ಬುಲೆಸಲೆ |
ಬೀರ ಪಾರ್ದನ ಪಾರಿ ಪಣ್ಪಿನ ನೇಮನೆಚ್ಚಿದ ಗೇನನೇ ||

ಏರೆನಪ್ಪಣೆ ಪಂಡಿಬೇಲೆಲ ಪಾಡಿ ನುಪ್ಪುದ ಕುಚ್ಚನ |
ಎಂಕ್ ಎನ್ನವು ಓಲು, ಏರೆಡ! ಮಲ್ಪರಿತ್ತ್‌ಜಿ ಎನ್ನಿನ |
ಏರ್ ಬೆಂದೆರ ಏತ್ ಸೊಂದ್ಯೆರ ಒರಿತೆರೇರೀ ತಮೆರಿನ್? |
ಸತ್ಯೊಗಾಂಡಲ ಗೆಂದ್ ಕೊರ್ಯೆರ್ ನಂಕ್‌ನಮ್ಮವೆ ಉಸುಲುನು ||

ಓಲೆ ಉಪ್ಪುಲ ಇತ್ತೊಂದೀ ಬಲ 'ಸತ್ಯ' ಕಾಪಡ್ ತುಳುವನ್ |
ಬುಲೆಪಿ ರಾಪುಗು ರಟ್‌ದ್ ಪೋವಂದೆ ಮಣ್ಣಕಮ್ಮೆನ ಕಾತೊನು |
ಪೆದ್ದಿಯಪ್ಪೆನ್ ಪುಟ್ಟಿಯೂರ್‌ನ್ ಮದಪಡೇಪಲ ತೆರಿಯೊನು |
ಉಡಲ್ ತುಳುತವು ನಡಕೆ ತುಳುವವು ಭಾರತೀಯತೆನೆನ್ನವು ||

ತುಳುವ ತಾಯ್ನೆಲ

ಇರುಳು ಉರುಳಿತು ಬೆಳಗು ಮರಳಿತು ಮುಂಗೋಳಿ ಕೊಕ್ಕೋ ಕೂಗಿತು
ನೇಸರಳಿನ ಬೆಳಕಿನಲಿ ತುಳು ತಾಯ್ನೆಲವ ತಾ ಬಣ್ಣಿಸಿತು ॥

ಕಡಲು ಪಡುಗಡೆ ಘಟ್ಟ ಮೂಡಲ, ತೆಂಕು ಬಡಗಲಿ ಹೊಳೆಗಳು
ತುಳುವ ಕೊಂಕಣಿ ಕನ್ನಡಿಗ ಜೈನರೊಂದೆ ತಾಯಿಯ ಮಕ್ಕಳು ।
ಇತಿಹಾಸದಿ ವರ್ತಮಾನದಿ ಹರಿವ ನೆತ್ತರು ಕೆಂಪಿನ
'ನಾನು ನಿನ್ನವ ನೀನು ಎನ್ನವ'ರೆನಿಸುವ ನುಡಿಯದೆ ನೆನಹಿನ ॥

ಓದು ಬರಹವು ಅಂದು ತುಳುವರ ಪಾಲಿಗಿದು ವಾಸ್ತವ,
'ಸೇರಕ್ಕಿ ತಪ್ಪದು ಎರಡು ಸೇರದು ದಕ್ಕದು' ಎನುವ ಮಾತಿನ ಭಾಗ್ಯವು ।
ಎತ್ತುಕೋಣಗಳತ್ತ ಹಸುಕರು, ಹೊಲದ ಗದ್ದೆಯ ಫಸಲಿನ
ಬೀರಪಾರ್ದನ ಹಾಡಿ ನುಲಿಯಲೆ ಕೋಲನೇಮವೆ ಧ್ಯಾನವು ॥

ಒಡೆಯನಪ್ಪಣೆ ಎನುವ ಊಳಿಗ, ಇಕ್ಕಿದಷ್ಟರ ಅನ್ನವು
ನಾನು ನನ್ನದು ಸ್ವಾತಂತ್ರ್ಯ ಎಲ್ಲಿಯದು ಕಳೆದ ದಿನಗಳ ಬಾಳದು ॥
ಯಾರು ದುಡಿದರೊ ಎನಿತು ದಣಿದರೊ ಪೊರೆದರಾರೀ ನೆಲವನು
ನಿಜದ ನುಡಿಯಿದು-ಉಳಿಸಿ ಹೋದರು ನಮಗೆ ನಮ್ಮದೆ ನೆಲೆಯನು ॥

ಎಲ್ಲೇಯಿರು ನೀ, ಬಾಳಿಕೊಂಡಿರು 'ಸತ್ಯ' ಪೊರೆಯಲಿ ನಿನ್ನನು
(ಆದರೆ) ಬೆಳೆವ ರಭಸಕೆ ಕೊಚ್ಚಿ ಹೋಗದೆ ಇರಲಿ ನೆಲದ ಕಂಪದು ॥
ಹೆತ್ತ ಅವ್ವೆಯ, ಹುಟ್ಟಿದೂರಿನ ಮರೆಯದಿರು ನೀ ಎಂದಿಗು
ಒಡಲು ತುಳುವಿದು ನಡೆಯು ತುಳುವದು ಭಾರತೀಯನೆ ಎನುವದು ॥

ಮೂಲ ಮತ್ತು ಅನುವಾದ : **ಮುದ್ದು ಮೂಡುಬೆಳ್ಳೆ**

ಸತ್ಯ - ದೈವ

ಜಯಹೇ ತುಳುವಪ್ಪೆ

ಅ. ಬಾಲಕೃಷ್ಣ ಶೆಟ್ಟಿ ಪೊಳಲಿ

ಜಯಹೇ ತುಳುವಪ್ಪೆ ಭಾರತದಪ್ಪೆನ ಮೋಕೆದ ಮಗಳೇ
ಜಯಹೇ ತುಳುವಪ್ಪೆ ಸರಸೊತಿ ದೇವಿನ ಇಂಪುದ ದನಿಯೇ
ಜಯಹೇ ತುಳುನಾಡೇ ಲೋಕೊದ ಭಾಗ್ಯೊದ ಮಾಡೇ
ಜಯಹೇ ಜಯಹೇ ಜಯಹೇ ಜಯ ಜಯ ಜಯಹೇ ॥೧॥

ಮೂಡಾಯಿಡ್ ಗಟ್ಟೊದ ಸಾಲ್‌ಲೆ ಕಿರೀಟ ಮಾಲೆ
ಪಡ್ಡಾಯಿಡ್ ಕಡಲ್‌ದ ತೆರೆಕ್‌ಲೆ ಸಬ್ದೊದ ಲೀಲೆ
ಪಚ್ಚೆದ ಬಯಿಲ್ ಸುದೆಕೆದುಕುಲೆ ಅಮೃತ ರಸತೋಕೆ
ಸುಕ ಸಂತೋಸುಡೆ ಸೊರ್ದೆಯೊಡುಪ್ಪುನ ಜನೊಕುಲೆ ನಲಿಕೆ ॥೨॥

ದರ್ಮೊದ ಬೂಡು ಕರ್ಮೊದ ನಾಡ್ ಮಧ್ವಾಚಾರ್ಯೆರೆ ಗೂಡು
ರತ್ನಾಕರ ಮುದ್ದಣೆರೆನ್ ತೊಟ್ಟಿಲ್ ತೂಂಕಿನ ಬೂಡು
ಬೀರೊನು ಮೆರೆಯಿನ ಕೋಟಿ-ಚೆನ್ನಯೆರೆನ ನಾಡ್
ಸ್ವಾತಂತ್ರ್ಯಗು ಪುಣೆಯಿನ ಸಿರಿ ಅಬ್ಬಕೆರೆ ಜೋಡು ॥೩॥

ದೇವಸ್ತಾನೊಲು ಬೂತಸ್ತಾನೊಲು ಮಂಡಲ ಮದಿಪು
ಸತ್ಯೊಗು ತತ್ತಿನಕ್‌ಲೆಗಾಪು ಪೋಡಿಗೆಡೇ ಕೊದಿಪು
ಕಂಬುಳ ಬಂಡಿ ನೇಮಣ್ಣೆನ ಪೊರ್ಲುದ ಉಚ್ಚಯೊಲು
ತೆಲಿಕೆಡ್ ನಲಿಕೆಡ್ ನಲಿಪುನ ಸೇರುನ ಕೂಡಾಟೊಲು ॥೪॥

ಸಾಹಿತ್ಯೊಡು ಬೆಂದ್‌ದ್ ಕಲೆಗಾತ್‌ರ ಸೊಂದುದು ಬೆಗರ್
ಸೀಂಟ್‌ದ್ ಮೆರೆಪಾಯಿನ ಕಲಾವಿದೆರೆನ ಪುಗರ್
ಯೇಪೊಗುಲಾ ಪಂಡಿನ ಪಾತೆರೊಡ್ದಾಕುಲು ಮಗ್‌ರ್
ತೂವಂದಿನ ಚಲತ್ತಕುಲೀ ತುಳುನಾಡವೆರ್ ॥೫॥

ರಾಜೇಶ್ವರಿ ಸಿರಿಕೃಷ್ಣೆ ಮಂಜುನಾಥನ ದಯೊಟು
ಮೆರೆವಡ್ ಲೋಕೊಡು ಮಾತೆರ್ ಜತೆ ಜತೆಟ್
ದುಂಬುದ ವೈಭವ ಕುಡ ಬರಡೀ ತುಳುನಾಡ್‌ಗ್
ಕುಡರಿರಾಮೆ ಕಡಲ್‌ಡ್ ದೊಯ್ತಿನ ಪೊರ್ಲುದ ಬೂಡುಗು ॥೬॥

ಜಯಹೇ ತುಳುವಮ್ಮ

ಜಯಹೇ ತುಳುವಮ್ಮ ಭಾರತಾಂಬೆಯ ಪ್ರೀತಿಯ ಮಗಳೇ ।
ಜಯಹೇ ತುಳುವಮ್ಮ ಸರಸ್ವತಿ ದೇವಿಯ ಇಂಪಿನ ದನಿಯೇ ॥
ಜಯಹೇ ತುಳುನಾಡೇ ಲೋಕದ ಭಾಗ್ಯದ ಮಿಸುನಿಯ ಖನಿಯೇ ।
ಜಯಹೇ ಜಯಹೇ ಜಯಹೇ ಜಯ ಜಯ ಜಯ ಜಯಹೇ ॥೧॥

ಮೂಡಣ ಘಟ್ಟದ ಸಾಲು ಕಿರೀಟದ ಮಾಲೆ ।
ಪಡುವಣ ಕಡಲಿನ ತೆರೆಗಳ ಅಬ್ಬರ ಲೀಲೆ ॥
ಹಸುರಿನ ಬಯಲು ನದಿಕೆರೆ ಅಮೃತದ ಹೊನಲು ।
ಸುಖ ಸಂತೋಷದಿ ನಲಿಯುವ ತುಳುವರ ಬಾಳು ॥೨॥

ಧರ್ಮದ ಬೀಡು ಕರ್ಮದ ನಾಡು ಮಧ್ವಾಚಾರ್ಯರ ನೋಡು ।
ರತ್ನಾಕರ ಮುದ್ದಣ ಕವಿಗಳ ತೂಗಿದ ತೊಟ್ಟಿಲ ನಾಡು ॥
ಧೀರ ಕೋಟಿಚೆನ್ನಯರು ಜನಿಸಿದ ಚೆಲುವಿನ ಬೀಡು ।
ಸ್ವಾತಂತ್ರ್ಯಕ್ಕಾಗಿ ಹೋರಾಟಗೈದ ಅಬ್ಬಕ್ಕಂದಿರ ಜೋಡು ॥೩॥

ದೇವಸ್ಥಾನವೊ ದೈವಸ್ಥಾನವೊ ಮಂಡಲ ಸೇವೆಯ ಪೂಜೆ ।
ಸತ್ಯದ ಮಾರ್ಗಕೆ ತಪ್ಪಿ ನಡೆದರೆ ತಪ್ಪದು ಶಿಕ್ಷೆಯ ಬಲು ಸಜೆ ॥
ಕಂಬಳ ಬಂಡಿ ನೇಮ ಕೋಲದ ಸಡಗರ ಹಬ್ಬಗಳು ।
ನಗುತ ನಲಿಯುತ ಒಂದುಗೂಡುವ ಊರಿನ ಜಾತ್ರೆಗಳು ॥೪॥

ಸಾಹಿತ್ಯದಲಿ ದುಡಿದಿಹ ಜನರು ಕಲೆಗಾರರು ಸುರಿಸಿದ ಬೆವರು ।
ಸೃಜನಶೀಲರು ಸಹನಶೀಲರು ಕವಿ ಕಲಾವಿದರು ॥
ಕೊಟ್ಟ ಮಾತಿಗೆ ತಪ್ಪಿ ನಡೆಯರು ಸುಟ್ಟರೂ ಛಲ ಬಿಡದವರು ।
ದಿಟ್ಟತನದಿ ಮುನ್ನಡೆವರು ಒಟ್ಟಿಗೆ ಕನಿಕರ ತೋರುವರು ॥೫॥

ರಾಜೇಶ್ವರಿ ಶ್ರೀ ಉಡುಪಿಯ ಕೃಷ್ಣ ಮಂಜುನಾಥರ ದಯದಿ ।
ಮೆರೆಯಲಿ ತುಳುವತಿ ಹೆಮ್ಮೆಯಲಿ ಸಕಲರ ಜೊತೆಗೆ ಲೋಕದಿ ॥
ಹಿಂದಣ ವೈಭವ ಮುಂದಕು ಬರಲಿ ಐಕ್ಯತೆ ನಮ್ಮೊಳಗಿರಲಿ ।
ಕೊಡಲಿ ರಾಮನ ಎದೆಗಾರಿಕೆಯ ತುಳುವರೊಳಳಿಯದೆ ಇರಲಿ ॥೬॥

ಮೂಲ : **ಅ. ಬಾಲಕೃಷ್ಣ ಶೆಟ್ಟಿ ಪೊಳಲಿ**

(ಅನುವಾದ : **ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್**)

ಕವಿಗಳ ಪರಿಚಯ

ಪಂಜೆಮಂಗೇಶ ರಾವ್ (1874-1937)

'ಕವಿಶಿಷ್ಯ' ಎಂಬ ಕಾವ್ಯನಾಮದಿಂದಲೂ ಪ್ರಸಿದ್ಧರು. ಅವರ ಕೃತಿ ಸಂಚಯವು 1973ರಲ್ಲಿ ನಾಲ್ಕು ಸಂಪುಟಗಳಲ್ಲಿ ಪುನರ್ಮುದ್ರಣ ಕಂಡಿವೆ. 1. ಪದ್ಯಗಳು 2. ಮಕ್ಕಳ ಕಥೆಗಳು 3. ಸಣ್ಣ ಕಥೆಗಳು, ಕಾದಂಬರಿ 4. ಸಂಶೋಧನೆ, ಪ್ರಬಂಧಗಳು. 1934ರಲ್ಲಿ ರಾಯಚೂರಿನಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದರು. ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಕನ್ನಡ ಪಂಡಿತರಾಗಿದ್ದರು. ಮಂಗಳೂರು ಮತ್ತು ಕಾಸರಗೋಡಿನಲ್ಲಿ ಸಬ್ ಅಸಿಸ್ಟೆಂಟ್ ಶಾಲಾ ಇನ್‌ಸ್ಪೆಕ್ಟರ್ ಆಗಿದ್ದರು. ತುಳು ಸಾಂಸ್ಕೃತಿಕ ವೀರರೆಂದು ಹೆಸರು ಪಡೆದ 'ಕೋಟಿ-ಚೆನ್ನಯ'ರ ಕತೆಯನ್ನು ಮೊದಲಿಗೆ ಕನ್ನಡದಲ್ಲಿ ಬರೆದು ಪ್ರಕಟಿಸಿದ ಕೀರ್ತಿ ಪಂಜೆಯವರಿಗೆ ಸಲ್ಲುತ್ತದೆ.

ಎಂ.ಎನ್. ಕಾಮತ್ (1884-1941)

ಮುಂಡ್ಕೂರು ನರಸಿಂಹ ಕಾಮತ್ ಅವರು ಮೆಂಬರು, ಸದ್ರಿಸುಬ್ಬ, ಶಿಕ್ಷಣ ಪರೀಕ್ಷೆ ಮುಂತಾದ ಸುಮಾರು ನಲವತ್ತು ಏಕಾಂಕ ನಾಟಕಗಳನ್ನು ಬರೆದಿದ್ದಾರೆ. ಅಂದಿನ ಆವೂರು (ಕಥಾಸಂಕಲನ), ಬಾಲಕರ ಮಹಾಭಾರತ ಗದ್ಯಕೃತಿಗಳನ್ನು ರಚಿಸಿದ್ದಾರೆ. ಪುತ್ತೂರಿನ ಕರ್ನಾಟಕ ಸಂಘವು 1991 ಹಾಗೂ 1996ರಲ್ಲಿ ಕಾಮತರ ಸಮಗ್ರ ಸಾಹಿತ್ಯವನ್ನು ಐದು ಸಂಪುಟಗಳಲ್ಲಿ ಪ್ರಕಟಿಸಿದೆ. ಕಾಮತರು ಮಂಗಳೂರಿನ ಕೆನರಾ ಹೈಸ್ಕೂಲ್‌ನಲ್ಲಿ ಅಧ್ಯಾಪಕರಾಗಿದ್ದರು.

ಮಂಜೇಶ್ವರ ಗೋವಿಂದ ಪೈ (1883-1963)

ಗಿಳಿವಿಂಡು, ನಂದಾದೀಪ, ಹೃದಯರಂಗ ಎಂಬ ಕವನಸಂಕಲನಗಳನ್ನೂ ಗೊಲ್ಗೊಥಾ, ವೈಶಾಖಿ ಎಂಬ ಖಂಡಕಾವ್ಯಗಳನ್ನೂ 'ಹೆಬ್ಬೆರಳು' ಎಂಬ ನಾಟಕವನ್ನೂ ಬರೆದು ಪ್ರಕಟಿಸಿದ್ದಾರೆ. 1949ರಲ್ಲಿ ಮದ್ರಾಸ್ ಸರಕಾರದಿಂದ 'ರಾಷ್ಟ್ರಕವಿ' ಎಂಬ ಬಿರುದು ಪಡೆದರು. 1950ರಲ್ಲಿ ಮುಂಬೈಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ

ವಹಿಸಿದ್ದರು. 'ಗೋವಿಂದ ಪೈ ಸಂಶೋಧನ ಸಂಪುಟ' 1995ರಲ್ಲಿ ಪ್ರಕಟವಾಗಿದೆ. 'ತೆಂಕನಾಡು' (1947) ಎಂಬ ಗ್ರಂಥದಲ್ಲಿ ತುಳುನಾಡಿನ ಬಗೆಗೆ ವಿಸ್ತೃತವಾದ ಸಂಶೋಧನಾತ್ಮಕ ಪ್ರಬಂಧ ಬರೆದಿದ್ದಾರೆ.

ಬಿ. ಮೋಹನಪ್ಪ ತಿಂಗಳಾಯ (1879-1963)

ವಿಗ್ರಹಾರಾಧನಾ ಪದ್ಧತಿ, ವೈದಿಕ ಈಶ್ವರ ಭಜನೆ, ತುಳು ಪದ್ಯಾವಳಿ (1930) ಮೊದಲಾದ ಕೃತಿಗಳನ್ನು ರಚಿಸಿದ ಇವರು ಮಂಗಳೂರಿನ ಜ್ಞಾನೋದಯ ಸಮಾಜದ ಪ್ರಮುಖರಾಗಿ ಕೆಲಸ ಮಾಡಿದರು. ಮೆಟ್ರಿಕ್‌ವರೆಗೆ ಕಲಿತ ಇವರಿಗೆ ಬ್ರಿಟಿಷ್ ಸರಕಾರ ಗೌರವ ಮ್ಯಾಜಿಸ್ಟ್ರೇಟ್ ಹುದ್ದೆ ನೀಡಿತು. ಅದನ್ನು ತಿರಸ್ಕರಿಸಿ ಇವರು ಸ್ವಾತಂತ್ರ್ಯ ಹೋರಾಟ ನಡೆಸಿ ಗಾಂಧೀಜಿಯವರ ಅನುಯಾಯಿಯಾಗಿ ತನ್ನನ್ನು ತಾನು ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡರು.

ಕಡೆಂಗೋಡ್ಲು ಶಂಕರಭಟ್ಟ (1904-1968)

ಘೋಷಯಾತ್ರೆ, ಕಾಣಿಕೆ, ಹಣ್ಣುಕಾಯಿ, ಪತ್ರಪುಷ್ಪ ನಲ್ಮೆ ಹೊನ್ನಿಯ ಮದುವೆ ಮುಂತಾದ ಕವನ ಸಂಕಲನಗಳು ಹಾಗೂ ಹಿಂದಿನ ಕತೆಗಳು, ಗಾಜಿನ ಬಳೆ ಮತ್ತು ಇತರ ಕತೆಗಳು, ದುಡಿಯುವ ಮಕ್ಕಳು, ಚೂರಿಯ ಕತೆ ಮುಂತಾದ ಕಥಾಸಂಕಲನಗಳನ್ನು ಪ್ರಕಟಿಸಿರುವ ಕಡೆಂಗೋಡ್ಲು ಶಂಕರಭಟ್ಟರು ರಾಷ್ಟ್ರಮತ, ರಾಷ್ಟ್ರಬಂಧು ಪತ್ರಿಕೆಗಳ ಸಂಪಾದಕರಾಗಿಯೂ ದುಡಿದು ಹೆಸರು ಗಳಿಸಿದರು. ಧೂಮಕೇತು, ಲೋಕದ ಕಣ್ಣು ದೇವತಾಮನುಷ್ಯ ಅವರ ಕಾದಂಬರಿಗಳು. 1965ರಲ್ಲಿ ಕಾರವಾರದಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು. ಮಂಗಳೂರಿನ ಸೈಂಟ್ ಆಗ್ನೇಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದರು.

ಜಿ.ಎನ್. ಲಕ್ಷ್ಮಣ ಪೈ (1904-1975)

ಪುತ್ತೂರಿನಲ್ಲಿ ವ್ಯಾಪಾರ ವೃತ್ತಿಯಲ್ಲಿದ್ದ ಇವರು ಪದ್ಯ ರತ್ನಾವಳಿ, ಅಭಿನಯ ಗೀತಾವಳಿ, ಶಿಶುಗೀತ ಮಾಲೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಅಪಾರವಾಗಿ ಓದುತ್ತಿದ್ದು ಆ ಕಾಲದಲ್ಲಿ ಶಿಶು ಸಾಹಿತ್ಯದಲ್ಲಿ ಇರುವ ಕೊರತೆಯನ್ನು ಮನಗಂಡು ಶಿಶುಸಾಹಿತ್ಯ ರಚನೆಗೆ ಕೈಹಾಕಿದರು. ಇವರ ಪುತ್ರ ಜಿ. ವರದರಾಯ ಪೈ ವಿಜ್ಞಾನ ಸಾಹಿತ್ಯ

ರಚನೆಯಲ್ಲಿ ಹೆಸರು ಗಳಿಸಿದರು. ಲಕ್ಷ್ಮಣ ಪೈಯವರು ಕೊನೆಯ ಕಾಲದಲ್ಲಿ ಪುತ್ರ ಉದ್ಯೋಗದಲ್ಲಿದ್ದ ಮುಲ್ಕಿಗೆ ತಮ್ಮ ವಾಸ್ತವ್ಯ ಬದಲಿಸಿದರು. ಡಾ. ಶಿವರಾಮ ಕಾರಂತರ ಸಹವರ್ತಿಯಾಗಿ ಪ್ರತಿವರ್ಷ ಪುತ್ತೂರಲ್ಲಿ 'ದಸರಾ ಸಾಹಿತ್ಯೋತ್ಸವ' ನಡೆಸಲು ನೆರವಾದವರು.

ಪೇಜಾವರ ಸದಾಶಿವರಾಯರು (1913-1939)

'ವರುಣ' ಎಂಬ ಕವನ ಸಂಕಲನದಿಂದ (ಪ್ರಕಟಣೆ 1952) ಪ್ರಸಿದ್ಧಿಗೆ ಬಂದ ಇವರು ಕಾಶಿಯ ಹಿಂದೂ ವಿಶ್ವವಿದ್ಯಾಲಯದಲ್ಲಿ ಎಂಜಿನಿಯರಿಂಗ್ ಅಭ್ಯಾಸ ಮಾಡಿದರು (1930-1935). ಅನಂತರ ಡಾಕ್ಟರ್ ಆಫ್ ಅಟೊಮೊಬೈಲ್ ಎಂಜಿನಿಯರಿಂಗ್ ಅಭ್ಯಾಸಕ್ಕಾಗಿ 1936ರಲ್ಲಿ ಇಟಲಿಯ ಮಿಲಾನ್ ನಗರಕ್ಕೆ ಹೋದರು. ಅಲ್ಲಿ ಪೆರಿಟೊನ್ಯಾಟಿಸ್ ಎಂಬ ರೋಗಕ್ಕೆ ತುತ್ತಾಗಿ 1939ರಲ್ಲಿ 26ರ ಎಳೆಯ ವಯಸ್ಸಿನಲ್ಲಿ ವಿಧಿವಶರಾದರು.

ಸೇಡಿಯಾಪು ಕೃಷ್ಣಭಟ್ಟ (1902-1996)

ನಾಲ್ಕು ಸಣ್ಣ ಕಾವ್ಯಗಳು, ಚಂದ್ರಖಂಡ ಮತ್ತು ಕೆಲವು ಸಣ್ಣ ಕಾವ್ಯಗಳು, ಪಳಮೆಗಳು (ಕಥಾ ಸಂಕಲನ), ಕನ್ನಡ ವರ್ಣಗಳು (ಭಾಷಾವಿಜ್ಞಾನ), ಕೆಲವು ದೇಶನಾಮಗಳು, ಕನ್ನಡ ಗೀತಿಕೆಯ ಲಕ್ಷಣ ಮತ್ತು ಧಾಟಿ, ಗಮಕ ಸಮಾಸ, ಈಶ್ವರ ಸಂಕಲ್ಪ ಅಥವಾ ದೈವಲೀಲೆ ಮೊದಲಾದವು ಅವರ ಕೃತಿಗಳು. ವಿದ್ವಾಂಸರೆಂದೇ ಪ್ರಸಿದ್ಧರು. ಮಂಗಳೂರಿನ ಸೈಂಟ್ ಅಲೋಶಿಯಸ್ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ವೈದ್ಯರಾಗಿಯೂ ಪ್ರಸಿದ್ಧರಾಗಿದ್ದರು. ತುಳುನಾಡಿನ ಬಗೆಗೆ ಸಂಶೋಧನಾತ್ಮಕ ಗ್ರಂಥವನ್ನು ಬರೆದಿದ್ದಾರೆ.

ಅಮ್ಮೆಂಬಳ ಶಂಕರನಾರಾಯಣ ನಾವಡ (1916-2004)

ಸರ, ಪಡಿದನಿ, ಬೆಳಕು, ಬಾಳಗೆಳತಿ (ಕವನ ಸಂಕಲನಗಳು), ವನಜ್ಯೋತ್ಸ್ನೆ (ಮೂರು ಗೀತನಾಟಕಗಳು) ಮುಂತಾದ ಕೃತಿಗಳನ್ನು ಪ್ರಕಟಿಸಿರುವ ಇವರು ಶ್ರೀರಾಮಾಶ್ವಮೇಧ ಕಥೆ, ಅದ್ಭುತ ರಾಮಾಯಣದ ಕಥೆ, ಉಪನಿಷತ್ತಿನ ಕಥೆಗಳು ಮುಂತಾದ ಕಥಾ ಸಂಕಲನಗಳನ್ನೂ ಪ್ರಕಟಿಸಿದ್ದಾರೆ. ಕುಮಾರಸಂಭವ (ಕಾವ್ಯಾನುವಾದ). ದೀರ್ಘಕಾಲ ಕೋಟೆಕಾರಿನ ಪ್ರೌಢಶಾಲೆಯಲ್ಲಿ ಕನ್ನಡ ಪಂಡಿತರಾಗಿ ಸೇವೆ ಸಲ್ಲಿಸಿದರು.

ಕೆಲಿಂಜ ಸೀತಾರಾಮ ಆಳ್ವ (1920-2007)

ಹರಿಶ್ಚಂದ್ರ ಕಾವ್ಯ (ಅನುವಾದ), ಮಹಾವೀರ ರಾಣಿ (ಭಾಮಿನಿ ಷಟ್ಪದಿ ಕಾವ್ಯ), ಗೀತೆದ ತಿರ್ಲ್ ಎದುರುಸ್ವರ (ಅಮ್ಮೆಂಬಳ ಶಂಕರನಾರಾಯಣ ನಾವಡರ 'ಪಡಿದನಿ' ಕೃತಿಯ ಅನುವಾದ) ಮೊದಲಾದ ಕೃತಿಗಳನ್ನು ರಚಿಸಿರುವ ಕೆಲಿಂಜದವರು ಯಕ್ಷಗಾನ ಅರ್ಥಧಾರಿಯೂ ಪ್ರಾಥಮಿಕ ಶಾಲಾ ಶಿಕ್ಷಕರೂ ಆಗಿದ್ದರು. ವಿಟ್ಲ ತುಳುಕೂಟದ ಅಧ್ಯಕ್ಷರಾಗಿದ್ದರು. ಪೊಳಲಿ ಶೀನಪ್ಪ ಹೆಗ್ಗಡೆ ಪ್ರಶಸ್ತಿ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. ಪ್ರಾಥಮಿಕ ಶಾಲೆಯ ಅಧ್ಯಾಪಕರಾಗಿದ್ದರು. 'ತುಳು ಮಹಾಭಾರತ' ಇವರ ಅಪ್ರಕಟಿತ ಕೃತಿ.

ಡಾ. ಪುಂಡೂರು ವೆಂಕಟರಾಜ ಪುಣಿಂಚತ್ತಾಯ (1936)

ಶೈಲೂಷಿ, ಜೋಕಾಲಿ, ಸುಭಾಷಿತ ಲಹರಿ ಮೊದಲಾದ ಕವನ ಸಂಕಲನಗಳನ್ನೂ ಬೇಡನ ಮಗಳು, ನಚಿಕೇತ ಮುಂತಾದ ನಾಟಕಗಳನ್ನೂ ಬರೆದಿರುವ ಇವರು ನನ್ನಜ್ಜನಿಗೊಂದಾನೆಯಿತ್ತು, ಕನ್ನಿಕಾ, ಅವನು ಮರಳಿ ಬರುತ್ತಾನೆ ಮುಂತಾದ ಮಲಯಾಳ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಭಕ್ತ ಕುಚೇಲಂ, ಗಂಗಾಲಹರಿ, ಕಿಮ್‌ಕರ್ಮ ಕಿಮಕರ್ಮೇತಿ ಮುಂತಾದ ಸಂಸ್ಕೃತ ಕೃತಿಗಳನ್ನು ರಚಿಸಿದ್ದಾರೆ. ಸಂಶೋಧಕರೆಂದೇ ಪ್ರಸಿದ್ಧರು. ತುಳುವಿನ ಲಿಪಿಯೇ ಅಲ್ಲದೆ ಶ್ರೀಭಾಗವತೊ, ಕಾವೇರಿ, ತುಳು ದೇವೀಮಹಾತ್ಮೆ, ತುಳು ಮಹಾಭಾರತೊ ಮುಂತಾದ ಪ್ರಾಚೀನ ತುಳು ಕಾವ್ಯಗಳನ್ನು ಸಂಶೋಧಿಸಿ, ಪ್ರಕಟಿಸಿ ತುಳುವಿಗೆ ಬಹುದೊಡ್ಡ ಅಸ್ತಿಭಾರ ಹಾಕಿದವರು. ಎಡನೀರಿನ ಸ್ವಾಮೀಜಿ ಪ್ರೌಢಶಾಲೆಯಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ಶ್ರೇಷ್ಠ ಅಧ್ಯಾಪಕರೆಂದು 'ರಾಷ್ಟ್ರ ಶಿಕ್ಷಕ ಪ್ರಶಸ್ತಿ' ಗಳಿಸಿದರು. ಕೇರಳ ತುಳು ಅಕಾಡೆಮಿಯ ಮೊದಲ ಅಧ್ಯಕ್ಷರಾದರು. ಮಂಗಳೂರು ವಿ.ವಿ. ಇವರಿಗೆ ಗೌರವ ಡಾಕ್ಟರೇಟ್ ನೀಡಿದೆ.

ಮಂದಾರ ಕೇಶವ ಭಟ್ಟ (1919-1997)

ಯಕ್ಷಗಾನ ಭಾಗವತರಾಗಿ, ಅರ್ಥಧಾರಿಯಾಗಿ ಪ್ರಸಿದ್ಧರಾದ ಇವರು ಜಾಗಂಟೆ (ತುಳು ಕವನಸಂಕಲನ), ಕನತ್ತ ಪೊಣ್ಣು (ಭಾಸ ಮಹಾಕವಿಯ ಸ್ವಪ್ನವಾಸವದತ್ತದ ಅನುವಾದ), ಮಂದಾರ ಮಾಲೆ (ಕನ್ನಡ ಕವನಸಂಕಲನ) ಹಾಗೂ ತುಳು ಮಂದಾರ ರಾಮಾಯಾಣ ಕೃತಿಗಳನ್ನು ರಚಿಸಿದರು. ಈ ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಂದಿತು. ಈ ಕೃತಿಯನ್ನು ಕೇಂದ್ರ ಸಾಹಿತ್ಯ ಅಕಾಡೆಮಿ ಅವರಿಂದಲೇ ಬರೆಸಿ ಕನ್ನಡದಲ್ಲಿ

ಪ್ರಕಟಿಸಿದೆ. ತುಳು ಸಾಹಿತ್ಯದ ನೆಲೆ ಬೆಲೆಗಳನ್ನು ಹೆಚ್ಚಿಸಿದ ಕೃತಿಯೆಂದೇ ಇದು ಪ್ರಸಿದ್ಧವಾಗಿದೆ. ಪೊಳಲಿ ಶೀನಪ್ಪ ಹೆಗ್ಗಡೆ ಪ್ರಶಸ್ತಿ, ತುಳು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಇವರಿಗೆ ಸಂದಿವೆ. ಪ್ರೌಢಶಾಲಾ ಶಿಕ್ಷಕರಾಗಿ ವೃತ್ತಿಜೀವನ ನಡೆಸಿದರು. ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಭಾಷಾಸಮ್ಮಾನ್ ಪ್ರಶಸ್ತಿ ನೀಡಿ ಗೌರವಿಸಿದೆ.

ಪಾ.ವೆಂ. ಆಚಾರ್ಯ (1915-1992)

'ಲಾಂಗೂಲಾಚಾರ್ಯ' ಎಂಬ ಕಾವ್ಯನಾಮದಿಂದ ವಿಡಂಬನ ಲೇಖನಗಳಿಗಾಗಿ ಪ್ರಸಿದ್ಧರಾದ ಇವರು ಪದಾರ್ಥ ಚಿಂತಾಮಣಿ (ಪದಪರಂಪರೆ ವಿವೇಚನೆ), ಮಂಜೂಷಾ (ಪ್ರಬಂಧ ಸಂಕಲನ), ಬಯ್ಯಮಲ್ಲಿಗೆ (ತುಳು ಕವನ ಸಂಕಲನ), ನವನೀರದ (ಕನ್ನಡ ಕವನ ಸಂಕಲನ), ರಷ್ಯಾದ ರಾಜ್ಯಕ್ರಾಂತಿ (ಗದ್ಯ), ಪ್ರಹಾರ (ಹರಟೆ) ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಬಹುಕಾಲ 'ಕಸ್ತೂರಿ' ಮಾಸಿಕದ ಸಂಪಾದಕರಾಗಿ ಸಾರ್ಥಕ ಸೇವೆ. 1987ರಲ್ಲಿ ಮುಲ್ಕಿಯಲ್ಲಿ ಜರುಗಿದ ದ.ಕ. ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ. 1992ರಲ್ಲಿ (ಮೊದಲ ಬಾರಿಗೆ ಕನ್ನಡಿಗನೋರ್ವನಿಗೆ) ಪತ್ರಿಕೋದ್ಯಮಕ್ಕಾಗಿ ಅಖಿಲ ಭಾರತ ಮಟ್ಟದ ಗೊಯೆಂಕಾ ಪ್ರಶಸ್ತಿ.

ಡಾ. ಅಮೃತ ಸೋಮೇಶ್ವರ (1935)

ಮುಂಬಯಿಯಲ್ಲಿ ಜನಿಸಿದ ಇವರು ಮಂಗಳೂರು ಬಳಿ ಕೋಟೆಕಾರು ಎಂಬಲ್ಲಿ ನೆಲೆಸಿದ್ದಾರೆ. ಕನ್ನಡ ಎಂ.ಎ. ಶಿಕ್ಷಣ ಪಡೆದು ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ದುಡಿದು ನಿವೃತ್ತರಾದರು. ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಕೃತಿ ರಚಿಸಿರುವ ಅಮೃತರಿಗೆ ಮಂಗಳೂರು ವಿ.ವಿ. ಗೌರವ ಡಾಕ್ಟರೇಟ್ ಪ್ರದಾನ ಮಾಡಿದೆ. ಅವರ ಪ್ರಮುಖ ಕೃತಿಗಳು ಎಲೆಗಿಳಿ, ರುದ್ರಶಿಲೆ ಸಾಕ್ಷಿ (ಕಥಾಸಂಕಲನ), ವನಮಾಲೆ, ಭ್ರಮಣ (ಕವನ ಸಂಕಲನ), ಭಗವತೀ ಆರಾಧನೆ, ಯಕ್ಷಗಾನ ಕೃತಿ ಸಂಪುಟ (ಜಾನಪದ ಸಂಶೋಧನೆ), ಕಾಲೇವಾಲ (ಅನುವಾದ), ತುಳು ಬದುಕು (ಲೇಖನಗಳು), ತುಳು ಪಾಡ್ದನ ಸಂಪುಟ (ಸಂಪಾದನೆ) ಇತ್ಯಾದಿ. ಹಲವಾರು ಯಕ್ಷಗಾನ ಪ್ರಸಂಗಗಳನ್ನು ಬರೆದಿದ್ದಾರೆ. ಹಲವಾರು ತುಳುಗೀತ ರೂಪಕಗಳನ್ನು ಬರೆದಿದ್ದಾರೆ. ಗೋಂದೊಲು, ರಾಯರಾವುತ, ಆಟ ಮುಗಿಂಡ್ ಮೊದಲಾದ ತುಳುನಾಟಕಗಳನ್ನು ರಚಿಸಿದ್ದಾರೆ. ಇವರು ಸಂಪಾದಿಸಿದ ತುಳು ಪಾಡ್ದನ ಸಂಪುಟವನ್ನು ಹಂಪಿ ವಿಶ್ವವಿದ್ಯಾನಿಲಯ ಪ್ರಕಟಿಸಿದೆ.

ಡಾ. ಕಯ್ಯಾರ ಕಿಞ್ಞಣ್ಣ ರೈ (1915)

ಶ್ರೀಮುಖ, ಐಕ್ಯಗಾನ, ಪುನರ್ನವ, ಚೇತನ, ಕೊರಗ, ಗಂಧವತೀ, ಪಂಚಮಿ (ಐದು ಉಪನಿಷತ್ತುಗಳ ಅನುವಾದ), ಕುಮಾರನ್ ಆಶಾನ್ ಮೂರು ಕವಿತೆಗಳು (ಅನುವಾದ) ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿರುವ ಕಯ್ಯಾರರ ಸಮಗ್ರ ಕವನಗಳು 'ಪ್ರತಿಭಾ ಪಯಸ್ವಿನೀ' (1992) ಎಂಬ ಹೆಸರಿಂದ ಪ್ರಕಟವಾಗಿದೆ. 'ಎನ್ನಪ್ಪೆ ತುಳುವಪ್ಪೆ' ಎಂಬುದು ಅವರ ತುಳು ಕವನ ಸಂಕಲನ. ಅನ್ನದೇವರು ಮತ್ತು ಇತರ ಕಥೆಗಳು (ಕಥಾಸಂಕಲನ), ವಿರಾಗಿಣಿ (ನಾಟಕ), ರತ್ನರಾಶಿ (ವ್ಯಕ್ತಿಚಿತ್ರಗಳು), ಪದ್ಯಮಂಜರಿ (ಶಿಶುಗೀತೆಗಳು) ಅವರ ಇತರ ಕೃತಿಗಳು. ಮಕ್ಕಳ ಸಾಹಿತ್ಯ, ಜೀವನ ಚರಿತ್ರೆ, ಸಾಹಿತ್ಯ ವಿಮರ್ಶೆ ಮೊದಲಾದ ಇತರ ಪ್ರಕಾರಗಳಲ್ಲಿ ಕೈಯಾಡಿಸಿದ್ದಾರೆ. ಪೆರಡಾಲದ ನವಜೀವನ ಪ್ರೌಢಶಾಲೆಯಲ್ಲಿ ಬಹುಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ಶ್ರೇಷ್ಠ ಅಧ್ಯಾಪಕ ಪ್ರಶಸ್ತಿ ಪಡೆದಿದ್ದಾರೆ. ಬದಿಯಡ್ಕ ಗ್ರಾಮ ಪಂಚಾಯತ್ ಅಧ್ಯಕ್ಷರಾಗಿದ್ದರು. ಮಂಗಳೂರಿನಲ್ಲಿ ಜರುಗಿದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದಾರೆ (1997). ಕಾಸರಗೋಡಿನ ಕನ್ನಡ ಹೋರಾಟದಲ್ಲಿ ಮುಂಚೂಣಿಯ ಪಾತ್ರ ವಹಿಸಿದರು. ಇವರಿಗೆ ಮಂಗಳೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ನೀಡಿದೆ. ಹಂಪಿ ಕನ್ನಡ ವಿಶ್ವವಿದ್ಯಾಲಯ 'ನಾಡೋಜ' ಪ್ರಶಸ್ತಿ ನೀಡಿ ಗೌರವಿಸಿದೆ.

ಬಿ.ಎಂ. ಇದಿನಬ್ಬ (1920-2009)

ಉಪ್ಪಿನಗಂಡಿ ಬಳಿಯ ಬೊಳುಂಬುಡ ಮಠದ ಇದಿನಬ್ಬ ಬಾಳಿನ ಚಿತ್ರಗಳು, ಹರಿದ ಕೋಟು (ಕಥಾಸಂಕಲನ), ಹೃದಯಗೀತೆಗಳು, ಜೇನುಗೂಡು (ಕವನ ಸಂಕಲನ), ಚುಟಕ ರಾಶಿ (ಮಕ್ಕಳ ಪುಸ್ತಕ), ವೀರಗೀತೆಗಳು ಮತ್ತು ಕಿಡಿಗಳು (ದೇಶಪ್ರೇಮದ ಗೀತೆಗಳ ಸಂಗ್ರಹ) ಮುಂತಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಆರಂಭದಲ್ಲಿ ಸಹಕಾರ ಸಂಘದಲ್ಲಿ ಉದ್ಯೋಗದಲ್ಲಿದ್ದ ಅವರು ಅನಂತರ ರಾಜಕೀಯಕ್ಕೆ ಇಳಿದು ಉಳ್ಳಾಲ ಕ್ಷೇತ್ರದಿಂದ ಮೂರು ಬಾರಿ ಶಾಸಕರಾಗಿ ಆಯ್ಕೆಯಾದರು. ಒಂದು ಅವಧಿಗೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದರು.

ಡಾ. ಕನರಾಡಿ ವಾದಿರಾಜ ಭಟ್ಟ (1951)

ಪಾಡ್ದನಗಳು, ಜೀವನಪಾಡ್ದನ (ತುಳು ಕವಿತೆಗಳು), ದೇವದಾಸಿಯರ ಹಾಡುಗಳು, ಗಣೇಶ ಚತುರ್ಥಿ, ಬರಹಗಾರರ ಬಳಗ, ಜೋಕ್ಲೆ ಪದೊಕ್ಲು (ಎರಡು ಭಾಗಗಳಲ್ಲಿ),

ಕುಂದಾಪುರ ತಾಲೂಕು ದರ್ಶನ, ತುಳು ಜನಪದ ಕತೆಗಳು (4 ಭಾಗಗಳಲ್ಲಿ), ಮೂಕಜ್ಜಿಯ ಹಾಡುಗಳು, ಬಸರೂರು-ಅಧ್ಯಯನ (ಸಂಪಾದನೆ), ಮೂಕಜ್ಜಿ (ಪರಿಚಯ) ಮೊದಲಾದ ಕೃತಿಗಳನ್ನು ಬರೆದಿರುವ ಕನರಾಡಿಯವರು ಬಸರೂರಿನ ಶ್ರೀ ಶಾರದಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿ ಪ್ರಸ್ತುತ ನಿವೃತ್ತರಾಗಿದ್ದಾರೆ.

ಡಾ. ಸುನೀತಾ ಎಂ. ಶೆಟ್ಟಿ (1932)

ನಿನಾದ, ಅಂತರಂಗ, ಪಯಣ (ಕನ್ನಡ ಕವನ ಸಂಕಲನಗಳು), ಪ್ರವಾಸಿಯ ಹೆಜ್ಜೆಗಳು (ಪ್ರವಾಸ ಕಥನ), ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ (ಪಿಯೆಚ್.ಡಿ. ಅಧ್ಯಯನ ಪ್ರಬಂಧ), ಪಿಂಗಾರ, ಸಂಕ್ರಾಂತಿ, ನಾಗಸಂಪಿಗೆ (ತುಳು ಕವನ ಸಂಕಲನಗಳು), ಕರಜನ (ತುಳು ಲೇಖನಗಳು), ಪದ ಪಣ್ ಕಣ್ಣಾರೋ (ತುಳು ಭಾವಗೀತೆಗಳು) ಮೊದಲಾದ ಕೃತಿಗಳನ್ನು ಪ್ರಕಟಿಸಿದ್ದಾರೆ. ಒಡಿಯೂರಿನಲ್ಲಿ ನಡೆದ ತುಳು ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದಾರೆ. 'ನಡೆದ ಹಾದಿಯ ಹೂಗಳು' ಅವರಿಗೆ 75ನೇ ವಯಸ್ಸಿನಲ್ಲಿ ಸಮರ್ಪಿಸಿದ ಅಭಿನಂದನ ಗ್ರಂಥ. ಮುಂಬೈ ವಿಶ್ವವಿದ್ಯಾಲಯದಲ್ಲಿ ಬಹುಕಾಲ ಕನ್ನಡ ಪ್ರಾಧ್ಯಾಪಕರಾಗಿ ದುಡಿದು ನಿವೃತ್ತರಾಗಿದ್ದಾರೆ.

ಕುರಾಡಿ ಸೀತಾರಾಮ ಅಡಿಗ (1930-2005)

ಫಲಿಮಾರು ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಅಧ್ಯಾಪಕರಾಗಿದ್ದ ಇವರು ಕಾವ್ಯ ನಾಟಕಾದಿ ಆಸಕ್ತಿಗಳನ್ನು ಮೈಗೂಡಿಸಿಕೊಂಡು ವೈವಿಧ್ಯಮಯವಾಗಿ ದುಡಿದವರು. ಅನೇಕ ಸಂಗ್ರಹಗಳಲ್ಲಿ ಇವರ ಕವಿತೆಗಳು ಸೇರಿವೆ. 'ಬೇರು ಚಿಗುರು' ಪ್ರಮುಖ ಕವನ ಸಂಕಲನ. ಮುಕ್ಕಣ್ಣ ದರ್ಶನ, ಬದುಕು ಧ್ಯಾನ ಚಿಂತನೆ (ವೈಚಾರಿಕ) ಇತರ ಕೃತಿಗಳು.

ಕುತ್ಯಾಳ ನಾಗಪ್ಪ ಗೌಡ (1940)

'ಕಿರಣ' ಎಂಬ ಕಾವ್ಯನಾಮದಿಂದ ಸಾಹಿತ್ಯ ರಚನೆ ಮಾಡುತ್ತಿದ್ದಾರೆ. ಅಂಚೆ ಇಲಾಖೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಇವರು ಒಳದನಿ, ಪರಸ್ಪರ, ಲಬ್ಧ, ದ್ವೀಪದಲ್ಲಿ ದ್ವಿಪದಿ, ಏಕಾಂಗಿಯ ಅನೇಕತೆ ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅಟ್ಟದಲ್ಲಿ ಒಂದು ರಾತ್ರಿ (ಕಿರಿಯರಿಗಾಗಿ ಕತೆ-ಕವಿತೆ), ನೋಟ (ಲೇಖನ ಸಂಕಲನ) ಮೊದಲಾದ ಇತರ ಕೃತಿಗಳನ್ನು ರಚಿಸಿದ್ದಾರೆ. ಸುವರ್ಣ ಸಂಪಿಗೆ, ನಡೆದ ದಾರಿಯ ನೆನಪುಗಳು (ಸಂಪಾದಿತ ಕೃತಿಗಳು).

ಕುದ್ಕಾಡಿ ವಿಶ್ವನಾಥ ರೈ (1932)

ಯುಗಧರ್ಮ (ನಾಟಕ), ನರ್ತನ ಜಗತ್ತು (ಅಧ್ಯಯನ ಸಮೀಕ್ಷೆ), ಭರತ ಮತ್ತು ಕನ್ನಡ ರಂಗಭೂಮಿ (ವಿಮರ್ಶೆ), ಲಂಕಾದರ್ಶನ (ಪ್ರವಾಸ ಕಥನ), ದೇವಿ ಅಬ್ಬಕ್ಕ ರಾಣಿ (ನಾಟಕ) ಮೊದಲಾದ ಕೃತಿಗಳನ್ನು ಬರೆದಿರುವ ಕುದ್ಕಾಡಿಯವರು ನೃತ್ಯ ಕಲಾವಿದರಾಗಿ ಪ್ರಸಿದ್ಧರು. ಉಡುಪಿಯ ತುಳು ನಿಘಂಟು ಯೋಜನೆಯಲ್ಲಿ ಮೂರು ವರ್ಷ ಸಂಯೋಜಕರಾಗಿ ದುಡಿದಿದ್ದಾರೆ. ನೃತ್ಯದಲ್ಲಿ ಹೆಚ್ಚಿನ ಅಧ್ಯಯನಕ್ಕಾಗಿ ಸ್ಕಾಲರ್‌ಶಿಪ್ ಪಡೆದು ಎರಡು ವರ್ಷ ಸಿಂಹಳ ದ್ವೀಪದಲ್ಲಿದ್ದರು. ಮಂಜತ ಕಾಪಡೆ, ಸತ್ಯೊಮ್ಮ ದೈಯ್ಯಾರ್, ಅಬ್ಬಕಬ್ಬೆ, ಸಂಕ್ರಾಂತಿ ಮೊದಲಾದ ತುಳು ನಾಟಕಗಳನ್ನು ರಚಿಸಿದ್ದಾರೆ. ಪುತ್ತೂರಿನ ಸಂತ ಫಿಲೋಮಿನಾ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ವೃತ್ತಿಜೀವನ ನಡೆಸಿದರು.

ಡಾ. ಕೆ.ವಿ. ತಿರುಮಲೇಶ್ (1940)

ಕನ್ನಡದ ಪ್ರಮುಖ ಕವಿಗಳಲ್ಲಿ ಒಬ್ಬರಾದ ಇವರು ಮುಖವಾಡಗಳು, ಮಹಾಪ್ರಸ್ಥಾನ, ವಠಾರ, ಮುಖಾಮುಖಿ, ಪಾಪಿಯೂ, ಅವಧ, ಬೊಲಿವಿಯಾ (ಕವನ ಸಂಕಲನಗಳು), ಅನೇಕ, ಆರೋಪ, ತರಂಗಾಂತರ (ಕಾದಂಬರಿಗಳು), ನಾಯಕ ಮತ್ತು ಇತರ ಕತೆಗಳು, ಜಾಗುವಾ ಮತ್ತು ಇತರ ಕತೆಗಳು (ಕಥಾಸಂಕಲನಗಳು) ಮುಂತಾದ ಇನ್ನೂ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಹೈದರಾಬಾದ್‌ನ ಕೇಂದ್ರೀಯ ಭಾಷಾ ಸಂಸ್ಥಾನದಲ್ಲಿ ಪ್ರಾಧ್ಯಾಪಕರಾಗಿ ನಿವೃತ್ತರು.

ಮಲಾರ್ ಜಯರಾಮ ರೈ (1946)

'ಬೇರ್ ಮರ್ದ್', 'ತುಳುವೆರೆಂಕುಲು' ಎಂಬ ತುಳು ಕವನ ಸಂಕಲನ ಪ್ರಕಟಿಸಿರುವ ಇವರು ಬಹುರೂಪಿ ಗಾಂಧಿ (ಇಂಗ್ಲಿಷಿನಿಂದ), ಸಂತ ಸುಧಾರಕ ಶ್ರೀ ನಾರಾಯಣಗುರು, ಸಾವಿರದಲ್ಲೊಂದು ಗ್ರಾಮ ಸೀರೆ, Journey through Journalism ಮುಂತಾದ ಇತರ ಕೃತಿಗಳನ್ನು ರಚಿಸಿದ್ದಾರೆ. ಹಲವಾರು ಬಿಡಿಕವನಗಳನ್ನು ಬರೆದಿದ್ದಾರೆ. ಹಲವು ಕವಿಗೋಷ್ಠಿಗಳಲ್ಲಿ ಭಾಗವಹಿಸಿದ್ದಾರೆ. ಬಹುಕಾಲ 'ಡೆಕ್ಕನ್ ಹೆರಾಲ್ಡ್' ಪತ್ರಿಕೆಯಲ್ಲಿ ಪತ್ರಕರ್ತರಾಗಿ ದುಡಿದು ನಿವೃತ್ತರಾಗಿದ್ದಾರೆ. 'ತುಳುವೆರೆಂಕುಲು' ಎಂಬ ಬೆಂಗಳೂರು ತುಳುವರ ಕೂಟದ ಸದಸ್ಯರಾಗಿ ದುಡಿದರು. ಕೇರಳ ತುಳು ಅಕಾಡೆಮಿಯ ಸದಸ್ಯರೂ ಆಗಿದ್ದರು.

ಪಡಾರು ಮಹಾಬಲೇಶ್ವರ ಭಟ್ಟ (1934)

ಬಾಣಪೂ (ತುಳು ಕವನಗಳು), ಬಸುರಿಯ ಹಾಡು ಮತ್ತು ಶ್ರೀಕೃಷ್ಣ ಸತ್ಯಭಾಮಾ ಸಂವಾದ (ಸಂಪ್ರದಾಯದ ಹಾಡುಗಳ ಸಂಗ್ರಹ) ಮೊದಲಾದ ಕೃತಿ ರಚಿಸಿರುವ ಇವರು ಬಂಟ್ವಾಳ ತಾಲೂಕಿನ ಮಂಚಿಯವರು. ವೃತ್ತಿಯಲ್ಲಿ ಕೃಷಿಕರು. ಕಾಡು ಹೂ, ಜಾನಪದ (ಕನ್ನಡ ಕವಿತೆಗಳು), ಹವೀಕ (ಲೇಖನ ಸಂಗ್ರಹ), ಹೆಮ್ಮಕ್ಕಳ ಹಾಡು, ಜಾನಪದ ಸಾಹಿತ್ಯ (ಹವ್ಯಕರ ಹಾಡು), ನಂಬ್ರಂದ ಜೆಂಬ್ರಕ್ಕೆ (ಹವ್ಯಕ ನಾಟಕ), ಗೋಪಾಲನ ಸ್ವಾಸ್ಥ್ಯ (ನಾಟಕ), ಮಾರಿಬಲೆ ಬೀಸಿತ್ತು (ಕತೆಗಳು) ಅವರ ಇತರ ಕೃತಿಗಳು.

ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್ (1945)

ಪಚ್ಚೆ ಕುರಲ್, ದುನಿಪು (ತುಳು ಕವನ ಸಂಕಲನಗಳು), ಡಾ. ಶಿವರಾಮ ಕಾರಂತೆರ್, ಭೂತಾಳ ಪಾಂಡ್ಯ, ತುಳು ಸಂಸ್ಕೃತಿದ ಪೊಲಬು, ನಾಗಬಿರ್ಮೆ ಮುಂತಾದ ತುಳು ಕೃತಿಗಳನ್ನು ರಚಿಸಿದ್ದಾರೆ. ಜಾನಪದ ಸ್ಪಂದನ, ಜನಪದ ಕುಣಿತಗಳು (ಜಾನಪದ ಅಧ್ಯಯನ), ಅಂತರ್ಭೂತ (ಕಥಾಸಂಕಲನ), ಬಂಗಾಳ ವಿಜಯ, ಅಕ್ಷರಕುಮಾರ ವಿಜಯ (ಯಕ್ಷಗಾನ), ನಮ್ಮ ಸರಕಾರ (ನವಸಾಕ್ಷರರಿಗಾಗಿ), ಕಿರಣ (ಶಿಶು ಗೀತೆಗಳು), ಜಾನಪದ ಮಿನದನ, ಕಲ್ಕುಡ ಕಲ್ಲುರ್ಟಿ ಸಂಸ್ಕೃತಿಶೋಧ, ಜಾನಪದ ಪರಿಸರ, ಜನಪದ ಕುಣಿತಗಳು, ಪಾಣಾರರು, ಪಂಚಶಿಲ್ಪ, ಮೆಲುಕಾಡಿದಾಗ (ಕನ್ನಡ ಕವನಸಂಕಲನ) ತುಳುನಾಡು ನುಡಿ ಮೊದಲಾದ ಕೃತಿಗಳನ್ನು ರಚಿಸಿರುವ ಇವರು ಪ್ರೌಢಶಾಲೆ ಅಧ್ಯಾಪಕರಾಗಿ, ಅನಂತರ ಪ.ಪೂ. ಕಾಲೇಜಿನ ಉಪನ್ಯಾಸಕರಾಗಿ ನಿವೃತ್ತರಾದರು. ಬಳಿಕ ನಾಲ್ಕು ವರ್ಷ ಶಿಕ್ಷಕ ತರಬೇತು ಕಾಲೇಜಿನ ಪ್ರಾಚಾರ್ಯರಾಗಿದ್ದರು. ಶ್ರೇಷ್ಠ ಅಧ್ಯಾಪಕ ಪ್ರಶಸ್ತಿ ಪಡೆದಿದ್ದಾರೆ. ತುಳು ಸಾಹಿತ್ಯ ಅಕಾಡೆಮಿಯ ರಿಜಿಸ್ಟ್ರಾರ್ ಆಗಿ ಅನಂತರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ.

ಡಾ. ವಾಮನ ನಂದಾವರ (1944)

ಜಾನಪದ ಸಂಶೋಧಕರೆಂದು ಪ್ರಸಿದ್ಧರಾಗಿರುವ ಇವರ ಸಂಶೋಧನಾ ಮಹಾಪ್ರಬಂಧ 'ಕೋಟಿ ಚೆನ್ನಯ ಜಾನಪದ ಅಧ್ಯಯನ'. ಇವರ ಪ್ರಕಟಿತ ಕೃತಿಗಳು ತಾಳಮೇಳ, ಸಿಂಗದನ, ಜನಪದ ಸುತ್ತಮುತ್ತ, ಪಟ್ಟಾಂಗ, ಸರ್ ಜೇಮ್ಸ್ ಫ್ರೇಜರ್ ಇತ್ಯಾದಿ. ಹಲವು ಕೃತಿಗಳನ್ನು ಸಂಪಾದಿಸಿದ್ದಾರೆ. ಬೀರ (ಕವನ ಸಂಕಲನ), ತುಳುಟು ಪನಿಕತೆ, ಒಂಜಿ ಕೋಪೆ ಕತೆಕುಲು, ತುಳುವೆರೆ ಕುಸಾಲ್-ಕುಸೆಲ್ (ತುಳು ಕಥಾಸಂಕಲನಗಳು) ಇವರ ತುಳು ಕೃತಿಗಳು. 'ಹೇಮಾಂಶು ಪ್ರಕಾಶನ' ಎಂಬ ಪ್ರಕಾಶನ ಸಂಸ್ಥೆ ಆರಂಭಿಸಿ ಸುಮಾರು

ಅರವತ್ತರಷ್ಟು ಕೃತಿ ಪ್ರಕಟಿಸಿದ್ದಾರೆ. ಮಂಗಳೂರಿನ ಸೈಂಟ್ ಆ್ಯನ್ಸ್ ಶಿಕ್ಷಕಿಯರ ತರಬೇತಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ 2002ರಲ್ಲಿ ನಿವೃತ್ತರಾದರು. ಬಳಿಕ ಶಿಕ್ಷಕ ತರಬೇತಿ ಕಾಲೇಜಿನ ಪ್ರಾಚಾರ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ. ಒಂದು ಅವಧಿಗೆ ತುಳು ಸಾಹಿತ್ಯ ಅಕಾಡೆಮಿಗೆ ಅಧ್ಯಕ್ಷರಾಗಿದ್ದರು.

ಡಾ. ವಸಂತಕುಮಾರ ಪೆರ್ಲ (1958)

ಮಾತಿನಾಚೆಯ ಮೌನ, ಹುತ್ತದೊಳಗಿನ ಹಾವು, ಕೋಟಿಲಿಂಗ, ರಂಗಸ್ಥಳ (ಕವನಸಂಕಲನಗಳು), ಹತ್ತರೊಡನೊಂದು, ನಾನು ಮತ್ತು ಗಣೇಶ (ಕಥಾಸಂಕಲನಗಳು), ಪಯಸ್ವಿನಿಯ ಮಡಿಲಲ್ಲಿ (ಕಾದಂಬರಿ), ಪ್ರಸ್ತಾಪ, ವರ್ತಮಾನ, ಮುಗಿಲ ಸಾಲು (ಲೇಖನಗಳ ಸಂಗ್ರಹ), ಅಭ್ಯಾಸ, ಸ್ವಾತಂತ್ರ್ಯೋತ್ತರ ಕನ್ನಡ ಹವ್ಯಾಸೀ ರಂಗಭೂಮಿಯಲ್ಲಿ ಜಾನಪದ ಒಳನೋಟಗಳು (ಸಂಶೋಧನೆ), ಕಾಸರಗೋಡಿನ ಶತಮಾನದ ಕಥೆಗಳು, ಕಾಸರಗೋಡಿನ ಇತ್ತೀಚಿನ ಕಥೆಗಳು, ಕಾವ್ಯ: 2009 (ಸಂಪಾದನೆ), ಕಾಡಾನೆಗಳ ದವಡೆಯಲ್ಲಿ (ಸಾಹಸ ಕಥನಗಳು), ಆಜನೆ, ದುತ್ತೈತ (ತುಳು ಕವನ ಸಂಕಲನಗಳು) ಇವರ ಕೃತಿಗಳಲ್ಲಿ ಕೆಲವು. ಸಮೂಹ ಮಾಧ್ಯಮಗಳಲ್ಲಿ ಪರಿಣತರಾದ ಇವರು ಆಕಾಶವಾಣಿಯಲ್ಲಿ ಹಿರಿಯ ಅಧಿಕಾರಿಯಾಗಿದ್ದಾರೆ.

ಎನ್.ಪಿ. ಶೆಟ್ಟಿ (1947)

ಶುಭೋದಯ, ನಮನ ಸುಮನ (ಕನ್ನಡ ಕವನ ಸಂಕಲನಗಳು), ಮುಲ್ಕಿ ಸುಂದರರಾಮ ಶೆಟ್ಟಿ, ಅ. ಬಾಲಕೃಷ್ಣ ಶೆಟ್ಟಿ ಪೊಳಲಿ (ವ್ಯಕ್ತಿ ಪರಿಚಯ), ಬತ್ತೆ ಕೆತ್ತರೆ ಉತ್ತರೆ, ತಪ್ಪುಗು ತರೆದಂಡ (ತುಳು ಕಾವ್ಯ), ಬಾಯಿಡೊಂಜಿ ಪಾತೆರೊ (ತುಳು ಕವನ ಸಂಗ್ರಹ) ಮೊದಲಾದ ಕೃತಿರಚನೆ ಮಾಡಿದ್ದಾರೆ. ವಿಜಯಾ ಬ್ಯಾಂಕ್‌ನಲ್ಲಿ ವ್ಯವಸ್ಥಾಪಕರಾಗಿ ನಿವೃತ್ತರಾದರು. ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆಯುತ್ತಾರೆ.

ಡಾ. ನಾ. ಮೊಗಸಾಲೆ (1944)

ವೃತ್ತಿಯಿಂದ ವೈದ್ಯರಾಗಿ ನಿವೃತ್ತರಾದ ಇವರು ವರ್ತಮಾನದ ಮುಖಗಳು, ಪಲ್ಲವಿ, ಮೊಗಸಾಲೆಯ ನೆನಪುಗಳು, ಪ್ರಭವ, ಸ್ವಂತಕ್ಕೆ ಸ್ವಂತಾವತಾರ, ನೆಲದ ನೆರಳು (ಕವನ ಸಂಕಲನಗಳು) ಮಣ್ಣಿನ ಮಕ್ಕಳು, ಅನಂತ, ಕನಸಿನ ಬಳ್ಳಿ, ನನ್ನದಲ್ಲದ್ದು, ಪಲ್ಲಟ, ಹದ್ದು, ಪ್ರಕೃತಿ, ನೆಲಮುಗಿಲುಗಳ ಮಧ್ಯೆ, ದಿಗಂತ, ದೃಷ್ಟಿ, ಉಪ್ಪು ತೊಟ್ಟಿ, ಪಂಥ, ಉಲ್ಲಂಘನೆ

(ಕಾದಂಬರಿಗಳು), ಸುಂದರಿಯ ಎರಡನೇ ಅವತಾರ (ಕಥಾಸಂಕಲನ) ಮೊದಲಾದ ಕೃತಿಗಳನ್ನು ಪ್ರಕಟಿಸಿದ್ದಾರೆ. 'ಕಾಂತಾವರ ಕನ್ನಡ ಸಂಘ'ದ ರೂವಾರಿಗಳಲ್ಲಿ ಒಬ್ಬರು.

ಜಿ.ಎಸ್. ಉಬರಡ್ಕ (1944)

ಸಿರಿಗಂಧ ಸೂಸ್ಯಾವೆ (ಜನಪದ ಗೀತೆಗಳ ಸಂಗ್ರಹ), ಕ್ಯೂ ನಿಂತ ಪಾಶಗಳು, ಅರಣ್ಯಕಾಂಡ, ಹೂಬಿಟ್ಟ ಮರದಲ್ಲಿ ಮೊಗ್ಗೊಡೆದ ಮೌನ, ಭೂಮಿ ತೂಗುವ ಹಕ್ಕಿ (ಕವನ ಸಂಕಲನಗಳು), ಚಿಕ್ಕದೊಂದು ಗಿಳಿಯ ಸಾಕಿ (ಕಥಾಸಂಕಲನ), ಕರಾವಳಿ (ಲೇಖನಗಳ ಸಂಗ್ರಹ) ಮತ್ತು ಮಣ್ಣಿಗೆ ಮತ್ತೆ ಜೀವಕಳೆ (ಸಂಪಾದನೆ), ಹನಿಹನಿ ಸೂರ್ಯ (ಹನಿಗವಿತೆಗಳು) ಮುಂತಾದ ಕೃತಿಗಳನ್ನು ಪ್ರಕಟಿಸಿರುವ ಇವರು ಸುಳ್ಯದ ನೆಲ್ಲೂರು ಕೆಮ್ರಾಜೆ ಗ್ರಾಮ ಪಂಚಾಯತ್ ಅಧ್ಯಕ್ಷರೂ ಮಂಡಲ ಪಂಚಾಯತ್ ಸದಸ್ಯರೂ ಆಗಿದ್ದರು. ಸುಳ್ಯ ಭೂ ಅಭಿವೃದ್ಧಿ ಬ್ಯಾಂಕಿನ ನಿರ್ದೇಶಕರೂ ದ.ಕ. ಜಿಲ್ಲಾ ಜೇನು ವ್ಯವಸಾಯಗಾರರ ಸಂಘದ ನಿರ್ದೇಶಕರೂ ಆಗಿ ದುಡಿದಿದ್ದಾರೆ.

ಕೆ.ಟಿ. ಗಟ್ಟಿ (1938)

ಶಬ್ದಗಳು, ಕರ್ಮಣ್ಯೇವಾಧಿಕಾರಸ್ತೇ, ಸಾಫಲ್ಯ, ಅಬ್ರಾಹ್ಮಣ, ಬಿಸಿಲ್ದುದುರೆ, ಅಮುಕ್ತ ಮುಂತಾಗಿ ಐವತ್ತಕ್ಕೆ ಮೇಲ್ಪಟ್ಟು ಕಾದಂಬರಿಗಳನ್ನು ಬರೆದಿರುವ ಗಟ್ಟಿಯವರು ಝೇಂಕಾರದ ಹಕ್ಕಿ ಎಂಬ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ. ನಿಸರ್ಗದ ಕನ್ಯೆ ಅಂಡಮಾನ್ ಎಂಬುದು ಪ್ರವಾಸ ಕಥನ. ತುಳುವಿನಲ್ಲಿ ಬೊಂಬಾಯಿದ ಇಲ್ ಎಂಬ ಕಾದಂಬರಿ ಬರೆದಿದ್ದಾರೆ. ಇಂಗ್ಲಿಷ್‌ನ ಪ್ರೇಮ ಕವಿತೆಗಳನ್ನು ಎನ್ನ ಮೋಕೆದ ಪೊಣ್ಣು ಎಂಬುದಾಗಿ ಅನುವಾದಿಸಿದ್ದಾರೆ. ಅನುಭವದಡುಗೆಯ ಮಾಡಿ, ತಾಳಮದ್ದಲೆ ಮುಂತಾದ ರೇಡಿಯೋ ನಾಟಕಗಳನ್ನು ಬರೆದಿದ್ದಾರೆ. ಇಥಿಯೋಪಿಯಾವು ಸೇರಿದಂತೆ ಬೇರೆ ಬೇರೆ ಕಡೆ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿಯ ಬಳಿಕ ಉಜಿರೆಯಲ್ಲಿ ನೆಲಸಿದ್ದಾರೆ.

ಚಿದಂಬರ ಬೈಕಂಪಾಡಿ (1962)

ಮಂಗಳೂರಿನಲ್ಲಿ ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತಿರುವ ಇವರು ಬೇಗುದಿ, ವಾಸ್ತವದ ಲೆಕ್ಕಾಚಾರ, ಕಪ್ಪು ಹುಡುಗ ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇದು ಮುಂಗಾರು ಎಂಬ ಪತ್ರಿಕೋದ್ಯಮ ಕುರಿತ ಪುಸ್ತಕ ಬರೆದಿದ್ದಾರೆ. ಒಂದು ಅವಧಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಸೆನೆಟ್ ಸದಸ್ಯರಾಗಿಯೂ ಕರ್ನಾಟಕ ತುಳು ಸಾಹಿತ್ಯ

ಅಕಾಡೆಮಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು.

ಆತ್ರಾಡಿ ಅಮೃತಾ ಶೆಟ್ಟಿ (1969)

'ಮದಿಮಾಲೆ ಪಾಡ್ದನ' ಎಂಬ ಕವನ ಸಂಕಲನ ಪ್ರಕಟಿಸಿರುವ ಇವರು 'ಕೋರಿ ಸುಯಿ' ಎಂಬ ಆಕಾಶವಾಣಿ ನಾಟಕ ಬರೆದಿದ್ದಾರೆ. ವಿವಿಧ ಪತ್ರಿಕೆಗಳಲ್ಲಿ, ಸಂಕಲನಗಳಲ್ಲಿ ಇವರ ಕವನಗಳು, ಲೇಖನಗಳು ಪ್ರಕಟವಾಗಿವೆ. 'ಸಮಾಜ ಪರಿವರ್ತನಾ ಚಳವಳಿ' ಎಂಬ ಸಂಘ ಕಟ್ಟಿ ಅಂಬೇಡ್ಕರ್ ವಿಚಾರಧಾರೆ ಮೂಲಕ ಸಾಮಾಜಿಕ ಅನುಸಂಧಾನದ ಕೆಲಸದಲ್ಲಿ ನಿರತರಾಗಿದ್ದಾರೆ.

ವಸಂತಿ ಶೆಟ್ಟಿ ಬ್ರಹ್ಮಾವರ (1963)

ವಸಂತಗಾನ, ಭಾವವೀಚಿ (ಕನ್ನಡ ಕವನ ಸಂಕಲನಗಳು), ಹೆತ್ತೊಡಲ ಹಲವು ಮುಖ, ಪಂಚಕಜ್ಜಾಯ (ಕಥಾ ಸಂಕಲನಗಳು) ಮತ್ತು ಉಡಲ್ದ ಸಿರಿ (ತುಳು ಕಾದಂಬರಿ) ಕೃತಿಗಳನ್ನು ಪ್ರಕಟಿಸಿರುವ ಇವರು ಉಡುಪಿಯಲ್ಲಿ ಅಧ್ಯಾಪಿಕೆಯಾಗಿದ್ದಾರೆ. ಉಡುಪಿ ನಗರ ಸಭೆಗೆ ಎರಡು ಬಾರಿ ಸದಸ್ಯೆಯಾಗಿ ಚುನಾಯಿತರಾಗಿದ್ದಾರೆ. ಉಡುಪಿ ಜಿಲ್ಲಾ ಲೇಖಕಿಯರ ಸಂಘದ ಪ್ರಸ್ತುತ ಸಾಲಿನ ಅಧ್ಯಕ್ಷೆ.

ಎನ್.ಎಸ್. ಕಿಲ್ಲೆ (1901-1953)

ಕಾನಿಗೆ (ತುಳು ಕವನ ಸಂಕಲನ), ತುಳುನಾಡ ಚರಿತ್ರೆ (ಪೊಳಲಿ ಶೀನಪ್ಪ ಹೆಗ್ಡೆ ಜೊತೆ ಸೇರಿ), ಭಾರತದ ಕರ್ಣ (ವ್ಯಕ್ತಿ ವಿಶೇಷ), ಮುರಲಿ (ಕನ್ನಡ ಕವನ ಸಂಕಲನ) ಮೊದಲಾದ ಕೃತಿಗಳನ್ನು ರಚಿಸಿದ ಇವರು ದೇಶಭಕ್ತ, ಸ್ವಾತಂತ್ರ್ಯ ಹೋರಾಟಗಾರರೆಂದೇ ಪರಿಚಿತರು. ದಲಿತೋದ್ಧಾರಕ್ಕಾಗಿಯೂ ಕರ್ನಾಟಕ ಏಕೀಕರಣಕ್ಕಾಗಿಯೂ ದುಡಿದರು. ತುಳುವರಲ್ಲಿ ಭಾಷಾಭಿಮಾನದ ಕೆಚ್ಚು ಮೂಡಿಸಿದವರು. ಉತ್ತಮ ವಾಗ್ಮಿ, ಭಾಷಾಂತರಕಾರ ಮತ್ತು ಯಕ್ಷಗಾನ ಅರ್ಥಧಾರಿ.

ಡಾ. ಬೆಳ್ಳಿಪ್ಪಾಡಿ ಸತೀಶ್ ರೈ (1945)

ವಿಶ್ವರೂಪಿ, ನೂರಾರು ಕವನಗಳು, ವಿಶ್ವಕಿರಣ (ಕವನ ಸಂಕಲನಗಳು), ಗಡಿಬಿಡಿ ರಾಮಾಯಣ (ನಾಟಕ) ಮುಂತಾದ ಕೃತಿಗಳಲ್ಲದೆ ತುಳುವಿನಲ್ಲಿ ಅಗೆಲ್, ತುಳುನಾಡ

ಬೊಳ್ಳಿಲು (ಕವನಗಳು), ಕಲ್ಜಿಗದ ಕುರುಕ್ಷೇತ್ರ (ನಾಟಕ), ನೀತಿ ಶತಕ (ಅನುವಾದ) ಮತ್ತಿನ್ನಿತರ ಹತ್ತಕ್ಕಿಂತ ಹೆಚ್ಚು ಕೃತಿ ರಚನೆ ಮಾಡಿದ್ದಾರೆ. ಮೈಸೂರಿನಲ್ಲಿ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಇವರು ಯಕ್ಷಗಾನದಲ್ಲಿ ಪರಿಶ್ರಮ ಹೊಂದಿದ್ದಾರೆ. ಹೋಮ್‌ಗಾರ್ಡ್ ಕಮಾಂಡೆಂಟ್, ಸಮಾಜಸೇವೆ ಮೊದಲಾದ ಇತರ ಕ್ಷೇತ್ರಗಳಲ್ಲೂ ಆಸಕ್ತಿಯಿಂದ ದುಡಿಯುತ್ತಿದ್ದಾರೆ.

ಕೆದಂಬಾಡಿ ಜತ್ತಪ್ಪ ರೈ (1916-2003)

ಬೇಟೆಯ ನೆನಪುಗಳು, ಈಡೊಂದು ಹುಲಿಯೆರಡು ಮುಂತಾದ ಬೇಟೆ ಸಂಬಂಧೀ ಕೃತಿಗಳಿಂದ ಪ್ರಸಿದ್ಧಿಗೆ ಬಂದ ಇವರು ಕುವೆಂಪು ಅವರ 'ಬೊಮ್ಮನ ಹಳ್ಳಿಯ ಕಿಂದರಿಜೋಗಿ' ಕೃತಿಯನ್ನು 'ಆಸೆನಿಯಾಗೊ ಕಾಂತಗೊ ಜೋಗಿ' ಎಂದೂ ನಿರಂಜನರ ಚಿರಸ್ಮರಣೆ ಕಾದಂಬರಿಯನ್ನು 'ಮದಪ್ಪಂದಿ ನೆಂಪು' ಎಂದೂ, ಶಿವರಾಮ ಕಾರಂತರ ಚೋಮನ ದುಡಿಯನ್ನು ಅದೇ ಹೆಸರಿನಿಂದಲೂ ತುಳುವಿಗೆ ಅನುವಾದಿಸಿದರು. 'ಪಡಿಲ್ ಪಂಪೆ' (ನಾಟಕ), ಕುಜಲಿ ಪೂಜೆ (ಉಮರ್ ಖಯ್ಯಾಮನ ರುಬಾಯತ್‌ಗಳ ಅನುವಾದ) ಅಜ್ಜ ಬಿರು (ಎಸ್.ವಿ. ಪರಮೇಶ್ವರ ಭಟ್ಟರ ಇಂದ್ರಚಾಪ ಕವನಸಂಕಲನದ ಅನುವಾದ) ಕೆದಂಬಾಡಿಯವರ ಇತರ ಕೃತಿಗಳು. ಭಾಷೆಯಲ್ಲಿ ಅಚ್ಚ ದೇಸೀಯತೆ ಅವರ ವೈಶಿಷ್ಟ್ಯ. ಇವರ ಬೇಟೆಯ ನೆನಪುಗಳು ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿದೆ. ತುಳು ಸಾಹಿತ್ಯ ಸೇವೆಗಾಗಿ ಕೇಂದ್ರ ಸಾಹಿತ್ಯ ಅಕಾಡೆಮಿ ಭಾಷಾಸಮ್ಮಾನ್ ಪ್ರಶಸ್ತಿ ನೀಡಿದೆ.

ಡಾ. ಏರ್ಯ ಲಕ್ಷ್ಮೀನಾರಾಯಣ ಆಳ್ವ (1937)

ರಾಮಾಶ್ವಮೇಧದ ರಸ ತರಂಗಗಳು (ಗದ್ಯ) ಕೃತಿಯಿಂದ ಪ್ರಸಿದ್ಧರಾದ ಇವರು ಮೊದಲ ಮಳೆ (ಕವನ ಸಂಕಲನ), ಸ್ನೇಹಸೇತು, ಮುಳಿಯ ತಿಮ್ಮಪ್ಪಯ್ಯ, ನಾಗೇಗೌಡರ ಸ್ವಾಗತಗೀತೆ, ಪತ್ರಗಳು ಚಿತ್ರಿಸಿದ ಸೇಡಿಯಾಪು, ನೂರರ ನೆನಪು, ಸಂಚಯ ಇತ್ಯಾದಿ ಕೃತಿಗಳನ್ನು ಪ್ರಕಟಿಸಿದ್ದಾರೆ. ಸಹಕಾರಿ ರಂಗದಲ್ಲಿಯೂ ದೊಡ್ಡ ಸೇವೆ ಸಲ್ಲಿಸಿದ್ದಾರೆ. ಒಂದು ಅವಧಿಗೆ ಜಾನಪದ ಅಕಾಡೆಮಿ ಸದಸ್ಯರಾಗಿದ್ದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದಿದ್ದಾರೆ. ತುಳುವಿನಲ್ಲಿ ಹಲವಾರು ಬಿಡಿ ಕವನಗಳನ್ನು ಬರೆದಿದ್ದಾರೆ. ವಿಶ್ವ ಹಿಂದೂ ಪರಿಷತ್‌ನ ಅಧ್ಯಕ್ಷರಾಗಿ, ಜಾನಪದ ಅಕಾಡೆಮಿ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ.

ಸುಬ್ರಾಯ ಚೊಕ್ಕಾಡಿ (1940)

ತೆರೆ, ಬೆಟ್ಟವೇರಿದ ಮೇಲೆ, ನಿಮ್ಮವೂ ಇರಬಹುದು, ಮೊನ್ನೆ ಸಿಕ್ಕವರು, ಇದರಲ್ಲಿ ಅದು, ಹಾಡಿನ ಲೋಕ ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿರುವ ಇವರು ಬೇರುಗಳು (ಕಥಾಸಂಕಲನ), ಸಂತೆಮನೆ (ಕಾದಂಬರಿ), ಕಾವ್ಯ ಸಮೀಕ್ಷೆ, ಕೃತಿಶೋಧ (ವಿಮರ್ಶೆ), ದ.ಕ. ಕಾವ್ಯ 1900-1976 (ಸಂಪಾದನೆ), ಕಾವ್ಯ ಸೃಷ್ಟಿಯ ಸ್ವರೂಪ (ಸಂಪಾದನೆ) ಮೊದಲಾದ ಇತರ ಕೃತಿಗಳನ್ನು ಪ್ರಕಟಿಸಿದ್ದಾರೆ. ನಿವೃತ್ತ ಅಧ್ಯಾಪಕರು. ತುಳುವಿನಲ್ಲೂ ಬಿಡಿ ಕವನಗಳನ್ನು ಬರೆದಿದ್ದಾರೆ.

ಶಿಮಂತೂರು ಚಂದ್ರಹಾಸ ಸುವರ್ಣ (1955)

ಉದ್ಯೋಗಾರ್ಥವಾಗಿ ಮುಂಬೈಯಲ್ಲಿ ವಾಸವಾಗಿರುವ ಇವರು ಬ್ರಹ್ಮನ ಬರವು (ನಾಟಕ), ಒರಲ್, ಕುರಲ್ (ತುಳು ಕವನ ಸಂಕಲನಗಳು), ಜಾತ್ರೆ (ಕನ್ನಡ ಕಥಾಸಂಕಲನ) ಮತ್ತು ಸ್ಪರ್ಶ (ಕನ್ನಡ ಕವನ ಸಂಕಲನ) ಕೃತಿಗಳನ್ನು ರಚಿಸಿದ್ದಾರೆ. ತುಳು ಹಾಗೂ ಕನ್ನಡದಲ್ಲಿ ಇವರ ಹತ್ತು-ಹನ್ನೆರಡರಷ್ಟು ಕೃತಿಗಳು ಪ್ರಕಟಣೆಗಾಗಿ ಕಾಯುತ್ತಿವೆ. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಪ್ರೊ. ಎಂ. ಗೋಪಾಲಕೃಷ್ಣ ಅಡಿಗ (1918-1992)

'ಒಂದು ಜನಾಂಗದ ಕಣ್ಣು ತೆರೆಸಿದ ಕವಿ' ಎಂಬ ಹೆಗ್ಗಳಿಕೆಗೆ ಪಾತ್ರರಾದ ನವ್ಯಕಾವ್ಯದ ಈ ಪ್ರವರ್ತಕ ಭಾವತರಂಗ, ಕಟ್ಟುವೆವು ನಾವು, ನಡೆದುಬಂದ ದಾರಿ, ಚೆಂಡೆಮದ್ದಳೆ, ಭೂಮಿಗೀತ, ವರ್ಧಮಾನ, ಇದನ್ನು ಬಯಸಿರಲಿಲ್ಲ, ಮೂಲಕ ಮಹಾಶಯರು, ಬತ್ತಲಾರದ ಗಂಗೆ, ಚಿಂತಾಮಣಿಯಲ್ಲಿ ಕಂಡಮುಖ, ಸುವರ್ಣ ಪುತ್ಥಳಿ ಮುಂತಾದ ಕವನ ಸಂಕಲನಗಳಿಂದ ಒಂದು ಪರಂಪರೆಯನ್ನು ಹುಟ್ಟುಹಾಕಿದರು. ಆಕಾಶದೀಪ, ಅನಾಥೆ ಎಂಬ ಕಾದಂಬರಿಗಳನ್ನೂ ಬರೆದಿದ್ದಾರೆ. ಹುಲಿರಾಯ ಮತ್ತು ಇತರ ಕಥೆಗಳು ಅವರ ಕಥಾಸಂಕಲನ. ವಿಚಾರ ಸಾಹಿತ್ಯದಲ್ಲೂ ಕೈಯಾಡಿಸಿರುವ ಅವರು ಕುಮಟಾ, ಮೈಸೂರು ಮೊದಲಾದೆಡೆ ಉಪನ್ಯಾಸಕರಾಗಿ ದುಡಿದು ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಪ್ರಾಂಶುಪಾಲರಾದರು. ದೆಹಲಿಯ ನ್ಯಾಶನಲ್ ಬುಕ್‌ಟ್ರಸ್ಟ್‌ನ ಉಪನಿರ್ದೇಶಕರಾಗಿದ್ದರು. ಶಿಮ್ಲಾದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನಲ್ಲಿ ರಿಸರ್ಚ್ ಫೆಲೋ ಆಗಿದ್ದರು. 1978ರಲ್ಲಿ ಧರ್ಮಸ್ಥಳದಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದರು.

ಉಗ್ರಾಣ ಮಂಗೇಶರಾವ್ (1893–1974)

ನೂತನ ಶಾಲಾ ವ್ಯಾಕರಣ, ನೂತನ ಬಾಲ ವ್ಯಾಕರಣ, ಡಾನ್ ಕ್ವಿಕ್ಸೋಟ್ (ಉಚ್ಚಾರ–'ಕಿಹೋಟ್') (ಸರ್ವಾಂಟಿಸನ ಅದೇ ಹೆಸರಿನ ಸುಪ್ರಸಿದ್ಧ ಕಾದಂಬರಿಯ ಅನುವಾದ), ಭರತೇಶ ವೈಭವ, ಕಾವ್ಯ ರತ್ನಾಕರ, ಸಾಹಿತ್ಯ ಮಣಿಮಾಲೆ (ಸಂಪಾದಿತ ಕೃತಿಗಳು). ಅವರ ಸಮಗ್ರ ಸಾಹಿತ್ಯವನ್ನು ಪುತ್ತೂರಿನ ಕರ್ನಾಟಕ ಸಂಘ ಎರಡು ಸಂಪುಟಗಳಲ್ಲಿ ಹೊರತಂದಿದೆ. ಪುತ್ತೂರಿನ ಬೋರ್ಡ್ ಹೈಸ್ಕೂಲಲ್ಲಿ ಅಧ್ಯಾಪಕರಾಗಿದ್ದರು.

ಪ್ರಮೋದಾ ಕೆ. ಸುವರ್ಣ (1935)

ಪೂಮಾಲೆ, ಮುಡಿಪು, ಪದರಂಗಿತ, ತಾಟಿತೆಂಬರೆ, ಕತೆ ಆಯೆರ್ ಪೊಣ್ಣುಲೈವೆರ್ ಮೊದಲಾದ ಕವನ ಸಂಕಲನಗಳನ್ನು ಪ್ರಕಟಿಸಿರುವ ಇವರು ತುಳುವಿನಲ್ಲಿ ಭಾವಗೀತೆ ಮತ್ತು ಶಿಶುಸಾಹಿತ್ಯ ಪ್ರಕಾರಕ್ಕೆ ಒಳ್ಳೆಯ ಕೊಡುಗೆ ನೀಡಿದ್ದಾರೆ. ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಬಲ್ಲರು. ಆಕಾಶವಾಣಿಯಲ್ಲಿ ಕಲಾವಿದೆಯಾಗಿ ಹಲವಾರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಮಂಗಳೂರಿನಲ್ಲಿ ಆಸ್ಪತ್ರೆಯೊಂದರಲ್ಲಿ ಉದ್ಯೋಗದಲ್ಲಿದ್ದು ನಿವೃತ್ತರಾದರು.

ನರ್ಕಳ ಮಾರಪ್ಪ ಶೆಟ್ಟಿ (1894–1987)

ಅಮಲ್ ದೆಪ್ಪಡೆ, ಪೊರ್ಲಕಂಟ್ ಮೊದಲಾದ ಕವನಗಳಿಂದ ಪ್ರಸಿದ್ಧರಾದ ಇವರು ಅಧ್ಯಾಪಕರಾಗಿ ವಿದ್ಯಾರ್ಥಿಗಳನ್ನು ತುಂಬ ಪ್ರಭಾವಿಸಿದರು. ತುಳು ಕವನ ರಚನೆಯ ಜೊತೆ ಜೊತೆಗೆ ಕನ್ನಡ, ಹವ್ಯಕ ಕನ್ನಡದಲ್ಲಿಯೂ ಸಾಹಿತ್ಯ ರಚನೆ ಮಾಡಿದರು. 'ಕೂಷಕ್ಕನ ಮದುವೆ' ಎಂಬುದು ಹವ್ಯಕ ಭಾಷೆಯಲ್ಲಿ ಅವರು ಬರೆದ ವಿಡಂಬನಾತ್ಮಕ ನಾಟಕ. 'ದಂಡಯಾತ್ರೆ' ಅವರು ಬರೆದ ಯಕ್ಷಗಾನ ಪ್ರಸಂಗ. 'ಸುಂದರಿಯ ಚಂದ' ಮತ್ತು 'ಒಂದು ಕತೆ ಹೇಳುತ್ತೇನೆ' (ಶಿಶು ಸಾಹಿತ್ಯ) ಗಮನಾರ್ಹ ಕೃತಿಗಳು.

ಕೆಮ್ತೂರು ದೊಡ್ಡಣ್ಣ ಶೆಟ್ಟಿ (1927–1985)

ಕುಶಲ ಅಭಿನಯ ಗೀತಾವಳಿ (ಭಾಗ 1, 2), ಮಕ್ಕಳ ಕಥೆಗಳು, ಮಕ್ಕಳ ನಾಟಕಗಳು, ಕಸ್ತೂರಿ ಭಜನೆ ಹಾಡುಗಳು, ಪೆಪ್ಪರ್‌ಮಿಂಟ್ (ಶಿಶುಗೀತೆಗಳು), ನಾರದ ವಿಚಿತ್ರ ಸಂಸಾರ, ಮುಯ್ಯಿಗೆ ಮುಯ್ಯಿ, ವಾವ್ವಾರೆ ಕಮ್ಮೆನ (ತುಂಡುಪದ), ಬೊಂಬಾಯಿ

ಸಂಗ್ತಿ (ಲಾವಣಿ), ಕಸ್ತೂರಿ ಭಜನೆದ ಪದೊಕುಲು, ರಾಮಾಯಣದ ಪಾಡ್ದನ, ಪರಿಮಳದ ಪದೊಕುಲು, ಭಾರಿ ಕಮ್ಮೆನ, ಮುತ್ತುನ ಮದ್ಮೆ ಇತ್ಯಾದಿ ಕನ್ನಡ ಹಾಗೂ ತುಳು ಕೃತಿಗಳನ್ನು ರಚಿಸಿರುವ ಇವರು ಯಕ್ಷಗಾನ, ತುಳು ರಂಗಭೂಮಿ ಮತ್ತು ಚಲನಚಿತ್ರರಂಗದಲ್ಲೂ ದುಡಿದರು. ಅಂಗದ ರಾಜಿ ಪರ್ಸಂಗ ಎಂಬ ಯಕ್ಷಗಾನ ಪ್ರಸಂಗವನ್ನು ಬರೆದಿದ್ದಾರೆ. ಕಸ್ತೂರಿ ಸಾಹಿತ್ಯಮಾಲೆ ಎಂಬ ಪ್ರಕಾಶನ ಸಂಸ್ಥೆಯನ್ನು ಆರಂಭಿಸಿ ಕೃತಿಗಳನ್ನು ಪ್ರಕಟಿಸಿದರು.

ಟಿ.ಜಿ. ಮುಡೂರು (1927)

ನವದಿಗಂತ (ಕವನ ಸಂಕಲನ), ಪಂಚಮುಖ (ಪ್ರಬಂಧಗಳು), ಕಾಡಮಲ್ಲಿಗೆ, ಹೊಸತು ಕಟ್ಟು (ಮಕ್ಕಳ ಕವನಗಳು), ಅಬ್ಬೆಯ ಮಡಿಲು, ಕಣ್ ಕನಸು ತೆರೆದಾಗ (ಕಥಾಸಂಕಲನ), ಹೊಸಕೆರೆಯ ಹೊನ್ನಮ್ಮ, ಶಿವಸಂಸಾರ, ಗುರುವನ ಗುಡಿ (ಜಾನಪದ ಗೀತ ರೂಪಕಗಳು), ಜೋಕುಲೆ ಬುದ್ಧಿ (ತುಳು ನಾಟಕ), ಅಮರ ಕಲ್ಯಾಣಕ್ರಾಂತಿ (ತುಳುರೂಪಕ), ಕೋಟಿ-ಚೆನ್ನಯ (ತುಳು ಯಕ್ಷಗಾನ ಪ್ರಸಂಗ) ಮೊದಲಾದ ಸುಮಾರು ಇಪ್ಪತ್ತರಷ್ಟು ಕೃತಿ ರಚನೆ ಮಾಡಿರುವ ಇವರು ಯಕ್ಷಗಾನ, ನಾಟಕ, ಕೃತಿ ಪ್ರಕಾಶನ ಮುಂತಾದ ಇತರ ಕ್ಷೇತ್ರಗಳಲ್ಲೂ ದುಡಿಯುತ್ತಿರುವವರು. ಪ್ರೌಢಶಾಲಾ ಅಧ್ಯಾಪಕರಾಗಿ ದೀರ್ಘಕಾಲ ಸೇವೆಸಲ್ಲಿಸಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾಗಿ ನಿವೃತ್ತಿ ಪಡೆದರು. ಸುಳ್ಯ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು.

ಪೇರೂರು ಜಾರು (1950)

ಜಾರು ಜೋಕುಲು, ಜೋಕುಲೆ ರಾಗೊ, ಉರಲ್ ತೂಟೆ ಮುಂತಾದ ತುಳು ಕೃತಿಗಳಲ್ಲದೆ ತುಳು ತುಳುನಾಡು ಹಾಗೂ ತುಳುವಿಗೊಂದು ಲಿಪಿ ಏಕೆ?, ಉಳ್ಳಾಲದ ಅಬ್ಬಕ್ಕಂದಿರು, ಬ್ರಹ್ಮ ಮತ್ತು ಶಿವಭಕ್ತರು ಯಾವಾಗಲೂ ವಿಷ್ಣುವಿನಿಂದ ಹತರಾಗುವುದೇಕೆ?, 'ಮುಂಗಾರು ತಂದ ತುಳುನಾಡು ಸಂವಾದ' ಮೊದಲಾದ ಕನ್ನಡ ಕೃತಿಗಳನ್ನು ರಚಿಸಿದ್ದಾರೆ. 'ತೂಟೆ' ಎಂಬ ತುಳು ಪತ್ರಿಕೆಯನ್ನು ಕೆಲಕಾಲ ನಡೆಸಿದರು. ಬೆಂಗಳೂರಿನಲ್ಲಿ ಪತ್ರಿಕೋದ್ಯೋಗಿಯಾಗಿದ್ದ ಇವರು ಈಗ ನಿವೃತ್ತರಾಗಿ ಊರಿನಲ್ಲಿ ನೆಲಸಿದ್ದಾರೆ.

ಎಸ್.ಪಿ. ಮಂಚಿ (1952-2010)

ಪುರ್ಪ, ಬಲೆ ಪನ್ಕ ಓಬೇಲೆ, ಬಾನ ತೋರೊಂದುಂಡು (ತುಳು ಕವನ ಸಂಕಲನಗಳು) ಮೊದಲಾದ ಕೃತಿಗಳನ್ನು ಪ್ರಕಟಿಸಿರುವ ಇವರು ಯಕ್ಷಗಾನ, ನಾಟಕ,

ಮೂಕಾಭಿನಯಗಳಲ್ಲಿ ಆಸಕ್ತರಾಗಿದ್ದರು. ಕಾರ್ಪೊರೇಷನ್ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿದ್ದರು.

ಮುದ್ದು ಮೂಡುಬೆಳ್ಳೆ (1955)

ಓದುತ್ತೀರಾ ನನ್ನ ಕತೆ, ಮೆಟ್ಟಿಲುಗಳು (ಕನ್ನಡ ಕಥಾಸಂಕಲನಗಳು), ಉದಿಪು, ಒಸಾಯೊ (ತುಳು ಕಥಾಸಂಕಲನಗಳು), ನಮ್ಮ ಎಡ್ಡೆನಾ ಊರ್ಯೆಡ್ಡೆ (ತುಳು ಏಕಾಂಕ ನಾಟಕಗಳು), ಇನೆ ರೂಪಕೊಲು (ತುಳು ಜಾನಪದ ರೂಪಕ), ಆಗೋಳಿ ಮಂಜಣ (ಜಾನಪದ ಅಧ್ಯಯನ) ಮುಂತಾದ ಕೃತಿಗಳನ್ನು ರಚಿಸಿರುವ ಇವರು ಕನ್ನಡ, ಕೊಂಕಣಿ ಮತ್ತು ಇಂಗ್ಲಿಷ್‌ನಲ್ಲಿಯೂ ಸಾಹಿತ್ಯ ರಚನೆ ಮಾಡುತ್ತಾರೆ. ನಾಟಕರಂಗದಲ್ಲಿ ಪರಿಣತಿ ಹೊಂದಿದ್ದು ಆಕಾಶವಾಣಿಯಲ್ಲಿ ಉದ್ಘೋಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಅ. ಬಾಲಕೃಷ್ಣ ಶೆಟ್ಟಿ ಪೊಳಲಿ (1941–2001)

ಪೆಂಗದೂಮನ ಕಬಿತೆಲು ಎಂಬ ಮುಕ್ತಕ ರಚನೆಗಳಿಂದ ಪ್ರಸಿದ್ಧರಾದ ಇವರು ಹೆಬ್ಬೆರಳು ಕೃತಿದರ್ಶನ, ಪೊಡುಂಬತಿಂಮನ ಕಗ್ಗ, ತುಳುವಾಲ ಬಲಿಯೇಂದ್ರ, ಮಿತ್ಯ ನಾರಾಯಣ ಕತೆ (ಅನುವಾದಗಳು), ಎನ್.ಎ. ಶೀನಪ್ಪ ಹೆಗ್ಗಡೆ ಪೊಳಲಿ (ವ್ಯಕ್ತಿ ಚಿತ್ರ), ಪಾತೆರಕತೆ, ಶ್ರೀಕ್ಷೇತ್ರ ಪೊಳಲಿ, ಗೌರವದ ಗರಿಗಳು, ನುಡಿಮಾಲೆ (ಸ್ವತಂತ್ರ ಗಾದೆಲು) ಮುಂತಾಗಿ ಸುಮಾರು ಹದಿನೈದರಷ್ಟು ಕೃತಿರಚನೆ ಮಾಡಿದ್ದಾರೆ. ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿ ನಿವೃತ್ತರಾದರು. ಒಂದು ಅವಧಿಗೆ ತುಳು ಸಾಹಿತ್ಯ ಅಕಾಡೆಮಿಗೆ ಅಧ್ಯಕ್ಷರಾಗಿದ್ದರು.

ಕಳೆದ ಒಂದು ಶತಮಾನ ಕಾಲಘಟ್ಟದಲ್ಲಿ ತುಳು ಹಾಗೂ ಕನ್ನಡದ ಕವಿಗಳು ತುಳುನಾಡು ಮತ್ತು ತುಳುನಾಡಿನ ಜನಪದವನ್ನು ಚಿತ್ರಿಸಿದ ಬಗೆಯನ್ನು ಇಲ್ಲಿನ ಕವನಗಳಲ್ಲಿ ಕಾಣಬಹುದು. ನಾಲ್ಕು ತಲೆಮಾರಿನ ಕವಿಗಳು ಸಂಗಮಗೊಂಡಿರುವ ಈ ಸಂಕಲನದ ಕವಿತೆಗಳ ವಸ್ತುವಿಷಯ ಒಂದೇ ಆದರೂ ಆಶಯದಲ್ಲಿ, ಧೋರಣೆಯಲ್ಲಿ, ಶೈಲಿಯಲ್ಲಿ, ಅಭಿವ್ಯಕ್ತಿಯ ಕ್ರಮದಲ್ಲಿ ಕಂಡುಬರುವ ವಿಭಿನ್ನ ಸ್ವರೂಪಗಳು ಒಂದು ಶತಮಾನ ಕಾಲದಲ್ಲಿ ನಮ್ಮ ಸಮಾಜದಲ್ಲಿ ಕಂಡುಬಂದ ವ್ಯಾಪಕ ಬದಲಾವಣೆಗಳನ್ನು ಹಿಡಿದಿಡುವಲ್ಲಿ ಸಫಲವಾಗಿವೆ ಎಂಬುದೇ ಸಾಹಿತ್ಯವು ಸಮಾಜಮುಖಿ ಮತ್ತು ಪ್ರಾಕೃತಿಕ ಅಂಶಗಳು ಕವಿ ಸಾಹಿತಿಗಳನ್ನು ಹೇಗೆ ಪ್ರಭಾವಿಸುತ್ತದೆ ಎಂಬುದಕ್ಕೆ ದೃಷ್ಟಾಂತವಾಗಿದೆ.

ಇದು ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಒಂದು ಮಹತ್ತ್ವಾಕಾಂಕ್ಷೆಯ ಯೋಜನೆ. ಇದನ್ನು ಅಕಾಡೆಮಿಗಾಗಿ ಆಗು ಮಾಡಿಕೊಟ್ಟವರು ಸ್ವತಃ ಕವಿಗಳೂ ಸಾಹಿತಿಗಳೂ ವಿದ್ವಾಂಸರೂ ಆಗಿರುವ ಡಾ. ವಸಂತಕುಮಾರ ಪೆರ್ಲ ಅವರು. ಯುವ ತಲೆಮಾರಿನ ಪ್ರಮುಖ ಕವಿಗಳಲ್ಲಿ ಒಬ್ಬರಾಗಿರುವ ಇವರು ಕಾವ್ಯ, ಕತೆ, ಕಾದಂಬರಿ, ವಿಮರ್ಶೆ, ಸಂಶೋಧನೆ, ಪ್ರವಾಸ ಸಾಹಿತ್ಯ, ವ್ಯಕ್ತಿಚಿತ್ರ ಮುಂತಾದ ಬೇರೆ ಬೇರೆ ಪ್ರಕಾರಗಳಲ್ಲಿ ಕೈಯಾಡಿಸಿ ಸಾರ್ಥಕ ಬೆಳೆ ತೆಗೆದವರು. ಆಕಾಶವಾಣಿಯ ಹಿರಿಯ ಅಧಿಕಾರಿಯಾಗಿದ್ದು ಕೊಂಡು ಅತ್ಯುತ್ತಮ ಸಂಘಟಕರೆಂದೂ ಹೆಸರು ಮಾಡಿದವರು. ಸಾಹಿತ್ಯದೊಂದಿಗೆ ಮಾಧ್ಯಮ, ರಂಗಭೂಮಿ, ಸಿನಿಮಾ ಮುಂತಾದ ಕ್ಷೇತ್ರಗಳಲ್ಲಿ ಪರಿಣತರಾಗಿರುವ ಇವರು ಉಭಯಭಾಷೆಗಳಲ್ಲಿ ಪರಿಶ್ರಮ ಹೊಂದಿರುವುದರಿಂದ ಅಧ್ಯಯನಾತ್ಮಕ ಮುನ್ನುಡಿಯೊಂದಿಗೆ ಇಲ್ಲಿನ ಬಹುತೇಕ ಕವನಗಳನ್ನು ಕನ್ನಡದಿಂದ ತುಳುವಿಗೆ ಮತ್ತು ತುಳುವಿನಿಂದ ಕನ್ನಡಕ್ಕೆ ಅನುವಾದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್